ಬೆಂಗಳೂರಿನಿಂದ ಮೈಸೂರಿಗೆ ಟೆಲಿಫೋನ್ ಮೂಲಕ ಮಾತನಾಡಬೇಕಾದರೆ ಹಾಗೆ ಮಾತನಾಡುವುದಕ್ಕಾಗಿ ಕಾದಿರುವವರ ಸಂಖ್ಯೆ ಬಹಳ ಹೆಚ್ಚಾಗಿರುವುದರಿಂದಲೂ, ಯಾರಿಗೆ ಟೆಲಿಫೋನ್ ಮೂಲಕ ಸಮಾಚಾರ ಕಳುಹಿಸಬೇಕಾಗಿದೆಯೋ ಅವರಿಗೆ ಸಮಾಚಾರಗಳು ಸರಿಯಾಗಿ ತಲುಪದಿರುವುದರಿಂದಲೂ ಜನಗಳಿಗೆ ಕಾಲವಿಳಂಬವೂ, ಮತ್ತು ಅನಾನುಕೂಲವೂ ಉಂಟಾಗುತ್ತಿವೆಯೆಂದು ವರ್ತಮಾನಪತ್ರಿಕೆಗಳಲ್ಲಿ ಒಂದು ದೂರು ಹೊರಟಿದೆ. ಇದು ಸರ್ಕಾರದವರ ಗಮನಕ್ಕೆ ಬಂದಿದೆ. ಹಗಲು ಹೊತ್ತು ಕೆಲವು ಗಂಟೆಗಳ ಮಧ್ಯೆ ಬೆಂಗಳೂರಿನಿಂದ ಮೈಸೂರಿಗೆ ಮಾತನಾಡುವವರು ಬಹಳವಾಗಿರುತ್ತಾರೆಂಬ ಅಂಶವು ವಿದ್ಯುಚ್ಛಕ್ತಿಯ ಇಲಾಖೆಯವರ ಗಮನಕ್ಕೆ ಬಂದಿದೆ. ಆದುದರಿಂದ, ಈ ಇಲಾಖೆಯವರು, ಬೆಂಗಳೂರಿನಿಂದ—ಮೈಸೂರಿಗೆ ಹೋಗತಕ್ಕ 'ಟ್ರಂಕ್' ಟೆಲಿಫೋನ್ ಲೈನಿನ ಜೊತೆಗೆ "ಸಿಂಗಲ್ ಚಾನೆಲ್ ಕರೆಂಟ್ ಕ್ಯಾರಿಯರ್' ಎಂಬ ಯಂತ್ರ ಸಲಕರಣೆಗಳ ಮತ್ತೊಂದು ಏರ್ಪಾಡನ್ನು ಮಾಡುತ್ತಿದ್ದಾರೆ. ಈ ಏರ್ಪಾಡು ಮುಗಿದಾಗ್ಗೆ ಟೆಲಿಫೋನಿನಲ್ಲಿ ಮಾತನಾಡಲು ಒಂದು ಸಾಧನಕ್ಕೆ ಬದಲು ಎರಡು ಸಾಧನಗಳು ದೊರೆಯುತ್ತವೆ. ಈ ಏರ್ಪಾಡು, ೧೯೩೮ನೆಯ ಇಸವಿ ಸೆಪ್ಟೆಂಬರ್ ತಿಂಗಳ ಹೊತ್ತಿಗೆ ಉಪಯೋಗಕ್ಕೆ ಸಿದ್ಧವಾಗುವುದಾಗಿ ನಿರೀಕ್ಷೆಯಿದೆ.

ಈಗಿರುವ ಲೈನಿನ ಜೊತೆಗೆ ಮೇಲೆ ಸೂಚಿಸಿದ "ಚಾನೆಲ್ ಕ್ಯಾರಿಯರ್ ಸಿಸ್ಟಮ್" ಸಾಧನದ ಏರ್ಪಾಡನ್ನು ಮಾಡಿದ ಮೇಲೆ, ಬೆಂಗಳೂರು ಮತ್ತು ಮೈಸೂರಿಗೆ ಈಗ ಇರುವ ಒಂದೇ "ಟ್ರಂಕ್ ಲೈನಿ"ನಲ್ಲಿ ಮಾತನಾಡಲು ಉಂಟಾಗುತ್ತಿರುವ ಅನನುಕೂಲವು ಗಣನೀಯವಾದಮಟ್ಟಿಗೆ ಕಡಮೆಯಾಗುವುದೆಂದು ನಂಬಲಾಗಿದೆ.

MYSORE RACES & GOLD CUP SWEEP 1938.

Races on—28th May, 1st, 4th, 7th, 9th, and 11th June.

GOLD CUP SWEEP:—(BY PERMISSION OF THE GOVERNMENT OF MYSORE)

Half Tickets. Rs. 2—8—0 each.
Full Tickets. Rs. 5—0—0 each

To close on 25th May 1938
Drawing on 3rd June 1938.
Bonus given to sellers of winning tickets.
Total collection of 1937—Rs 23,200/-

For prospectus and particulars apply to:

Honorary Secretary,
MYSORE RACES.

ಎಕ್ಕಡಗಳ ಉಡುಗರೆ

ಎಕ್ಕಡವನ್ನು ಉಡುಗೊರೆಯಾಗಿ ಕೊಟ್ಟಿರುವುದಾಗಲಿ ತೆಗೆದುಕೊಂಡಿರುವುದಾಗಲಿ ಯಾರೂ ಕಂಡೂ ಇಲ್ಲ, ಕೇಳಿಯೂ ಇಲ್ಲ. ರಾಮಾಯಣದಲ್ಲಿ ಮಾತ್ರ ಪಾದುಕಾ ಪಟ್ಟಾಭಿಷೇಕ ಪ್ರಸಂಗವು ಹೇಳಲ್ಪಟ್ಟಿದೆ. ಆದರೂ ಈಗ ಅದು ನಡೆದಿದೆ. ಇದೂ ದೊಡ್ಡ ದೊಡ್ಡ ಸಮೂಹದಲ್ಲೇ. ಕೊಟ್ಟವರು ದಕ್ಷಿಣ ಆಫ್ರಿಕಾದ ಸಚಿವರಾಗಿದ್ದ ಜನರಲ್ ಸ್ಮಟ್ಸರವರು, ತಗೆದುಕೊಂಡವರು ದಕ್ಷಿಣ ಆಫ್ರಿಕದ ಏಜಂಟ್ ಜನರಲ್ಲಾದ ಸರ್ ರಾಜಾ ಅಲಿಯವರು. ಕೊಟ್ಟವರು ಬಹಳ ವಿಶ್ವಾಸದಿಂದಲೂ ಗೌರವದಿಂದಲೂ ಕೊಟ್ಟರು, ತೆಗೆದುಕೊಂಡುವರು ಬಹಳ ಭಕ್ತಿಯಿಂದ ತೆಗೆದುಕೊಂಡರು.

ಇದು ಏಕೆ? ಆ ಎಕ್ಕಡಗಳು ಮಹಾತ್ಮ ಗಾಂಧಿಯವರಿಂದ ಮಾಡಲ್ಪಟ್ಟದ್ದವು. ಆದ್ದರಿಂದ ಅವಕ್ಕೆ ಅಷ್ಟು ಬೆಲೆ. ಮಹಾತ್ಮರು ದಕ್ಷಿಣ ಆಫ್ರಿಕದಲ್ಲಿ ಸತ್ಯಾಗ್ರಹವನ್ನು ಚಲಿಸಿ ಕಾರಾಗೃಹದಲ್ಲಿದ್ದಾಗ ಅವುಗಳನ್ನು ತಯಾರು ಮಾಡಿದ್ದರು. ಮಹಾತ್ಮರು ಅಲ್ಲಿ ಆಚರಿಸಿದ ಚಳುವಳಿಯ ಫಲವಾಗಿ ಅಲ್ಲಿರುವ ಭಾರತೀಯರು ಇಂದು ಹಲ ಕೆಲವು ನಾಗರಿಕ ಹಕ್ಕುಗಳನ್ನು ಅನುಭವಿಸುತ್ತಿದ್ದಾರೆ. ಅದರಿಂದಲೇ ಸರ್ ರಾಜಾ ಅಲಿ, ಕೆ ವಿ ರಡ್ಡಿ, ರೈಟ್ ಆನರಬಲ್ ಶಾಸ್ತ್ರಿ ಮುಂತಾದವರು ದಕ್ಷಿಣ ಆಫ್ರಿಕದ ಏಜಂಟರುಗಳಾಗಿ ನೇಮಿಸಲ್ಪಟ್ಟಿರುವರು.

ಜನರಲ್ ಸ್ಮಟ್ಸರು ಮಹಾತ್ಮಾಜೀಯವರ ಪಾಶ್ಚಿಮಾತ್ಯ ಅನುವರ್ತಿಗಳಲ್ಲಿ ಒಬ್ಬ ಪ್ರಮುಖರು. ಆದ್ದರಿಂದಲೇ ಅವರು ಆ ಎಕ್ಕಡಗಳನ್ನು ಇಷ್ಟು ದಿನಗಳವರೆಗೆ ಜೋಪಾನವಾಗಿಟ್ಟಿದ್ದರು. 25 ವರ್ಷಗಳ ಹಿಂದೆ ತಾವು ನ್ಯಾಯಾಂಗ ಸಚಿವರಾಗಿದ್ದಾಗ ಮಹಾತ್ಮರನ್ನು ಕಾರಾಗೃಹಕ್ಕೆ ಕಳುಹಿಸಿದವರು ಇವರೇ. ಆದರೂ ವೈಯಕ್ತಿಕವಾಗಿ ಅವರಿಗೆ ಮಹಾತ್ಮರಲ್ಲಿ ಅಪರಿಮಿತವಾದ ಭಕ್ತಿ ಗೌರವಗಳಿವೆ.

ಸರ್ ರಾಜಾ ಅಲಿಯವರು ತಮ್ಮ ಕಲಸದ ಅವಧಿಯನ್ನು ಮುಗಿಸಿಕೊಂಡು ಭರತ ಖಂಡಕ್ಕೆ ಹಿಂತಿರುಗುವ ಕಾಲದಲ್ಲಿ ನಡೆದ ಸಂತೋಷ ಕೂಟದಲ್ಲಿ ಮೇಲ್ಕಂಡ ಪ್ರಸಂಗವು ಜರುಗಿತು.

ಅಂತೂ ಮಹಾತ್ಮರ ಎಕ್ಕಡಗಳಿಗೂ ದಕ್ಷಿಣ ಆಫ್ರಿಕದ ಏಜಂಟ್ ಜನರಲ್ ಪದವಿಗೂ ಜನರಲ್ ಸ್ಮಟ್ಸರವರು ನಿಕಟ ಸಂಬಂಧವನ್ನು ಈಗ ಕಲ್ಪಿಸಿದಂತಾಯಿತು.

— —

ವಿದ್ಯಾದಾನ

ಕವಿ ರವೀಂದ್ರನಾಥ ಠಾಕೂರರು ನಡೆಸುತ್ತಿರುವ ವಿಶ್ವಭಾರತಿ ವಿದ್ಯಾಲಯಕ್ಕೆ ಬರೋಡದ ಮಹಾರಾಜರು ಇಪ್ಪತ್ತು ಸಾವಿರ ರೂಪಾಯಿಗಳ ಉದಾರ ದಾನವನ್ನು ಕೊಟ್ಟಿದ್ದಾರೆ. ಇದನ್ನು ರವೀಂದ್ರರು ಕೃತಜ್ಞತೆಯಿಂದ ಸ್ವೀಕರಿಸಿರುವರು.

ವಿಚಿತ್ರ ಭಾಷಾ ಸೇವ

ತುರ್ಕಿಯಲ್ಲಿ ದೇಶ ಭಾಷೆಯ ಪ್ರಚಾರಕ್ಕೆ ಒಂದು ಹೊಸ ವಿಧಾನವು ಕಂಡುಹಿಡಿಯಲ್ಪಟ್ಟಿದೆ. ವಿದೇಶಿ ಭಾಷೆಯನ್ನೇ ಮಾತನಾಡುವುದನ್ನು ಸಾಧ್ಯವಾದಷ್ಟು ಬೇಗ ಕಡಿಮೆ ಮಾಡಬೇಕೆಂದು ತುರ್ಕಿ ಭಾಷೆಯಲ್ಲಿ ಮಾತನಾಡುವಂತೆ ಜನರನ್ನು ಪ್ರಾರ್ಥಿಸುವ ಪ್ರಚಾರ ಕರಪತ್ರಗಳು ಎಲ್ಲೆಲ್ಲೂ ಕಾಣಬರುತ್ತಿವೆ. ಒಬ್ಬ ತರುಣಿಯವನು ಮತ್ತೂ ಒಬ್ಬನೊಡನೆ ವಿದೇಶಿ ಭಾಷೆಯಲ್ಲಿ ಮಾತನಾಡಿದರೆ 21 ದಿವಸಗಳ ಕಾಲ ಕಾರಾಗೃಹವನ್ನು ವಿಧಿಸಬೇಕೆಂದು ಸಹ ಹಲವರು ಸೂಚಿಸಿದರು. ಆದರೆ ಅದನ್ನು ಇನ್ನೂ ಜಾರಿ ಮಾಡಿಲ್ಲ ಹೀಗಿದೆ ಅವರ ಅಭಿಮಾನ.

ಹರಿಪುರದ ವೈಭವ

ಈ ಸಾರಿ ಹರಿಪುರದಲ್ಲಿ ನಡೆದ ಕಾಂಗ್ರೆಸ್ ಮಹಾಸಭೆಯು ಎಲ್ಲಾ ಅಧಿವೇಶನಗಳಿಗಿಂತಲೂ ದೊಡ್ಡದೆಂದು ಹೇಳಲಾಗಿದೆ. ಮುಖ್ಯವಾಗಿ ಕಡೆ ದಿನ ಏರ್ಪಟ್ಟಿದ್ದ ವಸ್ತು ಪ್ರದರ್ಶನಕ್ಕೆ ಹೋದವರು 2,36,693 ಜನ ಪ್ರೇಕ್ಷಕರು ಬಂದಿದ್ದರು. 1,19,013 ರೂ ಗಳ ವಸೂಲಾಯಿತು. ಕಾಂಗ್ರೆಸ್ ಬಹಿರಂಗ ಅಧಿವೇಶನದ ಪ್ರವೇಶಕ್ಕೆ 62,000 ರೂ ವಸೂಲಾಯಿತು. ಇದರಿಂದ ಕಾಂಗ್ರೆಸ್ಸು ಮಹಾಸಭೆಯ ಶಕ್ತಿಯು ಎಷ್ಟರಮಟ್ಟಿಗೆ ಬೆಳೆಯುತ್ತಿದೆಯೆಂದು ಗೊತ್ತಾಗುತ್ತದೆ.

ಶ್ರೀ|| ಮೈ. ಕೆ. ರಾಮಚಂದ್ರರಾಯರು

ಮೈಸೂರು ರೈಲ್ವೆ ಏಜಂಟರು

ಜಪಾನಿನ ಖೈದಿಗಳ ಬಿಡುಗಡೆ

ಜಪಾನಿನ ಹೊಸ ರಾಜ್ಯಾಂಗ ರಚನೆಯ ಅರ್ಧ ಶತಮಾನೋತ್ಸವವು ಕಳೆದ ತಿಂಗಳು ನಡೆಯಿತು. ಅದರ ಜ್ಞಾಪಕಾರ್ಥವಾಗಿ ಆ ದೇಶದ ವಿವಿಧ ಜೈಲುಗಳಲ್ಲಿದ್ದ ಸುಮಾರು ಲಕ್ಷ ಖೈದಿಗಳನ್ನು ಬಿಡುಗಡೆ ಮಾಡಿದರು. ಅವರಲ್ಲಿ ಅರ್ಧ ಜನರು ರಾಜಕೀಯ ಖೈದಿಗಳು. ಇದಲ್ಲದೆ ಸುಮಾರು ಒಂದು ಸಾವಿರ ಜನರಿಗೆ ಶಿಕ್ಷೆಯು ಕಡಿಮೆ ಮಾಡಲ್ಪಟ್ಟಿದೆ.

ಪ್ಲೇಗಿಗೆ ನಗ್ನ ಚಿಕಿತ್ಸೆ

ಜಪಾನೀಯರನ್ನು ಮೂಢ ಭಕ್ತಿಯವರೆಂದು ಹೇಳುವುದು ವಾಡಿಕೆ. ಅವರ ಪಾಶ್ಚಿಮಾತ್ಯ ಜ್ಞಾನ ಎಂತಹದಿರಲಿ ಮೂಢ ನಂಬಿಕೆಗಳು ಇನ್ನೂ ಹೋಗಿಲ್ಲವೆಂದು ತಿಳಿಯುತ್ತದೆ. ಫ್ಲೋರೆಂಟೈನಿನಲ್ಲಿ ಪ್ಲೇಗ ರೋಗವನ್ನು ತಡೆಯಲು ಒಂದು ವಿಚಿತ್ರ ಪದ್ಧತಿ ... ಯನ್ನು ... ಜನ ಉಪಯೋಗಿಸಿದರು. ... ಒಂದು ... ವರ್ಷದಿಂದ ... ನಡೆ ... ಎಂದಿರುವ ...

ನಗ್ನ ಕಿಟಕಿ ... ಅವರ ಮುಂದೆ ಹೋಗುವ ... ರೋಗವನ್ನು ... ಯುವತಿಯ ... ಇದರಿಂದ ... ಮಾಯವಾಗುವುದೆಂದು ನಂಬಿಕೆ.

ಜ್ಯೋತಿಷ್ಯ ಹೇಳಿದ್ದಕ್ಕೆ ಶಿಕ್ಷೆ

ಜ್ಯೋತಿಷರಿಗೆ ಇನ್ನು ಮೇಲೆ ಕಷ್ಟ ಕಾಲವೆಂದು ಕಾಣುತ್ತದೆ. ಅವರು ನಿಜವನ್ನೇ ಹೇಳಿದರೂ ಅದರಿಂದ ಜನರಿಗೆ ತೊಂದರೆಯಾಗುವುದಾದರೆ ಅದನ್ನು ಹೇಳುವುದು ಅಪರಾಧವಾಗುವುದು. ಸಿಂಗಪೂರಿನ ನ್ಯಾಯಾಸ್ಥಾನದ ಒಬ್ಬ ಮ್ಯಾಜಿಸ್ಟ್ರೇಟರು ಈ ಅಪರಾಧಕ್ಕಾಗಿ ಒಬ್ಬ ಜ್ಯೋತಿಷ್ಯನಿಗೆ ಇನ್ನೂರು ರೂ ಜುಲ್ಮಾನೆ ಹಾಕಿರುವರು.

ಒಬ್ಬ ಮನುಷ್ಯನು ೨೦ ದಿನಗಳಲ್ಲಿ ಸತ್ತುಹೋಗುವನೆಂದು ಭವಿಷ್ಯ ಹೇಳಿ ಆತನ ಮರಣವು ಶೀಘ್ರವಾಗಿ ಸಂಭವಿಸುವಂತೆ ಮಾಡಿದನೆಂಬುದೇ ಆಪಾದನೆ. ಜ್ಯೋತಿಷ್ಯನ ಬಳಿ ೬೫ ವಯಸ್ಸಿನ ಗಟ್ಟಿಮುಟ್ಟಾದ ಮನುಷ್ಯನೊಬ್ಬನು ಹೋದ. ನೀನು ೩೦ ದಿನಗಳಲ್ಲಿ ಆತನು ಸಾಯುವನೆಂದು ಜ್ಯೋತಿಷ್ಯನು ಹೇಳಿದನು. ಅಂದಿನಿಂದ ಹೋದ ಮನುಷ್ಯನಿಗೆ ಪ್ರಪಂಚವೇ ಬೇಸರವಾಗಿ ಆತನು ಜ್ವರನಾಗುತ್ತ ಬಂದನು. ೩೦ ದಿನಗಳಲ್ಲಿ ಕಾಯಿಲೆ ಬಿದ್ದನು. ೩೦ ನೇ ದಿನ ಜ್ಞಾನವು ತಪ್ಪಿ ಮೃತನಾದನು. ಈ ಮರಣಕ್ಕೆ ಜ್ಯೋತಿಷ್ಯನೇ ಕಾರಣನೆಂದು ಮೃತನ ಮಗನು ಮೊಕದ್ದಮೆ ಹೂಡಲು, ಮೇಲ್ಕಂಡಂತೆ ಶಿಕ್ಷೆಯಾಯಿತು. ಜ್ಯೋತಿಷ್ಯ ಹೇಳುವವರು ಇನ್ನು ಮೇಲೆ ಹುಷಾರಾಗಿರಬೇಕು.

ಸಿಂಹಳಕ್ಕೆ ಸಂಪೂರ್ಣ ಸ್ವಾತಂತ್ರ್ಯ

ಸಿಂಹಳ ದ್ವೀಪದಲ್ಲಿಯೂ ಸಂಪೂರ್ಣ ಸ್ವಾತಂತ್ರ್ಯದ ಚಳುವಳಿಯು ಆರಂಭವಾಗಿದೆ. ಕಳೆದ ವಾರ ಒಂದು ದೊಡ್ಡ ಮೆರವಣಿಗೆಯನ್ನು ಮಾಡಿ ಬಹಿರಂಗ ಪ್ರದೇಶದಲ್ಲಿ ಸಿಂಹಳದ ಧ್ವಜವನ್ನು ಹಾರಿಸಿದರು. ಅನೇಕ ಜನ ಭಾರತೀಯರೂ ಭಾಗವಹಿಸಿದರು. ಇದರಲ್ಲಿ ... ಚಳುವಳಿಯನ್ನು ... ಹೂಡಬೇಕೆಂದೂ ಭಾರತೀಯ ಕಾಂಗ್ರೆಸ್ಸಿನಂತೆಯೇ ... ನಡೆಸಬೇಕೆಂದೂ ತೀರ್ಮಾನವಾಯಿತು. ಮಾರ್ಚಿ ... ರಡನೇ ತಾ|| ಪ್ರತಿವರ್ಷವೂ ಸ್ವಾತಂತ್ರ್ಯ ದಿನಾಚರಣೆಯನ್ನು ನಡೆಸಬೇಕೆಂದು ತೀರ್ಮಾನವಾಯಿತು.

"ಸುವಾಸಿನಿ"

ಎಂದು ಹೆಸರಿಗೆ ತಕ್ಕಂತೆ ಸುವಾಸನೆ ಹೊಗೆ ಕೊಡುವ

ಶ್ರೀಗಂಧದ ಬಿಲ್ಲೆಗಳು

18 ಬಿಲ್ಲೆಗಳಿರುವ (ಸುಮಾರು 3 ತೊಲ) ಟಿನ್ ಫಾಯಿಲ್ ಪೇಪರಿನಲ್ಲಿ ಅಂದವಾಗಿ ಪ್ಯಾಕು ಮಾಡಿರುವ ರಟ್ಟಿನ ಪೆಟ್ಟಿಗೆಗಳಲ್ಲಿ ದೊರೆಯುತ್ತವೆ. ಪೆಟ್ಟಿಗೆಯೊಂದಕ್ಕೆ ಬೆಲೆ 0—2—0

ನಮ್ಮ ಕರ್ನಾಟಕದಲ್ಲೂ ಏಜಂಟರು ಬೇಕಾಗಿದ್ದಾರೆ. ಮಾದರಿ ಪೆಟ್ಟಿಗೆಗೂ, ವಿವರಗಳಿಗೂ ನಾಲ್ಕು ಆಣೆ ಸ್ಟಾಂಪಿನೊಂದಿಗೆ ಸೋಲ್ ಏಜಂಟರಲ್ಲಿ ವ್ಯವಹಾರ ಮಾಡತಕ್ಕದ್ದು.

ಸೋಲ್ ಏಜಂಟ್ —

ವದಕಿ ಕೃಷ್ಣಮೂರ್ತಿ,

ಚಾಮುಂಡಿ ಎಕ್ಸ್ಟೆನ್ಶನ್, ಮೈಸೂರು

ಸಾಧ್ವಿ

೧೪—೩—೩೮ ನೇ ಸೋಮವಾರ

ಜವಾಬ್ದಾರಿ ಸರ್ಕಾರದ ಪ್ರಗತಿ

ಸಂಸ್ಥಾನಗಳಲ್ಲಿನ ಜವಾಬ್ದಾರಿ ಸರ್ಕಾರದ ಪ್ರಶ್ನೆಯೇ ಈಗ ಎಲ್ಲೆಲ್ಲೂ ಕೇಳಬರುತ್ತಿದೆ. ಆರು ಸಾವಿರ ಮೈಲಿ ದೂರದಲ್ಲಿರುವ ಇಂಗ್ಲೆಂಡಿನಿಂದ ಹಿಡಿದು ನಮ್ಮ ದೇಶದಲ್ಲಿರುವ ಸಣ್ಣ ಪುಟ್ಟ ಸಂಸ್ಥಾನಗಳವರೆಗೆ ಎಲ್ಲಾ ಕಡೆಯಲ್ಲಿಯೂ ಇದೇ ವಿಷಯವೇ ಚರ್ಚೆಯಾಗುತ್ತಿದೆ. ಬ್ರಿಟಿಷ್ ಇಂಡಿಯದ ಮುಂದಾಳುಗಳಿಗೂ ಸಂಸ್ಥಾನದ ಪ್ರಶ್ನೆಯೇ ಪ್ರಾಮುಖ್ಯವಾಗಿದೆ. ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯನ್ನು ಎದುರಿಸಲು ಅವರು ಸಂಸ್ಥಾನ ಪ್ರಜೆಗಳ ಸಂಪೂರ್ಣ ಸಹಕಾರವನ್ನು ಅಪೇಕ್ಷಿಸುತ್ತಾರೆ. ಆದ್ದರಿಂದ ಈಗ ಸರ್ವವಿಧದಲ್ಲಿಯೂ ಸಂಸ್ಥಾನದ ಪ್ರಶ್ನೆಯೇ ಬಹಳ ಪ್ರಧಾನವಾಗಿದೆ.

ಸಂಸ್ಥಾನಗಳಲ್ಲಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸುವ ವಿಷಯದಲ್ಲಿ ಮಹಾ ಮಹಾ ವಿದ್ವಾಂಸರುಗಳೂ, ರಾಜನೀತಿನಿಪುಣರೂ ತಮ್ಮ ಬೆಂಬಲವನ್ನು ಕೊಟ್ಟಿದ್ದಾರೆ. ಪಾರ್ಲಿಮೆಂಟಿನಲ್ಲಿ ಅಂಡರ್ ಸೆಕ್ರೆಟರಿಯವರಾದ ಅರ್ಲ್ ವಿಂಟರ್‌ಟನ್ನರು ಸಂಸ್ಥಾನಗಳಲ್ಲಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಲು ಬ್ರಿಟಿಷ್ ಸರ್ಕಾರದ ಅಡ್ಡಿಯಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಪ್ರೊ|| ಕೀತ್ ಎಂಬ ರಾಜನೀತಿ ವಿಶಾರದರೂ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಲಂಡನ್ನಿನ ಟೈಮ್ಸ್ ಪತ್ರಿಕೆಯು ಜವಾಬ್ದಾರಿ ಸರ್ಕಾರದ ಸ್ಥಾಪನೆಗೆ ಬೆಂಬಲವನ್ನು ಕೊಟ್ಟಿದೆ. ಇನ್ನೂ ಅನೇಕ ಬ್ರಿಟಿಷ್ ಪತ್ರಿಕೆಗಳೂ, ಸಂಘಗಳೂ, ವ್ಯಕ್ತಿಗಳೂ ತಮ್ಮ ಸಹಾನುಭೂತಿಯನ್ನು ತೋರಿಸಿರುವರು. ಇತ್ತ ಬರೋಡಾ ಸಂಸ್ಥಾನದಲ್ಲಿಯೂ ಮೈಸೂರಿನಲ್ಲಿಯೂ ಇಂಥಾ ಸರ್ಕಾರದ ಈ ವಿಷಯವನ್ನು [illegible] ಯ ಮಾಡುತ್ತಿರುವರೆಂದು ಗೊತ್ತಾಗಿದೆ. ಹೀಗೆ ಎಲ್ಲಾ ಕಡೆಗಳಿಂದಲೂ ಸಂಸ್ಥಾನ ಪ್ರಜೆಗಳ ಪಕ್ಷಕ್ಕೆ ಭಾವೈಕ್ಯತೆಗಳ ಬೆಂಬಲವು ದೊರೆಯುತ್ತಿದೆ.

ಅಲ್ಲದೆ ಅನೇಕ ಸಂಸ್ಥಾನಗಳಲ್ಲಿ ಜವಾಬ್ದಾರಿ ಸರ್ಕಾರದ ಸ್ಥಾಪನೆಗೆ ಪ್ರಾರಂಭಗಳೂ ಆಗುತ್ತಿವೆ. ಕೊಚ್ಚಿ ಸಂಸ್ಥಾನವು ಅಂಶತಃ ಪೂರ್ಣ ಮಾಡಿತು. ತಿರುವಾಂಕೂರ ಪ್ರಕಟಿಸಿತು. ಪಾರ್ಲಿಮೆಂಟು ಬಗೆ ಹರಿಯಿತು. ಈಚೆಗೆ ಗ್ವಾಲಿಯರು ಮುಂದುವರಿಯುತ್ತಿದೆ. ಇಂದೂರು ಹರಿಜನರಿಗೆ ರಿಯಾಯಿತಿ ತೋರಿದೆ. ಇದರ ಸಂಸಾರವೂ ಪರ್ಯಾಲೋಚಿಸುತ್ತಿದೆ.

ಆದರೆ ಸ್ವಸ್ಥಾನದ ಸ್ಥಿತಿಯೇನು! ನಮ್ಮ ಮೈಸೂರು ಸಂಸ್ಥಾನ ಯಾವುದನ್ನು ಮಾಡಿದರೂ ಮಾದರಿಯಾಗಿಯೇ ಮಾಡಬೇಕು. ಇತರರು ಮಾಡಿರುವುದನ್ನು ನಾವು ಮಾಡಿದರೆ ನಮ್ಮ ಮಾದರಿ ಪದವಿಗೆ ಕೊರತೆ. ಆದ್ದರಿಂದ ನಮ್ಮ ಸರ್ಕಾರದವರು ಎಲ್ಲಾ ಸಂಸ್ಥಾನಗಳನ್ನೂ ಮೀರಿಸುವ ರೀತಿಯಲ್ಲಿ ಏರ್ಪಾಡು ಮಾಡಲೆಂದು ನಾವು ನಿರೀಕ್ಷಿಸೋಣವೆ?

ಈಗ ಒದಗಿರುವ ಸನ್ನಿವೇಶದಲ್ಲಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸದಲ್ಲದೆ ಬೇರೆ ಮಾರ್ಗವಿಲ್ಲ. ಇಂದು ವಿನಃ ಹೆಚ್ಚು ಕಡಿಮೆ ಅದು ಸ್ಥಾಪನೆಯಾಗಲೇ ಬೇಕು. ಕೆಲವು ಸಂಸ್ಥಾನಗಳಲ್ಲಿ ಇದು ಸರ್ವತ್ರ ಸೌಹಾರ್ದದಿಂದಲೂ, ಎಷ್ಟೋ [illegible] ಆಗಬಹುದು. ಇನ್ನು ಕೆಲವು ಕಡೆಗಳಲ್ಲಿ ನಿಷ್ಠುರದಿಂದಲೂ ಕಷ್ಟನಷ್ಟಗಳಿಂದಲೂ ಆಗಬಹುದು. ಪ್ರಪಂಚದಲ್ಲೆಲ್ಲಾ ಹರಡುತ್ತಿರುವ ಪ್ರಜಾ ಸ್ವಾತಂತ್ರ್ಯ ದಾಹವನ್ನು ತಡೆಗಟ್ಟಲು ಯಾರಿಂದಲೂ ಸಾಧ್ಯವಿಲ್ಲ. ಕೇವಲ ಅಲ್ಪಸ್ವಲ್ಪದ ರಿಯಾಯಿತಿಗಳಿಂದಲೂ, ಸುಧಾರಣೆಗಳಿಂದಲೂ, ಈ ದಾಹವು ಹಿಂಗುವುದಿಲ್ಲ. ಪ್ರಜೆಗಳ ಮೂಲಭೂತ ಹಕ್ಕುಗಳನ್ನು ಅಂಗೀಕರಿಸಿ ಪ್ರಗತಿ ಮಾರ್ಗದ ರಾಜ್ಯಾಂಗ ವ್ಯವಸ್ಥೆಯನ್ನು ನಿರ್ಮಿಸಲೇ ಬೇಕು.

ಮೈಸೂರು ಮಹಾಸ್ವಾಮಿ ಇತರ ಸಂಸ್ಥಾನಗಳಿಗೆ ಮೇಲ್ಪಂಕ್ತಿಯನ್ನು ಹಾಕುವ ಸುಸಂಧಿಯು ಸಂಪ್ರಾಪ್ತವಾಗಿದೆ. ಈ ಸಮಯವನ್ನು ಅವರು ಸರಿಯಾಗಿ ಉಪಯೋಗಿಸಿಕೊಳ್ಳುವರೆ?

ರೈಲ್ವೆ ಕೂಲಿಕಾರರ ದುಸ್ಥಿತಿ

ಮೈಸೂರು ರೈಲ್ವೆ ಕೂಲಿಕಾರರ ಸಂಬಳ ಕಡಿತದ ವಿಷಯವಾಗಿ ನಮಗೆ ಹಲವು ದೂರುಗಳು ಬರುತ್ತಿವೆ. ಅವುಗಳಲ್ಲಿ ಕೆಲಸಗಾರರು ಅನುಭವಿಸುತ್ತಿರುವ ಅನೇಕ ವಿಧವಾದ ತೊಂದರೆಗಳು ಸೂಚಿಸಲ್ಪಟ್ಟಿವೆ. ಅವುಗಳನ್ನು ಕ್ರಮ ಕ್ರಮವಾಗಿ ಪ್ರಕಟಿಸುತ್ತೇವೆ. ಮುಖ್ಯವಾಗಿ ನಮ್ಮ ಸರ್ಕಾರದ ಪ್ರಕಟಣೆಯನ್ನು [illegible] ನಮ್ಮ ಮೂಲಕ ಮಂತ್ರಿಗಳಿಗೂ ಹಾಗೆ [illegible] ಕೂಲಿಕಾರರು ಹೆಚ್ಚು ಮೂಲ [illegible] ಮಂತ್ರಿಗಳವರ [illegible] ಕೆಲಸ [illegible] ಕೇಳಿಕೊಳ್ಳುತ್ತೇವೆ. [illegible] ಕರ್ತವ್ಯ [illegible] ತಮ್ಮ [illegible] ನಮ್ಮ [illegible] ನ್ನು ಪ್ರಕಟಿಸುತ್ತೇವೆ.

ಸಮಿತಿಗಳ ನೇಮಕ

ನಮ್ಮ ಸಂಸ್ಥಾನದಲ್ಲಿ ಹೊಸದಾಗಿ ಹುಟ್ಟಿರುವ ಪ್ರಜಾ ಸ್ವಾತಂತ್ರ್ಯದ ಆಕಾಂಕ್ಷೆಗಳ ಪರಿಣಾಮವಾಗಿ ರಾಜಕೀಯ ಸುಧಾರಣೆಗಳನ್ನು ಪರಿಶೀಲಿಸುವುದಕ್ಕೂ ಮತ್ತು ನೂತನ ಭಾರತ ರಾಜ್ಯಾಂಗ ವಿಧಾನದಲ್ಲಿ ಮೈಸೂರು ಭಾಗವಹಿಸಲು ಆವಶ್ಯಕವಾದ ನಿಯಮ ನೀತಿಗಳನ್ನು ಪರಿಶೀಲಿಸುವುದಕ್ಕೂ ಸರ್ಕಾರದವರು ವಿಚಾರಣಾ ಸಮಿತಿಗಳನ್ನು ನೇಮಿಸಲಿರುವರೆಂದು ತಿಳಿಯಬರುತ್ತದೆ. ರಾಜಕೀಯ ಸುಧಾರಣೆಗಳ ಸಂಬಂಧವಾದ ಸಮಿತಿಗೆ ಚೀಫ್ ಜಸ್ಟಿಸ್ ಸರ್ ಡೇಲಿಯವರನ್ನೂ ಫೆಡರೇಷನ್ ಬಗ್ಗೆ ಸಮಿತಿಗೆ ಸರ್ ಚಾರ್ಲ್ಸ್ ಟಾಡ್‌ಹಂಟರವರನ್ನೂ ಅಧ್ಯಕ್ಷರನ್ನಾಗಿ ನೇಮಿಸುವರೆಂದು ಗೊತ್ತಾಗಿದೆ.

ಈ ಸಮಿತಿಗಳ ವಿಷಯದಲ್ಲಿ ಪ್ರಜೆಗಳಿಗೆ ಎಷ್ಟು ವಿಶ್ವಾಸವುಂಟಾಗುವುದೋ ಸಂದೇಹ. ಬ್ರಿಟಿಷ್ ಇಂಡಿಯದಲ್ಲಿ ಆಗಿಂದಾಗ್ಗೆ ಇಂತಹ ಸಮಿತಿಗಳು ನೇಮಕವಾಗುವುದುಂಟು. ದೊಡ್ಡ ದೊಡ್ಡ ಚಳವಳಿಗಳು ಎದ್ದಾಗ ಅವುಗಳನ್ನು ಬದಲಾವಣೆ ಮಾಡಿ ಬೀಸುವ ಮಾತ್ಸರ್ಯವನ್ನು ತಪ್ಪಿಸಲೋಸುಗ ಈ ಸಮಿತಿಗಳು ನೇಮಕವಾಗುತ್ತವೆಯೆಂದು ಜನರ ಭಾವನೆ.

ನಮ್ಮ ಮೈಸೂರಿನ ಸಮಿತಿಗಳಿಗೂ ಇದೇ ಗತಿಯೇ ಪ್ರಾಪ್ತವಾದರೆ ಜನರು ಇಷ್ಟು ದಿನಗಳವರೆಗೆ ಮಾಡಿದ ಪ್ರಯತ್ನಗಳೂ ವ್ಯರ್ಥವಾಗುವುವು.

ವಿದ್ಯಾರ್ಥಿಗಳ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಸಿದ್ದಲಿಂಗಯ್ಯನವರಿಗೂ ಆದ ಮಾತುಕತೆಗಳು ಫಲದಾಯಕವಾಗಿಲ್ಲ. ಜವಾಬ್ದಾರಿ ಸರ್ಕಾರವನ್ನು ಉತ್ತರೋತ್ತರ ಸ್ಥಾಪಿಸಬಹುದಾದರೂ ಅದರ ತತ್ತ್ವವನ್ನು ಅಂಗೀಕರಿಸಬೇಕೆಂಬ ಸಲಹೆಯನ್ನೇ ಸರ್ಕಾರದವರು ಅನುಮೋದಿಸಿಲ್ಲ. ಆದ್ದರಿಂದ ಪ್ರಜೆಗಳ ಆರೋತ್ತರಗಳಿಗೂ ಸರ್ಕಾರದ ಮನೋಭಾವಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಇದೂ ಅಲ್ಲದೆ ಈ ಸಮಿತಿಗಳಲ್ಲಿ ನೇಮಕವಾಗುವರೆಂದು ಸೂಚಿಸಲ್ಪಟ್ಟಿರುವವರ ವಿಷಯದಲ್ಲಿ ಪ್ರಜೆಗಳಿಗೆ ಎಷ್ಟು ಮಟ್ಟಿನ ವಿಶ್ವಾಸವಿದೆಯೆಂಬುದೂ ಸಂದೇಹಾಸ್ಪದವಾದ ವಿಷಯ. ಮುಖ್ಯವಾಗಿ ನಮ್ಮ ಸಂಸ್ಥಾನದ ರಾಜಕೀಯ ಸಂಬಂಧವಾದ ಸಮಿತಿಗಳಿಗೆ ನಮ್ಮ ದೇಶದ ಜನರನ್ನು ಅಥವಾ ಭಾರತೀಯರನ್ನು ನೇಮಿಸದೇ ಹೊರಗಿನವರನ್ನು ಅಧ್ಯಕ್ಷರನ್ನಾಗಿ ನೇಮಿಸುವುದು ಬಹಳ ವಿಷಾದಕರ. ನಮ್ಮವರು ಯಾರೂ ಅರ್ಹರಾದವರು ಇಲ್ಲವೆ!

ಇಂತಹ ಪರಿಸ್ಥಿತಿಯಲ್ಲಿ ನೇಮಕವಾಗುವ ಈ ಸಮಿತಿಗಳ ಸಲಹೆಗಳಿಂದ ಪ್ರಜೆಗಳಿಗೆ ಎಷ್ಟುಮಟ್ಟಿನ ಉಪಕಾರವಾದೀತು?

ಮೈಸೂರು ಕಾಂಗ್ರೆಸ್ ರಾಷ್ಟ್ರಕೂಟ

ಮೈಸೂರು ಕಾಂಗ್ರೆಸ್ಸಿನ ರಾಷ್ಟ್ರಕೂಟವು ಏಪ್ರಿಲ್ ೧೦ ಮತ್ತು ೧೧ನೇ ತಾರೀಖುಗಳಲ್ಲಿ ಮದ್ದೂರು ಬಳಿ ಶಿವಪುರದಲ್ಲಿ ನಡೆಯುವಂತೆ ತೀರ್ಮಾನವಾಗಿದೆ.

ವಿಚಾರ ವಾಣಿ

ಮೈಸೂರ್ ಪಟ್ಟಣದ ಪೌರಸಭಾಧಿಕಾರಿಗಳು ನಗರ ನೈರ್ಮಲ್ಯದ ವಿಷಯದಲ್ಲಿ ಅಪಾರವಾದ ಶ್ರದ್ಧೆಯನ್ನು ವಹಿಸುತ್ತಿದ್ದಾರೆ. ಒಂದೇ ತಿಂಗಳಲ್ಲಿ ಫ್ಲಷ್ ಕಕ್ಕಸ್ಸುಗಳನ್ನು ಇಡಿಸದೇ ಇದ್ದವರ 600 ಜನರ ಮೇಲೆ ಮೊಕದ್ದಮೆಗಳನ್ನು ಹೂಡಿದ್ದರು ಬಹು ಸಂತೋಷ. ನಡುಬೀದಿಯಲ್ಲಿ ಮಕ್ಕಳ ಶೇಷಿಗೆ ಮಾಡಿಸಿದ ತಾಯಂದಿರ ಮೇಲೆ ಮೊಕದ್ದಮೆಗಳನ್ನು ಹೂಡಿದ್ದರು. ಬೀದಿಯಲ್ಲಿ ಒಡೆ ಚಕ್ಕುಲಿ ಮಾರುವವರ ಮೇಲೆ ಅನೇಕ ಮೊಕದ್ದಮೆಗಳನ್ನು ಹೂಡಿದ್ದರು. ಹೋಟಲಿನವರ ಮೇಲೆ ಯಾವಾಗಲೂ ಕಣ್ಣಿಟ್ಟಿರುವರು. ಆದರೆ ಕೆಲವು ಪ್ರಶ್ನೆಗಳಿಗೆ ಉತ್ತರವನ್ನು ದಯವಿಟ್ಟು ಕೊಡುವರೆ?

೧. ಮೈಸೂರು ನಗರ್ ಜೈಲ್ (ಕಾರಾಗೃಹವು) ಮುನಿಸಿಪಾಲಿಟಿಗೆ ಸೇರಿದ ಭೂಮಿಯಲ್ಲಿದೆಯೆ? ಇಲ್ಲವೆ?

೨. ಅಲ್ಲಿ ಸುಮಾರು ೧೦೦ ಜನ ಖೈದಿಗಳಿರುವುದು ಗೊತ್ತೆ?

೩. ಅಲ್ಲಿನ ಕಕ್ಕಸ್ಸುಗಳನ್ನು ನೋಡಿದ್ದೀರಾ?

೪. ಅಲ್ಲಿ ನೂರಾರು ಜನರು ಸಾಲಾಗಿ ಒಟ್ಟಿಗೆ ಮಗ್ಗುಲಲ್ಲಿ ಒಬ್ಬರು ಕುಳಿತು ಮಲವಿಸರ್ಜನೆ ಮಾಡುವುದು ನಿಮಗೆ ಗೊತ್ತೇ?

೫. ಜೈಲ್ ಸೂಪರಿಂಟೆಂಡೆಂಟರ ಮೇಲೆ ನೀವು ಮೊಕದ್ದಮೆಯನ್ನು ಹೂಡದಿರುವುದಕ್ಕೆ ಕಾರಣವೇನು? ಇನ್ನಾದರೂ ಹೂಡುವಿರಾ?

೬. ಕಬ್ಬಿಣದ ಪಾತ್ರೆಗಳಲ್ಲಿ ಅಡಿಗೆ ಮಾಡುವುದು ಆರೋಗ್ಯಕರವೆ?

೭. ಮೈಸೂರು ಜೈಲಿನಲ್ಲಿ ನೂರಾರು ಜನರಿಗೆ ಕಬ್ಬಿಣದ ಪಾತ್ರೆಗಳಲ್ಲಿ ಸರ್ಕಾರದವರೇ ಅಡಿಗೆ ಮಾಡಿಸುತ್ತಿರುವುದು ತಮಗೆ ಗೊತ್ತೆ?

೮. ಕಬ್ಬಿಣದ ಪಾತ್ರೆಗಳಲ್ಲಿ ಅಡಿಗೆ ಮಾಡಿ ದಿನವೂ ಊಟಮಾಡಿದರೆ Slow poisoning" ಸೌಮ್ಯ ವಿಷಪ್ರಾಶನ ಆಗುವುದಿಲ್ಲವೆ?

o o o

ಮುಖಂಡರು ಯಾರು?

ಲೀಡರುಗಳು ಯಾರು ಸ್ವಾಮಿ? ಘಟ್ಟಿಯಾಗಿ ಮೈ ಜುಮ್ಮೆನ್ನುವಂತೆ ಭಾಷಣ ಮಾಡುವರ? ಪತ್ರಿಕೆಗಳಲ್ಲಿ ದೊಡ್ಡ ದೊಡ್ಡ ಸ್ಟೇಟ್‌ಮೆಂಟುಗಳನ್ನು ಕೊಡುವರೆ? ನನ್ನ ಸ್ನೇಹಿತ ಒಂದು ಮಾತು ಹೇಳುತ್ತಾನೆ. ಲೀಡರ್‌ಗೆ ಒಂದು ಗುರುತು. ಆಗಮನ ನಿರ್ಗಮನಗಳಲ್ಲಿ ಯಾರ ಹೆಸರು ದಿನಾ ಬರುತ್ತದೆಯೋ ಅವರೇ ಲೀಡರ್. ಹೊಸ ಊರಿಗೆ ಹೋದರೆ ರೈಲ್ವೆ ಸ್ಟೇಷನ್ನಿನಲ್ಲಿ ಯಾರ ಕುತ್ತಿಗೆಗೆ ಹೆಚ್ಚು ಹಾರಗಳು ಬೀಳುತ್ತವೆಯೋ ಅವರೇ ಲೀಡರ್. ಕೊರಗಿನ ಮುಖಂಡರು ಯಾರ ಫೋಟೋದಲ್ಲಿ ಹೆಚ್ಚಾಗಿ ಕುಳಿತುಕೊಳ್ಳುತ್ತಾರೋ ಅವರೇ ಲೀಡರ್

ಹರಟೆ ಮಲ್ಲ.

ಪ್ರಾಥಮಿಕ ಶಿಕ್ಷಕರ ದುಸ್ಥಿತಿ!

ಲೇಖಕ:—ವಿದ್ಯಾಭಿಮಾನಿ.

ಒಂದು ದೇಶದ ಅಥವ ಜನಾಂಗದ ಆರ್ಥಿಕ ಮತ್ತು ನೈತಿಕ ಏಳಿಗೆ ಎಂತಹ ದ್ದಾಗಿದೆಯೆಂಬುದು ಅಲ್ಲಿನ ಪ್ರಾಥಮಿಕ ಶಿಕ್ಷಣದಿಂದ ತಿಳಿದುಬರುವುದಾಗಿದೆ. ಅಂತಹ ಪ್ರಾಥಮಿಕ ಶಿಕ್ಷಣವು, ಕೈಲಿರುವ ವಸ್ತುವಿನ ಮೇಲೆ ಪ್ರಾರಂಭಿಸಬೇಕೆಂಬುದ ಶಿಕ್ಷಣದ ವ್ಯವಸ್ಥೆಯನ್ನು ಅನುಸರಿಸುತ್ತದೆ. ಸದರಿ ಶಿಕ್ಷಣಕಾರರು ತಮ್ಮ ವಿದ್ಯಾರ್ಥಿವೃತ್ತಿಯಿಂದ ಬಾಲಬಾಲಿಕೆಯರುಗಳ ಮನಸ್ಸಿನಲ್ಲಿ [illegible] ಮಾಡಿ ದೇಶಸೇವಾಧುರಂಧರರನ್ನಾಗಿ ಮಾಡಲು ಯಾವ ಕ್ರಮವನ್ನು ಅನುಸರಿಸುವರೋ ಅದೇ ಕ್ರಮವು ಮುಂದುವರಿಯುತ್ತದೆ. ಆದ್ದರಿಂದ ಪ್ರಾಯೋಗಿಕ ದೃಷ್ಟಿಯ ಪ್ರಾಥಮಿಕ ಶಿಕ್ಷಣಕಾರರ ಜ್ಞಾನ, ಮಾನ, ಉನ್ನತ ಧ್ಯೇಯಗಳು ಎಷ್ಟರಮಟ್ಟಿಗೆ ಎನ್ನುವ ಪ್ರಮಾಣವನ್ನು ವಿಸ್ತರಿಸಿ ವಿವರಿಸಬೇಕಾದ ಅವಶ್ಯಕತೆಯಿಲ್ಲ.

ದೇಶದ ನಾಗರೀಕತೆಯು ಪಕ್ವದಂತಿಲ್ಲ ಮುಂದೆ ಸತ್ಪ್ರಜೆಗಳಾಗಬೇಕಾದ ಇಂದಿನ ನಮ್ಮ ಮುದ್ದು ಮಕ್ಕಳ ದಿನನಿತ್ಯದ ವಿಷಯದಲ್ಲಿ ಪ್ರಾಥಮಿಕ ಶಿಕ್ಷಣಕಾರರೂ ಬಹುಮಟ್ಟಿಗೆ ತಮ್ಮ ಅತ್ಯುತ್ತಮವನ್ನು ಮತ್ತು ಶಿಕ್ಷಣ ಕ್ರಮವನ್ನು ಕಾಲಧರ್ಮಕ್ಕನುಸಾರವಾಗಿ ಬಹುಮಟ್ಟಿಗೆ ಹಚ್ಚಿಸಿಕೊಳ್ಳಬೇಕೆಂಬ ವಿಷಯವು ನಿರ್ವಿವಾದ ಸಂಗತಿಯಾಗಿದೆ. ಇಂತಹ ಪ್ರಶಸ್ತವಾದ ಜವಾಬ್ದಾರಿಯನ್ನು ಹೊತ್ತುಕೊಂಡಿರುವ ಶಿಕ್ಷಣಕಾರರಿಗೆ ಎಷ್ಟರಮಟ್ಟಿನ ಸಂಬಳ ಸಂಪತ್ತುಗಳನ್ನು ಪ್ರಭುತ್ವವು ಕೊಡುವುದೆಂಬ ಅಂಶವೂ ಕೂಡ ಸರ್ವಜನ ವಿದಿತವಾಗಿಯೇ ಇದೆ. ವಾಸ್ತವಾಂಶವು ಹೀಗಿದ್ದಾಗ್ಯೂ ತಕ್ಕ ಪ್ರೋತ್ಸಾಹವು ಮಾತ್ರ ಹೆಸರು ಮಾತ್ರದಲ್ಲಿ ಉಳಿದಿರುತ್ತದೆ. ಪ್ರಾಥಮಿಕ ಶಿಕ್ಷಣಕಾರರಿಗೆ ಕೊಡುತ್ತಿರುವ ಸಂಬಳಗಳು. ಇವರಿಂದ ನಿರೀಕ್ಷಿಸತಕ್ಕ ಕೆಲಸಗಳು ಎಷ್ಟು ಮಾತ್ರವೂ ಸರಿಹೊಂದು ಹೊಂದಿಕೊಳ್ಳದಿರುವುದಾಗಿ ಹೇಳಬಹುದು.

ಇದೇ ವಿಚಾರದಲ್ಲಿ ಬೆಂಗಳೂರಿನಲ್ಲಿ ಮೊನ್ನೆ ತಾನೆ ಪ್ರೈಮರಿ ಉಪಾಧ್ಯಾಯರುಗಳು ಅಲ್ಲಿನ ಮೌನಸಭೆಗೆ ಚುನಾಯಿತರಾದ ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳಿಗೆ ಕೊಟ್ಟ ಒಂದು ಸತ್ಕಾರ ಕೂಟದಲ್ಲಿ ರಾವ್‌ಬಹದ್ದೂರ್ ಬಿ. ಕೆ. ಗರುಡಾಚಾರ್ಯರವರು ಇಂದಿನ ಸ್ಕೂಲು ಮತ್ತು ಕಾಲೇಜು ವಿದ್ಯಾರ್ಥಿಗಳು ಹೇಗೆ ಶಿಕ್ಷಣಕ್ಕೆ ಬರುತ್ತಿದ್ದಾರೆ ತಮ್ಮ ಕಾಲಕ್ಕೆ ತಿರುಗಿ ನೋಡಿ ಹೋಲಿಸಿ ನೋಡಿದರೆ ಸುಮಾರು ಹದಿನೈದು ರೂಪಾಯಿಗಳು ನಾವು [illegible] ನಂತರ ಉಪಾಧ್ಯಾಯರುಗಳ ಸಂಬಳವಾಗಿರುತ್ತದೆ. ಇಂತಹ ಅಲ್ಪ ಸಂಬಳದಿಂದ ತಮ್ಮ ಸಂಸಾರ ನಿರ್ವಹಣೆ ಮಾಡಿಕೊಂಡು ಸತ್ಪ್ರವರ್ತನೆಯಿಂದ ತಮ್ಮ ಶಿಕ್ಷಣ ಕಾರ್ಯವನ್ನು ಎಷ್ಟು ಶ್ರದ್ಧೆಯಿಂದ ನಿರ್ವಹಿಸಿ ಕೊಂಡು ಬರಲು ಸಾಧ್ಯವು, ಇಂತಹ ಸಂದರ್ಭದಲ್ಲಿ ಈ ಕಾರ್ಯವು ಬಹಳ ಕಷ್ಟದಿಂದ ನಡೆಯುತ್ತಿದೆ. ಇಲ್ಲಿ ಈ ಪರಿಸ್ಥಿತಿಯ ಜೊತೆಗೆ ಇನ್ನು ಏನೇ ಆದಾಯಗಳಿಲ್ಲದೆ ದರೂ ಸ್ವೀಕರಿಸಿಕೊಡಬೇಕೆಂದೂ ಕರೆದು ಪಕ್ಷ ಬೆಂಗಳೂರು ನಗರದ ಸ್ಕೂಲು ಉಪಾಧ್ಯಾಯರುಗಳ ವಿಷಯದಲ್ಲಿ ಮೇಲು ಕೆಲ್ಸದವನಾಗಿ ಮೇಳನಗಳನ್ನು ಕಲ್ಪಿಸ ಬೇಕೆಂದೂ ಸಲಹೆ ಮಾಡಿದರು. ಬೆಂಗಳೂರು ನಗರ ಮಾತ್ರವಲ್ಲದ ಇತರ ಸಂಸ್ಥಾನದೊಳಗಿರತಕ್ಕ ಹಳ್ಳಿಗಳಲ್ಲಿಯೂ ಸಂಬಳದ ಉಪಾಧ್ಯಾಯರುಗಳಿಗೆಲ್ಲಾ ಅನ್ವಯಿಸುವಂತೆ ಮಾಡಬೇಕೆಂದು ಅವಶ್ಯಕತೆಯಾದರೂ ಎಲ್ಲಾ ಡಿಸ್ಟ್ರಿಕ್ಟು ಮತ್ತು ಮುನಿಸಿಪಾಲಿಟಿಗಳ ಸ್ಥಳಗಳಾದರೂ ಮಾಡಬೇಕೆಂದು ಹೇಳಬೇಕೆ ವಿಧಿಯಿಲ್ಲ. ಇನ್ನೂ ಸಂಬಳದ ಮಾತಾಯಿತು.

ಇನ್ನು ಬಡ ಪೋಷ್ಯಗಳ ನಿರಾಶ್ರಿತರ ವಿಷಯ ಸಂಬಳವೇ ಇಷ್ಟರಮಟ್ಟಿಗಿರುವ ಹೋಲಿಕೆ ಒಂದು ಮೂಲೆಯಿಂದ ಮತ್ತೊಂದು ಮೂಲೆಗೆ ವರ್ಗಾಯಿಸಲ್ಪಡಬಹುದಾದ ಉಪಾಧ್ಯಾಯರುಗಳ ಸಂಸಾರ ಭಾರ, ಅವರ ಮಕ್ಕಳ ವಿದ್ಯಾಭ್ಯಾಸ, ವರ್ಗದ ಬಳಿಕ ಅವರಿಗೆ ಇರಬಹುದಾದ ಸುಖದುಃಖ, ಅವರ ಚಿತ್ತವೃತ್ತಿ, ಇಂತಹದರಿಂದ ನೂತನ ಸ್ಥಳಗಳಲ್ಲಿ ನಮ್ಮ ಮುಂದಿನ ಜನಾಂಗವಾಗುವ ಮಕ್ಕಳ ಶಿಕ್ಷಣ ಇವೇ ಮುಂತಾದುವುಗಳು ಈಗ ಗಣನೆ ಇಷ್ಟರಮಟ್ಟಿಗೆ ಪರಿಣಾಮಕಾರಿಯಾಗಿದೆಯೆಂಬುದು ನಮ್ಮ ದೇಶದ ಜನ ಧನಿಕ ಮತ್ತು ಅಧಿಕಾರಿ ವರ್ಗಕ್ಕೆ ಸ್ಪಷ್ಟವಾಗಿದೆ ಇಲ್ಲ. ಇದ್ದಾದರೂ ವರ್ಗ ವರ್ಗಿಯ ರಭಸವು ಮಾತ್ರ ಎಂದಿಗಿಂತಲೂ ಹೋರಾಗಿಯೇ ನಡೆಯುತ್ತಿದೆ ವರ್ಷಕ್ಕೆ ಹದಿನೈದು, ಇಪ್ಪತ್ತು ರೂಪಾಯಿಗಳ ಸಂಬಳದವರ ವರ್ಗಗಳೇ ಹೆಚ್ಚು.

ಒಟ್ಟಿನಲ್ಲಿ ಸರ್ಕಾರವು ಪ್ರಾಥಮಿಕ ಶಿಕ್ಷಣಕ್ಕಾಗಿ ಮಾಡತಕ್ಕ ಖರ್ಚಿನಿಂದ ಬಹುತ್ವದಲ್ಲಿ "ಅರ್ಥ ನಷ್ಟಂ ಮುಖ ಭಂಜನಂ" ಎಂಬುದು ಮಾತ್ರ ಸ್ಪಷ್ಟವಾಗುತ್ತಿಲ್ಲವೆ? ಈಗಲಾದರೂ ಸರಕಾರದವರು ಈ ಪ್ರಾಥಮಿಕ ಶಿಕ್ಷಣಕಾರರ ವರ್ಗಾವರ್ಗಿಯ ವಿಷಯದಲ್ಲಿ ಮಿತವ್ಯಯವನ್ನು ಮಾಡುವುದು ಯುಕ್ತವಾಗಿದೆ.

ಸುಭಾಷರ ಪೂನಾ ವಾಸ

ಕಾಂಗ್ರೆಸ್ ಅಧ್ಯಕ್ಷರಾದ ಬಾಬು ಸುಭಾಷ್ ಚಂದ್ರ ಬೋಸರು ಒಂದೆರಡು ದಿನಗಳಲ್ಲಿ ಪೂನಾಕ್ಕೆ ಹೋಗಿ ತಂಗುವರು. ಬೇಸಿಗೆ [illegible] ಅಲ್ಲಿ ಇರುವರು. ಕಾಂಗ್ರೆಸ್ಸಿಗೆ ಸಂಬಂಧಪಟ್ಟ ಕೆಲಸಗಳನ್ನು ಅಲ್ಲಿಂದಲೇ ನಡೆಸುವರು. [illegible] ಕೆಲಸಗಳಿಗೆ [illegible] ಅವರು ಅಲ್ಲಿಗೆ ಹೊರಟಿರುವರು.

ಜವಾಬ್ದಾರಿ ಸರ್ಕಾರ

ಬ್ರಿಟಿಷ್ ಪ್ರಭುತ್ವವು ಅಡ್ಡ ಬರಲಾರದು

ಸುಪ್ರಸಿದ್ಧ ರಾಜನೀತಿ ನಿಪುಣರಾದ ಸ್ಟ್ರಾಫರ್ಡ್ ಕ್ರಿಪ್ಸ್ ಅವರು ಕೊಚ್ಚಿ ಸಂಸ್ಥಾನದ ಪ್ರಜಾ ಸಮ್ಮೇಳನದ ಬಗ್ಗೆ ಒಂದು ಪತ್ರ ಬರೆದು ದೇಶೀಯ ಸಂಸ್ಥಾನಗಳ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸುವುದಕ್ಕೆ, ಬ್ರಿಟಿಷ್ ಸರ್ಕಾರವು ಅಡ್ಡ ಬರುವುದಿಲ್ಲವೆಂದೂ ಅದು ಹಾಗೆ ಮಾಡಿದರೆ ಸಂಸ್ಥಾನಾಧಿಪತಿಗಳೇ ಕ್ಷಮೆ ಯಾಚಿಸಬೇಕಾಗುವುದು, ಪಾರ್ಲಿಮೆಂಟು ಅದಕ್ಕೆ ಅನುಮತಿ ಕೊಡುವುದಿಲ್ಲವೆಂದೂ ತಿಳಿಸಿ [illegible] ಸಂಸ್ಥಾನಗಳಲ್ಲಿ ಜವಾಬ್ದಾರಿ ಸರಕಾರವು [illegible] ವುದರಿಂದ ಆ ಸಂಸ್ಥಾನಗಳಿಗೆ ಲಾಭ, ಬ್ರಿಟಿಷ್ ಪ್ರಭುತ್ವಕ್ಕೂ ಲಾಭ ಎಂದು ಕ್ರಿಪ್ಸ್ ಅವರು ಅಭಿಪ್ರಾಯಪಟ್ಟು ಈ ಬಗ್ಗೆ ಇರುವ ಮಹತ್ವದ ಸಂದೇಹಗಳನ್ನು ನಿವೃತ್ತಿ ಮಾಡಿದ್ದಾರೆ.

ಆಕಾಶವಾಣಿ

ಸೋಮವಾರ:— [illegible] ರವರೆಗೆ ಆರ್ಕೆಸ್ಟ್ರಾ ಸಂಗೀತ, ಕನ್ನಡ ಕವಿ ಗೋಷ್ಠಿ (ಉಪನ್ಯಾಸ) [illegible] ರಾಯರಿಂದ. ಮಂಗಳವಾರ ಸಂಗೀತ— [illegible] ರಿಂದ [illegible] ರವರೆಗೆ ಹರಿಕಥೆ "ಪ್ರಹ್ಲಾದ ವಿಜಯ" ಶ್ರೀ ಬ್ರ॥ ಸಧೀಪುರಂ [illegible] ಚಾರ್ಯರಿಂದ. ಬುಧವಾರ [illegible] ರಿಂದ [illegible] ವಿದ್ವಾನ್ ಎಸ್. ಲಕ್ಷ್ಮೀನಾರಾಯಣ ಶಾಸ್ತ್ರಿಗಳ ಗಾನ. ಗುರುವಾರ [illegible] ರಿಂದ [illegible] ಕನ್ನಡ ನಾಟಕ, [illegible] ವಿಜ್ಞಾನ, ಭೂಮಿಯೂ ಒಂದು ಪ್ರಾಣಿಯೆ?—ಮಿ॥ ಟಿ. ಎಂ. [illegible] ಯ್ಯನವರಿಂದ. ಚಲನ ಚಿತ್ರ [illegible] ಶುಕ್ರವಾರ [illegible] ರಿಂದ [illegible] ಹಿಂದೂಸ್ಥಾನಿ ಸಂಗೀತ. ಶನಿವಾರ ರಜಾ.

ರಾಜಧಾನಿಯಲ್ಲಿ ಅಡ್ಡಿ ಇಲ್ಲವಂತೆಯೆ?

ಮೈಸೂರು ನಗರದಲ್ಲಿ ಸಭೆ, ಭಾಷಣಗಳನ್ನು ನಡೆಸುವಂತೆ ಇನ್ನೂ ಕೆಲವು ಸ್ಥಳಗಳ ಪ್ರತಿಬಂಧಕವಿರುವುದಷ್ಟೆ. ಇದರಿಂದ ನಾಗರಿಕ ಹಕ್ಕು ಬಾಧ್ಯತೆಗಳಿಗೆ ಲೋಪ ಬರುವುದೆಂದೂ ಇಂತಹ ಪ್ರತಿಬಂಧಕಗಳನ್ನು ಇನ್ನು ಮುಂದೆ ಇಟ್ಟಬಾರದೆಂದೂ ತಿಳಿಸಿ, ಮೈಸೂರು ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿಯು ಮಾಡಿ ಕಾರ್ಯದರ್ಶಿಗಳಾದ ಶ್ರೀ ಸುಬ್ಬರಾವ್ [illegible] ಸರ್ಕಾರದವರಿಗೆ ಬರೆದಿದ್ದರು. ಈ ತಿಂಗಳು 15 ನೇ ತಾ॥ ನ ಪತ್ರದಲ್ಲಿ ವಾಕ್ ಸ್ವಾತಂತ್ರ್ಯವನ್ನು ಪಾಲಿಸುವುದಾಗಿಯೂ ಅವರಿಗೆ ತಿಳಿಸಿರುತ್ತಾರೆ.

ಆರೋಗ್ಯೋತ್ಸವ

ಮೈಸೂರು ಕರುಮಟ್ಟಿ [illegible] ಯಲ್ಲಿ ಕನ್ನಡ [illegible] [illegible] ಆರೋಗ್ಯೋತ್ಸವ [illegible] ಈ ತಿಂಗಳು 21 ನೇ ತಾ, ಸೋಮವಾರ [illegible] 10 ಘಂಟೆಗೆ ನೆರವೇರಿಸು [illegible] ನಡೆಯುವುದು.

ದಿವಾನರೊಬ್ಬರಿಗೆ ಗಡೀಪಾರು.

ಒಬ್ಬ ದಿವಾನರನ್ನು ಮತ್ತೊಬ್ಬ ದಿವಾನರು ಗಡೀಪಾರು ಮಾಡಿದ ವರದಿಯು ಕೈಗೀರಿಯಾ ಸಂಸ್ಥಾನದಿಂದ ಬಂದಿದೆ. ಅಲ್ಲಿನ ಮಾಜಿ ದಿವಾನರಾದ ಭಾಗವತ ಪಾಟ್ಕಾಯಿಶ್ ಮತ್ತು ಅವರ ಸಹೋದರರಾದ ಅಪ್ಪಬಂಧು ಪಾಟ್ಕಾಯಿಶ್ ಎಂಬ ನೌಕರರೂ ಜನರಿಂದ ಲಂಚ ತಿನ್ನುವುದನ್ನು ತೆಗೆದುಕೊಂಡರೆಂದೂ ಮತ್ತೂ ಅನೇಕ ಪುಕಾರುಗಳು ಬಂದವು. ಅಲ್ಲದೆ ಅವರ ಮೇಲೆ ಅನೇಕ ಕ್ರಿಮಿನಲ್ ಮೊಕದ್ದಮೆಗಳೂ ಕೂಡ ಹೂಡಲ್ಪಟ್ಟವು. ಇದರ ಪರಿಣಾಮವಾಗಿ ಸದರಿ ದಿವಾನರೂ ಅವರ ಸಹೋದರರೂ ಅನುಮತಿ ಪಡೆಯದೆ ಸಂಸ್ಥಾನದೊಳಕ್ಕೆ ಪ್ರವೇಶಿಸಕೂಡದೆಂದು ಇಂದಿನ ದಿವಾನರು ಆಜ್ಞೆ ಮಾಡಿದ್ದಾರೆ. ದಿವಾನರುಗಳಿಗೇ ಹೀಗಾದರೆ ಬಾಕಿ ಚಿಲ್ಲರ ನೌಕರರ ವಿಷಯ ಹೇಳಬೇಕಾಗಿಲ್ಲ.

ಪಾನಮಾಡಿರಿ! ಆನಂದಪಡಿರಿ!
ಹೆಚ್ಚು ಸುವಾಸನೆಯೂ, ರುಚಿಕರವೂ ಪರಿಶುದ್ಧವೂ ಆದ
ಬ್ಲೂ ಬರ್ಡ್ ಬ್ರಾಂಡ್ ಟೀ
ಇಂದೇ ಉಪಯೋಗಿಸಿರಿ!
ಇದು ನೀಲಗಿರಿಯಲ್ಲಿ ಬೆಳೆದ ಟೀ.
ಇದು ಭಾರತೀಯರಿಗೆ ಯೋಗ್ಯವಾದ ಟೀ.
ಎಲ್ಲೆಲ್ಲಿಯೂ ದೊರೆಯುತ್ತೆ
ಮೈಸೂರಿನ ಸೋಲ್ ಏಜೆಂಟರು:—
ಬಾರಿ ಮತ್ತು ಪ್ರಕಾಶ್
ಸೈಯಾಜಿರಾವ್ ರೋಡು, ಮೈಸೂರು

ಅಕಾಲ ವಾರ್ಧಕ್ಯ
ವನ್ನು ಪರಿಹರಿಸುವುದು.
ಮದನ ಮಂಜರಿ ಮಾತ್ರೆಗಳೆ
ಅತಿ ಯೋಗದಿಂದಲೂ, ಮುದುಪ್ಪಿನಿಂದಲೂ ಅಥವಾ ಮತ್ತಾವ ಕಾರಣದಿಂದಲೂ ಯೌವನದಲ್ಲಿ ಬಂದ ಮುಪ್ಪನ್ನು ಪರಿಹರಿಸುವುದರಲ್ಲಿ ಇದು ಚಕ್ರವರ್ತಿ ಸ್ಥಾನದಲ್ಲಿದೆ.
40 ಮಾತ್ರೆಗಳ ಡಬ್ಬಿ ಕ್ರಯ ರೂ. 1
ಮದನಮಂಜರಿ ಫಾರ್ಮಸಿ
1194 ಚೈನಾ ಬಜಾರ, ಮದ್ರಾಸ್.
ಏಜೆಂಟರು:-
ಪಿ ಆರ್ಟ್ ಮೆಡಿಕಲ್ ಸ್ಟೋರ್ಸ್,
[illegible] 91, ಚಿಕ್ಕಪೇಟೆ ಬೆಂಗಳೂರು [illegible]

ವಕ್ರ ದೃಷ್ಟಿ

(ಶುಕ್ರಾಚಾರ್ಯರಿಂದ)

ಕಾಮನ್ಸ್ ಸಭೆಯಲ್ಲಿ ಅರ್ಲ್ ವಿಂಟರ್ ಟನ್ನರು "ಸಂಸ್ಥಾನಿಕ ರಾಜರುಗಳು ಜವಾಬ್ದಾರಿ ಸರ್ಕಾರ ಕೊಡಲು ನಮ್ಮದೇನೂ ಅಭ್ಯಂತರವಿಲ್ಲ. ಹಾಗೆ ಕೊಡುವುದೇ ನಮಗೂ ಇಷ್ಟ" ಎಂದ ಮೇಲಂತೂ ಸಂಸ್ಥಾನಿಕರಿಗೆ ಬಾಂಬ್ ಹಾಕಿದ ಹಾಗಾಗಿ ಅವರಿಗೆ ಚೇತರಿಸಿಕೊಳ್ಳೋದಕ್ಕೇ ಆಗುತ್ತಿಲ್ಲ. ಇದರ ಫಲ, ನಾನಾ ಕಡೇಲಿ, ನಾನಾ ತರಹ ಆಗ್ತಿ. ಸರ್ ಸಿ. ಪಿ. ರಾಮಸ್ವಾಮಯ್ಯರವರು ಇದೊಂದು ದುಃಖ ಸೂಚನೆ ಎಂದು ಹೇಳಿ ತಪ್ಪನ್ನಾವರು ಇತ್ತಲಾಗಿ ಕಾಂಗ್ರೆಸ್ಸಿನವರು ಸಂಸ್ಥಾನಗಳ ವಿಷಯದ ಠರಾವಿನಲ್ಲಿ ಪ್ರಜೆಗಳಿಗನುಕೂಲ ಆಗೋಹಾಗೆ ತೀರ್ಮಾನಿಸಿದರು

ಇದೆಲ್ಲಾ ನೇರ ಕೆಲವರಿಗೆ "ನಡುನೀರೊಳು ಕೈಯ್ಯ ಬಿಡುವರ?" ಎನ್ನುವಂತಿದೆ

ಂ ಂ ಂ

ಮೊನ್ನೆ ಮೈಸೂರಿನಲ್ಲಿ ಒಬ್ಬ ಭಾಷಣಕಾರರು ಫಜಲುಲ್ ಹಕ್ಕರನ್ನು ಆಕ್ಷೇಪಿಸಿದರೆಂದು ಸಭೆಯಲ್ಲಿದ್ದ ಒಬ್ಬರಿಗೆ ಬಹಳ ಆಗ್ರಹವಾಯಿತಂತೆ! ಆ ಮಹಾಶಯರಿಗೆ ಅದೇ ಭಾಷಣಕಾರರು ಅಬ್ದುಲ್ ಗಫೂರ್ ಖಾನರನ್ನು ಸ್ತುತಿಸಿದ್ದು ಕಿವಿಗೆ ಬೀಳಲಿಲ್ಲಾಂತ ಕಾಣುತ್ತೆ, ಅದೇ ಸಭೆಯಲ್ಲಿ ಮತ್ತೊಬ್ಬ ಭಾಷಣಕಾರರು ಜಿನ್ನಾರವರನ್ನು ಆಕ್ಷೇಪಿಸಿದ್ದೂ ಕಿವಿಗೆ ಬೀಳಲಿಲ್ಲವೇನೋ? ಆದರೆ ಹಕ್‌ರನ್ನು ಇಂಡಿಯಾದ ಎಲ್ಲಾ ಪತ್ರಿಕೆಗಳೂ ವಾಚಾಮಗೋಚರವಾಗಿ ಬೈದವು! ಮತ್ತು ಇಂತಹ ರಾಜಕೀಯ ಗೋಸುಂಬೆಗಳಿಗೆ ಕಾಂಗ್ರೆಸ್ಸು ಆಶ್ರಯ ಕೊಡಕೂಡದು

ಂ ಂ ಂ

ಅಂತೂ ಓಟಿನ ಭರಾಟೆ ಎಲ್ಲಾ ಆಯಿತು. ಫಲಿತಾಂಶಗಳೂ ಹೊರಬಿದ್ದು ಎಲ್ಲೆಲ್ಲೂ ಕಾಂಗ್ರೆಸ್ಸು ಜಯಭೇರಿಯನ್ನೇ ಹೊಡೆಯಿತು. ಈ ಜಯವನ್ನು ನೋಡಿ ನಾನಾ ಜನರಿಗೆ ನಾನಾ ತರಹ ಅನ್ನಿಸಿತು ಮೈಸೂರಿನ ಅನೇಕ ಮಹಾಜನರಿಗೆ ಖುಷ್ಲಿಹವು ಬಹಳವಾಗಿತ್ತು (ಇವರಲ್ಲಿ ವಿರೋಧಿಗಳ ಏಜಂಟರೂ ಅನೇಕರು ಸೇರಿದ್ದಾರೆ) ಚುನಾವಣೆ ಕಾಲದಲ್ಲಿ ಅನೇಕ ವಿಚಿತ್ರಗಳೂ ನಡೆದವು.

ಂ ಂ ಂ

ಒಂದು ಮೊಹಲ್ಲಾ ಪೋಲಿಂಗ್ ಸ್ಟೇಷನ್. ಸುಮಾರು 10½ ಘಂಟೆ. ಪ್ರತಿ ಸ್ಪರ್ಧಿಗಳದೊಂದು ಕಾರು ರಭಸದಿಂದ ಬಂದಿತು ಎಲ್ಲೂ ನಿಲ್ಲದೆ ಕಟ್ಟಡದ ಬಾಗಿಲಿಗೆ ಸರಿಯಾಗಿ ಹೋಗಿ ನಿಂತಿತು. ಕಾಂಗ್ರೆಸ್ ಕ್ಯಾನ್ವಾಸರುಗಳು ಭಂದಿಂದ ಆ ಕಡೆಗ ನುಗ್ಗಿದರು. ಅವರು ಬರುವ ವೇಳೆಗೆ ಆ ಕಾರಿನಲ್ಲಿದ್ದ ವ್ಯಕ್ತಿಯೊಂದನ್ನು ಏಜಂಟರು ರಭಸದಿಂದ ಒಳಕ್ಕೆ (ಅಂದರೆ ಕಟ್ಟಡದೊಳಕ್ಕೆ) ತಳ್ಳಿದರು ಕಾರಿನಲ್ಲಿ ಇನ್ನೂ ಮೂರು ಜನ ಇದ್ದರು. ಆ ವ್ಯಕ್ತಿಯು ಹೊರಗೆ ಬಂದಮೇಲೆ ನಿಜಾರಿಸಿದ್ದರಲ್ಲಿ ಅವರೊಬ್ಬರು ಓಟರೆಂದೂ, ಮಿಕ್ಕ ಮೂರು ಜನವೂ ಕ್ಯಾನ್ವಾಸರುಗಳೆಂದೂ ಕಾಂಗ್ರೆಸ್ಸಿನವರೆಲ್ಲಿ ಮುತ್ತಿಬಿಡ್ತಾರೋ ಎಂಬ ಭಯದಿಂದ ಅವರನ್ನು ಒಳಕ್ಕೆ ತಳ್ಳಿದರೆಂದೂ ಹೇಳಿದರು. ಅಂತೂ ಓಟರುಗಳಿಗಿಂತ ಕ್ಯಾನ್ವಾಸರುಗಳೇ ಸಂಖ್ಯೆಯಲ್ಲಿ ಹೆಚ್ಚು ಅಂದ ಹಾಗಾಯಿತು

ಂ ಂ ಂ

ಇನ್ನೊಂದು ಮೊಹಲ್ಲಾ ಪೋಲಿಂಗ್ ಸ್ಟೇಷನು ಎರಡು ಕಡೆಯವರಿಂದಲೂ ಕ್ಯಾನ್ವಾಸಿಂಗ್ ಜೋರಾಗಿಯೇ ಇದೆ. ಪ್ರತಿ ಸ್ಪರ್ಧಿಗಳ ಏಜಂಟರಿಗೆ ತಮ್ಮ ಕಡೆಯವರ ಜಯದಲ್ಲೇ ನಂಬಿಕೆ ಇಲ್ಲ ಒಬ್ಬ ಓಟರು ಒಳಗೆ ಹೊರಟರು. ಪ್ರತಿ ಸ್ಪರ್ಧಿಗಳ ಏಜಂಟರು ತಮ್ಮ ಕಡೆಯ ಕಾರ್ಡನ್ನು ಕೊಟ್ಟರು. ಆ ಓಟರು ಪುಣ್ಯಾತ್ಮರು ಆ ಕಾರ್ಡನ್ನು ಹಿಡಿದು ಚೂರುಮಾಡಿ ಏಜಂಟನ ಮುಖದಮೇಲೆ ಎಸೆಯುವುದೆ? ಆ ಏಜಂಟು ಅಷ್ಟಕ್ಕೇ ಬಿಡದೆ ಇನ್ನೊಬ್ಬರ ಕೈನಲ್ಲಿ ಕಾರ್ಡನ್ನು ಕೊಟ್ಟರೆ ಆ ಪುಣ್ಯಾತ್ಮರು ಆ ಕಾರ್ಡನ್ನು ನೋಡಿ 'ಧೂ ಇದಕ್ಕಾಕೆ ನಾನು ಓಟು ಕೊಡಲಿ' ಎಂದು ಆ ಕಾರ್ಡನ್ನು ಏಜಂಟರ ಕಾಲಹತ್ತಿರ ಬಿಸಾಕಿ ಹೊರಟುಹೋದರು. ಆ ಏಜಂಟು "ನಮ್ಮ ಪಾಡು ನಾಯಿ ಪಾಡು" ಅಂದ ಹೀಗೆ ಎಷ್ಟೋ ನಡೀತು

ಂ ಂ ಂ

ಫಲಿತಾಂಶ ಹೊರಬಿದ್ದಮೇಲೆ ಪ್ರತಿಸ್ಪರ್ಧಿಗಳ ಏಜಂಟರು ಒಂದು ದಿವಸ ಸಿಕ್ಕಿದರು. ನಾನು ಅವರನ್ನು ಏನ್ರೀ, ಬಹಳ ಜಂಭ ಹೊಡೀತಿದ್ದಿರಲ್ಲಾ! ಅದು ಹೇಗೆ ಓಟು ಬರುವುದಿಲ್ಲಾ? ಹಣ ಅಂದರೆ ಹೆಣವೂ ಬಾಯಿ ಬಿಡುತ್ತೇ ಅಂದಿರಲ್ಲಾ. ಇಷ್ಟು ಹಣ ಚೆಲ್ಲಿದ ನಿಮ್ಮ ಜವರ್ದಸ್ತು ಸೆಕ್ಯೂರಿಟೀನ ಕೂಡಾ ಉಳಿಸಲಿಲ್ಲವಲ್ಲರೀ ಅಂದೆ ಅದಕ್ಕೆ ಅವರು "ಏನು ಮಹಾ ಒಂದು 40 ಓಟಿನಲ್ಲಿ ಸೆಕ್ಯೂರಿಟಿ ಹೋಯಿತು, ಅಷ್ಟೇ ತಾನೆ? ಯಾರ್ಯಾರೋ ಸರ್ಕಾರಿ ಕೆಲಸದಲ್ಲಿದ್ದವರೂ ಕೂಡ ಚಕ್ಕರ್ ಕೊಟ್ಟರು ಎಂತಹ ಉಂಡ ಮನೆಗೆ ಎರಡು ಬಗೆಯುವ ಪ್ರಾಣಿಗಳು! ಈಗ ಅವರ ಪತ್ತೆ ಹಚ್ಚಲಾಗುತ್ತಿದೆ. ಸಿಕ್ಕಿದಮೇಲೆ ಅವರಿಗೆ ಯಾವತರಹ ಶಿಕ್ಷೆಯಾಗುತ್ತದೆಯೋ ನೀವೇ ನೋಡಿ" ಅಂದರು. ಇದನ್ನು ಕೇಳಿ ನನ್ನ ಜತೆಯಲ್ಲಿದ್ದವರೊಬ್ಬ "ಅಲ್ಲಾ ಸ್ವಾಮಿ, ಸರ್ಕಾರಿ ಕೆಲಸದಲ್ಲಿದ್ದವರು ಅಂದಮೇಲೆ ಸರ್ಕಾರಕ್ಕೇ ಮೈ ಮಾರಿಕೊಂಡಿದ್ದಾರೆಯೇ? ಅಥವಾ ಸರ್ವಿಸ್ ರೂಲ್ಸಿನಲ್ಲಿ ಇ ಗ್ರೂಪ್ಪಿಗೆ ಓಟು ಕೊಡಕೂಡದು ಎಂತ ಏನಾದರೂ ಲಿಖಿತ ಇದೆಯೋ? ಓಟು ಕೊಟ್ಟಿದ್ದರಿಂದ ಏನು ದ್ರೋಹ ಮಾಡಿದ ಹಾಗಾಯಿತು? ಅಲ್ಲದೆ ಸಿಲ್ಲಿದವರಿಗೂ ಸರ್ಕಾರಿ ಉದ್ಯೋಗಿ, ಮನೇಲಿ ಸಾಧಾರಣ ಪ್ರಜೆ ತಾನೆ? ತನ್ನ ಸ್ವಂತ ಆಡಳಿತದಲ್ಲಿ ಅಂದರೆ ಗೃಹಕೃತ್ಯದಲ್ಲಿ ಕೂಡ ನ್ಯಾಯಸಮ್ಮತವಾದ ರೀತಿಯಲ್ಲಿ ನಡೆದವನನ್ನು ಶಿಕ್ಷಿಸುತ್ತೇನೆಂದು ಬೆದರಿಸಿದರೆ ಇವರ್ಯಾಂತ ಜೇ ಹವಾಲ್ದಾರಿ ಯುಂಟೇ' ಇಂದರು. ಏಜಂಟರು ನಿರುತ್ತರ.

ದಿವಂಗತ ಶ್ರೀಮತಿ ಪಂಕಜಮ್ಮನವರು

ಪ್ರಥಮ ಸಚಿವರಾದ ರಾಜಮಂತ್ರ ಪ್ರವೀಣ ಎಸ್. ಪಿ. ರಾಜಗೋಪಾಲಾಚಾರ್ಯರ ಪತ್ನಿ

"ವರದಕ್ಷಿಣೆ"

ಇದು ಮಂಗಳೂರಿನ ಸದ್ಧರ್ಮ ಪ್ರಚಾರಕ ಗ್ರಂಥಮಾಲೆಯ ಎರಡನೇ ಪುಸ್ತಕ ಮೈಸೂರು ಆರ್ಯಸಮಾಜದ ಪ್ರಚಾರಕರಾದ ಶ್ರೀ ಲಕ್ಷ್ಮಣದೇವ ವಿದ್ಯಾರ್ಥಿಯವರು ಲೇಖಕರು ಮತ್ತು ಪ್ರಕಾಶಕರು. ಬೆಲೆ ಅರ್ಧಾಣೆ ಮಾತ್ರ ವರದಕ್ಷಿಣೆ ಅಥವಾ ಕನ್ಯಾಶುಲ್ಕಗಳಿಂದ ಹಿಂದೂ ಸಮಾಜದಲ್ಲಿ ಎಂತೆಂತಹ ಅನಾಹುತಗಳು ಸಂಭವಿಸುತ್ತಿವೆಯೆಂಬುದನ್ನು ಹೃದಯಂಗಮವಾಗಿ ವರ್ಣಿಸಿದ್ದಾರೆ. ಕನ್ನಡಿಗರೆಲ್ಲರೂ ಓದಲು ಈ ಪುಸ್ತಕವು ಅರ್ಹವಾಗಿದೆ.

ಹಿಂದೀ ಸಮಾರಂಭ

ಕಳೆದ 6 ನೇ ತಾ|| ಭಾನುವಾರ ಮೈಸೂರು ಹಿಂದೀ ಪ್ರಚಾರ ಸಭೆಯ ಪ್ರಮಾಣಪತ್ರ ಪ್ರದಾನೋತ್ಸವವು ಟೌನ್ ಹಾಲಿನಲ್ಲಿ ಜರುಗಿತು. ನೂರಾರು ಜನ ಮಹಿಳೆಯರೂ ಮಹನೀಯರೂ ಬಂದಿದ್ದರು. ಶ್ರೀಮತಿ ಲೋಕಸುಂದರಿ ರಾಮನ್‌ರವರು ಅಗ್ರಾಸನವನ್ನು ವಹಿಸಿದ್ದರು ಧಾರವಾಡದ ಮುಖಂಡರಾದ ಶ್ರೀಮತಿ ಕೃಷ್ಣಾಬಾಯಿ ಪಣಜೀಕರರವರು ಹಿಂದೀಭಾಷೆಯ ಆವಶ್ಯಕತೆಯನ್ನು ಕುರಿತು ಸ್ವಾರಸ್ಯವಾದ ಭಾಷಣ ಮಾಡಿದರು. ವನಿತಾ ಸದನದವರೂ, ಹಿಂದೀ ಕಾರ್ಯಕರ್ತರೂ ಸ್ವಾರಸ್ಯವಾದ ಕೆಲವು ದೃಶ್ಯಗಳನ್ನು ಅಭಿನಯಿಸಿದರು.

ಭಕ್ತ ಪುರಂದರ ದಾಸ

ರಾಜಧಾನಿಯ ಚಾಮುಂಡೇಶ್ವರೀ ಟಾಕೀಸಿನವರು ಕಳೆದ ೬ ನೇ ತಾ|| ಭಾನುವಾರ ಅನೇಕ ಜನ ದೊಡ್ಡ ಮನುಷ್ಯರನ್ನು ಬರಮಾಡಿಕೊಂಡು ಫೋಟೋ ಫಲಾಹಾರಗಳಿಂದ ಉಪಚರಿಸಿ, "ಭಕ್ತ ಪುರಂದರ ದಾಸ್" ಎಂಬ ಕನ್ನಡ ಚಲನ ಚಿತ್ರದ ಹೊಸ ಪ್ರದರ್ಶನವನ್ನು ತೋರಿಸಿದರು. ಎಲ್ಲರೂ ಅದನ್ನು ನೋಡಿ ಬಹಳ ಸಂತೋಷಪಟ್ಟರು. ಇದನ್ನು ಮದರಾಸಿನ ದೇವಿ ಫಿಲಮ್ಸ್‌ನವರು ತಯಾರಿಸಿದ್ದಾರೆ. ಇದಕ್ಕೆ ಕನ್ನಡಿಗರೆಲ್ಲರೂ ಉತ್ತೇಜನ ಕೊಡುವರೆಂದು ನಾವು ನಂಬಿದ್ದೇವೆ

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತ ಅಂಡ್ ಸನ್,

ಆಯುರ್ವೇದೀಯ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳು

ಈ ಮಾತ್ರೆಗಳು 1-2 ನ್ನು ಪ್ರತಿ ದಿನ ಊಟವಾದ ಬಳಿಕ ತಾಂಬೂಲದೊಡನಾಗಲಿ ಹಾಗೆಯಾಗಲಿ, ಉಪಯೋಗಿಸುತ್ತಿದ್ದರೆ, ಬಾಯಿ ಸುವಾಸನೆಯಾಗಿರುತ್ತಾ ಎಂತಹ ಗಡುಸಾದ ಆಹಾರವನ್ನಾದರೂ ಜೀರ್ಣೀಕರಿಸಿ ಕೊಳಕಾದ ನೀರು, ಕೆಟ್ಟಗಾಳಿಗಳ ದೋಷವನ್ನೂ, ಅಂಟುಜಾಡ್ಯಗಳನ್ನೂ ಬಳಿಗೆ ಸೇರಿಸದೆ ಮಲಬದ್ಧವನ್ನು ಹೋಗಲಾಡಿಸಿ, ಆರೋಗ್ಯವಾಗಿರುವಂತೆ ಮಾಡುತ್ತದೆ.

ಮಕ್ಕಳ ಪಕ್ಕೆಸೆಳೆತ (ಎಳವು, ಕಾಲುಕೈ ವದರು ಬಾಯಲ್ಲಿ ಜೊಲ್ಲು ಸುರಿಸುವ ಸೀತವಾತ) ಮಕ್ಕಳ ಮತ್ತು ದೊಡ್ಡವರ ಸೀತ, ನೆಗಡಿ, ಕೆಮ್ಮಲು, ಗೂರಲು, ಜ್ವರ, ಚಳಿಜ್ವರ, ಅಜೀರ್ಣ, ಅಜೀರ್ಣದ ಭೇದಿ, ಹೊಟ್ಟೆಯುಬ್ಬರ, ಹೊಟ್ಟೆ ನೋವು, ಅಗ್ನಿಮಾಂದ್ಯ, ಇನ್‌ಫ್ಲೂಯಂಜಾ, ಪ್ಲೇಗು, ಶೀತಭೇದಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ

ಸ್ತ್ರೀಯರು ಹೆತ್ತ ಹಸಿ ಸ್ನಾನದ ದಿನ ಶೀತವಾತ ಪರಿಹಾರಕ್ಕಾಗಿ ಕಸ್ತೂರಿಗೆ ಬದಲು ಈ ಮಾತ್ರೆಗಳನ್ನೇ ಲಕ್ಷೋಪಲಕ್ಷ ಜನರು ಉಪಯೋಗಿಸುತ್ತಿರುತ್ತಾರೆ ಈ ಮಾತ್ರೆಗಳಲ್ಲಿ ಅಫೀಮಾಗಲಿ, ವಿಷವಸ್ತುವಾಗಲಿ, ಖಂಡಿತವಾಗಿ ಸೇರಿಲ್ಲ. ಒಂದೇ ಒಂದು ಈ ಸೀಸೆಯು ನಿಮ್ಮ ಬಳಿ ಇದ್ದರೆ, ವೈದ್ಯರ ಸಹಾಯವನ್ನಪೇಕ್ಷಿಸದೆ, ನೀವೇ ಅನೇಕ ವ್ಯಾಧಿಗಳನ್ನು ಗುಣಪಡಿಸಬಲ್ಲವರಾಗುತ್ತೀರಿ.

250 ರಿಂದ 300 ಮಾತ್ರೆಗಳವರೆವಿಗಿರುವ ಸೀಸೆ 1 ಕ್ಕೆ 4 ಆಣೆ. ಟಪಾಲು ಮೂಲಕ ಸ್ತರಾವತೆ 1 ಸೀಸೆಗೆ 9 ಆಣೆ. 6 ಸೀಸೆಗೆ 1—8—0. 12 ಕ್ಕೆ 2—13—0. 25 ಕ್ಕೆ 5—3—0.

ಪಾಳ್ಯದ ವೆಂಕಟಾಚಲ ಪಂಡಿತ ಅಂಡ್ ಸನ್,

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

"ಹೊಗೆಸೊಪ್ಪಿನ ಸೇವನೆ"

ಲೇಖಕರು — ಡಾಕ್ಟರ್ ಎಸ್ ಕೃಷ್ಣಮಾಚಾರ್ಯ, ಎಲ್. ಎ ಎಂ ಎಸ್.
ಆಯುರ್ವೇದ ವಿದ್ವಾನ್, ಚಲುವಾಂಬಾ ಅಗ್ರಹಾರ, ಮೈಸೂರು

ಇತ್ತೀಚೆಗೆ ನವನಾಗರೀಕತೆಯು ಹೆಚ್ಚಿದಂತೆಲ್ಲಾ ಜನಗಳು ಅನೇಕ ದುರಭ್ಯಾಸಗಳಿಗೆ ಈಡಾಗಿ, ಅಕಾಲ ಮರಣಕ್ಕೆ ತುತ್ತಾಗುತ್ತಿರುವರು. ಇಂತಹ ದುರಭ್ಯಾಸಗಳಲ್ಲಿ ಹೊಗೇಸೊಪ್ಪಿನ ಸೇವನೆಯು ಬಹಳ ಪ್ರಾಮುಖ್ಯವಾದುದು. ಯಾವ ಪ್ರಾಣಿಗಳೂ ಈ ಸೊಪ್ಪನ್ನು ತಿನ್ನುವುದಿಲ್ಲ, ಮೂಸಿಯೂ ನೋಡುವುದಿಲ್ಲ. ಮನುಷ್ಯನೊಬ್ಬನೇ ಈ ದುರಭ್ಯಾಸಕ್ಕೊಳಪಟ್ಟಿರುವನು.

ಮೊದಲು ಪಾಶ್ಚಿಮಾತ್ಯರು ಈ ಸೊಪ್ಪನ್ನು ಸೇವಿಸುವುದಕ್ಕಾರಂಭಿಸಿದರು. ಅದರ ಸ್ವಲ್ಪಕಾಲದಲ್ಲಿಯೇ ಇದು ವಿಷಯುಕ್ತವಾಗಿರುವುದೆಂದು ತಿಳಿದು ಇದನ್ನು ಯಾರೂ ಸೇವಿಸಕೂಡದಂತಲೂ, ಮಾರಲೂ ಕೂಡದಂತಲೂ ಸರ್ಕಾರದ ಕಾನೂನೊಂದು ಹೊರಬಿತ್ತು. ಆದರೆ ಅನೇಕ ಅಧಿಕಾರಿಗಳೇ ಈ ಚಾಳಿಗೆ ಬಿದ್ದಿರುವುದರಿಂದ ಕಾನೂನು ಜಾರಿಗೆ ಬರಲಿಲ್ಲ. ಈ ಸೊಪ್ಪಿನಲ್ಲಿ 'ನಿಕೋಟಿನ್' ಎಂಬುದೇ ಪ್ರಾಧಾನ್ಯ ವಿಷ. ಪರೀಕ್ಷಿಸಿದಲ್ಲಿ 100 ಔನ್ಸು ಸೊಪ್ಪಿನಲ್ಲಿ 2 ಔನ್ಸು ವಿಷವಿದೆ. ಇಲಿಯ ಚರ್ಮದ ಮೇಲೆ ಈ ವಿಷದ ಒಂದು ಬೊಟ್ಟನ್ನು ಹಾಕಿದರಾಗಲಿ, ಅಥವಾ ಒಂದೆರಡು ತೊಟ್ಟನ್ನು ನಾಯಿ, ಬೆಕ್ಕು ಇವುಗಳ ನಾಲಿಗೆಯ ಮೇಲೆ ಹಾಕಿದರಾಗಲಿ ಒಡನೆಯೇ ಅವು ಪ್ರಾಣ ಬಿಡುವುವು. ಈ ವಿಷಯದಿಂದುಂಟಾಗುವ ಹಾನಿಗೆ ಈ ನಿದರ್ಶನಗಳೇ ಸಾಕು. ಅಲ್ಲದೆ ಚೀಣಿಯರು ಆತ್ಮಹತ್ಯ ಮಾಡಿಕೊಳ್ಳಲು ಈ ವಿಷವು ಬೆರಸಿದ ನೀರನ್ನು ಕುಡಿಯುವರಂತೆ !!

ಹೊಗೆಯ ಸೊಪ್ಪನ್ನು ಸೇವಿಸುವವರಿಗೆ ಪ್ರಾರಂಭದಲ್ಲಿ ತಲೆ ತಿರುಗಿ ವಾಂತಿಯಾಗುವಂತೆ ಭಾಸವಾಗುವುದು. ಈ ಸೊಪ್ಪನ್ನು ಬಾಯಿಗೆ ಹಾಕಿಕೊಂಡು ಅಗಿದರೆ, ಒಡನೆಯೇ ಗಂಟಲು ಕೆರೆಯುವದಕ್ಕಾರಂಭಿಸಿ, ವಾಂತಿಯಾಗುವುದು. ಕೆಲವರು ಬೀಡಿ, ಸಿಗರೇಟ್, ಚುಟ್ಟಾ ವಗೈರೆಗಳಲ್ಲಿ ಯಾವುದಾದರೊಂದನ್ನು ಮೊದಲು ಅಭ್ಯಾಸಮಾಡಿ ಅದರಿಂದುಂಟಾಗುವ ತೊಂದರೆಗಳನ್ನು ಅವರೇ ಅನುಭವಿಸಿ, ಕೊನೆಗೂ ಈ ಅಭ್ಯಾಸವನ್ನು ಬಿಡಲಾರದೆ, ಸಿಗರೇಟಿಗಿಂತಲೂ ಬೀಡಿಯು ಹಾನಿಕರವಲ್ಲವೆಂತಲೂ, ಇವೆರಡಕ್ಕಿಂತಲೂ ಚುಟ್ಟವು ಹಾನಿಕರವಲ್ಲವೆಂದೂ, ಊಹಿಸಿ ಯಾವುದಾದರೊಂದನ್ನು ಬಿಡದೆ ಸೇವಿಸುವರು. ಕೆಲವರು ಇವೆಲ್ಲವೂ ಕೆಟ್ಟುದೆಂದೆಣಿಸಿ, ಈ ಸೊಪ್ಪಿನಿಂದಲೇ ತಯಾರಾದ ನಶ್ಯವನ್ನು ಮೂಗೇರಿಸುವುದು ಹಾನಿಕರವಲ್ಲವೆಂದು ತಿಳಿದು ಅದನ್ನು ಅಭ್ಯಾಸಮಾಡುವರು. ಹೀಗೆ ಅಭ್ಯಾಸಮಾಡಿದವರೆಲ್ಲ, ಮನಸ್ಸಿನ ಸ್ಥೈರ್ಯವಿಲ್ಲದ ಕಾರಣ ಹಿಂದೆ ಕಲಿತದ್ದನ್ನು ಬಿಡಲಾರದೆ, ಇವೆರಡರ ಸಹವಾಸವೂ ಒಳಗಾಗುತ್ತಾರೆ. ಇವಲ್ಲದೆ ಮತ್ತೆ ಕೆಲವರು ತಾಂಬೂಲವನ್ನು ಸೇವಿಸುವಾಗ ಈ ಸೊಪ್ಪನ್ನು ಅದರೊಡನೆ ಉಪಯೋಗಿಸುವರು. ಆದರೆ ಈ ಸೊಪ್ಪನ್ನು ಯಾವ ವಿಧದಲ್ಲಿ ಉಪಯೋಗಿಸಿದರೂ ಕ್ರಮೇಣ ಅನರ್ಥವೇ ಸಂಭವಿಸುವುದು.

ಹೊಗೆ ಸೊಪ್ಪಿನಿಂದಲೇ ತಯಾರು ಮಾಡಿರುವ ಬೀಡಿ, ಚುಟ್ಟಾ ವಗೈರೆಗಳನ್ನು ಸೇವಿಸುವುದರಿಂದುಂಟಾಗುವಷ್ಟು ಹಾನಿಯು, ಈ ಸೊಪ್ಪನ್ನು ಇತರ ವಿಧದಲ್ಲಿ ಉಪಯೋಗಿಸುವುದರಿಂದ ಉಂಟಾಗುವುದಿಲ್ಲ. ಈ ಸೊಪ್ಪಿನ ಹೊಗೆಯನ್ನು ಬಾಯಿಯಿಂದ ಎಳೆಯುವುದರಿಂದ ನೆಟ್ಟಗೆ ಶ್ವಾಸಕೋಶಕ್ಕೆ ಹೇರಿಕೊಳ್ಳುತ್ತದೆ. ಹೀಗೆ ಹೊಗೆಯನ್ನು ಸೇದುವಾಗ ಅದರಲ್ಲಿರುವ ವಿಷದಲ್ಲಿ ಸ್ವಲ್ಪಭಾಗವು ಸುಟ್ಟುಹೋಗುವುದರಿಂದ ಮನುಷ್ಯನು ತಕ್ಷಣವೇ ಪ್ರಾಣ ಬಿಡುವುದಿಲ್ಲ. ಸಾಧಾರಣವಾಗಿ ಶೇಕಡಾ 50 ರಷ್ಟು ವಿಷವು ಸುಟ್ಟು ಉಳಿದ ಭಾಗವು ಹೊಗೆಯಲ್ಲಿ ಕಲೆತು ರಕ್ತಕ್ಕೆ ಸೇರಿಹೋಗುತ್ತದೆ. ಸ್ವಲ್ಪ ಸ್ವಲ್ಪವಾಗಿ ಹೀಗೆ ಸೇವಿಸುತ್ತಿರುವುದರಿಂದ ಶರೀರವು ಇದರ ವಿಷಕ್ಕೆ ಪಳಗಿ ಹೋಗುತ್ತದೆ.

ಹೊಗೇ ಸೊಪ್ಪನ್ನು ಸೇವಿಸುವ ಮನುಷ್ಯನ ಎದೆಯು (ಶ್ವಾಸಕೋಶಗಳು ಹೃದಯ) ಬಹಳ ಬೇಗನೆ ಕೆಡುವುದು. ಮೂಗು, ಗಂಟಲು, ಇವು ಸುಟ್ಟುಹೋಗುವುವು. ಈ ಕಾರಣಗಳಿಂದ ಆತನಿಗೆ ಕೆಮ್ಮು, ದಮ್ಮು ಮೊದಲಾದ ವ್ಯಾಧಿಗಳು ಬೇಗನೆ ತಲೆದೋರುವುವು. ಆಗಾಗ್ಗೆ ಉಸಿರು ಕಟ್ಟಿಕೊಳ್ಳುವುದೂ ಉಂಟು. ಅನೇಕ ಪಾಶ್ಚಾತ್ಯ ವೈದ್ಯರು ಹೀಗೆ ಈ ಸೊಪ್ಪಿನ ಹೊಗೆಯನ್ನು ಸೇವಿಸುವವರ ಎದೆಯನ್ನು ಪರೀಕ್ಷಿಸಿ ನೋಡಿ 'ಟೊಬ್ಯಾಕೋ ಹಾರ್ಟ್' ಎಂಬ ವ್ಯಾಧಿಯೊಂದನ್ನು ಕಂಡುಹಿಡಿದಿದ್ದಾರೆ. ಈ ರೋಗದಲ್ಲಿ ಎದೆಯು ಬಹಳ ಬೇಗನೆ ಹೊಡೆದುಕೊಳ್ಳುತ್ತದಲ್ಲದೆ ಸ್ವಲ್ಪ ವೇಳೆಯಾದಮೇಲೆ ನಿಧಾನವಾಗಿ ಹೊಡೆದುಕೊಳ್ಳುವುದಕ್ಕಾರಂಭಿಸುವುದು. ಇದು ಆ ಅವಯವದ ಅನಾರೋಗ್ಯವನ್ನು ಸೂಚಿಸುವುದು. ಈ ದುರಭ್ಯಾಸಕ್ಕೀಡಾಗಿರುವವರಿಗೆ ನರಗಳ ಶಕ್ತಿಯು ಕುಗ್ಗಿರುವುದರಿಂದ ಸಾಧಾರಣ ಪದಾರ್ಥಗಳು ರುಚಿ ತೋರುವುದಿಲ್ಲ. ಇತ್ತ ಬಾಯಿ, ಗಂಟಲನ್ನು ಒಣಗಿಸುವುದರಿಂದ ಬಾಯಾರಿಕೆಯು ಸಾಧಾರಣವಾದ ಪಾನೀಯಗಳಿಂದ ತೃಪ್ತಿ ಹೊಂದದೆ ಕೊನೆಗೆ ಆತನ ಮನಸ್ಸು ಮದ್ಯಪಾನವೇ ಮೊದಲಾದ ಇತರ ಕೆಟ್ಟ ಅಭ್ಯಾಸಗಳ ದಾರಿಯನ್ನು ತೋರಿಸುತ್ತದೆ. ಇವುಗಳಿಂದ ಇನ್ನೂ ಹೆಚ್ಚು ಅನರ್ಥವುಂಟಾಗುವುದು.

ಶರೀರದ ಪೋಷಣೆಗೆ ಆಹಾರವು ಮುಖ್ಯ. ಎಂದಿನ ಹಾಗೆ ವಿಷಯ. ಹೊಗೆಯ ಸೊಪ್ಪಿನ ಸೇವನೆಯಿಂದ ಅನ್ನನಾಳವು ಕೆಟ್ಟುಹೋಗಿ ಅದು ಸರಿಯಾಗಿ ಕೆಲಸ ಮಾಡುವುದಿಲ್ಲ. ಶುದ್ಧ ರಕ್ತವೂ ದೊರೆಯುವುದಿಲ್ಲವಾದ ಕಾರಣ ಶರೀರದ ಅನೇಕ ಭಾಗಗಳು ಚೆನ್ನಾಗಿ ಬೆಳೆಯುವುದಿಲ್ಲ. ಮಾಂಸಖಂಡಗಳು ಬಲಹೀನವಾಗುತ್ತವೆ. ಹೃದಯ, ಶ್ವಾಸಕೋಶಗಳ ಸಹಜ ವ್ಯಾಪಾರಕ್ಕೆ ಅಡಚಣೆ ಬರುವುದರಿಂದ, ಅವಕ್ಕೆ ಸ್ವಲ್ಪ ತೊಂದರೆಯುಂಟಾದರೂ ಬೇಗನೆ ಪ್ರಾಣ ಹೋಗಬಹುದು. ನರಗಳ ದೌರ್ಬಲ್ಯದಿಂದ ಮಿದುಳಿನ ಕೆಲಸವೂ ಚಟುವಟಿಕೆಯಿಂದಿರುವುದಿಲ್ಲ. ನಾನಾ ವಿಧ ಯೋಚನೆಗಳಿಂದ ವ್ಯಾಕುಲನಾಗಿರುವನೊಬ್ಬನು ಆ ವೇಳೆಯಲ್ಲಿ ಹೊಗೆಯ ಸೊಪ್ಪನ್ನು ಸೇವಿಸಿದರೆ ಕೊಂಚಕಾಲದ ಮಟ್ಟಿಗೆ ತನ್ನ ಕಷ್ಟಸುಖಗಳನ್ನು ಮರೆಯುವನು. ಮಿದುಳು ಮಂಕಾಗುವುದೇ ಇದಕ್ಕೆ ಕಾರಣ.

ಹೊಗೆಯ ಸೊಪ್ಪನ್ನು ಸೇವಿಸುವವರ ಕಣ್ಣಿನ ದೃಷ್ಟಿಯು ಬಹು ಬೇಗ ಕೆಡುತ್ತದೆಂದೂ, ಇವರಿಗೆ ಶಸ್ತ್ರ ಚಿಕಿತ್ಸೆ ನಡೆದಲ್ಲಿ ಅಪಾಯಕರವೆಂದೂ ಕೆಲವು ಪಾಶ್ಚಾತ್ಯ ವೈದ್ಯರು ಅಭಿಪ್ರಾಯಪಡುತ್ತಾರೆ.

ಹೊಗೆಯ ಸೊಪ್ಪಿನ ಗುಣಗಳನ್ನು ಕುರಿತು ನೋಡಿದರೆ ಅದು ಕ್ರಿಮಿನಾಶಕವೆಂದು ಕಾಣುತ್ತದೆ. ನೋವಿರುವ ಎಡೆಯಲ್ಲಿ ಈ ಸೊಪ್ಪಿನ ಪುಡಿಯನ್ನು ಸ್ವಲ್ಪ ಇಟ್ಟರೆ ನೋವು ಕಡಿಮೆಯಾಗುವುದು. ವ್ರಣಗಳು, ಊತ ಇವು ಇರುವೆಡೆಗಳಲ್ಲಿ ಈ ಸೊಪ್ಪನ್ನು (ಹಸಿ) ಸ್ವಲ್ಪ ಕಾಯಿಸಿ ಕೆಟ್ಟುವುದರಿಂದ ಸ್ವಲ್ಪ ಗುಣವುಂಟೆಂದು ಕಾಣುತ್ತದೆ.

ಹೀಗೆ ಹೊಗೆ ಸೊಪ್ಪನ್ನು ಸೇವಿಸುವುದರಿಂದ ಮಾನವನ ಶರೀರಕ್ಕೆ ಉಂಟಾಗುವ ಅಪಾಯವನ್ನು ಅರಿತು, ಇದರ ಅಭ್ಯಾಸವಿರುವವರು ಕೂಡಲೆ ಅದನ್ನು ಬಿಟ್ಟುಬಿಡುವುದಕ್ಕೆ ಪ್ರಯತ್ನಿಸಬೇಕು. ಅಭ್ಯಾಸ ಮಾಡುವಾಗ ಅನುಭವಿಸಿದಷ್ಟೇ ಕಷ್ಟವು ಬಿಡುವಾಗಲೂ ಉಂಟಾಗುವುದು. ಆದುದರಿಂದ ಇದನ್ನು ಬಿಡಲು ಮನಸ್ಸಿನ ದೃಢ ಸಂಕಲ್ಪವು ಮುಖ್ಯವಾದುದು.

ಬಹುಕಾಲದ ಪ್ರಜಾಸೇವೆ

ಮೈಸೂರು ಚಾಮರಾಜ ಅಗ್ರಹಾರದಲ್ಲಿ ವಾಸವಾಗಿರುವ ಮ|| ಅರವಟ್ಟಿಗೆ ಶ್ಯಾಮಾಚಾರ್ಯರನ್ನು ಕಂಡು ಕೇಳದವರೇ ನಮ್ಮ ಸೀಮೆಯಲ್ಲಿ ಇಲ್ಲವೆಂದು ಹೇಳಬಹುದು. ಇವರ ಪೂರ್ವಿಕರು ಉದಾಂಗಳು, ಗೋ ಬ್ರಾಹ್ಮಣ ಸೇವಕರು. ಇದಕ್ಕಾಗಿಯೇ ಚಾಮರಾಜ ಒಡೆಯರವರ ಕಾಲದಲ್ಲಿರುವ ಅಗ್ರಹಾರದಲ್ಲಿ ಮನೆಯೂ ವೃತ್ತಿಯೂ ಸಹ ಮೇಲ್ಕಂಡ ಶ್ಯಾಮಾಚಾರ್ಯರ ತಂದೆಯವರಿಗೆ ಅಂದರೆ ಅಧ್ಯಕ್ಷ ಶೇಷಾಚಾರ್ಯರಿಗೆ ಕೊಡಲ್ಪಟ್ಟಿತು. ಅಂದಿನಿಂದಲೂ ಸಹ ಇವರು ಒಂದೇ ರೀತಿಯಲ್ಲಿ ಗೋ ಬ್ರಾಹ್ಮಣ ಸೇವೆಯಲ್ಲಿ ನಿರತರಾಗಿ ಶಾಶ್ವತವಾದ ಪುಣ್ಯವನ್ನು ಗಳಿಸುತ್ತಿರುವರು.

ಅರವಟ್ಟಿಗೆ ಶ್ಯಾಮಾಚಾರ್ಯರವರು ಈಗ್ಗೆ ೪೦–೫೦ ವರ್ಷಗಳಿಂದಲೂ ಒಂದೇ ಸಮನಾಗಿ ಪ್ರಜಾಧರ್ಮ ಕಾರ್ಯಗಳನ್ನು ನಡೆಸುತ್ತಿರುವುದು ರಾಜಧಾನಿಯ ಮತ್ತು ಸಂಸ್ಥಾನದ ಪ್ರಜಾವರ್ಗದವರಿಗೆಲ್ಲರಿಗೂ, ವಿದಿತವೇ ಸರಿ. ಮೈಸೂರು ಚಾಮರಾಜ ಅಗ್ರಹಾರಕ್ಕೆ ಸೇರಿದಂತೆ ಸಿವಿಲ್ ಮತ್ತು ಕ್ರಿಮಿನಲ್ ಕೋರ್ಟುಗಳಿಗೆ ಹೋಗುವ ದಾರಿಯ ಪಾರ್ಶ್ವದಲ್ಲಿರುವ ಅಶ್ವತ್ಥ ಕಟ್ಟೆಯ ಕೆಳಗೆ ಶ್ರೀ ರಾಮರ ದೇವಾಲಯ ಒಂದನ್ನು ನಿರ್ಮಿಸಿ ಅಲ್ಲಿ ಬೇಸಿಗೆಯ ಮೂರು ತಿಂಗಳು ಕಾಲವೂ ಅರವಟ್ಟಿಗೆಯನ್ನಿಟ್ಟು ಮಜ್ಜಿಗೆ, ರಾಗಿ ಅಂಬಲಿ ಇತ್ಯಾದಿ ತಂಪು ಪಾನೀಯಗಳಿಂದ ದಣಿದ ದಾರಿಗರನ್ನು ಉಪಚರಿಸಿ ಆಶ್ವಾಸಿಸಿ ತಾವೂ ಅದರಿಂದ ಸಂತೋಷಪಡುವುದರ ಮೂಲಕ ಪರಮಾತ್ಮನ ಅನುಗ್ರಹಕ್ಕೆ ಪಾತ್ರರಾಗುತ್ತಿದ್ದಾರೆ.

ಈ ವಿಷಯವನ್ನು ಆಸ್ತಿಕ ಮಹನೀಯರು ಪರಾಂಬರಿಸಿ ಸ್ವಹಸ್ತ ಪರಹಸ್ತಗಳಿಂದ ಮ|| ಶ್ಯಾಮಾಚಾರ್ಯರಿಗೆ ಉದಾರವಾಗಿ ಸಹಾಯ ಮಾಡಬೇಕಾಗಿ ಕೇಳುತ್ತೇವೆ.



ಟಿ. ಸಿ. ನಟರಾಜ್ ಔಷಧಾಲಯ,

ಸಯ್ಯಾಜಿರಾವ್ ರೋಡು, ಮೈಸೂರು

ಇವರಲ್ಲಿ ನೇತ್ರಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅತ್ಯಗತ್ಯವಾಗಿ ಬೇಕಾದ ಎಲ್ಲಾ ಇಂಜಕ್ಷನ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರಕುವುದಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಛಾರ್ಜಿನಿಂದ ಮಾಡಲ್ಪಡುತ್ತದೆ.

ಝಂಡೂರವರ ಆಯುರ್ವೇದೀಯ ಸಿದ್ಧೌಷಧಗಳೆಲ್ಲವೂ ಸದಾ ದೊರೆಯುತ್ತವೆ

ಜವಾಬ್ದಾರಿ ಸರ್ಕಾರವು ಏಕೆ ಬೇಕು?

ಲೇಖಕರು:—ಶ್ರೀ ಎಂ. ಎಸ್. ಸೀತಾರಾಮಯ್ಯ, ಬೆಂಗಳೂರು.

ದೇಶದಲ್ಲಿ ಎಲ್ಲೆಲ್ಲಿಯೂ ಈಗ "ಜವಾಬ್ದಾರಿ ಸರ್ಕಾರ" ಎಂಬ ಕೂಗು ಕೇಳಿ ಬರುತ್ತಿದೆ. ಆದರೆ ಈ ಜವಾಬ್ದಾರಿ ಸರ್ಕಾರವು ಏಕೆ ಬೇಕು, ಇದರಿಂದ ಏನು ಪ್ರಯೋಜನವೆಂಬ ವಿಷಯಗಳು ಅನೇಕರ ಮನಸ್ಸಿಗೆ ತಿಳಿಯದೇ ಇದೆ. ಜವಾಬ್ದಾರಿ ಸರ್ಕಾರವೆಂದರೆ ಈಗ ಸರ್ಕಾರದಲ್ಲಿರುವ ಕೆಲವು ಅಧಿಕಾರಿಗಳನ್ನು ಬದಲಾಯಿಸಿ ಅವರ ಸ್ಥಾನದಲ್ಲಿ ಕಾಂಗ್ರೆಸ್ಸಿನವರೆಂಬುವ ಕೆಲವರನ್ನು ಕೂರಿಸುವುದಲ್ಲ. ಕೆಲವು ದೇಶಭಕ್ತರಿಗೆ ದೊಡ್ಡ ದೊಡ್ಡ ಕೆಲಸಗಳನ್ನು ಕೊಡುವುದಕ್ಕಲ್ಲ. ಮುಖ್ಯವಾಗಿ ದೇಶದ ಪ್ರಜೆಗಳ ಜೀವನ, ಆವಶ್ಯಕತೆ, ಅನುಕೂಲಗಳು ಮುಂತಾದುವನ್ನು ನಿವಾರಿಸಿ ಅವರ ಜೀವಿತವನ್ನು ಬದುಕುವುದಕ್ಕೆ ಯೋಗ್ಯವನ್ನಾಗಿ ಮಾಡುವುದಕ್ಕೆ.

ನಮ್ಮ ಸಂಸ್ಕೃತಿಯು ಉ[illegible] ದಿನೇ ದಿನೇ ವಿನಾಶವಾಗುತ್ತಿದೆ. ತನ್ನ ತನದ [illegible] ಜನತೆಯ ಶರೀರವು ಕೃಶವಾಗುತ್ತಿದ್ದು ಕಣ್ಣುಗಳು ಕಳೆಗುಂದಿ, [illegible] ಬಿದ್ದಿವೆ. ನಮಗೆ ಯಾವ ವಿಮೋಚನೆಯಾಗಬೇಕು. ನಮಗೆಂದು ಮುಕ್ತಿ? ನಮ್ಮ ಈ ದುರವಸ್ಥೆಗೆ ಕಾರಣ ವೇನು? ಸ್ವಾತಂತ್ರ್ಯ ಹೀನತೆ, ಪರದೇಶೀಯರ ಗುಲಾಮಗಿರಿ, ಪರದೇಶೀ ಪ್ರಭುತ್ವ ಪದ್ಧತಿ.

ಈಗಿನ ಪದ್ಧತಿಯು ನಮ್ಮ ಜೀವನ ಸಂಸ್ಕೃತಿಗೆ ತಕ್ಕುದಲ್ಲ. ವಿರೋಧವಾದ ಆದರ್ಶಗಳು. ಈ ಪ್ರಭುತ್ವ ಪದ್ಧತಿ ನಮ್ಮ ದೇಶಕ್ಕೆ ಹಿತಕರವಾದ ಪೂರ್ವ ಪದ್ಧತಿಯಲ್ಲ. ಈಗಿನ ವಿದ್ಯಾಭ್ಯಾಸ ಪದ್ಧತಿ, ವೈದ್ಯ ಚಿಕಿತ್ಸಾ ಪದ್ಧತಿ, ನ್ಯಾಯಸ್ಥಾನ ಪದ್ಧತಿ, ಶಾಸನ ಪದ್ಧತಿ, ಭೂಕಂದಾಯ ಪದ್ಧತಿ ಇವೊಂದೂ ನಮ್ಮ ದೇಶಕ್ಕೆ ನಮ್ಮ ಜನಕ್ಕೆ ಮತ್ತು ಹಳ್ಳಿಗಳಿಗೆ ಸರಿಯಾಗಿಲ್ಲ. ನಮ್ಮ ಹಳ್ಳಿಗಳ [illegible] ನಮ್ಮ ಸಂಸ್ಕೃತಿಯು ತಳಹದಿ ಧರ್ಮ. ಪಾಶ್ಚಾತ್ಯ ಸಂಸ್ಕೃತಿ ತಳಹದಿ ಅರ್ಥ. ಭಾರತದ ಋಷ್ಯ [illegible] ಹಳ್ಳಿಗಳು, ಹಳ್ಳಿಗಳಲ್ಲಿ [illegible] [illegible] ದೇಶಕ್ಕೆ [illegible] ನಮ್ಮ [illegible] ನಮ್ಮ ಸ್ವಾತಂತ್ರ್ಯ [illegible] ಪದ್ಧತಿಯನ್ನು ನಾವು ಅನುಸರಿಸಲು ಪ್ರಯತ್ನಿಸುತ್ತಿದ್ದೇವೆ. ಈ ಬಗೆಯ ಅನುಸರಣೆಯನ್ನು ಬಿಡಬೇಕು. ಪರರ ಪದ್ಧತಿಯಲ್ಲಿ [illegible] ಅನುಕರಿಸಬೇಕು. ನಮ್ಮ ಸ್ವಂತ ಪದ್ಧತಿಯು ನಮ್ಮ ಹಳ್ಳಿಗಳಿಗೆ ಅನುಗುಣವಾಗಿರಬೇಕು. ನಮ್ಮ [illegible] ಅನುಸರಿಸಿ [illegible] ಅದರ ಬೆಳವಣಿಗೆಗೆ [illegible] ಆದರೆ ಆ ಪದ್ಧತಿಯನ್ನು ಜಾರಿಗೆ ತರಬೇಕಾದರೆ ಸ್ವಾತಂತ್ರ್ಯ ಬೇಕು. ಪರದೇಶೀಯರ ಗುಲಾಮಗಿರಿ ದೂರವಾಗಬೇಕು.

ರಾಜಕೀಯ ಸ್ವಾತಂತ್ರ್ಯವನ್ನು ಪಡೆದ ಹೊರತು ನಮಗೆ ನೆಮ್ಮದಿಯಿಲ್ಲ. ನಮ್ಮ ರಾಜ್ಯದ ಆಡಳಿತವನ್ನು ನಮ್ಮ ಅನುಕೂಲಕ್ಕೆ, ಸಂಸ್ಕೃತಿಗೂ, ಸ್ವಭಾವಕ್ಕೂ ತಕ್ಕಂತೆ ನಡೆಸಬಹುದಾದ ಸ್ವಾತಂತ್ರ್ಯ ಬೇಕು. ಅದಿಲ್ಲದೆ ಸ್ವಾತಂತ್ರ್ಯವು ದೊರೆತ ಹೊರತು ದೇಶಕ್ಕೆ ಅಭಿವೃದ್ಧಿ ಇಲ್ಲ. ಸಮಷ್ಟಿ ಅಭಿವೃದ್ಧಿಯಾಗುವ ಪರಿಸ್ಥಿತಿ ಪರದ ಆಡಳಿತದಲ್ಲಿ ದೊರೆಯುವುದಿಲ್ಲ. ಆದುದರಿಂದ ಸ್ವಾತಂತ್ರ್ಯ ಬೇಕು. ಸ್ವರಾಜ್ಯ ಬೇಕು. ದೇಶದ ಜಡತನವೇ ಹಿಡಿದ ಆಪತ್ತು ದೂರವಾಗಬೇಕಾದರೆ ಸ್ವರಾಜ್ಯವನ್ನು ಪಡೆದ ಹೊರತು ಸಾಧ್ಯವಿಲ್ಲ. ಆದುದರಿಂದ ಇಂಥ ಸ್ವರಾಜ್ಯವನ್ನು ಪಡೆಯುವುದೇ ಪ್ರತಿಯೊಬ್ಬ ಭಾರತೀಯನ ಕರ್ತವ್ಯ.

ಭೇಟಿಗಳಿಂದ ಪ್ರಯೋಜನವಿಲ್ಲ

ಶ್ರೀ ತಿಮ್ಮಾರೆಡ್ಡಿಯವರ ಹೇಳಿಕೆ

ದಿವಾನ್-ಸಿದ್ಧಲಿಂಗಯ್ಯ ಭೇಟಿಯ ವಿಷಯವಾಗಿ ಶ್ರೀ ಎಸ್. ಸಿ. ತಿಮ್ಮಾರೆಡ್ಡಿಯವರು ಈ ರೀತಿ ಹೇಳಿಕೆ ಕೊಟ್ಟಿರುತ್ತಾರೆ:—

"ಜವಾಬ್ದಾರಿ ಸರ್ಕಾರವನ್ನು ಕೊಡುವುದೇ ಸರ್ಕಾರದ ಮುಖ್ಯ ಉದ್ದೇಶವೆಂಬುದನ್ನು ಖಚಿತವಾಗಿ ವ್ಯಕ್ತಪಡಿಸಲು ದಿವಾನರು ನಿರಾಕರಿಸಿದ್ದಾರೆ. ಅಲ್ಲದೆ ನಿಯಮಿಸಲ್ಪಡಬೇಕೆಂದಿರುವ ಸಮಿತಿಯವರು ಪರಿಶೀಲಿಸಬೇಕಾದ ಅಂಶಗಳನ್ನು ಗೊತ್ತು ಮಾಡುವ ವಿಷಯದಲ್ಲಾಗಲೀ ಸಮಿತಿಯ ಸದಸ್ಯರನ್ನು ಚುನಾಯಿಸುವ ವಿಷಯದಲ್ಲಿಯಾಗಲೀ ಮೈಸೂರು ಕಾಂಗ್ರೆಸ್ಸಿನ ಸಲಹೆ ಪಡೆಯುವುದನ್ನು ನಿರಾಕರಿಸಿ ಭರವಸೆ ಕೊಡುವುದು ಶ್ರೀಮನ್ಮಹಾರಾಜರ ರಾಜತ್ವಕ್ಕೆ ಲೋಪಬರುವುದೆಂದು ದಿವಾನರು ಸೂಚಿಸಿರುವುದಾಗಿ ತಿಳಿದುಬರುವುದು.

ಇಷ್ಟೇ ಅಲ್ಲದೆ ದಿವಾನರು ಶ್ರೀ ಸಿದ್ಧಲಿಂಗಯ್ಯನವರ ಹತ್ತಿರ ವ್ಯಕ್ತಿಶಃವಾಗಿ ಸಂಭಾಷಣೆ ನಡೆಸಿರುವರೇ ಹೊರತು, ಮೈಸೂರು ಕಾಂಗ್ರೆಸ್ ಸಂಸ್ಥೆಗೆ ಗೌರವನನ್ನಿತ್ತು, ಅದರ ಅಧ್ಯಕ್ಷರು ಶ್ರೀ ಸಿದ್ಧಲಿಂಗಯ್ಯನವರೆಂಬುವನ್ನು ಒಪ್ಪಿಕೊಂಡು ಸಂಭಾಷಣೆ ನಡೆಸಿಲ್ಲವೆಂದು ತಿಳಿದು ಬರುವುದು.

ಪರಿಸ್ಥಿತಿಯು ಹೀಗಿರುವುದರಿಂದ ಕಾಂಗ್ರೆಸ್ಸಿನವರು ಇನ್ನು ಮುಂದೆ ದಿವಾನರ ಹತ್ತಿರ ಯಾವ ತರಹ ಭೇಟಿ ಕೇಳಿದ್ದಾದರೂ ಅದರಿಂದ ಉಪಯೋಗವಾಗುವುದಿಲ್ಲ. ಅಲ್ಲದೆ ಪ್ರಜೆಗಳಿಗೆ ಕಾಂಗ್ರೆಸ್ ಮುಖಂಡರ ಸ್ಥಿರತಕ್ಕೆ ನಂಬಿಕೆಯೂ ಅಳಿಸಿ ಹೋಗುವುದೆಂದು ನನ್ನ ಅಭಿಪ್ರಾಯ. ಆದುದರಿಂದ ಮೈಸೂರು ಕಾಂಗ್ರೆಸ್ಸಿನವರು ಅವಶ್ಯ ಜಾಗ್ರತೆ ಸಭೆ ಸೇರಿ ದೇಶಕ್ಕೆ ಮುಂದಿನ ಮಾರ್ಗವನ್ನು ತೋರಿಸಬೇಕೆಂದು ನಾನು ವಿನಯಪೂರ್ವಕವಾಗಿ ಸಲಹೆ ಮಾಡುತ್ತೇನೆ. ಮತ್ತು ಆ ರೀತಿ ಮಾಡಲಾಗುವುದೆಂದು ನಾನು ಭರವಸೆಯುಳ್ಳವನಾಗಿರುತ್ತೇನೆ."

ಭಾಯಿ ಪರಮಾನಂದರ ಆಗಮನ

ಕೇಂದ್ರ ಶಾಸನ ಸಭಾ ಸದಸ್ಯರೂ ಮತ್ತು ಹಿಂದೂ ಮಹಾಸಭೆಯ ಉಪಾಧ್ಯಕ್ಷರೂ ಆದ ಶ್ರೀ ಭಾಯಿ ಪರಮಾನಂದರವರು ಮಾರ್ಚಿ ೧೧ನೇ ತಾ॥ ಬೆಳಗ್ಗೆ ಬೆಜವಾಡವನ್ನು ಬಿಟ್ಟು ೧೨ನೇ ತಾ॥ ದಿನ ಬೆಂಗಳೂರನ್ನು ತಲುಪುವರು. ದಾರಿಯಲ್ಲಿ ನಾಗಪುರದಲ್ಲಿ ಇಳಿಯುವರು. ಕ್ರಿಸ್‌ಮಸ್ ರಜಾ ಕಾಲದಲ್ಲಿ ಹಿಂದೂ ಮಹಾಸಭಾಧಿವೇಶನವು ನಾಗಪುರದಲ್ಲಿ ನಡೆಯುವುದಷ್ಟೆ. ಅದರ ಸಂಬಂಧವಾಗಿ ಶ್ರೀ ಪರಮಾನಂದರು ಸಭೆಯೊಂದರಲ್ಲಿ ಭಾಷಣ ಮಾಡುವರು.

ದ್ರಾಕ್ಷಾಘೃತ

ಈ ದ್ರಾಕ್ಷಾಘೃತವು ಸಹ್ಯಾದ್ರಿ ಪರ್ವತದಲ್ಲಿ ಅನೇಕ ವನಸ್ಪತಿಗಳ ರಸಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶಿ ಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರು ಮಾಡಿರುವದರಿಂದ ಸ್ವಾದಿಷ್ಟವೂ ಮತ್ತು ಮಧುರವೂ ಆಗಿದೆ.

ಇದರ ಸೇವನೆಯಿಂದ ಶರೀರದೊಳಗಿನ ಹಳೆ ಕಾವು (ಗರಮಿ) ಸಂಪೂರ್ಣ ನಾಶವಾಗುತ್ತದೆ. ಮತ್ತು ಧಾತುಸ್ರಾವ, ಸ್ವಪ್ನದೋಷದಿಂದ ಅಥವಾ ಬೇರೆ ಯಾವದೇ ಕಾರಣದಿಂದ ಬಂದ ಅಶಕ್ತಿಯಿಂದ ಕೈಕಾಲು, ಕಣ್ಣೊಳಗೆ ಉರಿವು ಬೀಳೋಣ, ಶೌಚಕ್ಕೆ ಸಾಫ ಆಗದಿರೋಣ, ಮುಂತಾದ ಎಲ್ಲ ವಿಕಾರಗಳು ನಷ್ಟವಾಗಿ ಹಸಿವು ಚನ್ನಾಗಿ ಬೆಳೆಯುತ್ತದೆ. ಮತ್ತು ಅನ್ನ ಚೆನ್ನಾಗಿ ಪಚನವಾಗಿ ಶೌಚಕ್ಕೆ ಸಾಫವಾಗುತ್ತದೆ. ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತುಕ್ಷೀಣತೆ ನಪುಂಸಕತ್ವ ಇದ್ದರೆ ಅದು ಹೋಗಿ ಪುನಃ ಯೌವನವಂತರಾಗಿ, ಶರೀರ ಬಲವಾಗಿ ಮಕ್ಕಳು ಪುಷ್ಟಿವಂತರಾಗುವರು ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ. ಮುಟ್ಟಾಗದಿದ್ದರೆ ಮತ್ತು ಬಿಳಿ ಸೆರಗು ಸಂಬಂಧವಾದ ರೋಗಗಳಿದ್ದರೂ ಅವೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವುದು. ಈ ಔಷಧದ ಮೂರು ಬಾಟ್ಲಿಗಳನ್ನು ಸೇವನೆ ಮಾಡಿದರ ಪ್ರಭಾವ ಗೊತ್ತಾಗುತ್ತದೆ. ಇದರ ಅನುಭವ 1 ಬಾಟ್ಲಿ ಸೇವನೆ ಮಾಡಿದ ನಂತರ ನಿಮಗೆ ತಿಳಿದೀತು.

1 ಬಾಟ್ಲಿ ಬೆಲೆ ೧-೪-೦, 3 ಬಾಟ್ಲಿ ೩-೮-೦, 1 ಡಜನ್ ಬಾಟ್ಲಿ ಬೆಲೆ ೧೨-೦-೦

ಮ್ಯಾನೇಜರ್—ದ್ರಾಕ್ಷಾಘೃತ ಡಿಪೋ, ಪೋಸ್ಟ್ ನಿಪ್ಪಾಣಿ, ಜಿಲ್ಲಾ ಬೆಳಗಾವಿ.

ಮೈಸೂರು ಏಜಂಟ್ಸ್:—ಕೆ. ಸಿ. ನಟರಾಜ್, ಬೊಂಬಾಯಿ ಆನಂದ ಭವನ, ಮಾರ್ಕೆಟ್ ಬಿಲ್ಡಿಂಗ್ಸ್, ಹರ್ಡ್ವಿಕ್ ರೋಡ್. ಬೆಂಗಳೂರು ಸಿಟಿ:—ಸಿ. ವಿ. ರಾಮ್ ಅಂಡ್ ಸನ್ಸ್, ಚಿಕ್ಕಪೇಟೆ. ತುಂಕೂರು—ಟಿ. ಆರ್. ಗುರು ಚನ್ನಬಸಪ್ಪ ಅಂಡ್ ಬ್ರದರ್ಸ್. ಚಿಕ್ಕಮಗಳೂರು—ಎಂ. ಎಸ್. ಮಂಜಯ್ಯಶೆಟ್ಟಿ. ಶಿವಮೊಗ್ಗ—ಶ್ರೀ ಕೃಷ್ಣ ಪ್ರಿಂಟಿಂಗ್ ವರ್ಕ್ಸ್, ಮತ್ತು ಬಿಂದೋರಾವ್ ಬ್ರದರ್ಸ್. ದಾವಣಗೆರೆ—ಸಿದ್ದಪ್ಪ ಮತ್ತು ಕೆ. ಭೋಗಯ್ಯಶೆಟ್ಟಿ ಅಂಡ್ ಬ್ರದರ್ಸ್.

ಚಿತ್ರಶಾಲಾ ಸ್ಪರ್ಧೆ ನಂ. ೩೪ ಸರಿಯಾದ ಉತ್ತರ



: ವಾರ ಭವಿಷ್ಯ :

ಲೇಖಕರು— ಜ್ಯೋತಿರ್ವಿದ್ಯಾ ಭೂಷಣ, ಪಂಡಿತ ಶ್ರೀ ವೀರನಗೌಡರು,
ಬಿ. ಎಸ್. ಪಾಟೀಲ ಮೇಣಕಿಗಿ, ಭಾಗ್ಯೋದಯ ಪಂಚಾಂಗಕರ್ತರು, ಗದಗ ಸಿಟಿ.

ತಾರೀಖು ೧೪—೩—೩೮ ರಿಂದ ೨೦—೩—೩೮ ರ ವರೆಗೆ.

ಮೇಷ ರಾಶಿಯರಿಗೆ :	ವಿವಿಧ ತೊಂದರೆಗಳಾಗುತ್ತವೆ!
ವೃಷಭ ರಾಶಿಯವರಿಗೆ :	ಹಿಂದಿನ ದುಃಖ ಕಾಲವನ್ನು ಮರೆತು ಹಿಗ್ಗುವಂತಾಗುತ್ತದೆ.
ಮಿಥುನ ರಾಶಿಯವರಿಗೆ :	ಬರುವುದು ಕೊಸ್ರ, ಕೊಡುವುದು ಬಿಡದಾಗಾಗುತ್ತದೆ.
ಕರ್ಕಾಟಕ ರಾಶಿಯವರಿಗೆ :	ಸಂಕಟಗಳೊದಗಿ ಬುದ್ಧಿ ಭ್ರಾಂತವಾಗುತ್ತದೆ.
ಸಿಂಹ ರಾಶಿಯವರಿಗೆ :	ದುಷ್ಟಿದ್ದವನೇ ದೊಡ್ಡಪ್ಪನೆಂಬ ಗಾದೆ ನನಗೂ ಗೊತ್ತಾಗುತ್ತದೆ.
ಕನ್ಯಾ ರಾಶಿಯರಿಗೆ :	ಉದಾಸೀನ ವೃತ್ತಿಯುಂಟಾಗುತ್ತದೆ:
ತುಲಾ ರಾಶಿಯವರಿಗೆ :	ಮನಸ್ತಾಪಯೋಗವಿರುತ್ತದೆ!
ವೃಶ್ಚಿಕ ರಾಶಿಯವರಿಗೆ :	ಮಿಲಾಪದಲ್ಲಿ ಕೊನೆಗೆ ಕಷ್ಟವನ್ನುಂಟುಮಾಡಿಕೊಳ್ಳುತ್ತಾರೆ.
ಧನು ರಾಶಿಯವರಿಗೆ :	ಲೋ ಲೋ ಸ್ವಬುದ್ಧಿ ಓಡುವ ಯೋಗವಿರುತ್ತದೆ
ಮಕರ ರಾಶಿಯವರಿಗೆ :	ಅತಿಥಿಗಳ ಆದರ ಸತ್ಕಾರದಿಂದ ಆನಂದವಾಗುತ್ತದೆ
ಕುಂಭ ರಾಶಿಯರಿಗೆ :	ಶಾಂತಿಕಾಲವುಂಟಾಗುತ್ತದೆ
ಮೀನ ರಾಶಿಯವರಿಗೆ :	ಅಡಚಣೆಯಾಗುತ್ತದೆ

ಮೇಷ ರಾಶಿ—ಮೇಷ ಲಗ್ನ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಸಾಧಾರಣವಿದೆ. ವಿಚಾರಗಳು ಪ್ರಬಲವಾಗುತ್ತವೆ. ಸ್ವ-ಪರ ಜನರಲ್ಲಿ ಮನಸ್ತಾಪ ಯೋಗವಿದೆ. ಪ್ರಯತ್ನ ಕಾರ್ಯ ಭಂಗವಿದೆ! ನೌಕರಿ ವರ್ಗ ಅನಿಷ್ಟವಿದೆ! ವ್ಯಾಪಾರಿ ಕೆಲಸಗಳಲ್ಲಿ ಕೆಡುವ ಸಂಭವವಿದೆ! ಮಂಗಲ ಕಾರ್ಯಾನುಕೂಲಯೋಗವಿದೆ! ಆದರೂ, ನಿಮ್ಮ ಅನುಕೂಲ ಯೋಗವನ್ನು ಮುಂದಿನ ವಾರ ನೋಡಿರಿ ತಾರೀಖು ೧೪, ೧೫, ೧೬, ಅನುಕೂಲ! ೧೭, ೧೮ ಕಲಹ, ಕಷ್ಟ, ಮಾನಹಾನಿ, ಕ್ಲೇಶಪ್ರದ!!

ವೃಷಭ ರಾಶಿ—ವೃಷಭ ಲಗ್ನ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ, ಸ್ತ್ರೀ ಸುಖ, ಮಾನಸಿಕ ಸುಖ ದೊರೆಯುತ್ತದೆ. ಸಾಂಪತ್ತಿಕ ಅಡಚಣೆ ಕಮಿಯಾಗುತ್ತದೆ. ವ್ಯಾಪಾರಿ ಕೆಲಸಗಳಲ್ಲಿ ಜಯ ದೊರೆಯುತ್ತದೆ. ಮಂಗಲಕಾರ್ಯ ನೆರವೇರುತ್ತದೆ. ಮಹತ್ವಾಕಾಂಕ್ಷೆ ಈಡೇರುತ್ತದೆ. ವೈರಿಗಳ ಆಟ ನಿಂತುಹೋಗುತ್ತದೆ. ಬಿಕ್ಕಟ್ಟಿನ ಪ್ರಸಂಗದಲ್ಲಿ ಒಬ್ಬರಿಲ್ಲ ಒಬ್ಬರಾದರೂ ಸಹಾಯ ಕೊಡುತ್ತಾರೆ. ನೌಕರಿ, ಧಂದೆ, ಉದ್ಯೋಗಗಳಲ್ಲಿ ಯಶ-ಲಾಭ ಪ್ರಗತಿ ಮಾನ್ಯ ಮಾನ್ಯತೆ. ಪ್ರವಾಸ ಯೋಗವಿರುತ್ತದೆ ಮನೋರಥ ಸಿದ್ಧಿಯಾಗುತ್ತದೆ! ತಾ॥ ೧೭, ೧೮ ಯಶ, ಲಾಭ, ಪ್ರಗತಿ, ಉತ್ಸಾಹ! ೧೯, ೨೦ ತೊಂದರೆದಾಯಕ!!

ಮಿಥುನ ರಾಶಿ—ಮಿಥುನ ಲಗ್ನ

ಪ್ರಕೃತಿ ಸುಖ ಸಾಧಾರಣ, ಪ್ರಾಪಂಚಿಕ ಸುಖ ದೊರೆಯುವ ಆರ್ಥಿಕ ಅಡಚಣೆಯಿಂದ ಸಾಕಾಗುತ್ತದೆ! ಎಲ್ಲಾ ಕಡೆ ತಗಾದೆ ಹೆಚ್ಚುತ್ತದೆ. ಜೀವನವು ದುಸ್ತರವಾಗುತ್ತದೆ! ಸ್ವ-ಪರ ಜನರಲ್ಲಿ ಮನಸ್ತಾಪ ಯೋಗ ಬರುತ್ತದೆ. ನೌಕರಿ, ಧಂದೆ, ಉದ್ಯೋಗಗಳಲ್ಲಿ, ಪ್ರವಾಸ ಕಾರ್ಯಗಳಲ್ಲಿ ಮಂಗಲಕಾರ್ಯಗಳಲ್ಲಿ ಹುಷಾರಿ! ಆದರೂ, ಭಾಗ್ಯೋದಯ ಪಂಚಾಂಗದ ೯ನೇ ಪುಟದಲ್ಲಿ ಹೇಳಿದಂತೆ ವರ್ತಿಸಿರಿ. ಕಲ್ಯಾಣವಾಗುತ್ತದೆ!! ಎಚ್ಚರಿಕೆ!!! ೧೪, ೧೫, ೧೬ ಮಿತ್ರಸೌಖ್ಯ! ೧೭, ೧೮ ಅಪಕೀರ್ತಿ. ಹಣಹಾನಿ, ಕಷ್ಟ!!

ಕರ್ಕ ರಾಶಿ—ಕರ್ಕ ಲಗ್ನ

ಪ್ರಕೃತಿ ಮತ್ತು ಪ್ರಾಪಂಚಿಕ ತೊಂದರೆಯಿಂದಲೂ, ಆರ್ಥಿಕ ಅಡಚಣೆಯಿಂದಲೂ, ಅನೇಕ ಕಂಟಕಗಳಿಂದಲೂ, ಸಾಕುಸಾಕಾಗುತ್ತದೆ! ಮಂಗಲ ಕಾರ್ಯಗಳಲ್ಲಿ, ವ್ಯಾಪಾರಿ ಕೆಲಸಗಳಲ್ಲಿ ಪ್ರವಾಸ ಕಾರ್ಯಗಳಲ್ಲಿ, ಹುಷಾರಿ! ನೌಕರಿ, ಧಂದೆ, ಉದ್ಯೋಗಗಳಲ್ಲಿ ತುಂಬಾ ಚಿಂತಾಜನಕ ಯೋಗವಿರುತ್ತದೆ! ಎಚ್ಚರಿಕೆ!! ವೈರಿಗಳು ನಿಮ್ಮನ್ನು ವಿನಾಕಾರಣ ತೊಂದರೆಪಡಿಸುತ್ತಾರೆ! ಆದರೂ, ಭಾಗ್ಯೋದಯ ಪಂಚಾಂಗದ ೯ನೇ ಪುಟದಲ್ಲಿ ಹೇಳಿದಂತೆ ವರ್ತಿಸಿರಿ ಕಲ್ಯಾಣವಾಗುತ್ತದೆ! ತಾ॥ ೧೬, ೧೭, ೨೦ ಚಿಂತೆ, ಖರ್ಚಾಧಿಕ್ಯ, ಅನಾರೋಗ್ಯ, ಕ್ಲೇಶ! ೧೪, ೧೫, ೧೮ ಅನುಕೂಲ!!

ಸಿಂಹ ರಾಶಿ—ಸಿಂಹ ಲಗ್ನ

ಪ್ರಕೃತಿ, ಅಸ್ವಸ್ಥತೆಯಿಂದಲೂ, ರೋಗಬಾಧೆಯಿಂದಲೂ, ದುಷ್ಟ ವಿಚಾರದಿಂದಲೂ ಕೆಡುವ ಸಂಭವವಿದೆ! ಹುಷಾರಿ! ಪ್ರಾಪಂಚಿಕ ತೊಂದರೆಯಿಂದಲೂ ಆರ್ಥಿಕ ಅಡಚಣೆಯಿಂದಲೂ, ಮನೋವಿರುದ್ಧ ಕೆಲಸಗಳಾಗುವದರಿಂದಲೂ, ವ್ಯಾಪಾರಿ ಕೆಲಸಗಳಲ್ಲಿ ಮಂಗಲ ಕಾರ್ಯಗಳಲ್ಲಿ, ಪ್ರವಾಸ ಕಾರ್ಯಗಳಲ್ಲಿ, ನೌಕರಿ, ಧಂದೆ, ಉದ್ಯೋಗಗಳಲ್ಲಿ, ವಿಘ್ನವುಂಟಾಗುವದರಿಂದಲೂ ವೈರಿಗಳ ಕಾಟದಿಂದಲೂ ಮಾನಸಿಕ ಸಂತಾಪದಿಂದಲೂ, ಸ್ವ-ಪರ ಜನರ ವಿರೋಧದಿಂದಲೂ, ಸಾಕು ಸಾಕಾಗುತ್ತದೆ! ಆದರೂ, ನಿಮ್ಮ ಭಾಗ್ಯೋದಯ ಪಂಚಾಂಗದ ೯ನೇ ಪುಟದಲ್ಲಿ ಹೇಳಿದಂತೆ ವರ್ತಿಸಿರಿ ಕಲ್ಯಾಣವಾಗುತ್ತದೆ! ತಾ॥ ೧೯ ನೇ ಅನುಕೂಲ! ಲಾಭ!! ಯಶಪ್ರದ!!

ಕನ್ಯಾ ರಾಶಿ—ಕನ್ಯಾ ಲಗ್ನ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ದೊರೆಯಲಿಕ್ಕಿಲ್ಲ! ನಿದ್ರಾವಿಕಾರದಿಂದಲೂ ನಿದ್ರಾಭಂಗವಾಗುವದರಿಂದಲೂ ಬೇಸರವಾಗುತ್ತದೆ! ಖರ್ಚಿನ ಪ್ರಸಂಗ ಬರುವ ತೊಂದರೆಯಿಂದ ಒದಗುವ ಯೋಗವಿರುತ್ತದೆ! ಅಪರೀಕ್ಷಿತ, ವಿನಾ ಕಾರಣ ನಿಮ್ಮನ್ನು ಕೆಣಕುತ್ತಾರೆ! ಪ್ರವಾಸ ಕಾರ್ಯ, ಮಂಗಲಕಾರ್ಯ, ವ್ಯಾಪಾರಿ ಕಾರ್ಯಗಳಲ್ಲಿ ವಿಘ್ನವೇ ಕಂಡುಬರುತ್ತದೆ! ನೌಕರಿ, ಧಂದೆ, ಉದ್ಯೋಗಗಳಲ್ಲಿ ಚಿಂತಾಜನಕ ಪರಿಸ್ಥಿತಿ ಉಂಟಾಗುತ್ತದೆ! ಆದರೂ ಭಾಗ್ಯೋದಯ ಪಂಚಾಂಗದ ೯ನೇ ಪುಟದಲ್ಲಿ ಹೇಳಿದಂತೆ ವರ್ತಿಸಿರಿ. ಕಲ್ಯಾಣವಾಗುತ್ತದೆ. ತಾ॥ ೧೯ ಮಾತ್ರ ಸೌಖ್ಯ, ಮಾನಸಿಕ ಸುಖ, ಲಾಭ! ೧೪, ೧೫ ಚಿಂತೆ!!

ತುಲಾ ರಾಶಿ—ತುಲಾ ಲಗ್ನ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ದೊರೆಯದ ಕೌಟುಂಬಿಕ ಕಾಳಜಿಯಿಂದಲೂ, ಆರ್ಥಿಕ ಅಡಚಣೆಯಿಂದಲೂ, ಪತ್ನಿಯ ಪ್ರಕೃತಿ ಕೆಡುವದರಿಂದಲೂ, ಸ್ತ್ರೀ ನೇತ್ರ ಕಂಟಕ ಯೋಗ ಸಂಭವಿಸುವದರಿಂದಲೂ ಅಸಮಾಧಾನವುಂಟಾಗುತ್ತದೆ! ನೌಕರಿ, ಧಂದೆ, ಉದ್ಯೋಗಗಳಲ್ಲಿ ಚಿಂತಾ ಜನಕ ಪರಿಸ್ಥಿತಿ ಉಂಟಾಗುತ್ತದೆ! ಪ್ರವಾಸದಲ್ಲಿ, ಮಂಗಲ ಕಾರ್ಯಗಳಲ್ಲಿ ವ್ಯಾಪಾರಿ ಕೆಲಸಗಳಲ್ಲಿ ಪ್ರತಿಯೊಂದು ಕೆಲಸಗಳಲ್ಲಿ ವಿಘ್ನ ಉಂಟಾಗಿ ಶತ್ರುಗಳಿಂದ ತೊಂದರೆಯಾಗುತ್ತದೆ! ಆದರೂ, ಭಾಗ್ಯೋದಯ ಪಂಚಾಂಗದ ೯ನೇ ಪುಟದಲ್ಲಿ ಹೇಳಿದಂತೆ ವರ್ತಿಸಿರಿ ಕಲ್ಯಾಣವಾಗುತ್ತದೆ! ತಾರೀಖು ೧೬, ೧೭, ೨೦ ಲಾಭ, ಯಶ, ಸಮಾಧಾನ! ೧೪, ೧೫, ೧೮ ಕ್ಲೇಶ, ಖರ್ಚಾಧಿಕ್ಯ!!

ವೃಶ್ಚಿಕ ರಾಶಿ—ವೃಶ್ಚಿಕ ಲಗ್ನ

ಪ್ರಕೃತಿ ಸುಖ ಸಾಧಾರಣ. ಆದರೆ ಪ್ರಾಪಂಚಿಕ ಸುಖ, ಮಾನಸಿಕ ಸುಖ ದೊರೆಯುತ್ತದೆ. ಆನಂದ ವಿಲಾಸದಿಂದ ಕಾರ್ಯಗಳಲ್ಲಿ ಯಶಸ್ವಿಯಾಗಿ ಕೈಗೂಡುತ್ತದೆ ಬಾಯಿಗೆ ಬಂದಲ್ಲಿವೆಂಬಂತೆ ನಿಮ್ಮ ವಿರೋಧಿ ಉದ್ದೇಶ ಸಂಪತ್ತಿಯ ಪ್ರಕೃತಿ ಕೆಡುವ ಸಂದರ್ಭವಿದೆ. ಹುಷಾರಿ! ಆಪ್ತೇಷ್ಟರ ದರ್ಶನದಿಂದ ಆನಂದ ವಡಿಸುತ್ತದೆ! ನೌಕರಿ, ಧಂದೆ, ಉದ್ಯೋಗಗಳಲ್ಲಿ ಚಿಂತಾ ಜನಕ ಯೋಗವಿದೆ! ಅಲಸ್ಯವು ಬೆಳೆಯುತ್ತದೆ! ಪ್ರತಿಯೊಂದು ಕೆಲಸಗಳಲ್ಲಿ, ವ್ಯಾಪಾರಿ ಕಾರ್ಯಗಳಲ್ಲಿ ಮಂಗಲಕಾರ್ಯಗಳಲ್ಲಿ ಪ್ರವಾಸ ಕೆಲಸಗಳಲ್ಲಿ ಹುಷಾರಿ. ವಂಚನೆಯೋಗವಿದೆ! ಆದರೂ, ಭಾಗ್ಯೋದಯ ಪಂಚಾಂಗದ ೯ನೇ ಪುಟದಲ್ಲಿ ಹೇಳಿದಂತೆ ನಡೆದರೆ ಕಲ್ಯಾಣವಾಗುತ್ತದೆ! ತಾ॥ ೧೬, ೧೮ ಅನುಕೂಲ! ೧೪, ೧೫, ೨೦, ಹಾನಿ. ಮನಸ್ಸಿಗೆ ಅಸಮಾಧಾನ!!

ಧನು ರಾಶಿ—ಧನುರ್ಲಗ್ನ

ಪ್ರಕೃತಿ ಒಂದಿಷ್ಟು ಕುಂದ. ಬೇಸರದಾಯಕವಾಗುತ್ತದೆ! ಪ್ರಾಪಂಚಿಕ ಅಡಚಣೆಯಿಂದಲೂ, ಆರ್ಥಿಕ ವಿವಂಚನೆಯಿಂದಲೂ, ಆಪ್ತೇಷ್ಟರು ವಿನಾ ಕಾರಣ ನಿಮ್ಮನ್ನು ತೊರೆಯುವದರಿಂದಲೂ, ಪ್ರತಿಯೊಂದು ಕಾರ್ಯಗಳಲ್ಲಿ ವಿಘ್ನ ಉಂಟಾಗುವುದರಿಂದಲೂ, ನೌಕರಿ, ಧಂದೆ, ಉದ್ಯೋಗಗಳಲ್ಲಿ ಪ್ರತಿಕೂಲವಿರುವದರಿಂದಲೂ, ಖರ್ಚಿನ ಪ್ರಸಂಗ ಬೆಳೆಯುವುದರಿಂದಲೂ, ಶತ್ರುಗಳಿಂದ ತ್ರಾಸಾಗುವದರಿಂದಲೂ, ಸಾಕಾಗುತ್ತದೆ! ಆದರೂ, ಭಾಗ್ಯೋದಯ ಪಂಚಾಂಗದ ೯ನೇ ಪುಟ ನೋಡಿರಿ ತಾ॥ ೧೯, ೨೦ ಮಿತ್ರ ಸೌಖ್ಯ, ಲಾಭ. ಜಂತಾನಾಶ, ಸೌಖ್ಯ!!

ಮಕರ ರಾಶಿ—ಮಕರ ಲಗ್ನ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ದೊರೆಯುತ್ತದೆ! ಸಾಂಪತ್ತಿಕ ಸ್ಥಿತಿ ಸುಧಾರಿಸುತ್ತದೆ! ನೌಕರಿ, ಧಂದೆ, ಉದ್ಯೋಗಗಳಲ್ಲಿ, ವ್ಯಾಪಾರಿ ಕೆಲಸಗಳಲ್ಲಿ ಪ್ರವಾಸ ಕಾರ್ಯಗಳಲ್ಲಿ ಯಶ, ಲಾಭ, ಪ್ರಗತಿ ಉಂಟಾಗುತ್ತದೆ! ಮನೋರಥ ಸಿದ್ಧಿಯಾಗಿ ವೈರಿಗಳ ಆಟ ನಿಲ್ಲುತ್ತದೆ! ಆಪ್ತೇಷ್ಟರ ದರ್ಶನವಾಗುತ್ತದೆ! ಪವಿತ್ರ ಸ್ಥಳಗಳ ದರ್ಶನ, ಸತ್ಸಮಾಗಮ, ಮಂಗಲ ಕಾರ್ಯಾನುಕೂಲ, ಉತ್ಸಾಹ, ಮಾನ—ಮಾನ್ಯತೆ ಉಂಟಾಗುತ್ತದೆ! ತಾರೀಖು ೧೫ ಲಾಭ, ಪ್ರಗತಿ, ಹುರುಪು! ೧೬, ೧೮ ವಿಚಾರಶಕ್ತಿ ತೊಂದರೆ, ಪ್ರವಾಸ ಯೋಗ!!

ಕುಂಭ ರಾಶಿ—ಕುಂಭ ಲಗ್ನ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಸಾಧಾರಣ, ಆರ್ಥಿಕ ಅಡಚಣೆ ಕಮಿ, ವ್ಯಾಪಾರಿ ಕೆಲಸಗಳೂ, ಸಕಲ ಕಾರ್ಯಗಳೂ, ಮಂಗಲ ಕಾರ್ಯಗಳೂ, ಅನುಕೂಲ! ಸ್ವ-ಪರ ಜನರ ಸಹಾಯ. ಕುಶಲವಾರ್ತೆ, ನೌಕರಿ-ಧಂದೆ ಉದ್ಯೋಗಗಳಲ್ಲಿ ಅನುಕೂಲಪ್ರದ! ಆದರೂ, ಮುಂದಿನ ವಾರದಿಂದ ಶಾಂತಿಕಾಲವಾಗದೆ. ತಾರೀಖು ೧೪, ೧೫—೧೬ ಅನುಕೂಲ! ೧೭, ೧೮ ಮಾನಸಿಕ ವ್ಯಥೆ, ಹಾನಿ, ಕ್ಲೇಶಪ್ರದ!!

ಮೀನ ರಾಶಿ—ಮೀನ ಲಗ್ನ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ದೊರೆಯಲಿಕ್ಕಿಲ್ಲ ಆರ್ಥಿಕ ಅಡಚಣೆ ಬಿಡಲಿಕ್ಕಿಲ್ಲ! ಖರ್ಚಿನ ಪ್ರಸಂಗ ತಪ್ಪಿಸಲಿಕ್ಕಿಲ್ಲ! ನೌಕರಿ ಧಂದೆ, ಉದ್ಯೋಗಗಳಲ್ಲಿ ಪ್ರತಿಕೂಲವೇ ತೋರುತ್ತದೆ! ಆಪ್ತ ಇಷ್ಟಮಿತ್ರರು ವಿನಾಕಾರಣ ನಿಮ್ಮನ್ನು ತೊರೆಯುವರು. ಅಶಿರತೆಯಿಲ್ಲ! ವ್ಯಾಪಾರಿ ಕೆಲಸದಲ್ಲಿಯೂ, ಪ್ರತಿಯೊಂದು ಕಾರ್ಯಗಳಲ್ಲಿಯೂ ವಿಘ್ನವೆಂಬ ಭೀತಿ ಬೇಗನೆ ಬಿಡಲಿಕ್ಕಿಲ್ಲ. ಪ್ರವಾಸದಲ್ಲಿ ಎಚ್ಚರಿಕೆ! ಆದರೂ, ಭಾಗ್ಯೋದಯ ಪಂಚಾಂಗದ ೯ನೇ ಪುಟದಲ್ಲಿ ಹೇಳಿದಂತೆ ನಡೆಯಿರಿ, ಕಲ್ಯಾಣವಾಗುತ್ತದೆ! ತಾರೀಖು ೧೫ ನೆಮ್ಮದಿ! ವಿಚಿತ್ರ ವಿಷಯಗಳಲ್ಲಿ ಕ್ಲೇಶ! ಕಷ್ಟ!! ಹಾನಿ!! ಖರ್ಚಿನ ಪ್ರಸಂಗ.

ಚಂದ್ರಶೇಖರ [illegible] ನಂ. ೧೪

ಬಹುಮಾನ [illegible]

[illegible]

[illegible] ಕಲ್ಯಾಣಪಟ್ಟಣ (ತೇ [illegible]) [illegible] ಕೃಷ್ಣ [illegible] ಇಂದಿನ್ನು ದೊಡ್ಡ [illegible] ಕೃಷ್ಣಜ [illegible] ದಿಕ್ಕು [illegible] ಕೃಷಿ [illegible] ಪ್ರಾಯ [illegible] ಸರಿಯಾದ [illegible] ಕಾಲ [illegible] ಜನ್ನ [illegible] ಸರಿಯಾದ [illegible]

ಚಕ್ರಬಂಧ ಸ್ಪರ್ಧೆ ನಂ ೧೪

ಸರಿಯಾದ ಉತ್ತರ

ಚ	ಲ	ರ	ಟ	ತ್ರ	■	ಪ್ರ	ದ	ದಿ
ಮ	ಲ	ಗು	■	[illegible]	■	ರಿ	ಮಾ	ನ
ರಿ	[illegible]	■	ಬೆ	ದ	ಯ	■	ಲ	ಕ
■	■	ಅ	ವ	[illegible]	[illegible]	■	■	ರ
[illegible]	[illegible]	[illegible]	[illegible]	[illegible]	[illegible]	ಅ	ಂ	■
[illegible]	ಕ್ಷ	ದ	■	ವಿ	ರ	ಸಿ	ರ	ಪ್ರ
[illegible]	ಮ	[illegible]	[illegible]	ದ	[illegible]	■	■	ಭ
ನಿ	[illegible]	[illegible]	[illegible]	[illegible]	[illegible]	ಕ್ಷ	ಮ	■
[illegible]	■	[illegible]	ದ	[illegible]	[illegible]	ವ	ನ	■

ಬಹುಮಾನ ಪಡೆವವರ ಹೆಸರುಗಳನ್ನು ಮ[illegible] 19-3-1938 ರ ಸಂಚಿಕೆಯಲ್ಲಿ ಪ್ರಕಟಿಸಲಾಗುತ್ತೆ

ತಪ್ಪು ಪದಗಳ ಮಾಹಿತಿ ಈ ಕೆಳಗೆ ಕೊಟ್ಟಿರುತ್ತೆ

[illegible] 1[illegible] ಪುಟ
[illegible] 1
[illegible] 16
[illegible] 15[illegible] } ಒಟ್ಟು ನಿಷ್ಪಲ
[illegible] 636
[illegible] 1005

ಮ್ಯಾನೇಜರ್, ಚಕ್ರಬಂಧ ಸ್ಪರ್ಧೆ [illegible]

[illegible] 3 [illegible]

ಅರ್ವಿನ್ ನಾಲಾ ಕಬ್ಬಿನ ಬೆಳೆ

ರೈತರಿಗೆ ಸಕ್ಕರೆ ಕಂಪನಿಯ ರಿಯಾಯಿತಿಗಳು

ಇರ್ವಿನ್ ನಾಲಾ ಪ್ರದೇಶದ ಕಬ್ಬು [illegible] ಬೆಳೆಯುವವರು [illegible] ಸಕ್ಕರೆ ಕಂಪೆನಿಯವರ [illegible] ಕಬ್ಬನ್ನು [illegible] ಬೆಳೆಯುವರ ಮೇಲೆ [illegible] ದೊರದ [illegible] ಸಕ್ಕರೆ ಕಾರ್ಖಾನೆಯ [illegible] ಸಕ್ಕರೆ [illegible] ಕಂಪನಿಯ [illegible] ಒಂದು [illegible] ಪಲ್ಲಿ [illegible]

[illegible] (24-[illegible]) [illegible] 11[illegible] 17 [illegible]

ಮತ್ತು [illegible] ಪ್ಯಾಕ್ಟರಿ ಉಪಯೋಗಕ್ಕಾಗಿ [illegible] ಮಾಡಿದ ಕಬ್ಬಿನ ಬಗ್ಗೆ [illegible] ಪ್ಯಾಕ್ಟರಿ [illegible] ಕಬ್ಬಿನ [illegible] ಅರ್ಧವನ್ನು ಕಂಪನಿಯವರ [illegible] ಒಪ್ಪಿದ್ದರ [illegible] ತಂದಿದ್ದರ ಇದರಿಂದ ರೈತರಿಗೆ [illegible] ದೊರೆತಂತೆಯೇ ಆಯಿತು. ದೂರದ [illegible] ಕಬ್ಬನ್ನು [illegible] ರೈತರಿಗೆ ಟನ್ ಒಂದಕ್ಕೆ [illegible] ಯಂತೆ ಪರಿಹಾರ ದೊರೆತಹಾಗಾಯಿತು.

ಕಬ್ಬಿನ ಬೆಲೆಯನ್ನು ಮೊದಲಿನಂತೆ ಟನ್ ಒಂದಕ್ಕೆ [illegible] ಮೂಲಕ [illegible] ಮಾಡಲಾಯಿತು. ಸಕ್ಕರೆ ಕಂಪನಿಯ [illegible] ಸಕ್ಕರೆ ಬೆಲೆಯು [illegible] ಇಳಿಯುತ್ತಾ [illegible] ಸಕ್ಕರೆಯ ಮೇಲೆ ಎಕ್ಸೈಸ್ ತೆರಿಗೆ [illegible] ಕಂಪನಿಯವರು ಕಬ್ಬು ಬೆಳೆಯುವವನಿಗೆ ಆದಷ್ಟು ಹೆಚ್ಚು ಬೆಲೆ ಕೊಡಬೇಕೆಂದು ಮನಸ್ಸು ಹೊಂದಿರುವಹಾಗೆ ಕಾಣುತ್ತದೆ. ಸಕ್ಕರೆ [illegible] ಕಬ್ಬಿನ ಬೆಲೆಯನ್ನೂ ಏರಿಸುವರು [illegible] ತನ್ನಷ್ಟಕ್ಕೆ ಸಕ್ಕರೆ ಬೆಲೆ ಏರಿದರೆ [illegible] ಕೊಡುವರೆಂದು ಹೇಳಲಾಗಿದೆ.

ಅಮೃತಾಂಜನ

ಶೀಘ್ರವಾಗಿ ಗುಣಪಡಿಸುತ್ತದೆ.

ಹುಳುಕಡ್ಡಿ ಮದ್ದು

[illegible] ಉತ್ತಮ ಔಷಧ

ಅಮೃತಾಂಜನ್ ಲಿಮಿಟೆಡ್

ಬೊಂಬಾಯಿ ಮದರಾಸು



ಸೂಚನೆ:— ಈ ಸ್ಪರ್ಧೆಯ ಸರಿಯಾದ ಉತ್ತರವು ಸಾಧ್ವಿ ಎಡಿಟರ ಬಳಿ ಮೊಹರುಮಾಡಿ ಇಟ್ಟಿರುತ್ತೆ. ಅದಕ್ಕೆ ಪ್ರತಿ ಅಕ್ಷರವೂ ಸರಿಹೋಲತಕ್ಕ ಸ್ಪರ್ಧೆಗೆ ಮೊದಲನೇ ಬಹುಮಾನವೂ, ಒಂದು ಮತ್ತು ಎರಡು ತಪ್ಪಿರುವವುಗಳಿಗೆ ಇತರ ಬಹುಮಾನಗಳೂ ಕೊಡಲ್ಪಡುವುವು. ಬಹುಮಾನಕ್ಕೆ ಯೋಗ್ಯವಾದ ಉತ್ತರಗಳು ಒಂದಕ್ಕಿಂತ ಹೆಚ್ಚಾಗಿದ್ದಲ್ಲಿ ಮೇಲ್ಕಂಡ ಬಹುಮಾನಗಳು ಎಲ್ಲರಿಗೂ ಹಂಚಲ್ಪಡುವುವು. ಬಹುಮಾನಗಳನ್ನು ಹಂಚುವ ವಿಚಾರ ಸ್ಪರ್ಧೆಯ ಮ್ಯಾನೇಜರಿಗೆ ಸೇರಿದ್ದು. ಈ ವಿಚಾರದಲ್ಲಿ ಯಾವ ಪತ್ರವ್ಯವಹಾರಗಳಿಗೂ ಅವಕಾಶವಿಲ್ಲ. ಪ್ರತಿ ಸ್ಪರ್ಧೆಗೂ ಪ್ರವೇಶಧನ ನಾಲ್ಕಾಣೆ. ಎರಡಕ್ಕಿಂತ ಕಡಿಮೆ ಸ್ಪರ್ಧೆಗಳನ್ನು ಅಂಗೀಕರಿಸುವುದಿಲ್ಲ. ನಾಲ್ಕು ಉತ್ತರಗಳನ್ನು ಕಳುಹಿಸುವವರು ಇನ್ನೊಂದು ಉತ್ತರವನ್ನು ಮುಫತ್ತಾಗಿ ಕಳುಹಿಸಬಹುದು. ಪ್ರವೇಶ ಧನವನ್ನು ಪೋಸ್ಟಲ್ ಸ್ಟಾಂಪು, ಅಥವಾ ಇಂಡಿಯನ್ ಪೋಸ್ಟಲ್ ಆರ್ಡರ್ ಅಥವಾ ಮನಿಯಾರ್ಡರ್ ಮೂಲಕ ರವಾನಿಸಬಹುದು. ಉತ್ತರಗಳನ್ನು ಬರೆಯತಕ್ಕವರು ಮಾರ್ಚಿ 7 ಮತ್ತು 14 ನೇ ಸಾಧ್ವಿ ಕೂಪನ್ನಿನಲ್ಲಾಗಲಿ ಅಥವ ಟಾಯಿಪಾದ ಹೇಪರಿನಲ್ಲಿರತಕ್ಕ ಕೂಪನ್ನಿನಲ್ಲಾಗಲಿ ಅಥವಾ ಬಿಳಿಯ ಕಾಗದದಲ್ಲಾಗಲಿ ಚಿತ್ರದಲ್ಲಿದಂತೆ ಚೆನ್ನಾಗಿ(ಶಾಯಿನಲ್ಲಿ)ಬರೆದು ಕಳುಹಿಸಬೇಕು. ಉತ್ತರಗಳನ್ನು ಕಳುಹಿಸಲು 1938 ನೇ ಇಸವಿ ಮಾರ್ಚಿ 23 ನೇ ತಾರೀಖು ಕೊನೆಯ ದಿನ. ನಂತರ ಕಳುಹಿಸುವ ಉತ್ತರಗಳನ್ನು ಸ್ವೀಕರಿಸುವುದಿಲ್ಲ. ಸರಿಯಾದ ಉತ್ತರವು ಮಾರ್ಚಿ 28 ನೇ ಸಾಧ್ವಿ ಯಲ್ಲಿ ಪ್ರಕಟಿಸಲಾಗುತ್ತೆ.

ವಿಳಾಸ— ಮ್ಯಾನೇಜರ್, ಚಿತ್ರಶಾಲಾ ಸ್ಪರ್ಧೆ, ಬಂಟಿಕೊಪ್ಪಲು, ಮೈಸೂರು.

ಪಿ. ಸೂ.—ನಮ್ಮ ಏಜಂಟರುಗಳು—ಮೆಸರ್ಸ್ ಸ್ಟೇಟ್ ಮಾರ್ಟ್, ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು — ಮಿ॥ ರಾ॥ ಹೆಚ್. ಕೆ. ಮೂರ್ತಿ, ಕಂಟಿನನಲ್ ಬುಕ್ ಡಿಪೋ, ನಂ. 46 ನ್ಯೂಮಾರ್ಕೆಟ್ ಬೆಂಗಳೂರು ಸಿಟಿ—ಮೆಸರ್ಸ್ ಹೆಚ್. ರಾಮಚಂದ್ರಯ್ಯ, ಮರ್ಚೆಂಟ್ ಅಂಡ್ ನ್ಯೂಸ್ ಏಜಂಟ್ ಮೈಸೂರು. ಮೆಸರ್ಸ್ ನಂಜನಗೂಡು ನ್ಯೂಸ್ ಏಜನ್ಸಿ ರೈಲ್ವೆ ಸ್ಟೇಷನ್, ಹಾಸನ—ಮಿ॥ ರಾ॥ ಎಸ್. ಎಸ್. ರಾವ್, ನ್ಯೂಸ್ ಏಜಂಟ್, ತಿಪಟೂರು. ಮಿ॥ ಸಿ. ವೆಂಕಟಾಚಲಯ್ಯ, ಜನರಲ್ ಸ್ಟೋರ್ಸ್ ಪ್ರಾಕ್ಟರ್, ದಾವಣಗೆರೆ, ಮೈ. ಸ್ಟೇ.

ಎಡದಿಂದ ಬಲಕ್ಕೆ

೧. ವಿಷ್ಣು ೬. ಈತನು ಈಶ್ವರನಿಂದ ಬಹಿಷ್ಕರಿಸಲ್ಪಟ್ಟನು ೯. ಪೂರ್ವದಲ್ಲಿ ಋಷ್ಯಾಶ್ರಮಗಳು ಇದನ್ನು ಕಲಿಯಲು ಅನುಕೂಲವಾದ ಸ್ಥಳಗಳಾಗಿದ್ದವು ೧೦. ಧ್ರುವನ ತಾಯಿ ೧೧. ರಾಜ ೧೨. ಕಿರಾತ ಸ್ತ್ರೀ ೧೩. ಇದನ್ನು ಮಾಡುವುದಕ್ಕೆ ಸ್ವಲ್ಪ ಅನುಭವವು ಬೇಕು ೧೪. ಬೇಸಿಗೆಯಲ್ಲಿ ಇದನ್ನು ಕುಡಿಯಲು ಜನರು ತುಂಬಾ ಇಷ್ಟ ಪಡುತ್ತಾರೆ ೧೫. ಕನ್ನಡ ಮಾತೆಯ ಅಭ್ಯುದಯಕ್ಕೆ ಎಲ್ಲಾ ಕನ್ನಡಿಗರೂ...... ಬೇಕು ೧೭. ನಾವು ತಿನ್ನತಕ್ಕ ಆಹಾರವೂ...... ಸಾಗಬೇಕು ೧೮. ಜಾರಿದ ೨೦. ಸುಲಭವಾದ, ಲಲಿತವಾದ; ೨೨. ತಿಳಿದ ೨೪. ಮುಗಿಸು, ಸ್ವೀಕರಿಸು; ೨೫. ......ಮಾತ್ರವಲ್ಲವು ಆಸರೂಪವಲ್ಲ ೨೮. ಸೋಲು ೩೦. ಪ್ರಿಯಳಿಯು ......ಪುರುಷನ ಮನಸ್ಸು ನೆಮ್ಮದಿಯಿಂದಿರಲಾರದು ೩೨. ತಿರುಗುವುದು ೩೩. ಚಂದ್ರ ೩೪. ಹೀಗೆ ಮಾಡುವ ಶಕ್ತಿಯು ಭಗವಂತನಲ್ಲಿದೆ.

ಮೇಲಿನಿಂದ ಕೆಳಕ್ಕೆ

೧. ಆಡಳಿತವನ್ನು......ಶಕ್ತಿಯು ಜನರಿಗಿರಬೇಕೆಂದು ಕಾಂಗ್ರೆಸ್ಸಿನ ಧ್ಯೇಯ ೩. ಶಾಲ್ಮಲಿ ೪. ನಿಜ (ಅಕ್ಷರಗಳ ಸ್ಥಳವಲ್ಲಟ) ೬. ಎಲ್ಲರಿಗೂ ೭. ಒಂದು ಗುಣ ೮. ಸುತ್ತುತ್ತಿರು ೧೧. ಗಿಡ ೧೩. ಸೇವಕ ೧೬. ತೋರಿಸುವ ೧೭. ......ಪುದು ಇದ್ದು ಬರುವುದರ ಸಾಧನ ೧೯. ರಾಕ್ಷಸ ಪ್ರವೃತ್ತಿಯಾದ್ದರಿಂದ ಹಿಡಿದು ನಿಗೆ ಈ ಹೆಸರು ಬಂತು ೨೦. ನರರೂಪದ ಮಾಗ ೨೧. ಸುಂದರಿಯಾದ ೨೨. ಕೊಂಚ, ಸ್ವಲ್ಪ ೨೩. ಹೀಗೆ ಮಾಡುವುದರಲ್ಲಿ ಒಂದು ರುಚಿ ಇದೆ ೨೪. ಅದೃಷ್ಟಹೀನ ೨೫. ಕಾಡೆ ೨೬. ಸ್ವಾರ್ಥಿಗಳಿಗೆ...... ಸ್ವಭಾವವು ಹೆಚ್ಚಾಗಿರುತ್ತೆ ೨೭. ಜಯ ೨೯. ಅತಿ ಸುಖಿಯಾದ ಮನುಷ್ಯನು ತನ್ನ ನಡವಳಿಕೆಯ ಪರಿಯನ್ನು ಹೇಳಲು ಹಿಂಜರಿಯನು.

ಚಿತ್ರಶಾಲಾ ಸ್ಪರ್ಧೆ ನಂ. ೪೫.



ಪೋಸ್ಟು ಮೂಲಕ ಕಳುಹಿಸುವವರು ಮಾರ್ಚಿ 23ನೇ ತಾರೀಖು ಒಳಗೆ ಕಳುಹಿಸತಕ್ಕದ್ದು.

ಎಲ್ಲರಿಗಿಂತಲೂ ಹೆಚ್ಚಿಗೆ ಸರಿ ಉತ್ತರಗಳನ್ನು ಕಳುಹಿಸಿದವರಿಗೆ ಸ್ಪೆಷಲ್ ಬಹುಮಾನ

೩೦ ರೂಪಾಯಿ

ಚಿತ್ರಶಾಲಾ ಸ್ಪರ್ಧೆ ನಂ. ೪೫.



ಹೆಸರು.. ಹೆಸರು..

ವಿಳಾಸ.. ವಿಳಾಸ..

ಕೂಪನ್ ನಂ.......... ಪೋಸ್ಟಲ್ ಆರ್ಡರು ನಂಬರ್.......... ಕೂಪನ್ ನಂ.......... ಪೋಸ್ಟಲ್ ಆರ್ಡರ್ ನಂಬರು..........

ಫ್ರೀಸ್ಟು ಮಾಡಲು ಕಡೆಯ ತಾರೀಖು ೨೭—೩—೩೮ ಬಹುಮಾನ ಪಡೆಯಿರಿ ಫ್ರೀಸ್ಟು ಮಾಡಲು ಕಡೆಯ ತಾರೀಖು ೨೭—೩—೩೮

೩೦೦ ರೂಪಾಯಿ ಬಹುಮಾನ

ಚಕ್ರಬಂಧ ಸ್ಪರ್ಧೆ ನಂ. ೧೫೯

೩೦೦ ರೂಪಾಯಿ ಬಹುಮಾನ

ಮೊದಲನೆಯ ಬಹುಮಾನ ೧೦೦—೦—೦ ಇತರ ಬಹುಮಾನ ೧೦೦—೦—೦

ಎಲ್ಲಾ ಗಿಂತಲೂ ಹೆಚ್ಚಿಗೆ ಕೂಪನ್ನುಗಳ್ನು ಕಳುಹಿಸಿದವರಿಗೆ 10—0—0. ಸ್ಪರ್ಧೆಯ ಉತ್ತರಗಳ ಪ್ರತಿ ಉತ್ತಮವಾದುದಕ್ಕೆ ಒಂದು ಮಂಗಳೂರು ಬಾಳಾ ಸಿಫೋಂಟು.

ಫ್ರೀ ... ಎರಡು ಕೂಪನ್ನುಗಳ ... ಒಂದು ರೂಪಾಯಿಗೆ ಆರು ಕೂಪನ್ನುಗಳು.



ಎಡದಿಂದ ಬಲಕ್ಕೆ:—೧. ಕುಬೇರ ೩. ... ಹೇಳುವನು ವಂದಿಮಾಗಧರ ವಿಸಚಾರಿ ೫. ಚಿನ್ನದ ... ಇದು ... ೬. ನಾಶವಾಗದಿರತಕ್ಕದ್ದು ೭. ಭಾರತದ ಪ್ರಜೆಗಳಲ್ಲಿ ಇಂತಹವರೇ ಹೆಚ್ಚು ೮. ಮಾಡತಕ್ಕ ಕಾರ್ಯಗಳಿಂದ ಮನುಷ್ಯನ ...ನ್ನು ತಿಳಿಯಬಹುದು ೧೧. ಶಬ್ದ ೧೪. ಬಂಟೆಗಳ ಬೆನ್ನಿನಲ್ಲಿ ಇದನ್ನು ನೋಡಬಹುದು, ದುಂಡಾದ ೧೬. ವಿಶ್ರಾಂತಿ ೧೭. ... ೧೯. ... ೨೨. ... ಉನ್ನತಿಗೆ ಮುಖ್ಯವಾದ ಅಂಶವೆಂದರೆ ... ೨೪. ... ೨೫. ಪ್ರಪಂಚ ... ಇವರ ... ೨೭. ಪ್ರಯತ್ನ ೨೮. ಮುಂದೆ ನಾಶಮಾಡಲ್ಪಟ್ಟ.

ಮೇಲಿನಿಂದ ಕೆಳಕ್ಕೆ:—೧. ಯೋಗ್ಯತೆ, ಶಕ್ತಿ ೨. ಪ್ರಕಾಶ ... ೪. ಮಂಗಸರಿಗೆ ಇವರ ಆಶ ಹೆಚ್ಚು ೯. ಶರೀರದಲ್ಲಿ ಒಂದು ಭಾಗ ೧೦. ಮುಂದಾಲೋಚನೆ ಇಲ್ಲದೆ ಕೆಲಸ ಮಾಡು ೧೧. ... ಹೃದಯವನ್ನು ಅರಿಯಲು ಯಾರಿಂದಲೂ ಸಾಧ್ಯವಿಲ್ಲವೆಂದು ಹೇಳುತ್ತಾರೆ ೧೩. ತಿಳುವಳಿ, ಜ್ಞಾನ ೧೫. ಇವರ ಸಹವಾಸವು ಸಜ್ಜನರಿಂದ ಉಪೇಕ್ಷಿಸಲ್ಪಡತಕ್ಕದ್ದಲ್ಲ ೧೮. ಇದಕ್ಕೆ ಸರಿಯಾದ ನಿಗವಿಲ್ಲದೆ ಕಟ್ಟಡಗಳನ್ನು ಕಟ್ಟಬಾರದು ೧೯. ...ವನ್ನು ಅರಿತವರೇ ಸರಿಯಾದ ಮಂತ್ರಿಗಳು ೨೦. ಸುಂದರವಾದ ೨೧. ಒಂದು ಪಕ್ಷಿ.

ಸೂಚನೆ:—ನಿಘಂಟಿನ ಸಹಾಯವಿಲ್ಲದ ಹಲವರ ಪ್ರಯೋಜನಕ್ಕಾಗಿ ಕೆಲವು ಕಡೆ ಉಪಯೋಗಿಸಬಹುದಾದ ಪದಗಳನ್ನು ಸೂಚಿಸುತ್ತೇವೆ:—(೬) ಅಕ್ಷರ, ಅಕ್ಷಯ (೧೧) ತಿಳಿಯು, ಸಿಲಿಯು (೨೨) ಮಂತ್ರಿಪದ, ಮಂತ್ರಿತ್ವ (೨೨) ಕಾಸು, ಆಸು, ವಸು (೯) ವಕ್ಷ, ವಕ್ಷೆ (೧೩) ಕೌಮುದ, ಕಾಮಾ (೧೭) ಆಯ, ವಾಯ.

ಹೆಸರು ....

ವಿಳಾಸ ....

ಊರು ....

ಫೀಸ್ಟು ಸಂಖ್ಯೆ ...

ನಿಯಮಗಳು.—೧ ಮೊಹರಾದ ಉತ್ತರವು ಕೆನರಾ ಬ್ಯಾಂಕಿಂಗ್ ಸಿಂಡಿಕೇಟ್‌ನಲ್ಲಿಟ್ಟಿರುತ್ತೆ. ಅದಕ್ಕೆ ಪ್ರತ್ಯಕ್ಷವಾಗಿ ಸರಿಹೋಲತಕ್ಕ ಉತ್ತರವೇ ಸರಿಯಾದ ಉತ್ತರ. ಪ್ರತಿ ಪದವೂ ಒಂದೊಂದು ತಪ್ಪಾಗಿ ಭಾವಿಸುತ್ತೆ. ೨. ಸ್ಪರ್ಧೆಯ ಉತ್ತರವು 1938 ನೇ ಏಪ್ರಿಲ್ 2 ನೇ ತಾರೀಖಿನ "ತಾಯಿನಾಡು" ಮತ್ತು 1938 ನೇ ಏಪ್ರಿಲ್ ತಾರೀಖು 1 ನೇ 'ಸಾಧ್ವಿ' ಯಲ್ಲೂ ಪ್ರಕಟಿಸಲಾಗುತ್ತೆ. ೩. ಸ್ಪರ್ಧೆಯ ಎಲ್ಲಾ ವಿಚಾರದಲ್ಲೂ ಮ್ಯಾನೇಜರ ತೀರ್ಮಾನವೇ ಅಂತ್ಯವಾಗಿರುತ್ತೆ. ಆ ಬಗ್ಗೆ ಯಾವ ವಿಧವಾದ ಪತ್ರ ವ್ಯವಹಾರಗಳಿಗೂ ಅವಕಾಶವಿರುವುದಿಲ್ಲ. ಉತ್ತರವನ್ನು ... ಷರತ್ತುಗಳಿಗೆ ಒಪ್ಪಿ ಕಳುಹಿಸಿರುವಂತೆಯೇ ಭಾವಿಸಲಾಗುತ್ತ. ೪. ಕೂಪನ್ನುಗಳನ್ನೂ ಮೊಬಲಗನ್ನೂ ಏಜೆಂಟರಲ್ಲಿ ಜಮಾಮಾಡಿ ... ಉತ್ತರ ಬಹುಮಾನ ಮೊಬಲಗನ್ನು ನೀವು ಕೂಪನ್ ಕೊಟ್ಟಿರತಕ್ಕ ಏಜಂಟರಲ್ಲಿ ವಿಚಾರಿಸಿ.

ಏಜಂಟರುಗಳು:—೧ ... ಅಸ್ತಾ ಆಜರ್, ಬಾಂಬು ಬಜಾರ್, ಮೈಸೂರು. ೨. ಶ್ರೀನಿವಾಸ್ ಅಂಡ್ ಸನ್ಸ್, ಪುಸ್ತಕ ವ್ಯಾಪಾರಿಗಳು, ಮಲ್ಲೇಶ್ವರ ೩. ಯಲ್. ... ಗರ್ಲ್ಸ್ ಸ್ಕೂಲ್ ಎದುರು, ಚಿಕ್ಕಪೇಟೆ, ಬೆಂಗಳೂರು ಸಿಟಿ. ೪. ಶ್ರೀ ರಂಗನಾಥ ಹಾಲ್. ತುಮಕೂರು ೫. ಎ. ಸುಬ್ಬರಾಯ ದೀಕ್ಷಿತ್, ... ೬. ಸಿ. ವಿ. ನರಸಿಂಹಶೆಟ್ಟಿ C/o ಸಿ. ವಿ. ರಂಗನಾಥಶೆಟ್ಟಿ ಮರ್ಚೆಂಟ್, ಚಿಕ್ಕಮಗಳೂರು ೭. ಡಿ. ರಾಮಸ್ವಾಮಯ್ಯಂಗಾರ್, ಮಂಡ್ಯ. ೮. ರಾಘವೇಂದ್ರರಾವ್ ... ಸ್ಕೂಲ್ ಮಾಸ್ಟರ್, ಚಿತ್ರದುರ್ಗ. ೯. ರಾಜಯ್ಯಂಗಾರ್, ಬ್ರಾಹ್ಮಣರ ಬೇಕರಿ ತಿಪಟೂರು.—೧೦. ಸಿದ್ಧಕೃಷ್ಣಶೆಟ್ಟಿ ಅಂಡ್ ಬ್ರದರ್ ಸಾಮುಂಗಳು.—೧೧. ... ಭದ್ರಾವತಿ —೧೨. ಮಾಧವಶೆಟ್ಟಿ ಬಂಟವಾಳ.—೧೩. ಲಕ್ಷ್ಮಣಗುಪ್ತ ಕ್ಲಾತ್ ಮರ್ಚೆಂಟ್. ಹಾಸನ —೧೪. ಪ್ರಭಾಕರ ಸ್ಟೋರ್ಸ್, ಬೇಲೂರು.

ಮ್ಯಾನೇಜರ್: ಚಕ್ರಬಂಧ ಸ್ಪರ್ಧೆ, ಅಗ್ರಹಾರ, ತುಮಕೂರು.

ಹಿಂದೂಸ್ಥಾನಕ್ಕೆ

ಅಚ್ಚುಮೆಚ್ಚಿಗೆಯಾದ ಸ್ನಾನದ ಸಾಬೂನು



ಸಾವಾಸನೆಯಿಂದ ಕೂಡಿ ಉಲ್ಲಾಸಜನಕವಾಗಿರುವ ಈ ಸಾಬೂನು ವಾವಿರಾರು ಜನರಿಗೆ ತೃಪ್ತಿ ಕೊಟ್ಟಿದೆ.

ನಿಮಗೆ ಏಕಾಗದು?

ಮೈಸೂರು

ಗಂಧದ

ಸಾಬೂನು

ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ

ಗೌರ್ನಮೆಂಟ್ ಸಾಬೂನು ಕಾರ್ಖಾನೆ, ಬೆಂಗಳೂರು.

DON'T SAY

"CAN'T AFFORD"

Who carries risk on your life? If you are not insured, your wife and children carry it. And if you die without insurance your family has to bear the loss. Would you like to let them carry the risk any longer? And above all, who would like to leave them for some one else to support?

May we suggest you to call on any of our nearest representatives or write to us for necessary advice?

National Insurance Co., Ltd.,

(Head Office—Calcutta)

Sub-Office:—

DEVANGA BANK BUILDINGS,

KEMPEGOWDA ROAD, - BANGALORE CITY.

Edited, Printed & Published by Agaram Rangaiah, B.A., at Sri Rama Press, D Subbiah Road, Mysore

REGD. NO. M. 3534.

HALF ANNA

ಸಾಧ್ವಿ

SADHVI LEADING WEEKLY

ಸಂಪಾದಕರು ಅಗರಂ ರಂಗಯ್ಯ, ಬಿ.ಎ

ಸಂಪುಟ ೩] 21—3—38 ಮೈಸೂರು: ಸೋಮವಾರ ೨೧—೩—೧೯೩೮ [ಸಂಚಿಕೆ ೩

ಕೋಕಿಲಾ

ಸಬಿತಾದೇವಿ



ಒಂದು ರೂ. ಗೆ ೭ ಕೂಪನ್ **ಉತ್ತರಗಳನ್ನು ಕಳುಹಿಸಲು ಕಡೆಯ ತಾರೀಖು ೪-೪-೩೮** ೮ ಆಣೆಗೆ ೩ ಕೂಪನ್

ದೇವಾಲಯ:—ಹೊಸ ಪೇಷ್ಕಾರರು ಇನ್ನೂ ಬಂದಿಲ್ಲ. ಕಂಟ್ರಾಕ್ಟರ ವ್ಯವಹಾರವು ಮುಗಿದಂತೆ ಕಾಣೆ. ಇವರೇ ಇರುವರೋ ಏನೋ?

ಹಿತ್ಯೈಷಿ.

ಶಾರದಾವಿಲಾಸ ಹೈಸ್ಕೂಲು ಪೇ

ಶಾರದಾವಿಲಾಸ ಹೈಸ್ಕೂಲು 'ಡೇ' ದಿನ ಅನೇಕ ಮಹಿಳೆಯರು ಮತ್ತು ಮಹನೀಯರು. ಬಾಲಕಬಾಲಕಿಯರು ಸಾಯಂಕಾಲ ಆಟ ನೋಡಲು ನೆರೆದಿದ್ದರು. ಆ ದಿವಸ ಯಾರೋ ಒಂದು ಚಿನ್ನದ ಒಡವೆಯನ್ನು ಹಾಳು ಮಾಡಿಕೊಂಡು ಹೋಗಿರುವರು. ಆ ಒಡವೆಯು ಸಿಕ್ಕಿ ಶಾರದಾವಿಲಾಸ ಹೈಸ್ಕೂಲಿನ ಹೆಡ್ಮಾಸ್ಟರವರು ತೆಗೆದು ಇಟ್ಟಿರುತ್ತಾರೆ. ಮಾಲಿಕರು ಒಡವೆಯ ಗುರುತುಗಳನ್ನೂ ಹೆಸರನ್ನೂ ಸರಿಯಾಗಿ ಹೇಳಿ ಅದನ್ನು ಹೆಡ್ಮಾಸ್ಟರಿಂದ ತೆಗೆದುಕೊಂಡು ಹೋಗಬಹುದು.

ಆಕಾಶವಾಣಿ

ಸೋಮವಾರ ೬-೩೦ ಗೀತಾ ಉಪನ್ಯಾಸ, "ಆಕಾಂಕ್ಷೆಗಳ ರೀತಿಗಳು" ಮ॥ ಎಂ ಎ. ವೆಂಕಟರಾಯರಿಂದ. ಐರೋಪ್ಯ ಸಂಗೀತ, ಮಂಗಳವಾರ ೬-೩೦ ರಿಂದ ೮-೩೦ ಕರ್ನಾಟಕ ಗಾನ, ಕನ್ನಡ ಸಾಹಿತ್ಯ ಪಠನ. ಬುಧವಾರ, ೬-೩೦ ರಿಂದ ೯ ವೀಣಾವಾದನ. ವಿದ್ವಾನ್ ವಿ. ನಾರಾಯಣ ಅಯ್ಯರವರಿಂದ. ಗುರುವಾರ ೬-೩೦ರಿಂದ ೮-೪೫ ರೇಡಿಯೋ ನಾಟಕ, ಮೈಸೂರು ರಾಜ್ಯ ಭಾಗ್ಯೋದಯ ಶುಕ್ರವಾರ ೬-೩೦ ರಿಂದ ೯ ಹಿಂದೂಸ್ಥಾನಿ ಸಂಗೀತ. ಮ॥ ಅಬ್ದುಲ್ ರಸಾಕ್ ಮತ್ತು ಮಂಡಲಿಯವರಿಂದ. ಜನಾಂಗ ಕೂಟ ವಿಚಾರ, "ತಾಟಸ್ಥ್ಯದ ಆಭಾಸ" ಉಪನ್ಯಾಸ ಶನಿವಾರ ರಜಾ

ಗ್ರಾಹಕರು, ತಮ್ಮ ವಿಳಾಸವನ್ನು ಸ್ವಚ್ಛವಾಗಿ ಬರೆಯತಕ್ಕದ್ದು.

ಪಂಚಾಂಗ ೧ಕ್ಕೆ ನಾಲ್ಕು ಆಣೆ : : ೧೦೦ಕ್ಕೆ ೧೨॥ ರೂಪಾಯಿ

ಪ್ರಸಿದ್ಧ ಪತ್ರಿಕೆಗಳಲ್ಲಿ ಭವಿಷ್ಯ ಬರೆಯುತ್ತಿದ್ದು, ಕನ್ನಡನಾಡಿನಲ್ಲಿ ಮಾನ್ಯರಾದ
ಜ್ಯೋತಿರ್ವಿದ್ಯಾಭೂಷಣ ಪಂಡಿತ
ಶ್ರೀ॥ ವೀರನಗೌಡರು ಪಾಟೀಲ ಮೆಣಸಿಗಿ ಇವರು ರಚಿಸಿದ

ಶಕ ೧೮೬೦ ನೇ ಬಹುಧಾನ್ಯ ಸಂವತ್ಸರದ

ವರ್ಷ ಭವಿಷ್ಯ ಸಹಿತ

ಭಾಗ್ಯೋದಯ ಪಂಚಾಂಗ

ಬಹುಧಾನ್ಯ ಸಂವತ್ಸರದ ವರ್ಷ ಭವಿಷ್ಯ, ಪಾರ್ಶ್ವಿನಾತ್ಯ ರೀತ್ಯಾ ವರ್ಷ ಭವಿಷ್ಯ, ಮೈಸೂರು-ನೈಜಾಂ ಸಂಸ್ಥಾನಗಳ ಭವಿಷ್ಯ, ವ್ಯಾಪಾರ ಭವಿಷ್ಯ, ಚೈತ್ರ ಮಾಸಾದಿಯಾಗಿ ಫಾಲ್ಗುಣ ಮಾಸದವರೆಗೂ ರಾಜಕೀಯ, ಸಾಮಾಜಿಕ, ಔದ್ಯೋಗಿಕ, ಆರ್ಥಿಕ ವಾತಾವರಣ ಭವಿಷ್ಯ, ತೇಜೀ ಭವಿಷ್ಯ, ಮಳೆಯ ಭವಿಷ್ಯ, ಮೇಷಾದಿ ದ್ವಾದಶ ರಾಶಿಯವರ ಪ್ರತಿ ತಿಂಗಳ ಭವಿಷ್ಯ, ಲಾಟ್ರಿ ಭವಿಷ್ಯ, ಹರ್ಶಲ್-ನೆಪ್ಚೂನ ಗ್ರಹಗಳ ಫಲ, ಇಷ್ಟ ಕಾಲ ಲಗ್ನ ನೋಡಬೇಕಾದ ೧೮೬೦ ಲಗ್ನ ಸ್ಪುಟ ಮಾಡಿ ಬರೆದ ಕೋಷ್ಟಕ, ಒಕ್ಕಲಿಗರ ಋಣವಿಮೋಚನಾ ಭವಿಷ್ಯ, ಇವೇ ಮೊದಲಾದ ಅತ್ಯುಪಯುಕ್ತ ವಿಷಯಗಳಿಂದ ಭರಿತವಾದ ಈ 'ಭಾಗ್ಯೋದಯ ಪಂಚಾಂಗವು' ಪ್ರತಿಯೊಬ್ಬ ಕನ್ನಡಿಗನ ಕೈಗನ್ನಡಿಯಂತೆ ಪ್ರಕಾಶಮಾನವಾಗಿ ಶೋಭಿಸುವ ಹಾಗೆ ಬರೆದಿದ್ದು ಜನರು ಸಂಗ್ರಹಿಸತಕ್ಕದ್ದಾಗಿದೆ

ಸ್ತ್ರೀ ಜಾತಕ ಫಲ ದರ್ಪಣ ೧ ರೂಪಾಯಿ
ಪಾಮಿಸ್ಟ್ರಿ ರೀಡಿಂಗ್ ಅಥವಾ ಹಸ್ತದರ್ಪಣ ಬೆಲೆ ೧೨ ಆಣೆ
ಸ್ವಪ್ನ ಫಲ ದರ್ಪಣ ಬೆಲೆ ೫ ಆಣೆ
ಪ್ರಶ್ನಫಲ ದರ್ಪಣ ಬೆಲೆ ೮ ಆಣೆ

ಯಾವದೇ ಪುಸ್ತಕಕ್ಕೆ ಆರ್ಡರ ಕೊಡತಕ್ಕವರು ಪ್ರತಿಯೊಂದು ಪುಸ್ತಕದ ಬೆಲೆಯನ್ನೂ ಮತ್ತು ರಿಜಿಸ್ಟರ್ ಖರ್ಚಿಗಾಗಿ ಮೂರು ಆಣೆಗಳನ್ನೂ ಹೆಚ್ಚಿಗೆ ಮನಿಯಾರ್ಡರಿನಿಂದಾಗಲೀ ಇಲ್ಲವೇ ಪೋಸ್ಟೇಜು ಟಿಕೇಟುಗಳನ್ನಾಗಲೀ ಕಳುಹಿಸಬಹುದು.

ಸೋಲ್ ಏಜಂಟ್.—ವಿದ್ಯಾವಿಲಾಸ ಬುಕ್-ಡಿಪ್ಪೋ,
ಗದಗ ಸಿಟಿ (ಜಿ ಧಾರವಾಡ)



.... ಹೊಸ ವರ್ಷದ ಸ್ಪೆಷಲ್ ಬಹುಮಾನ ೫೦ ರೂಪಾಯಿ ....

ಸೂಚನೆ:—ಈ ಸ್ಪರ್ಧೆಯ ಸರಿಯಾದ ಉತ್ತರವು ಸಾಧ್ವಿ ಎಡಿಟರ ಬಳಿ ಮೊಹರುಮಾಡಿ ಇಟ್ಟಿರುತ್ತೆ. ಅದಕ್ಕೆ ಪ್ರತಿ ಅಕ್ಷರವೂ ಸರಿತೂಗುವ ಸ್ಪರ್ಧೆಗೆ ಮೊದಲ ಬಹುಮಾನವೂ, ಒಂದು ಮತ್ತು ಎರಡು ತಪ್ಪಿರುವವುಗಳಿಗೆ ಇತರ ಬಹುಮಾನಗಳೂ ಕೊಡಲ್ಪಡುವುವು. ಬಹುಮಾನಕ್ಕೆ ಯೋಗ್ಯವಾದ ಉತ್ತರಗಳು ಒಂದಕ್ಕಿಂತ ಹೆಚ್ಚಾಗಿದ್ದಲ್ಲಿ ಮೇಲ್ಕಂಡ ಬಹುಮಾನಗಳು ಎಲ್ಲರಿಗೂ ಹಂಚಲ್ಪಡುವುವು. ಬಹುಮಾನಗಳನ್ನು ಹಂಚುವ ವಿಚಾರ ಸ್ಪರ್ಧೆಯ ಮ್ಯಾನೇಜರಿಗೆ ಸೇರಿದ್ದು. ಈ ವಿಚಾರದಲ್ಲಿ ಯಾವ ಪತ್ರ ವ್ಯವಹಾರಗಳಿಗೂ ಅವಕಾಶವಿಲ್ಲಾ. ಪ್ರತಿ ಸ್ಪರ್ಧೆಗೂ ಪ್ರವೇಶಧನ ನಾಲ್ಕಾಣೆ. ಎರಡಕ್ಕಿಂತ ಕಡಿಮೆ ಸ್ಪರ್ಧೆಗಳನ್ನು ಅಂಗೀಕರಿಸುವುದಿಲ್ಲಾ. ನಾಲ್ಕು ಉತ್ತರಗಳನ್ನು ಕಳುಹಿಸುವವರು ಇನ್ನೊಂದು ಉತ್ತರವನ್ನು ಮುಫತ್ತಾಗಿ ಕಳುಹಿಸಬಹುದು. ಪ್ರವೇಶ ಧನವನ್ನು ಪೋಸ್ಟೇಜ್ ಸ್ಟಾಂಪು, ಅಥವಾ ಇಂಡಿಯನ್ ಪೋಸ್ಟಲ್ ಆರ್ಡರ್ ಅಥವಾ ಮನಿಯಾರ್ಡರ್ ಮೂಲಕ ರವಾನಿಸಬಹುದು. ಉತ್ತರಗಳನ್ನು ಬರೆಯತಕ್ಕವರು ಮಾರ್ಚಿ 21 ಮತ್ತು 28 ನೇ ಸಾಧ್ವಿ ಯೊಡನೆ ಇಲ್ಲಾಗಲಿ ಅಥವ ತಾವೇ ಮಾಡು ಕೊಂಡಿರುವುದಕ್ಕೆ ಕೂಪನ್ನಿನಲ್ಲಾಗಲಿ ಅಥವಾ ಬರಿಯ ಕಾಗದದಲ್ಲಾಗಲಿ ಚಿತ್ರದಲ್ಲಿದಂತೆ ಚೆನ್ನಾಗಿ(ಶಾಯಿನಲ್ಲಿ)ಬರೆದು ಕಳುಹಿಸಬೇಕು. ಉತ್ತರಗಳನ್ನು ಕಳುಹಿಸಲು 1938 ನೇ ಇಸವಿ ಏಪ್ರಿಲ 6 ನೇ ತಾರೀಖು ಕೊನೆಯ ದಿನ. ನಂತರ ಕಳುಹಿಸುವ ಉತ್ತರಗಳನ್ನು ಸ್ವೀಕರಿಸುವುದಿಲ್ಲಾ. ಸರಿಯಾದ ಉತ್ತರವು ಏಪ್ರಿಲ್ 11 ನೇ ಸಾಧ್ವಿ ಯಲ್ಲಿ ಪ್ರಕಟಿಸಲಾಗುತ್ತೆ.

ವಿಳಾಸ— ಮ್ಯಾನೇಜರ್, ಚಿತ್ರಶಾಲಾ ಸ್ಪರ್ಧೆ, ಒಂಟಿಕೊಪ್ಪಲು, ಮೈಸೂರು.

ವಿ. ಸೂ.—ನಮ್ಮ ಏಜಂಟರುಗಳು:— ಮೆಸರ್ಸ್ ಸ್ಟ್ರೀಟ್ ಮಾರ್ಟ್ಸ್, ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು — ಮ|| ರಾ|| ಹೆಚ್. ಕೆ. ಮೂರ್ತಿ, ತೆಂಗಿನಕಾಯಿ ವ್ಯಾಪಾರಿ, ನಂ. 46 ನ್ಯೂಮಾರ್ಕೆಟ್ ಬೆಂಗಳೂರು ಸಿಟಿ-ಮೆಸರ್ಸ್ ಹೆಚ್. ರಾಮಚಂದ್ರಯ್ಯ, ಮರ್ಚೆಂಟ್ ಅಂಡ್ ನ್ಯೂಸ್ ಏಜೆಂಟ್ ತುಮಕೂರು ಮೆಸರ್ಸ್ ಮ|| ರಾ|| ಎಸ್. ಸೀನಪ್ಪನವರು, ಸ್ಟೇಷನ್ ವೆಂಡರ್, ಚಿತ್ರದುರ್ಗ—ಮ|| ರಾ|| ಎಸ್. ಎಸ್ ರಾವ್. ನ್ಯೂಸ್ ಏಜಂಟ್, ತಿಪಟೂರು ಸೌ|| ವೆಂಕಟಾಚಲಶೆಟ್ಟರು, ರಾಯರ ಸೋಡಾ ಫ್ಯಾಕ್ಟರಿ, ದಾವಣಗೆರೆ.

ಎಡದಿಂದ ಬಲಕ್ಕೆ

೧. ಈ ಸಂವತ್ಸರವನ್ನು ಎಲ್ಲರಿಗೂ ಭಗವಂತನು ಆಯುರಾರೋಗ್ಯೈಶ್ವರ್ಯಗಳನ್ನು ಕೊಟ್ಟು ಕಾಪಾಡಲೆಂದು ನಮ್ಮ ಪ್ರಾರ್ಥನೆ ೪. ಕೆಲವರ ಉಪನ್ಯಾಸಗಳಲ್ಲಿ... ವ ಭಾಗವು ತುಂಬಾ ಇರುತ್ತದೆ ೭. ಒಂದು ರೀತಿ ೯ ಬ್ರಹ್ಮ ಅಕ್ಷಗಳ ೯. ಮಕ್ಕಳಲ್ಲಿ ಇದನ್ನು ಅತಿಯಾಗಿ ಪೋಷಿಸುವುದು ತಪ್ಪು ೧೩. ಪ್ರೀತಿ. ಬೆಲೆ ಸುಲಭವಾದರೂ ...ಬರ ವಂತದ ಪದಾರ್ಥಗಳನ್ನು ಉಪಯೋಗಿಸಬೇಕು. ವಿದ್ಯಾಭ್ಯಾಸಿಗಳಿಗೆ ಇದು ಒಂದು ಪ್ರ...ಮುಖವಾದ ವಸ್ತು ೩೦. ... ಗಳನ್ನು ಬಿಟ್ಟು ನಡೆಯಬಾರದು ೨೧. ತಾಳ್ಮೆ ೨೩. ಪಿಶ್ರಾಂತಿ ೨೩. ಶ್ರೀರಾಮನ ...ದ ೨೪. ಮಾತು ೨೬. ಪ್ರೀತಿಸು ೨೮. ಇದು ಜನಾಂಗದ ಅವನತಿಗೆ ...ರಣ ೩೦. ಕದ ೩೧. ಜಯಿಸು ೩೩. ಬಂಡಿ ೩೬. ತಿರುಗಿಸು ೩೭. ...ಮುದ್ರ ೩೯. ಬಲಿತರೆ, ಮುದಿಯಾದರೆ.

ಮೇಲಿನಿಂದ ಕೆಳಕ್ಕೆ

೧. ನೂತನ ಸಂವತ್ಸರದಲ್ಲಿ ಎಲ್ಲರಿಗೂ ಇದು ದೊರಕಲೆಂದು ನಮ್ಮ ಹಾರೈಕೆ ೨. ನಾಶವಾಗತಕ್ಕಂಥ ೩. ಅಸೌಕರ್ಯ ೫. ದೇವ ೬. ಚಂದ್ರ ೧೦. ಹಣೆಗೆ ಇಡುವ ಬೊಟ್ಟು ೧೧ ಕಮಲ ೧೨. ಅಕ್ಕ ೧೩. ಥೂರಿ ೧೫. ಅಗ್ನಿ ೧೭. ಸ್ವಾಂತಾಧೀನ ೧೮. ವಿವಾಹ ಸಂಬಂಧವನ್ನು ಬೆಳೆಸುವಾಗ ಮೊದಲು ಇದನ್ನು ನೋಡಬೇಕು ೨೦. ಕಾಲಗತಿಯಲ್ಲಿ ಎಷ್ಟೋ ಸಾಮ್ರಾಜ್ಯಗಳು . ೨೨. ಸರ್ಕಾರ ನೌಕರಿಗಳಲ್ಲಿ ಇದಕ್ಕೆ ಕೊರತೆಯೇ? ೨೫. ... ನ ಸಹವಾಸದಿಂದ ದೂರವಾಗಿರುವುದು ಒಳ್ಳೆಯದು ೨೭ ಯುದ್ಧದಲ್ಲಿ ಸೋಲಾದ ಶತ್ರುರಾಜನನ್ನು ಮರ್ಯಾದೆಗೆ ಕುಂದಿಲ್ಲದಂತೆ ನೋಡಿಕೊಳ್ಳುವುದು ರಾಜಧರ್ಮ ೨೯. ... ರನ್ನು ಮಾತೆಯರಂತೆ ಭಾವಿಸಬೇಕು ೩೩. ನಂತರ ೩೫. ತಾಯಿ.

ಚಿತ್ರಶಾಲಾ ಸ್ಪರ್ಧೆ ನಂ. ೪೬.



ಒಂದೂ ತಪ್ಪಿಲ್ಲದ ಉತ್ತರ ಕಳುಹಿಸಿದವರಿಗೆ **25** ರೂಪಾಯಿ ಸ್ಪೆಷಲ್ ಬಹುಮಾನ.

ಒಂದು ತಪ್ಪಿನ ಉತ್ತರ ಕಳುಹಿಸಿದವರಿಗೆ ಪ್ರತಿಯೊಬ್ಬರಿಗೂ ಒಂದೊಂದು ಉತ್ತಮವಾದ ಪೌಂಟನ್ ಪೆನ್ ಕೊಡಲಾಗುತ್ತೆ.

ಚಿತ್ರಶಾಲಾ ಸ್ಪರ್ಧೆ ನಂ. ೪೬.



ಹೆಸರು ....

ವಿಳಾಸ ....

ಕೂಪನ್ ನಂ. ...... ಪೋಸ್ಟಲ್ ಆರ್ಡರ್ ನಂಬರು ....

ಹೆಸರು ....

ವಿಳಾಸ ....

ಕೂಪನ್ ನಂ. ...... ಪೋಸ್ಟಲ್ ಆರ್ಡರ್ ನಂಬರು ....

ಪೋಸ್ಟು ಮಾಡಲು ಕಡೆಯ ತಾರೀಖು ೨೬—೩—೩೮ ಬಹುಮಾನ ಹೆಚ್ಚಿಸಿದೆ ಪೋಸ್ಟು ಮಾಡಲು ಕಡೆಯ ತಾರೀಖು ೨೬—೩—೩೮

೨೦೦ ರೂಪಾಯಿ ಬಹುಮಾನ ಚಕ್ರಬಂಧ ಸ್ಪರ್ಧೆ ನಂ. ೧೫ ೨೦೦ ರೂಪಾಯಿ ಬಹುಮಾನ

ಮೊದಲನೆಯ ಬಹುಮಾನ ೧೦೦—೦—೦ ಇತರ ಬಹುಮಾನ ೧೦೦—೦—೦

[illegible] 10 -0 -0 [illegible] ಉತ್ತರಗಳ [illegible] ಒಂದು ಮಂಗಳೂರು [illegible]

[illegible] ಕೂಪನ್ನಿಗೆ [illegible] ಎರಡು ಕೂಪನ್ನಿಗೆ ಕಮ್ಮಿ ಅಂಗೀಕರಿಸುವುದಿಲ್ಲ, ಒಂದು ರೂಪಾಯಿಗೆ ಆರು ಕೂಪನ್ನುಗಳು



ಹೆಸರು

ವಿಳಾಸ

ಕೂಪನ್ ನಂಬರ್

ಪೋಸ್ಟಲ್ ಆರ್ಡರ್ ನಂ

ಎಡದಿಂದ ಬಲಕ್ಕೆ:—೧. ಕುಬೇರ [illegible] ಹೇಳುವದು [illegible] ಬ್ರಿಟಿಷ್ ಇಂಡಿಯಾದ [illegible] ಭಾರತದ ಪ್ರಜೆಗಳಲ್ಲಿ [illegible] ೮. ಮಾಡತಕ್ಕ ಕಾರ್ಯಗಳಿಂದ ಮನುಷ್ಯನ [illegible] ತಿಳಿಯಬಹುದು ೧೧ [illegible] ಇವನ್ನು ನೋಡಬಹುದು, ದುಂಡಾದ ೧೪ [illegible] ೧೬ [illegible] ೧೮ [illegible] ರಾಷ್ಟ್ರದ [illegible] ಅಂತರಂಗದ [illegible] ೨೩. [illegible] ೨೪ ಪ್ರಪಂಚ ವ್ಯವಹಾರದಲ್ಲಿ [illegible] ೨೫ [illegible] ೨೬. ಮುಂದೆ ಸಾಧಿಸಲ್ಪಟ್ಟಿ.

ಮೇಲಿನಿಂದ ಕೆಳಕ್ಕೆ:— [illegible] ಪ್ರಕಾಶಿಸು [illegible] ಇವರ [illegible] ಹೆಚ್ಚು ೯. ಶರೀರದಲ್ಲಿ ಒಂದು ಭಾಗ ೧೦ [illegible] ಇಲ್ಲದೆ ಕೆಲಸ ಮಾಡು ೧೧. [illegible] ಹೃದಯವನ್ನು [illegible] ಯಾರಿಂದಲೂ [illegible] ೧೩. ತಿಳಿಯದ, ಪ್ಪದು ೧೬. ಇವರ ಸಹ [illegible] ಅಪೇಕ್ಷಿಸಲ್ಪಡತಕ್ಕದ್ದು ೧೮. ಇದಕ್ಕೆ [illegible] ಕಟ್ಟಡಗಳನ್ನು ಕಟ್ಟಬಾರದು ೧೯ [illegible] ಚರಿತಕಾರರು ಸರಿಯಾದ ಮಂತ್ರಿಗಳು ೨೦ [illegible] ೨೧ ಒಂದು ಪಕ್ಷಿ

[illegible] ಕೆಲವು ಕಡೆ ಉಪಯೋಗಿಸಬಹುದಾದ ಪದಗಳನ್ನು ಸೂಚಿಸಿರುತ್ತೆ —1 (೬) ಅಕ್ಷರ, ಅಕ್ಷಯ (೧೯) ಆಲಯ, ನಿಲಯ (೨೦) ಮಂತ್ರಿಪ, ಮಂತ್ರಿತ್ವ (೨೨) ಕಾಸು, ಆಸು [illegible] (೯) ಪಕ್ಷ, ಪಚೆ (೧೨) ಕುಮನ, ಕುಮತಿ (೧೬) ಆಯ, ಪಾಯ

ನಿಯಮಗಳು —೧ ಸೊಹರಾದ ಉತ್ತರವು [illegible] ಬ್ಯಾಂಕಿಂಗ್ ಸಿಂಡಿಕೇಟ್‌ನಲ್ಲಿಟ್ಟಿರುತ್ತೆ. ಅದಕ್ಕೆ ಪ್ರತ್ಯಕ್ಷರವೂ ಸರಿಹೋಲತಕ್ಕ ಉತ್ತರವೇ ಸರಿಯಾದ ಉತ್ತರ. ಪ್ರತಿ ಪದವೂ ಒಂದೊಂದು ತಪ್ಪಾಗಿ ಭಾವಿಸುತ್ತೆ. ೨ ಸ್ಪರ್ಧೆಯ ಉತ್ತರವು 1938 ನೇ ಏಪ್ರಿಲ್ 2 ನೇ ತಾರೀಖಿನ "[illegible]" ಪತ್ರಿಕೆಯಲ್ಲಿ 1938 ನೇ ಏಪ್ರಿಲ್ ತಾರೀಖು 1 ನೇ [illegible] ಪ್ರಕಟಿಸಲ್ಪಡುತ್ತೆ [illegible] ವಿಚಾರದಲ್ಲೂ ಮ್ಯಾನೇಜರ ತೀರ್ಮಾನವೇ ಅಂತ್ಯವಾಗಿರುತ್ತೆ [illegible] ಅವಕಾಶವಿರುವುದಿಲ್ಲ. ಉತ್ತರವನ್ನು [illegible] ಕಳುಹಿಸಿರುವಂತೆಯೇ ಭಾವಿಸಲಾಗುತ್ತೆ ೪. ಕೂಪನ್ನುಗಳನ್ನೂ [illegible] ಬಹುಮಾನದ ಮಂತ್ರಿಪತ್ರಗಳನ್ನು ಶೀಘ್ರ ಕೂಪನ್ ಕೊಟ್ಟ [illegible] ಏಜಂಟರಲ್ಲಿ ವಿಚಾರಿಸಿ

ಏಜಂಟರುಗಳು:—೧ [illegible] ಬೆಂಗಳೂರು ಸಿಟಿ [illegible] ಶ್ರೀ ರಂಗನಾಥ [illegible] C/o [illegible] ರಂಗನಾಥಶೆಟ್ಟಿ [illegible] ಚಿಕ್ಕಮಗಳೂರು [illegible] ಮಂಡ್ಯ [illegible] ೧೦. ಸಿದ್ದಕೃಷ್ಣಶೆಟ್ಟಿ ಅಂಡ್ ಬ್ರದರ್ ನೆಲಮಂಗಲ.—೧೧. [illegible] ೧೩. ಮಾದವಶೆಟ್ಟಿ [illegible] ಹುಣಸೂರು.—೧೪ ಪ್ರಭಾಕರ [illegible]

ಮ್ಯಾನೇಜರ್. ಚಕ್ರಬಂಧ ಸ್ಪರ್ಧೆ, ಅಗ್ರಹಾರ, ತುಮಕೂರು.

ಹಿಂದೂಸ್ಥಾನಕ್ಕೆ ಅಚ್ಚುಮೆಚ್ಚಿಗೆಯಾದ ಸ್ನಾನದ ಸಾಬೂನು



[illegible] ಸಾಬೂನು [illegible]

ನಿಮಗೆ ಏಕಾಗದು?

ಮೈಸೂರು ಗಂಧದ ಸಾಬೂನು

[illegible] ದೊರೆಯುತ್ತದೆ

ಗೌರ್ನಮೆಂಟ್ ಸಾಬೂನು ಕಾರ್ಖಾನೆ, ಬೆಂಗಳೂರು.

DON'T SAY "CAN'T AFFORD"

Who carries risk on your life? If you are not insured, your wife and children carry it. And if you die without insurance your family has to bear the loss. Would you like to let them carry the risk any longer? And above all, who would like to leave them for some one else to support?

May we suggest you to call on any of our nearest representatives or write to us for necessary advice?

National Insurance Co., Ltd.,

(Head Office — Calcutta)

Sub-Office:—

DEVANGA BANK BUILDINGS,

KEMPEGOWDA ROAD — BANGALORE CITY.

Edited Printed & Published by Agaram Rangiah B.A., at Sri Rama Press, D Subbiah Road, Mysore.

REGD. NO. M. 3534.

HALF ANNA

ಸಾಧ್ವಿ

SADHVI LEADING WEEKLY

ಸಂಪಾದಕರು ಅಗರಂ ರಂಗಯ್ಯ, ಬಿ.ಎ.

ಸಂಪುಟ ೩] 28—3—38 ಮೈಸೂರು : ಸೋಮವಾರ ೨೮—೩—೧೯೩೮ [ಸಂಚಿಕೆ ೪

ಅನಿರೀಕ್ಷಿತ

ಶಾಂತಾ ಆಪ್ಟೆ

ವಸಂತ ಸಾಹಿತ್ಯೋತ್ಸವ

ಕರ್ನಾಟಕ ಸಾಹಿತ್ಯ ಪರಿಷತ್ತು

ಕಳೆದ ನಾಲ್ಕು ವರ್ಷಗಳೂ ನಡೆಸಿದಂತೆ ಈ ವರ್ಷವೂ ಬೇಸಿಗೆಯಲ್ಲಿ, ಏಪ್ರಿಲ್ ತಿಂಗಳ ಕಡೆಯ ವಾರದಲ್ಲಿ, ವಸಂತ ಸಾಹಿತ್ಯೋತ್ಸವವನ್ನು ನಡೆಸತಕ್ಕದ್ದೆಂದು ಪರಿಷತ್ತು ತೀರ್ಮಾನಿಸಿ ಕಾರ್ಯಗಳನ್ನು ಕೈಕೊಂಡಿದೆ. ಎಂದಿನಂತೆ ಉಪನ್ಯಾಸಗಳು, ಕನ್ನಡ ಗ್ರಂಥ ಮತ್ತು ವೃತ್ತಪತ್ರಿಕಾ ಪ್ರದರ್ಶನ, ಗಿರಿಜಾ, [illegible] ವ್ಯಾಖ್ಯಾನ ಮತ್ತು [illegible] ನಾಟಕ, ಮಹಿಳೆಯರ ಸಭೆ, ಕಾವ್ಯ ಗಾಯನ, ವಿವಿಧ ವಿನೋದಗಳು, ಸಂಘ ಸಮ್ಮೇಳನ ಇವು ನಡೆಯುವುವು.

ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿಯೂ ಈ ವಿಶೇಷ ಸಾಹಿತ್ಯೋತ್ಸವವನ್ನು ನಡೆಸಬೇಕೆಂದು ಹಲವರು ಆಗಾಗ್ಗೆ ಕೊಡುತ್ತಿರುವ ಸಲಹೆಯ ಮೇರೆಗೆ, ಈ ಸಲ ಬೆಂಗಳೂರಿನ ಉತ್ಸವವನ್ನು ನಾಲ್ಕು ದಿನಗಳ ಕಾಲವೂ, ಮೈಸೂರು ಸಂಸ್ಥಾನದ ಒಂದು ಗ್ರಾಮದಲ್ಲಿ (ಈ ಸಲ ಶಿವಮೊಗ್ಗಾ ಜಿಲ್ಲೆಯ ಒಂದು ಹಳ್ಳಿಯಲ್ಲಿ) ಮೂರು ದಿನಗಳ ಕಾಲವೂ, ಉತ್ತರ ಕರ್ನಾಟಕದ ಒಂದು ಕೇಂದ್ರದಲ್ಲಿ (ಬಹುಶಃ ಗದಗಿನಲ್ಲಿ) ಮೂರು ದಿನಗಳ ಕಾಲವೂ, ಈ ಉತ್ಸವವನ್ನು ನಡೆಸತಕ್ಕದ್ದೆಂದು ತೀರ್ಮಾನವಾಗಿದೆ.

ಈ ಸಲದ ವಿಶೇಷ ಲಕ್ಷಣಗಳೆಂದರೆ:— ಗ್ರಂಥ ಪ್ರದರ್ಶನದ ಜೊತೆಗೆ ವೃತ್ತಪತ್ರಿಕಾ ಪ್ರದರ್ಶನವೊಂದನ್ನು ಏರ್ಪಡಿಸಲಾಗುವುದು, ಪ್ರತಿ ದಿನ ಬೆಳಗ್ಗೆ ನಡೆಸುವ ಉಪನ್ಯಾಸಗಳನ್ನು ಮುಖ್ಯವಾಗಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳ ಉಪಾಧ್ಯಾಯರ ಮತ್ತು ಪ್ರೈಮರಿ ಪಂಡಿತರುಗಳ ಪ್ರಯೋಜನಕ್ಕಾಗಿಯೇ ನಡೆಸುವುವು; ಪ್ರತಿ ದಿನವೂ ಮಧ್ಯಾಹ್ನ ಮಹಿಳೆಯರಿಗೆ ಸಭೆ ಸೇರಲು ಅವಕಾಶ ಕಲ್ಪಿಸಿದೆ. ಅವರಿಗಾಗಿಯೇ ವಿಶೇಷ ಬಗೆಯ ಉಪನ್ಯಾಸ ವಿನೋದಾವಳಿಗಳನ್ನು ಏರ್ಪಡಿಸಲಾಗಿದೆ. ಹಾಗೆಯೇ ಎರಡು ದಿನ ಮಕ್ಕಳ ಕೂಟವನ್ನೂ, ಎರಡು ದಿನ ವಿದ್ಯಾರ್ಥಿಗಳ ಕೂಟವನ್ನೂ ನಡೆಸಲಾಗುವುದು. ಪ್ರತಿ ಸಂಜೆಯೂ ಅಖಿಲ ಪುರ ಜನರ ಪ್ರಯೋಜನಕ್ಕಾಗಿ ದಿನಕ್ಕೊಂದರಂತೆ ಎರಡರಂತೆ ಒಟ್ಟು [illegible] ಉಪನ್ಯಾಸಗಳನ್ನು ಏರ್ಪಡಿಸಲಾಗಿದೆ. ಕಡೆಯ ದಿನ ಸಕಲ ಕರ್ನಾಟಕ ಸಂಘ ಸಮ್ಮೇಳನ ಕೂಡುವುದು.

ಉತ್ಸವ ಏಪ್ರಿಲ್ ತಿಂಗಳ ಕಡೆಯ ವಾರದಲ್ಲಿಯೋ, ತಪ್ಪಿದರೆ, ಮೇ ತಿಂಗಳ ಮೊದಲ ವಾರದಲ್ಲಿಯೋ ಆರಂಭವಾಗುವುದು. ಉಪಾಧ್ಯಾಯರು ಮೊದಲಾದವರು ತಮ್ಮ ಹೆಸರುಗಳನ್ನು ಏಪ್ರಿಲ್ ೧೦ನೇ ತಾರೀಖಿನೊಳಗಾಗಿ ಪರಿಷತ್ತಿನ ಕಛೇರಿಯಲ್ಲಿ ರಿಜಿಸ್ಟರ್ ಮಾಡಿಸಿಕೊಳ್ಳಬೇಕು. [illegible] ತಿಳಿಸಿದರೆ ನಡೆಯಬಹುದು. [illegible] ಉತ್ಸವದ ಸ್ವಯಂಸೇವಕರು [illegible]

ಸಂಯುಕ್ತ ಪ್ರಾಂತದಲ್ಲಿ ಜೈಲ್ ಸುಧಾರಣೆ

೧. ದಿನಕ್ಕೆ ಅರ್ಧ ಘಂಟೆ ಸಂಗೀತ ಹಾಡಲು ಅನುಮತಿ. ೨ ಜೈಲಿನಲ್ಲಿ ರೇಡಿಯೋ ಯಂತ್ರಗಳನ್ನು ಗ್ರಾಮಫೋನುಗಳನ್ನು ಇಡುವುದು. ೩. ಸ್ವತಃ [illegible] ೪ [illegible] ವಯಸ್ಸು ಮೀರಿದವರಿಗೆ [illegible] ೫. [illegible] ಆಯಾ ದಿವಸ [illegible] ಸ್ವಂತ ಹಣದಿಂದ ಬೇಕಾದ ಪತ್ರಿಕೆ ಪುಸ್ತಕಗಳನ್ನು ಕೊಂಡುಕೊಳ್ಳಲು ಖೈದಿಗಳಿಗೆ ಸ್ವಾತಂತ್ರ್ಯ. ೬. [illegible] ಒಂಟಿ ಕೋಣೆ ಶಿಕ್ಷೆಯನ್ನು ರದ್ದುಪಡಿಸುವುದು. ೭. ಕಷ್ಟಕರವಾದ ಕೆಲಸಗಳನ್ನು [illegible] ೮. ರಾಜಕೀಯ ಬಂದಿಗಳನ್ನು 'ಎ' ಕ್ಲಾಸ್ ಖೈದಿಗಳಂತೆ ಕಾಣುವುದು.

ಈ ಸುಧಾರಣೆಗಳನ್ನು ಇತರ ಸರಕಾರಗಳೂ ಅನುಸರಿಸಲಿ.

ನಂಜನಗೂಡು ರಥೋತ್ಸವ

ನಂಜನಗೂಡು ಶ್ರೀ ಶ್ರೀಕಂಠೇಶ್ವರ ಸ್ವಾಮಿಯವರಿಗೆ ಸಂಬಂಧಿಸಿದ ಏಪ್ರಿಲ್ ೩ ನೇ [illegible] ಶ್ರೀಕಂಠರಾಯ ಉತ್ಸವವೂ ೧೦—೪—೩೮ ರಲ್ಲಿ ಪಂಚ ರಥೋತ್ಸವವೂ ೧೩-೪-೩೮ ರಲ್ಲಿ ತೀರ್ಥಸ್ನಾನ, ತೆಪ್ಪೋತ್ಸವ, ಮೊದಲಾದ ಸಹಿತ ಉತ್ಸವವೂ ನಡೆಯುವುವಾಗಿ ಪೇಷ್ಕಾರರು ತಿಳಿಸುತ್ತಾರೆ.

ಕಾಂಗ್ರೆಸ್ ಸದಸ್ಯತ್ವ

ಕಾಂಗ್ರೆಸ್ ಸಭೆಗೆ ಸದಸ್ಯರನ್ನು ಕೂಡಿಸುವ ಕಾರ್ಯವು ಏಪ್ರಿಲ್ ೧ನೇ ದಿನದಿಂದ ನಡೆಯುತ್ತದೆ. [illegible] ಪುಸ್ತಕಗಳೆಲ್ಲವೂ [illegible] ಹೊಸ ಪುಸ್ತಕಗಳು [illegible] ಈ ಸಾರಿ ಎಲ್ಲರಿಗಿಂತಲೂ ಹೆಚ್ಚಿನ ಸದಸ್ಯರನ್ನು ಕೂಡಿಸುವ [illegible] ಒಂದು ಬೆಳ್ಳಿಯ ಗುರಾಣಿಯನ್ನು ಒಂದು ವರ್ಷದ ಮಟ್ಟಿಗೆ ಬಹುಮಾನವಾಗಿ ಕೊಡುವಂತೆ ಕರ್ನಾಟಕ ಕಾಂಗ್ರೆಸ್ ಸಮಿತಿಯವರು ನಿರ್ಧರಿಸಿರುತ್ತಾರೆ.

ಎಲ್ಲಾ ಬಗೆಯ ಸಹಾಯಗಳನ್ನೂ ನೀಡುವರೆಂದು ನಂಬಿದ್ದೇವೆ.

ಇಂಥ ಉತ್ಸವಗಳು ಯಶಸ್ವಿಯಾಗಿ ಈ ಬಗೆ ನಡೆಯಬೇಕಾದರೆ ಮಹಾಜನರು ಉದಾರವಾಗಿ [illegible] ಈ ಸಲದ ಉತ್ಸವಕ್ಕೆ [illegible] ೧,೦೦೦ ರೂ. ಗಳ [illegible] ಕನ್ನಡ [illegible] ಸಂಸ್ಥೆಗಳು [illegible] ಗುಂಪು ಗುಂಪಾಗಿ [illegible] ಉತ್ಸವವನ್ನು ವೈಭವದಿಂದ [illegible]

ಮೈಸೂರು ಕೆರೆಗಳಲ್ಲಿ ಹೂಳು ತುಂಬುವುದನ್ನು ತಪ್ಪಿಸುವದು

ಸಂಸ್ಥಾನದಲ್ಲಿನ ಮೈನರ್ ಕೆರೆಗಳನ್ನು ಜೀರ್ಣೋದ್ಧಾರ ಮಾಡಿದ ಒಂದೆರಡು ವರ್ಷಗಳಲ್ಲಿಯೇ ಅವುಗಳಲ್ಲಿ ಹೂಳು ತುಂಬಿಕೊಳ್ಳುತ್ತಿರುವುದರಿಂದ, ಅದನ್ನು ತಪ್ಪಿಸುವುದು ಆವಶ್ಯಕವೆಂಬ ವಿಚಾರವು ಕಳೆದ ಜೂನ್ ತಿಂಗಳಿನಲ್ಲಿ ನಡೆದ ಪ್ರಜಾಪ್ರತಿನಿಧಿ ಸಭೆಯ ಬಜೆಟ್ ಅಧಿವೇಶನದಲ್ಲಿ ಸರ್ಕಾರದವರ ಗಮನಕ್ಕೆ ತರಲ್ಪಟ್ಟಿತು.

ಕೆರೆಗಳು ಹೂಳು ತುಂಬಿಕೊಳ್ಳುವುದು ಕೇವಲ ಸ್ವಾಭಾವಿಕವಾಗಿ ನಡೆಯುತ್ತದೆ. ಹೀಗೆ ತುಂಬಿಕೊಳ್ಳುವುದನ್ನು ಸ್ವಲ್ಪಮಟ್ಟಿಗೆ ಮಾತ್ರ ತಪ್ಪಿಸಬಹುದೇ ಹೊರತು, ಸಂಪೂರ್ಣವಾಗಿ ತಪ್ಪಿಸುವುದಕ್ಕಾಗುವುದಿಲ್ಲ. ಕೆರೆಗಳ ಅಚ್ಚುಕಟ್ಟಿನ (ಜಲಾನಯನ) ಪ್ರದೇಶಗಳಲ್ಲಿ ಗಿಡಗಳನ್ನು ಬೆಳೆಯಿಸುವುದು, ಕೆರೆಗಳ ಸುತ್ತಲೂ ಗಿಡಗಳನ್ನು ಬೆಳೆಯಿಸುವುದು, ಕೆರೆಗಳ ಅಂಗಳಗಳ ಸಮೀಪದಲ್ಲಿ ಭೂಮಿಯನ್ನು ಉಳುವುದನ್ನು ತಪ್ಪಿಸುವುದು ಮತ್ತು ಕೆರೆಗಳಿಗೆ ನೀರನ್ನು ತಂದೊದಗಿಸತಕ್ಕ ಹಳ್ಳಗಳಿಗೆ ಅಡ್ಡಲಾಗಿ ಮಣ್ಣಿನ ಅಥವಾ ಕಲ್ಲಿನ ಚಿಕ್ಕ ಕಟ್ಟೆಗಳನ್ನು ಕಟ್ಟಿ ಹೊರಗಿನಿಂದ ಮಣ್ಣು ಕೊಚ್ಚಿಕೊಂಡು ಬರುವುದನ್ನು ತಡೆಯುವಂತೆ ಏರ್ಪಾಡು ಮಾಡುವುದು—ಈ ವಿಧಾನಗಳ ಮೂಲಕ ಹೂಳು ತುಂಬಿಕೊಳ್ಳುವುದನ್ನು ಸ್ವಲ್ಪಮಟ್ಟಿಗೆ ತಡೆಯಬಹುದೆಂದು ಸರ್ಕಾರದ ಚೀಫ್ ಇಂಜನಿಯರವರು ಸೂಚಿಸುತ್ತಾರೆ. ಈ ಸಂಬಂಧದಲ್ಲಿ ಮತ್ತೊಂದು ವಿಧಾನವೂ ಸಾಧ್ಯ. ಕೆರೆಯು ಒಣಗಿದಾಗ ಹೂಳನ್ನು ತೆಗೆಯತಕ್ಕ "ಟ್ರ್ಯಾಕ್ಟರ್ಸ್ ಮತ್ತು ಸ್ಕ್ರೇಪರ್ಸ್" ಎಂಬ ಯಂತ್ರಗಳ ಸಹಾಯದಿಂದ ಕೆರೆಯ ಅಂಗಳದಿಂದ ವಾಸ್ತವವಾಗಿ ಹೂಳನ್ನು ತೆಗೆಯುವುದೇ ಆ ವಿಧಾನ.

ಸಂಸ್ಥಾನದಲ್ಲಿ ಮೈನರ್ ಕೆರೆಗಳ ಸಂಖ್ಯೆಯು ಬಹಳ ಹೆಚ್ಚಾಗಿದೆ. ಆದುದರಿಂದ ಸಂಸ್ಥಾನದಲ್ಲಿರತಕ್ಕ ಎಲ್ಲ ಮೈನರ್ ಕೆರೆಗಳಲ್ಲಿಯೂ ಹೂಳು ತುಂಬದಂತೆ ಮಾಡುವ ಕೆಲಸವನ್ನು ಪಬ್ಲಿಕ್ ವರ್ಕ್ಸ್ ಇಲಾಖೆಯವರೊಬ್ಬರೇ ಕೈಕೊಳ್ಳಲು ಸಾಧ್ಯವಿಲ್ಲ. ಆಯಾ ಕೆರೆಗಳಿಗೆ ಸಂಬಂಧಪಟ್ಟ ರೈತರುಗಳೂ ಈ ಸಂಬಂಧದಲ್ಲಿ ಸಹಕರಿಸಿ ಕೆಲಸಮಾಡುವುದು ಅತ್ಯಾವಶ್ಯಕವಾಗಿದೆ. ಈ ವಿಷಯದಲ್ಲಿ ರೈತರಿಗೆ ಸರ್ಕಾರದವರು ತಿಳುವಳಿಕೆಗಳನ್ನು [illegible] ಕೊಡುತ್ತಿದ್ದರೂ ಹೆಚ್ಚು ಕಾರ್ಯ ನಡೆಯುವಂತೆ ಕಂಡುಬರುವುದಿಲ್ಲ— ಎಂಬುದಾಗಿ ಪ್ರಕಟನಾಧಿಕಾರಿಗಳು ತಿಳಿಸಿರುತ್ತಾರೆ.

ದ್ರಾಕ್ಷಾಮೃತ

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿ ಅನೇಕ ವನಸ್ಪತಿಗಳ ರಸವರ್ಗಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶಿ ಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರು ಮಾಡಿರುವದರಿಂದ ಸ್ವಾದಿಷ್ಟವೂ ಮತ್ತು ಮಧುರವೂ ಆಗಿದೆ.

ಇದರ ಸೇವನೆಯಿಂದ ಶರೀರದೊಳಗಿನ ಹುಳಿ ಕಡಕಿ (ಗರಮಿ) ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸ್ರಾವ, ಸ್ವಪ್ನದೋಷದಿಂದ ಅಥವಾ ಬೇರೆ ಯಾವದೇ ಕಾರಣದಿಂದ ಬಂದ ಅಶಕ್ತಿಯಿಂದ ಕೈಕಾಲು, ಕಣ್ಣುಗಳಿಗೆ ಉರುಪು ಬೀಳೋಣ, ರುಚಿಕಟ್ಟು ನಾಶ ಆಗದ ಇರೋಣ, ಮುಂತಾದ ಎಲ್ಲ ವಿಕಾರಗಳು ನಷ್ಟವಾಗಿ ಕ್ಷುಧಾಗ್ನಿ ಬೆಳೆಯುತ್ತದೆ. ಮತ್ತು ಅನ್ನ ಚೆನ್ನಾಗಿ ಪಚನವಾಗಿ ರುಚಿಕಟ್ಟು ಸಾಫವಾಗುತ್ತದೆ. ಇದರ ಸೇವನೆಯಿಂದ ತರುಣರಿಗೆ [illegible] ಅಥವಾ ಬೇರೆ ಕಾರಣದಿಂದ ಬಂದ ಧಾತುಕ್ಷೀಣತೆ ನಪುಂಸಕತ್ವ ಇದ್ದರೆ ಅದು ಹೋಗಿ [illegible] ಶರೀರ ಬಲವಾಗಿ ಮಕ್ಕಳು ಪುಷ್ಟರಾಗುವರು. ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ. [illegible] ಮತ್ತು [illegible] ಗರ್ಭ ಸಂಬಂಧವಾದ ರೋಗಗಳಿದ್ದರೂ ಅವೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ಪ್ರಾಪ್ತವಾಗುವದು. ಈ ಔಷಧದ ಮೂರು ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣಬರುತ್ತದೆ. ಇದರ ಅನುಭವ 1 ಬಾಟ್ಲಿ ಸೇವನೆ ಮಾಡಿದ ನಂತರ ನಿಮಗೆ ತಿಳಿದೀತು.

1 ಬಾಟ್ಲಿ ಕಿಮ್ಮತ್ತು [illegible] ಬಾಟ್ಲಿ [illegible], 1 ಡಜನ್ ಬಾಟ್ಲಿ ಬೆಲೆ [illegible]

ಮ್ಯಾನೇಜರ್ – ದ್ರಾಕ್ಷಾಮೃತ ಡಿಪೋ. ಪ್ರೋಸ್ಟ್ ನಿಪ್ಪಾಣಿ, ಜಿಲ್ಲಾ ಬೆಳಗಾವಿ.

[illegible] ಬೆಂಗಳೂರು [illegible]

ಜೈಲಿನ ಸುಧಾರಣೆ

ಲೇಖಕರು,—ಎ. ಎಸ್. ಪಂಡಿತ್

ಇದು ವಿಜ್ಞಾನದ ಯುಗ. ನಾವು ಮಾಡುವ ಪ್ರತಿಯೊಂದು ಕೆಲಸವನ್ನೂ ವಿಜ್ಞಾನ ದೃಷ್ಟಿಯಿಂದ ಪರಿಶೀಲಿಸಬೇಕು. ಒಳ್ಳೇ ಕಲಾಪ್ರವೀಣರಂತೆ ರಾಜ್ಯಾಡಳಿತವು ಚತುರಂಗದ ಆಟದಂತೆ ಇದೆ. ಇದರಲ್ಲಿ ಸತ್ಯ ಮತ್ತು ಒಳ್ಳೆ ತತ್ವಗಳಿಗೆ ಪ್ರಧಾನ ಸ್ಥಾನ, ಧಾರ್ಮಿಕ ಮತ್ತು ಉದ್ರೇಕಗಳಿಗೆ ಎಡೆ ಇಲ್ಲ.

ಜೈಲಿನ ಆಡಳಿತ ಕ್ರಮ

ಈಗ ನಮ್ಮ ದೇಶದಲ್ಲಿ ಉಪಯೋಗಿಸಲ್ಪಡುವ ಜೈಲಿನ ಆಡಳಿತ ಕ್ರಮವು ಆಧುನಿಕ ವಿಜ್ಞಾನ ಶಾಸ್ತ್ರ ಪದ್ಧತಿಗೆ ವಿರುದ್ಧವಾದುದು. ಮನುಷ್ಯನ ಸ್ವಭಾವ, ಸ್ವಂತಾದ ಕಟ್ಟಳೆಗಳಲ್ಲೂ ಒತ್ತೀಚಿನವರಿಗೆ ಆದರ್ಶವಾಗಿದ್ದಿತ್ತು. ಆದರೆ ಈಗ ಒಳ್ಳೆ ಬದಲಾಯಿಸುತ್ತಿದೆ. ಸಂಯುಕ್ತ ಪ್ರಾಂತಗಳಲ್ಲಂತೂ ಹೊಸ ನಿಯಮಗಳು ಜಾರಿಗೆ ಬಂದಿವೆ. ನಮ್ಮ ಸಂಸ್ಥಾನದಲ್ಲೂ ಬದಲಾವಣೆಗಳಾಗಬೇಕಾಗಿದೆ. ಇಲ್ಲಿನ ರಿಸ್ಥಿತಿಗಳನ್ನು ವಿವರಿಸೋಣ.

ಬಲಕುಹುವಿಸೂಡನೆಯೇ ಖೈದಿಗಳನ್ನು ದಾರಿಗೆ ಎಳೆದವರು ಅವರನ್ನು ಖೈದಿಗಳಿಗೆ ಊಟಮಾಡುವುದಕ್ಕೆ ಸುಮಾರು ೧ ಘಂಟೆಯ ಕಾಲ ವಿರಾಮವಿರುತ್ತದೆ. ಈ ಸ್ಥಳದಲ್ಲಿ ಅವರು ಮುಖವನ್ನು ತೊಳೆದು ಮಲವಿಸರ್ಜನೆ ಮಾಡಿ ಊಟಕ್ಕೆ ಸಿದ್ಧರಾಗಬೇಕು. ಕಾನೂನಿನ ಪ್ರಕಾರ ಜೈಲಿನಲ್ಲಿ ಬೆಳಿಗ್ಗೆ ೭ ಘಂಟೆಗೆ ಊಟ. ಜೈಲಿನಲ್ಲಿ ಖೈದಿಗಳನ್ನು ದೊಡ್ಡ ದೊಡ್ಡ ಕೋಣೆಗಳಲ್ಲಿ ಕೂಡುವರು. ಒಂದೊಂದು ಕೋಣೆಯಲ್ಲಿ ಸುಮಾರು ೬೦ ಜನರು ಇರುವರು. ಇಂತಹ ನಾಲ್ಕು ಕೋಣೆಗಳು ಸೇರಿ ಒಂದು ಬ್ಯಾರಕು ಆಗುವುದು. ಆದುದರಿಂದ ಒಂದು ಬ್ಯಾರಕಿನಲ್ಲಿ ಸುಮಾರು ೬೦ ಜನರಿರುವರು. ಒಂದು ಬ್ಯಾರಕಿಗೆ ಒಂದು ಕಕ್ಕಸು ಇರುವುದು. ಒಂದು ಸ್ನಾನದ ತೊಟ್ಟಿ ಇರುವುದು. ಒಂದೊಂದು ಕೋಣೆಯಲ್ಲಿ ಒಂದೊಂದು ಕಕ್ಕಸ್ ಇರುವುದು. ಅದರ ಆ ಕಕ್ಕಸ್ಸನ್ನ ಕಾನೂನಿನ ಪ್ರಕಾರ ಜಲವಿಸರ್ಜನೆಗೆ ಮಾತ್ರ ಉಪಯೋಗಿಸಬೇಕು. ಮಲವಿಸರ್ಜನೆಗೆ ಮಾತ್ರ ಹೊರಗೆ ಹೋಗಬೇಕು.

[illegible]

ಬೆಳಿಗ್ಗೆ ಎಷ್ಟು ಹೊತ್ತಿಗೆ ಕಾದಿರುವರು—ಈ ಪರಿಸರದಲ್ಲಿ ಮಲವಿಸರ್ಜನೆಯನ್ನು ೬೦ ಜನರೂ ೬೦ ನಿಮಿಷಗಳಲ್ಲಿ ಮಾಡುವರು. ಮಾಡುವುದಕ್ಕೆ ಸಮಯವಿಲ್ಲದೆ ಖೈದಿಗಳು ಮನುಷ್ಯತ್ವವನ್ನೇ ತೊರೆದು ಸ್ನಾನದ ತೊಟ್ಟಿಯಲ್ಲಿಯೇ ಶುದ್ಧಿಮಾಡಿಕೊಳ್ಳುವರು. ಅದೇ ತೊಟ್ಟಿಯಲ್ಲಿಯೇ ಮುಖವನ್ನೂ ತೊಳೆದುಕೊಳ್ಳುವರು. ಊಟದ ಪಾತ್ರೆಗಳನ್ನೂ ತೊಳೆಯುವರು. ಸ್ನಾನವನ್ನೂ ಮಾಡುವರು.

ಊಟ ಉಪಚಾರಗಳು

ಜೈಲು ಕಾನೂನುಗಳಲ್ಲಿ ಊಟ ಉಪಚಾರಗಳು ಖೈದಿಯ ದೇಹಕ್ಕೆ ಶಕ್ತಿಕೊಡಬೇಕೆಂಬ ತತ್ವವನ್ನು ಒಪ್ಪಿಕೊಂಡಂತೆ ಕಾಣುತ್ತದೆ. ಹಾಗಿಲ್ಲದಿದ್ದರೆ ಯೂರೋಪಿಯನ್ ಖೈದಿಗಳಿಗೆ ಒಂದು ರೀತಿ ಆಹಾರವನ್ನು ಕೊಡುವುದರ ಅರ್ಥವೇನು? ದೇಶೀಯ ಖೈದಿಗಳಿಗೆ ಬಿಸಿನೀರಿನ ತೋಟವನ್ನು ಕೊಡುವುದೇಕೆ? ನಮ್ಮ ಜೈಲು ಕಾನೂನುಗಳು ಬ್ರಿಟಿಷರ ಕಾಲದವುಗಳು. ಒಂದು ಶತಮಾನದ ಹಿಂದಿನ ಕ್ರಮವನ್ನು ಅನುಸರಿಸಿದ ಬಂದವರು ಅತಿರಿಯನ್ನು ಬಂದಿರುವರು. ಈ ಕಾನೂನುಗಳು ನಮ್ಮ ರಾಜ್ಯದ ಆರ್ಥಿಕ ಶಕ್ತಿಗೆ ತಕ್ಕಂತೆ ಇರುವುದಿಲ್ಲ. ಎಲ್ಲಾ ನಾಗರಿಕ ರಾಜ್ಯಗಳಲ್ಲೂ ಖೈದಿಗಳನ್ನು ಅವರಿಗೆ ಒಳ್ಳೆ ಮನೆಗಳಂತೆ ಕಾಣುವ, ಆರೋಗ್ಯಕರ, ರಮ್ಯ ಸ್ಥಳಗಳಲ್ಲಿ ಖೈದಿಗಳ ತಪ್ಪು ಮಾಡುವುದಕ್ಕೆ ಕಾರಣಗಳನ್ನು ಹುಡುಕುತ್ತಾರೆ. ಅವರು ಕಾಹಿಲೆಗೆ ಬೀಳುವುದಕ್ಕೆ ಮುಂಚೆ ವೈದ್ಯರು ಅವರ ಮೈ ಮನಸ್ಸನ್ನೂ ಪರೀಕ್ಷಿಸುತ್ತಾರೆ. ಅವರನ್ನು ಮನೋವಿಜ್ಞಾನಿಗಳು ಪರೀಕ್ಷಿಸುವರು. ಅದರ ಬಂದ ಅವರಿಗೆ ತಕ್ಕ ಶಿಕ್ಷೆ ವಿಧಿಸುತ್ತಾರೆ.

ಇತರ ದೇಶದ ಜೈಲುಗಳು

ಶರೀರ ಶಕ್ತಿಯ ಶಿಕ್ಷೆಯನ್ನು ಕೂಡುವುದರಿಂದ ಖೈದಿಯ ಮನಸ್ಸು ಉತ್ತಮಗೊಳ್ಳುವುದಿಲ್ಲ. ಅವನ್ನ ಬದುಕು ಅವನ ಮನಸ್ಸು ಬದಲಾಗುತ್ತದೆ. ಅವನಿಗೆ ಶಿಕ್ಷೆಯಾಗುವುದರಿಂದ ಸಮಾಜಕ್ಕೆ ಏನೇನು ನಷ್ಟ ಎಂಬುದು ಅವನಿಗೆ ಗೊತ್ತಾಗುವುದರಿಂದ ಅಪರಾಧಗಳು ಕಡಿಮೆಯಾಗುತ್ತವೆ.

[illegible]

ಭಗತ್ ಸಿಂಗ್



ಇವರ ವಿನಾಚರಣೆಯು ಕಳೆದ ವಾರ ಅನೇಕ ಕಡೆಗಳಲ್ಲಿ ನಡೆಯಿತು

ಧ್ವಂದ ಕಾಣುತ್ತಾರೆ. ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿಯೇ ಮದರಾಸಿನ (ಕಂಟೋನ್ಮೆಂಟ್) ಖೈದಿಗಳೂ ಮೈಸೂರಿನ ಖೈದಿಗಳಿರುವ ಇರುವರು. ಮದರಾಸಿನ ಖೈದಿಗಳನ್ನು ಕೋರ್ಟಿಗೆ ಕರೆದುಕೊಂಡು ಹೋಗುವಾಗ ಒಳ್ಳೆ ಮಾಡುವವರಿಗೂ ಬೇಕಾದ ಕೈಕೋಳಗಳನ್ನು ತೊಡಿಸುವುದಿಲ್ಲ. ಮೈಸೂರಿನ ಖೈದಿಗಳಾದರೋ ಕೆಲವು ವೇಳೆ ಕೈಕೋಳಗಳನ್ನು ತೊಡಿಸುತ್ತಾರೆ.

ಆಹಾರ

ಜೈಲಿನಲ್ಲಿ ಖೈದಿಗಳ ಉಪಯೋಗಿಸುವ ಪಾತ್ರೆಗಳೆಲ್ಲವೂ ಕಬ್ಬಿಣದವು. ಕಬ್ಬಿಣದ ಪಾತ್ರೆಗಳಲ್ಲಿ ಅಡಿಗೆ ಮಾಡಿದ್ದನ್ನು ಊಟ ಮಾಡುವುದು ಆರೋಗ್ಯಕ್ಕೆ ಹಾನಿ. ಆದರೂ ಹಿರಿ ಇಲ್ಲದೆ ಎದಕ್ಕೋ ಇದ್ದಂತೆಯೇ ಊಟದ ಪಾತ್ರೆಗಳು ಮಣ್ಣಿನವು. ಅವನ್ನು ಸ್ವಚ್ಛ ಮಾಡುವುದಂತೂ ಬಹಳ ಕಷ್ಟ. ಈ ಪಾತ್ರೆಗಳು ತುಕ್ಕು ಹಿಡಿದಿರುತ್ತವೆ. ಮೇಲೆ ಇಟ್ಟುಕೊಂಡು ಸ್ವಲ್ಪ ಕಾಲ ಬಿಸಿಲಿನಲ್ಲಿ ಊಟಮಾಡುವುದು. ಬೆಂಗಳೂರು ಸೆಂಟ್ರಲ್ ಜೈಲಿನ ಸ್ಥಿತಿಯ ಪದ್ಧತಿ. ಆ ಪಾತ್ರೆಗಳ ಗಂಜಿಯೇ ಖೈದಿಗಳ ಆಹಾರ. ಒಂದು ದಿವಸ ಸ್ನಾನ ಮಾಡುವುದಕ್ಕೆ ಖೈದಿಗಳು ಕಾದುಕೊಂಡಿರಬೇಕು. ಸರ್ಕಾರದವರು ಮಾಡುವುದನ್ನು ನೋಡಿಕೊಂಡು ನಮ್ಮ ಸರ್ಕಾರದವರೂ ಇದೇ ದಿನಗಳಲ್ಲಿ ಸಹ ಮಾಡಿದರು. ಕಳೆದ ಹಲವು ವರ್ಷಗಳಲ್ಲಿ ಮಾಡಿದ ಸುಧಾರಣೆಗಳನ್ನು ಮಾಡಿತ್ತಿರುವರು. ಇದರಿಂದ ಸ್ವಲ್ಪ ಸ್ವಲ್ಪ ಸುಧಾರಣೆ ಆಗಿದೆ.

[illegible]

ಸಿದ್ದಲಿಂಗಯ್ಯನವರು ಮಹಾತ್ಮರ ಭೇಟಿಗೆ

ಮೈಸೂರು ಕಾಂಗ್ರೆಸ್ ಬೋರ್ಡ್ ಅಧ್ಯಕ್ಷರಾದ ಶ್ರೀ ಟಿ. ಸಿದ್ದಲಿಂಗಯ್ಯನವರು ಶ್ರೀ ಧರ್ಮಾಳಂ ಚಂದ್ರಶೇಖರಯ್ಯನವರೊಡನೆ ಮಹಾತ್ಮರನ್ನು ಸಂದರ್ಶಿಸಲು ಕಲ್ಕತ್ತೆಗೆ ಪ್ರಯಾಣ ಬೆಳೆಸಿರುವರು. ಮೈಸೂರಿನಲ್ಲಿ ಸರ್ಕಾರದವರು ರಚಿಸಬೇಕೆಂದಿರುವ ಸುಧಾರಣಾ ಸಮಿತಿಯ ವ್ಯಾಪನೆಯು ಕಾಂಗ್ರೆಸ್ಸಿನವರಿಗೆ ತೃಪ್ತಿಕರವಾಗಿಲ್ಲವೆಂಬುದಾಗಿ ಕಳೆದ ಕಾಂಗ್ರೆಸ್ ಬೋರ್ಡಿನಲ್ಲಿ ತೀರ್ಮಾನವಾಯಿತಷ್ಟೆ. ಇವರ ಮಾಲಿ ರಾಜಕೀಯ ರಂಗದಲ್ಲಿ ನಡೆದ ಘಟನೆಗಳ ಪರಿಣಾಮವಾಗಿ ಮಹಾತ್ಮರ ಸಲಹೆಯನ್ನು ಪಡೆದುಕೊಳ್ಳತಕ್ಕದ್ದೆಂದು ತೀರ್ಮಾನವಾಯಿತು. ಸುಧಾರಣಾ ಸಮಿತಿಯನ್ನು ಈಗ ರಚಿಸಬೇಕೆಂದಿರುವ ರೀತಿಯಲ್ಲಿ ಕಾಂಗ್ರೆಸ್ಸಿನವರಿಗೆ ಸ್ವಲ್ಪವೂ ಸಮಾಧಾನಕರವಾಗುವುದಿಲ್ಲ. ಒಪ್ಪಬಹುದಾದ ಕಾರಣ ಮಾತೇ ಇದರಲ್ಲಿಲ್ಲ. ಅದ್ದರಿಂದ ಈ ಸಮಿತಿಯೊಡನೆ ಕಾಂಗ್ರೆಸ್ಸಿನವರು ಸಹಕರಿಸಬೇಕೇ ಬೇಡವೇ ಎಂಬ ಪ್ರಶ್ನೆಯು ಬಂದೇ ಬರುತ್ತದೆ.

ಈ ಬಂದರ್ಭವನ್ನೆಲ್ಲಾ ಮಹಾತ್ಮರಿಗೆ ವಿವರಿಸಿ ಅವರ ಅಭಿಪ್ರಾಯವನ್ನು ತಿಳಿದುಕೊಳ್ಳಲು ಈ ಮುಖಂಡರುಗಳು ಪ್ರಯಾಣ ಮಾಡಿರುತ್ತಾರೆ. ಇವರ ಪ್ರಯತ್ನವು ಯಶಸ್ವಿಯಾಗಲೆಂದು ಹಾರೈಸುತ್ತೇವೆ.

ಆಟೋಮ್ಯಾಟಿಕ್ ಅಲಾರಂ ಪಿಸ್ತೂಲು



ಉತ್ಕೃಷ್ಟ ಉಕ್ಕಿನ ತಯಾರಿಕೆ. ಕಳ್ಳರನ್ನೂ, ದರೋಡೆಕಾರರನ್ನೂ, ಕಾಡುಮೃಗಗಳನ್ನೂ ಹೆದರಿಸಿ ಓಡಿಸಲು ಉಪಯೋಗಿಸಬಹುದು. ಲೈಸನ್ಸ್ ತಗೆದುಕೊಳ್ಳಬೇಕಾಗಿಲ್ಲ. ಒಂದು ವರ್ಷದ ಗ್ಯಾರಂಟಿ. ನೂರು ಪೆಟ್ಟುಗಳಿಗೆ [illegible] ಕೂಡ ದೊರೆಯುವುದು.

ಬೆಲೆ (…) ರೂ 2-10
[illegible] 1-00
[illegible] 0-12

[illegible] Trading Co
Post Box No. 12201
Calcutta (S.I.)

ಸಾಧ್ವಿ

೨೮—೩—೩೮ ನೇ ಸೋಮವಾರ

ಜೈಲಿನ ಸುಧಾರಣೆ

ನಮ್ಮ ದೇಶದ ಜೈಲುಗಳ ಶೋಚನೀಯ ಪರಿಸ್ಥಿತಿಯನ್ನು ವರ್ಣಿಸುವ ಅನೇಕ ಲೇಖನಗಳು ಈಗಾಗಲೇ ಪ್ರಕಟವಾಗಿವೆ, ಇನ್ನೂ ಆಗುತ್ತಿವೆ. ಶ್ರೀಮಾನ್ ವೀರ ಕೇಸರಿಯವರು ಇದನ್ನು ಅನುಭವಪೂರ್ವಕವಾಗಿ ವಿಮರ್ಶಿಸುತ್ತಿದ್ದಾರೆ. ಶ್ರೀ ಸೂರ್ಯನಾರಾಯಣ ಪಂಡಿತರು ತಮ್ಮ ಅನುಭವಗಳನ್ನು ತಿಳಿಸುತ್ತಿದ್ದಾರೆ. ನಮ್ಮ ಸಂಸ್ಥಾನದ ಜೈಲುಗಳ ಸ್ಥಿತಿಯು ಸ್ವಲ್ಪವೂ ತೃಪ್ತಿಕರವಾಗಿಲ್ಲವೆಂದು ಇವುಗಳಿಂದ ವೇದ್ಯವಾಗುತ್ತದೆ.

ಖೈದಿಗಳನ್ನೂ ಸಹ ಮನುಷ್ಯರಂತೆ ಭಾವಿಸಿ, ಅವರ ನಡೆನುಡಿಗಳನ್ನು ಉತ್ತಮ ಪಡಿಸಿಕೊಳ್ಳಲು ಸಹಾಯ ಮಾಡಬೇಕೆಂಬುದೇ ಎಲ್ಲ ಮುಂದುವರಿದ ಜನಾಂಗಗಳ ಅಭಿಮತ. ಅದರಂತೆ ಪಾಶ್ಚಿಮಾತ್ಯ ದೇಶಗಳಲ್ಲಿ ಖೈದಿಗಳಿಗೆ ವಿಶೇಷ ರೀತಿಯ ಸೌಲಭ್ಯಗಳು ದೊರಕುತ್ತಿವೆ. ನಮ್ಮ ಭರತಖಂಡದಲ್ಲಿಯೂ ಕಾಂಗ್ರೆಸ್ ಮಂತ್ರಿ ಮಂಡಲಗಳಿರುವ ಕಡೆ ಅನೇಕ ಸುಧಾರಣೆಗಳು ಜಾರಿಗೆ ಬಂದಿವೆ. ಸಂಯುಕ್ತ ಪ್ರಾಂತವು ಎಲ್ಲವನ್ನೂ ಮೀರಿಸಿದೆ. ಜೈಲಿನಲ್ಲಿರುವ ಖೈದಿಗಳ ಜೀವನವು ತಕ್ಕಮಟ್ಟಿಗೆ ಸುಖಕರವಾಗಿ ಮಾಡಲ್ಪಟ್ಟು ಅವರು ದುಷ್ಟಮಾರ್ಗಗಳನ್ನು ಬಿಟ್ಟು ಉತ್ತಮ ಮಾರ್ಗಗಳಲ್ಲಿ ಹೋಗುವಂತೆ ಏರ್ಪಾಡುಗಳು ಮಾಡಲ್ಪಟ್ಟಿವೆ. ರಾಜಕೀಯ ಖೈದಿಗಳ ಪ್ರಶ್ನೆಯು ಎಲ್ಲ ಕಡೆಯಲ್ಲಿಯೂ ಮಾನ್ಯತೆಯನ್ನು ಪಡೆದಿದೆ.

ಇದು ಸುಧಾರಣೆಗಳ ಕಾಲ. ಹಿಂದೆ ರಾಜನ ಕಾಲದ ಪದ್ಧತಿಗಳು ಬದಲಾಯಿಸಿ ಆಧುನಿಕ ಕಾಲಕ್ಕೆ ತಕ್ಕಂತೆ ಏರ್ಪಾಡುಗಳು ಆಗುವ ಕಾಲ. ಆದ್ದರಿಂದ ನಮ್ಮ ಸೀಮೆಯಲ್ಲಿಯೂ ಜೈಲುಗಳ ಸುಧಾರಣೆಗೆ ಸರ್ಕಾರದವರು ಉಚಿತವಾದ ಕ್ರಮಗಳನ್ನು ಕೂಡಲೇ ಕೈಕೊಳ್ಳುವರೆಂದು ನಂಬಿದ್ದೇವೆ.

ಕಂದಾಯ ನಿರಾಕರಣೆ

ಬೆಂಗಳೂರಿನ ಒಬ್ಬ ಮಹಿಳೆಯರು ಪೌರಸಭಾಧಿಕಾರಿಗಳಿಗೆ ಒಂದು ಪತ್ರ ಬರೆದು, ಪೌರಸಭೆಯವರು ತಮ್ಮ ಕರ್ತವ್ಯವನ್ನು ನೆರವೇರಿಸದಿದ್ದರೆ, ತಾವು ಏಪ್ರಿಲ್ ಹತ್ತನೇ ತಾರೀಖಿನಿಂದ ಮನೆ ಮನೆಗೂ ಹೋಗಿ ಕಂದಾಯ ಕೊಡಬೇಡಿ ಎಂದು ಬೋಧಿಸಬೇಕಾಗುತ್ತದೆಂದು ತಿಳಿಸಿದ್ದಾರೆ. ಇದು ಪತ್ರದ ವಿವರವನ್ನು ಬೇರೆ ಕಡೆ ಕೊಟ್ಟಿದ್ದೇವೆ.

ಇದು ನಮ್ಮ ದೇಶದಲ್ಲಿ ಒಂದು ಹೊಸ ಪ್ರಸಂಗ. ಇದರ ತತ್ವವನ್ನು ವಿಚಾರ ಮಾಡುವುದು ಅಗತ್ಯವಾಗಿದೆ. ಕಂದಾಯ ನಿರಾಕರಣೆಯ ಮಾತೆತ್ತಿದರೆ ಗಾಬರಿ ಬೀಳುವ ಅನೇಕ ಅಧಿಕಾರಿಗಳೂ ಮಹಾಜನರೂ ನಮ್ಮಲ್ಲಿದ್ದಾರೆ. ಅವರ ಅದು ಅಷ್ಟೊಂದು ಪ್ರಮಾದಕರವಾದ ಅಂಶವಲ್ಲ. ರಾಜನೀತಿ ಶಾಸ್ತ್ರದಲ್ಲಿ ಕಂದಾಯ ಅಥವಾ ತೆರಿಗೆಯು ಒಬ್ಬ ಮನುಷ್ಯನು ಪಡೆಯುವ ಸೌಲಭ್ಯಗಳಿಗಾಗಿ ಸರ್ಕಾರಕ್ಕೆ ಕೊಡುವ ಪ್ರತಿಫಲವೆಂಬುದನ್ನು ಸ್ಪಷ್ಟವಾಗಿ ಅಂಗೀಕರಿಸಿದೆ. ಈ ಸೌಲಭ್ಯಗಳಲ್ಲಿ ಏನಾದರೂ ಕೊರತೆ ಉಂಟಾದರೆ ಪೂರ್ತಿಯಾಗಲಾಗಲಿ ಅಥವ ಭಾಗವಾಗಿಯಾಗಲಿ ಕಂದಾಯ ಕೊಡಲು ನಿರಾಕರಿಸುವುದು ಅವನ ಕಾನೂನುಬದ್ಧವಾದ ಹಕ್ಕು. ಇವನ್ನೇ ದಿವಂಗತ ಗೋಪಾಲ ಕೃಷ್ಣ ಗೋಖಲೆಯವರಂತಹ ಮಿತವಾದಿಗಳೂ ಸಹ ಪ್ರಜೆಯ ನ್ಯಾಯಸಮ್ಮತವಾದ ಹಕ್ಕೆಂದು ಹೇಳಿದ್ದಾರೆ. ಆದ್ದರಿಂದ ಈ ವಿಷಯದಲ್ಲಿ ಗಾಬರಿಪಡಬೇಕಾದ ಪ್ರಮೇಯವೇನೂ ಇಲ್ಲ.

ಆದರೆ ಕಂದಾಯ ನಿರಾಕರಣೆಯು ಅಷ್ಟು ಸುಲಭವಲ್ಲ. ಅದರಲ್ಲಿ ಬಹಳ ಜವಾಬ್ದಾರಿಯು ಸೇರಿದೆ. ಅನೇಕ ಅಪಾಯಗಳೂ ಬರುತ್ತವೆ. ಇವಕ್ಕೆಲ್ಲಾ ಸಿದ್ಧರಾಗಿ ಅವಶ್ಯಕಬಿದ್ದರೆ ಸರ್ವಸ್ವವನ್ನೂ ತ್ಯಾಗಮಾಡಲು ತಯಾರಾಗಿರುವವರೇ ಅದಕ್ಕೆ ಕೈ ಹಚ್ಚಬೇಕು.

ಒಟ್ಟಿನಲ್ಲಿ ಈ ಪ್ರಸಂಗದಿಂದ ಪೌರಸಭೆಯವರ ಅನಾದರಣೆಯು ಎಷ್ಟುಮಟ್ಟಿಗಿದೆ ಯೆಂಬುದು ವ್ಯಕ್ತವಾಗುತ್ತದೆ. ಈ ಸಂದರ್ಭದಲ್ಲಿ ಮೇಲ್ಕಂಡ ಮಹಿಳೆಯರು ತೋರ್ಪಡಿಸಿದ ಧೈರ್ಯವು ಅಪೂರ್ವವಾದುದು. ಇದರಿಂದ ಪೌರಸಭಿಕರ ಕೊರತೆಗಳನ್ನು ಪರಿಹರಿಸಲು ಅಧಿಕಾರಿಗಳು ಕೂಡಲೇ ಗಮನ ಕೊಡುವರೆಂದು ನಂಬೋಣ.

ವಿಶ್ವವಿದ್ಯಾಲಯದ ಸೆನೆಟ್

ಮೊನ್ನೆ ದಿನ ಮೈಸೂರಿನಲ್ಲಿ ವಿಶ್ವವಿದ್ಯಾಲಯದ ಸೆನೆಟ್ ಸಭೆ ನಡೆಯಿತು. ಅನೇಕ ಸದಸ್ಯರು ಬಂದಿದ್ದರು. ವಿಶ್ವವಿದ್ಯಾಲಯದ ಆದಾಯ ವೆಚ್ಚದ ಪಟ್ಟಿಯು ಚರ್ಚಿತವಾಗಿ ಅಂಗೀಕರಿಸಲ್ಪಟ್ಟಿತು. ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಇತರ ಅನೇಕ ಉಪಯುಕ್ತ ವಿಷಯಗಳೂ ಚರ್ಚೆಯಾಗಿ ತೀರ್ಮಾನವಾದವು

ಭಗತ ಸಿಂಗರ ಸಂದೇಶ

ಜಾಟ್ಲಿವಾಲರ ಭಾಷಣ

ಕಳೆದ ೨೩ ನೇ ತಾ॥ ಭರತಖಂಡದ ಅನೇಕ ಭಾಗಗಳಲ್ಲಿ ಭಗತ್ ಸಿಂಗರ ದಿನಾಚರಣೆಯು ನಡೆಸಲ್ಪಟ್ಟಿತು. ಸಾದರ್ ಸಮುದ್ರ ತೀರದಲ್ಲಿ ಶ್ರೀ ಎಸ್. ಎಸ್. ಜಾಟ್ಲಿವಾಲಾರವರ ಅಧ್ಯಕ್ಷತೆಯಲ್ಲಿ ಭಾರಿ ಸಭೆ ಸೇರಿತ್ತು. ಅನೇಕರು ಭಾಷಣ ಮಾಡಿದರು. ಜಾಟ್ಲಿವಾಲರವರು ಈ ಕೆಳಗೆ ಕಂಡಂತೆ ಹೇಳಿದರು :—

ಭಾರತೀಯರಿಗೂ ಆತ್ಮಗೌರವ, ಸಂಸ್ಕೃತಿ ಮತ್ತು ಶೀಲಸ್ವಭಾವಗಳಿರುವುವೆಂದು ಯಾವ ಮಹನೀಯನು ತೋರಿಸಿದ್ದನೋ ಆತನ ಸ್ಮರಣೆಯನ್ನು ನೆನೆಯುವುದಕ್ಕಾಗಿ ಈ ದಿನ ಭಾರತೀಯರೆಲ್ಲರೂ ಸೇರುತ್ತಾರೆ. ಭಗತಸಿಂಗನ ನೆನಪು ಭರತಖಂಡವನ್ನೆಲ್ಲಾ ಆಮೂಲಾಗ್ರವಾಗಿ ನವಚೈತನ್ಯದಿಂದ ತುಂಬಿ ತುಳುಕಾಡಿಸುತ್ತಿದೆ. ಭಗತಸಿಂಗ್ ಮತ್ತು ಅವರ ಅನುಯಾಯಿಗಳ ಮಹಾ ತ್ಯಾಗದಿಂದ ರಾಜಕೀಯ ಖೈದಿಗಳ ಸ್ಥಿತಿಯು ಬಹಳ ಮಟ್ಟಿಗೆ ಪರಿಷ್ಕಾರ ಪಡಿಸಲ್ಪಟ್ಟಿತು. ಭಗತ್‌ಸಿಂಗರು ಭಾರತೀಯ ತರುಣರ ಚಳುವಳಿಯ ಪ್ರಮುಖ ನಾಯಕರು. ಸ್ವಾತಂತ್ರ್ಯವು ನಮ್ಮ ಜನ್ಮಸಿದ್ಧ ಹಕ್ಕೆಂದು ಅವರು ಬೋಧಿಸಿದ್ದರು. ದೇಶದಲ್ಲಿ ಎರಡು ಪಂಗಡಗಳು ಮಾತ್ರ ಇವೆ. ಒಂದು ದೇಶಭಕ್ತರ ಗುಂಪು; ಮತ್ತೊಂದು ದೇಶದ್ರೋಹಿಗಳ ಗುಂಪು. ಹಿಂಸೆ ಮತ್ತು ಅಹಿಂಸೆಗಳ ಅಂತರವನ್ನು ಸಿಂಗರು ಬಹಳ ಚೆನ್ನಾಗಿ ತಿಳಿಸಿದರು. ಲಾಠಿಗಳ ಸುರಿಮಳೆಗೆ ಸಿಕ್ಕಿದಾಗಲೂ ಉದ್ರೇಕಗೊಳ್ಳಬಾರದೆಂಬ ಅಮೂಲ್ಯವಾದ ಪಾಠವನ್ನು ಅವರು ಕಲಿಸಿದ್ದರು. ಭಗತ್ ಸಿಂಗರ ಅಭಿಪ್ರಾಯದಲ್ಲಿ ಭರತಖಂಡವೆಲ್ಲಾ ಒಂದೇ. ಅದನ್ನು ಭಿನ್ನಭಿನ್ನವಾಗಿ ಒಡೆಯಲು ಸಾಧ್ಯವಿಲ್ಲ. ಕ್ಷೇಮೋಪಾಯದ ಅಧಿಕಾರಿಗಳ ಮಾತಿಗೆ ಬೆರಗಾಗಬಾರದು. ಸಮತಾವಾದಿಗಳು ಹಿಂಸಾವಾದಿಗಳಲ್ಲ. ಈಗಿನ ಪರಿಸ್ಥಿತಿಯಲ್ಲಿ ಯಾವ ತಿಳುವಳಿಕಸ್ಥನೂ ಹಿಂಸಾ ಮಾರ್ಗಕ್ಕೆ ಕೈಹಾಕುವುದಿಲ್ಲ. ಆಂಗ್ಲೇಯ ವ್ಯಕ್ತಿಗಳಲ್ಲಿ ಯಾರೂ ದೋಷವನ್ನು ಎಣಿಸುತ್ತಿಲ್ಲ. ಅವರ ರಾಜ್ಯಭಾರ ಪದ್ಧತಿಯನ್ನು ಸಮತಾವಾದಿಗಳೂ ಕಮ್ಯೂನಿಸ್ಟರೂ ಖಂಡಿಸುತ್ತಾರೆ.

ಆವಿಶ್ವಾಸ ಠರಾವು.

ಮೈಸೂರು ಸಿಟಿ ಕೋ ಆಪರೇಟಿವ್ ಸೊಸೈಟಿಯ ಅಧ್ಯಕ್ಷರಾದ ಮ॥ ಲಕ್ಷ್ಮೀಪತಿ ಸಿ. ನರಸಿಂಹಯ್ಯನವರ ಮೇಲೆ ಅಲ್ಲಿನ ಡೈರೆಕ್ಟರುಗಳು ಕಳೆದ ಶುಕ್ರವಾರ ಅವಿಶ್ವಾಸದ ಠರಾವನ್ನು ಮಂಜೂರು ಮಾಡಿ ಅವರನ್ನು ಅಧ್ಯಕ್ಷತನದಿಂದ ತೆಗೆದರೆಂದು ಗೊತ್ತಾಗಿದೆ.

ಸೊಸೈಟಿಯಲ್ಲಿ ಕಾಂಗ್ರೆಸ್ ಕಾರ್ಯಕ್ರಮಗಳು ನಡೆಯುತ್ತವೆಯೋ ಎಂಬ ವಿಚಾರವಾಗಿ ಅವರು ನಡೆಸಿದ ವಿಚಾರದ ಪರಿಣಾಮವಾಗಿ ಇದು ಆಯಿತೆಂದು ಹೇಳಲಾಗಿದೆ.

ಶ್ರೀ ಕೃಷ್ಣ ಚರಿತ್ರೆ

ಇದು ಶ್ರೀ॥ ಬಂಕಿಂ ಚಂದ್ರ ಚಟರ್ಜಿಯವರ ಬಂಗಾಳಿಯಿಂದ ಪರಿವರ್ತಿಸಿದ ಶ್ರೀ ಕೃಷ್ಣಜೀವನಿಯ ಸಂಶೋಧನೆಯಿಂದ ಕೂಡಿದ ಸಮಾಲೋಚನೆ. ಪರಿವರ್ತಕರು ಮ॥ ಆರ್. ವ್ಯಾಸರಾಯರು. ಬೆಂಗಳೂರು ಪ್ರೆಸ್ಸಿನಲ್ಲಿ ಬಹಳ ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಸುಮಾರು 450 ಪುಟಗಳಿವೆ. ಬೆಲೆ ಮೂರು ರೂಪಾಯಿ.

ಇದರ ಪ್ರಥಮ ಮುದ್ರಣವು ಶ್ರೀ॥ ಎಸ್. ಶ್ರೀಕಂಠಯ್ಯನವರು 'ಅಕ್ಷರಾಂಜಲಿ' ಮಾಸಪತ್ರಿಕೆಯ ಮೂಲಕವೂ ದ್ವಿತೀಯ ಮುದ್ರಣವು ಮ॥ ಎಸ್. ಶ್ರೀಕಂಠಯ್ಯನವರಿಂದಲೇ ಪ್ರತ್ಯೇಕ ಪುಸ್ತಕವಾಗಿಯೂ ಪ್ರಕಾಶವಾಗಿ ಈಗ ಈ ಮೂರನೆಯ ಮುದ್ರಣವು ಪ್ರಕಟಿತವಾಗಿದೆ.

ಶ್ರೀ ಕೃಷ್ಣನನ್ನು ಪರಮಾತ್ಮನ ಅವತಾರವೆಂದು ನಂಬುವವರು ನಮ್ಮ ದೇಶದಲ್ಲಿ ಅನೇಕರಿರುವರು. ಆದರೆ ಶ್ರೀ ಕೃಷ್ಣನ ಜೀವನದಲ್ಲಿ ಅನೇಕವಾದ ಮಾನುಷಿಕ ಅಥವಾ ಅಮಾನುಷಿಕ ಕ್ರಿಯೆಗಳನ್ನು ಆರೋಪಣೆ ಮಾಡಿ ವಿಧವಿಧವಾಗಿ ಉಪಾಸನೆ ಮಾಡುವವರಿದ್ದಾರೆ. ವಿಶುದ್ಧವೂ, ಪವಿತ್ರವೂ, ಮಹತ್ತರವೂ ಆದ, ಯಾವ ಪಾಪಗಳ ಸೋಂಕೂ ಇಲ್ಲದ ಈ ಆದರ್ಶ ಚರಿತ್ರೆಯನ್ನು ಕನ್ನಡಿಗರೆಲ್ಲರೂ ತಪ್ಪದೆ ಪಠಿಸಬೇಕೆಂದು ನಾವು ಸೂಚಿಸುವೆವು.

ಸಂಗೀತ ಸಮ್ಮೇಳನ

ಗಾನ ವಿನೋದ ಬಿಡಾರಂ ಕೃಷ್ಣಪ್ಪನವರ ಶ್ರೀ ಪ್ರಸನ್ನ ಸೀತಾರಾಮ ಮಂದಿರದಲ್ಲಿ 10—4—1938 ರ ಆಗಾಯಿತು. ನಾಲ್ಕು ದಿನಗಳು ನಡೆಯಲೇರ್ಪಟ್ಟಿರುವ ಮೈಸೂರು ಸಂಗೀತ ಸಮ್ಮೇಳನದಲ್ಲಿ ಸಂಗೀತ ವಿದ್ಯಾರ್ಥಿಗಳಿಗೆ ಸ್ಪರ್ಧಾ ಪರೀಕ್ಷೆಗಳನ್ನು ನಡೆಸಲಾಗುವುದು. ಈ ಸ್ಪರ್ಧೆಗಳಲ್ಲಿ ಮಹಿಳೆಯರೂ ಭಾಗವಹಿಸಬಹುದು. ಸ್ಪರ್ಧೆಗಳು ಪ್ರಾಥಮಿಕ, ಮಾಧ್ಯಮಿಕ, ಪ್ರೌಢಗಳೆಂದು ವಿಭಾಗಿಸಲ್ಪಟ್ಟಿವೆ. ವಿದ್ವನ್ಮಣಿಗಳ ತೀರ್ಮಾನವನ್ನನುಸರಿಸಿ ಯೋಗ್ಯತಾ ಪತ್ರಿಕೆಗಳನ್ನು ಕೊಡಲಾಗುವುದು. ಮಹಿಳೆಯರು 2 ರೂಪಾಯಿ ಪ್ರವೇಶಧನವನ್ನೂ ಇತರರು 3 ರೂಪಾಯಿಗಳ ಪ್ರವೇಶಧನವನ್ನೂ ಕೊಡಬೇಕು. ಈ ರೀತಿ ಸ್ಪರ್ಧಾ ಪರೀಕ್ಷೆಗಳಲ್ಲಿ ಸೇರಿರುವವರಿಗೆ ಸಂಗೀತ ಸಮ್ಮೇಳನ ನಡೆಯುವವರೆಗೆ ಶ್ರೀ ರಾಮೋತ್ಸವದ ಸಂಗೀತ ಕಛೇರಿಗಳಲ್ಲಿ ಉಚಿತವಾದ ಪ್ರವೇಶವುಂಟು. ಅಪೇಕ್ಷಕರು 5—4—1938 ರ ಒಳಗಾಗಿ ಕಾರ್ಯದರ್ಶಿಗಳಿಗೆ ಬರೆದುಕೊಳ್ಳಬೇಕು. ಕಾರ್ಯಕಾರಿ ಮಂಡಲಿಯವರ ನಿಯಮಗಳಿಗೆ ಎಲ್ಲರೂ ಬದ್ಧರಾಗಬೇಕು. ಮಂಡಲಿಯವರು ಈ ಸ್ಪರ್ಧೆಗೆ ನಿಲ್ಲುವವರನ್ನು ಕಾರಣವನ್ನು ತಿಳಿಸದೆಯೇ ನಿರಾಕರಿಸುವ ಅಧಿಕಾರವನ್ನು ಇಟ್ಟುಕೊಂಡಿದ್ದಾರೆ—ಎಂಬುದಾಗಿ ಕಾರ್ಯದರ್ಶಿಗಳು ತಿಳಿಸಿದ್ದಾರೆ.

ಶಿವಪುರದ ರಾಷ್ಟ್ರಕೂಟ

ಏಪ್ರಿಲ್ ೧೦ ಮತ್ತು ೧೧ ನೇ ತಾರೀಖುಗಳಲ್ಲಿ ಶಿವಪುರದಲ್ಲಿ ನಡೆಯುವ ಮೈಸೂರು ಕಾಂಗ್ರೆಸ್ ಕಾನ್ಫರೆನ್ಸಿಗೆ ಬೇಕಾದ ಏರ್ಪಾಟುಗಳೆಲ್ಲವೂ ನಡೆಯುತ್ತಿವೆ.

ಬಹಿರಂಗ ಅಧಿವೇಶನವನ್ನು ನಡೆಸಲು ಸ್ಥಳವನ್ನು ನಿರ್ಧರಿಸಲಾಯಿತು. ಮದ್ದೂರು ಶೈರ್ಲೈ ಸ್ಟೇಷನ್ ಬಳಿಯಲ್ಲಿಯೇ ವಿಶಾಲವಾದ ಸ್ಥಳವನ್ನು ಗೊತ್ತುಮಾಡಲಾಯಿತು. ಅದರ ಬಳಿಯಲ್ಲಿಯೇ ಕೆಲವು ಮನೆಗಳಲ್ಲಿ ಪ್ರತಿನಿಧಿಗಳಿಗೂ, ಸ್ವಾಗತ ಸಮಿತಿ ಸದಸ್ಯರುಗಳಿಗೂ ವಸತಿಗಳನ್ನು ಕಲ್ಪಿಸಿಕೊಡಲಾಗುತ್ತದೆ.

ನೀರು ಮತ್ತು ದೀಪದ ಸರಬರಾಯಿಗೂ ಮತ್ತು ಊಟದ ಸೌಕರ್ಯಕ್ಕೂ ಏರ್ಪಾಡುಗಳಾಗುತ್ತಿವೆ.

ಹರಿಕಥಾ ಕಾಲಕ್ಷೇಪ, ಖಾದಿ ಪ್ರಚಾರ ಉಪನ್ಯಾಸಗಳು, ಭಜನೆ, ಸಂಗೀತಗಳಿಗೂ ತಕ್ಕ ಏರ್ಪಾಟುಗಳಾಗುತ್ತಿವೆ.

ಪತ್ರಿಕಾ ಪ್ರತಿನಿಧಿಗಳಿಗೆ ವಿಶೇಷ ಏರ್ಪಾಟುಗಳಿರುತ್ತವೆ.

ಅಧ್ಯಕ್ಷರ ಮೆರವಣಿಗೆಯನ್ನು ಹಂಗಾಮಿಯಾಗಿ ೧೦ ನೇ ತಾರೀಖಿಗೆ ನಿರ್ಧರಿಸಲಾಗಿದೆ. ಉತ್ತಮವಾದ ನಾಲ್ಕು ಜೊತೆ ಎತ್ತುಗಳಿಂದ ಎಳೆಯಲ್ಪಡುವ ರಥದಲ್ಲಿ ಅಧ್ಯಕ್ಷರ ಮೆರವಣಿಗೆ ನಡೆಯುತ್ತದೆ.

ವೈದ್ಯ ಸಹಾಯವನ್ನು ಕೊಡಲಾಗುತ್ತದೆ. ಲೌಡ್ ಸ್ಪೀಕರ್ ಏರ್ಪಾಟುಗಳನ್ನು ಮಾಡಲಾಗುತ್ತದೆ.

ನೈರ್ಮಲ್ಯದ ಏರ್ಪಾಡುಗಳನ್ನು ನೋಡಿಕೊಳ್ಳುವುದಕ್ಕಾಗಿ ಶ್ರೀ ಹೆಚ್. ಸಿ. ದಾಸಪ್ಪನವರ ನಾಯಕತ್ವದಲ್ಲಿ ಸ್ವಯಂಸೇವಕ ದಳವನ್ನೇರ್ಪಡಿಸಲಾಗುತ್ತಿದೆ.

ಮಹಿಳೆಯರಿಗೂ ಪ್ರತ್ಯೇಕ ಏರ್ಪಾಟುಗಳಿರುತ್ತವೆ.

ಗೌರವಾರ್ಥ

ಎಲ್ಲಾ ಹಿಂದೂ ಹೆಸರುಗಳ ಹಿಂದೆಯೂ ಗೌರವಾರ್ಥವಾಗಿ 'ಶ್ರೀ' ಎಂಬುದನ್ನು ಮಾತ್ರ ಉಪಯೋಗಿಸಬೇಕೆಂದೂ ಮಿ॥ ದಾ॥ ಶ್ರೀ, ಅವರಗಳ್ ಗಾರು, ವಾರು ಮುಂತಾದುವನ್ನು ಉಪಯೋಗಿಸಬೇಕಾಗಿಲ್ಲವೆಂದೂ ಒಂದು ಸೂಚನೆಯು ಮದರಾಸ್ ಸರ್ಕಾರಕ್ಕೆ ಬಂದಿದೆ. ಅದನ್ನು ಸರ್ಕಾರವು ಪರಿಶೀಲಿಸುತ್ತಿದೆ.

ಬಾಟ್ಲಿವಾಲಾರವರ ಬಿಡುಗಡೆ

ರಾಜದ್ರೋಹದ ಆಪಾದನೆಗಾಗಿ ೬ ತಿಂಗಳ ಸಾದಾ ಶಿಕ್ಷೆಗೆ ಗುರಿಪಡಿಸಲ್ಪಟ್ಟ ಬಾಟ್ಲಿವಾಲಾರವರನ್ನು ಮದ್ರಾಸ್ ಸರ್ಕಾರದವರು ಬಿಡುಗಡೆ ಮಾಡಿದ್ದಾರೆ. ಮುಂಬೈ ಸೋಷಲಿಸ್ಟ್ ಮುಖಂಡರಾದ ಶ್ರೀ ಬಾಟ್ಲಿವಾಲಾರವರು ಈಗ ಅನುಭವಿಸಿದ ಶಿಕ್ಷೆಯನ್ನು ಬಿಟ್ಟು ಉಳಿದ ಶಿಕ್ಷೆಯನ್ನು ಅನುಭವಿಸಬೇಕಾಗಿಲ್ಲವೆಂದು ಸರ್ಕಾರವು ತೀರ್ಮಾನಿಸಿದೆ.

ಆಸ್ಟ್ರಿಯದಲ್ಲಿ ಯೆಹೂದ್ಯರ ಗತಿ

ಆಸ್ಟ್ರಿಯದಲ್ಲಿ ನಾಜಿ ಪ್ರಭುತ್ವವು ಸಾರ್ವಜನಿಕ ಜೀವನವನ್ನೆಲ್ಲ ತನ್ನ ಕೈವಶಮಾಡಿಕೊಳ್ಳುತ್ತಿದೆ. ಸರ್ಕಾರದ ಪ್ರತಿ ಶಾಖೆಯಲ್ಲೂ ಅನುಮಾನವಿದ್ದವರನ್ನೆಲ್ಲ ತೆಗೆದುಹಾಕಲಾಯಿತು. ಪೋಲೀಸ್ ಶಾಖೆಯಲ್ಲಂತೂ ಅನೇಕರನ್ನು ಹಿಡಿಸಿದರು. ವಿಯನ್ನಾ ನಗರದಲ್ಲಿ ಆಸ್ಟ್ರಿಯಾ ಪೋಲಿಸಿನವನೊಬ್ಬನೂ ಕಾಣಿಸುತ್ತಿಲ್ಲ. ಎಲ್ಲ ಸ್ಥಾನಗಳನ್ನೂ ನಾಜಿಗಳು ಆಕ್ರಮಿಸಿದ್ದಾರೆ. ಪ್ರಭುತ್ವವಿರೋಧಿಗಳಾದ ಪ್ರಮುಖರನೇಕರು ಆತ್ಮಹತ್ಯಮಾಡಿಕೊಂಡರು. ವಿಯನ್ನಾದಲ್ಲಿ ೨ ಲಕ್ಷ ಯೆಹೂದ್ಯರಿದ್ದಾರೆ. ಅವರ ಗತಿಯಂತೂ ಹೇಳತೀರದು. ಅವರಿಗೆ ಸೇರಿದ್ದ ಅಂಗಡಿಗಳಲ್ಲಿ ಶೇಕಡ ೯೦ ರಷ್ಟನ್ನು ನಾಜಿಗಳು ವಶಪಡಿಸಿಕೊಂಡಿದ್ದಾರೆ. ಅವರಿಗೆ ಜೀವನಕ್ಕೇ ಗತಿಯಿಲ್ಲವಾಗಿದೆ. ದೇಶವನ್ನು ಬಿಟ್ಟು ಹೋಗಲು ಅಶಕ್ತರಾಗಿದ್ದಾರೆ. ಜರ್ಮನರು ಅವರನ್ನು ದನಗಳಿಗಿಂತ ಕಡೆಯಾಗಿ ಕಾಣುತ್ತಿದ್ದಾರೆ. ಯೆಹೂದ್ಯರು ದಿಕ್ಕುಕಾಣದೆ ಆತ್ಮಹತ್ಯೆಗಳಲ್ಲಿ ತೊಡಗಿದ್ದಾರೆ.

ವಿಶ್ವ ಯೆಹೂದ್ಯ ಕಾಂಗ್ರೆಸ್ ಸಂಸ್ಥೆಯವರು ಒಂದು ಪ್ರಕಟಣೆ ಹೊರಡಿಸಿ, ಆಸ್ಟ್ರಿಯಾದಲ್ಲಿ ಯೆಹೂದ್ಯರ ವಿಚಾರದಲ್ಲಿ ತೋರಿಸುತ್ತಿರುವ ಕ್ರೂರ ನೀತಿಯನ್ನು ಪ್ರತಿಭಟಿಸಿದ್ದಾರೆ. ಜರ್ಮನಿಯಲ್ಲಿ ಯೆಹೂದ್ಯರನ್ನು ಹುಟ್ಟಿ ಹಾಕಲು ಅನುಸರಿಸುತ್ತಿರುವ ನೀತಿಗಿಂತ ಆಸ್ಟ್ರಿಯಾದಲ್ಲಿ ಯೆಹೂದ್ಯರ ಮೇಲೆ ಕೈಕೊಂಡಿರುವ ಕಾರ್ಯಕ್ರಮಗಳು ಕ್ರೂರವಾದುವೆಂದು ವರ್ಣಿಸಲಾಗಿದೆ.

ಜರ್ಮನಿ— ಆಸ್ಟ್ರಿಯಾ ಒಂದಾದ ಮೇಲೆ ವಿಯನ್ನಾ ನಗರದಲ್ಲಿ ೧,೭೦೦ ಮಂದಿ ಆತ್ಮಹತ್ಯ ಮಾಡಿಕೊಂಡರೆಂದೂ, ಇವರಲ್ಲಿ ಬಹು ಮಂದಿ ಯೆಹೂದ್ಯರೆಂದೂ ನಿಜ ಸ್ಥಿತಿಯರಿತ ಕಡೆಗಳಿಂದ ತಿಳಿದು ಬರುತ್ತದೆ.

ಕಳೆದ ನಾಲ್ಕು ದಿನಗಳಲ್ಲಿ ಪ್ರತಿ ದಿನ ಸರಾಸರಿ ೧೪೦ ಶವಗಳನ್ನು ಯೆಹೂದ್ಯರ ಸ್ಮಶಾನದಲ್ಲಿ ಹೂಳಲಾಯಿತೆಂದು ತಿಳಿಸಲ್ಪಟ್ಟಿದೆ. ನಷ್ಟಗರಿಗಳು ಸಹ ಬಹಳವಾಗಿವೆ.

ನೀರು ಸರಬರಾಜು

ಮೈಸೂರು ಪೌರ ಸಭಾಧ್ಯಕ್ಷರು ಪ್ರಜೆಗಳಿಗೆ ತಿಳಿಸುವುದೇನೆಂದರೆ.—

"ಇನ್ನು ಮುಂದೆ ನೀರಿನ ವ್ಯಯವು ಕಮ್ಮಿಯಾಗುವವರೆಗೆ ಮೈಸೂರು ಸಿಟಿಯಲ್ಲಿ ಪ್ರತಿ ನಿತ್ಯವೂ ರಾತ್ರಿ 11 ಘಂಟೆಯಿಂದ ಬೆಳಗಿನ 6 ಘಂಟೆ ವರೆಗೆ ನೀರನ್ನು ನಿಲ್ಲಿಸಲಾಗುತ್ತೆ. ಎತ್ತರ ಪ್ರದೇಶ ಅಂದರೆ ಲಕ್ಷ್ಮೀಪುರ, ನರಸಿಂಹರಾಜಮೊಹಲ್ಲಾ, ಅಗ್ರಹಾರ ಮತ್ತು ಕೃಷ್ಣಮೂರ್ತಿ ಪುರಗಳಲ್ಲಿ ಹಗಲುಹೊತ್ತು ಕೂಡ ನಾಕಾವಸ್ಥೆ ನೀರಿನ ಸರಬರಾಯಿ ಆಗುವ ಭಂವವಿದೆ ... ಆ ಭಾಗದ ಜನಗಳು ... ನೀರನ್ನು ಮುಂಜಾಗ್ರತೆಯಿಂದ ... ಕೇಳಿಕೊಳ್ಳಲಾಗಿದೆ.

ಬೆಂಗಳೂರಿನಲ್ಲಿ ಕಂದಾಯ ನಿರಾಕರಣೆ.

ಪೌರಸಭೆಯ ಉದಾಸೀನತೆಗಾಗಿ

ಬೆಂಗಳೂರಿನ ಸ್ಟೀಲ್ ಕಂಪನಿ ಪ್ರೊಪ್ರೈಟರಾದ ಶ್ರೀ॥ ಹೆಚ್. ಸಿ. ಸೂರ್ಯನಾರಾಯಣರಾಯರು ಬೆಂಗಳೂರು ಸಿಟಿ ಮುನಿಸಿಪಲ್ ಕಮೀಷನರ್‌ರವರಿಗೆ ಈ ತಿಂಗಳು ೨೦ನೇ ತಾರೀಖಿನಲ್ಲಿ ಕೆಳಗೆ ಕಂಡಂತೆ ಒಂದು ರಿಜಿಸ್ಟರ್ಡ್ ಕಾಗದವನ್ನು ಕಳುಹಿಸಿದ್ದಾರೆ. ಇದು ಶೇಷಾದ್ರಿಪುರಂ ಲಿಂಕ್ ರೋಡಿನ ಹೊಸ ಎಕ್ಸ್‌ಟೆನ್ಷನ್ನಿಗೆ ಸಂಬಂಧಪಟ್ಟದ್ದು :—

ಈ ಸೈಟುಗಳನ್ನು ಮುನಿಸಿಪಾಲಿಟಿಯವರು ೧೯೩೬ ನೇ ಜೂನ್ ಮೊದಲನೆಯ ವಾರದಲ್ಲಿ ಹರಾಜುಮಾಡಿದರು. ರಸ್ತೆಗಳನ್ನು ಮಾಡದೆ ಡ್ರೈನುಗಳನ್ನು ಹಾಕಿಸದೆ ವೈರ್ ಲೈನುಗಳನ್ನು ಏರ್ಪಡಿಸದೆ ಸ್ಟ್ರೀಟ್ ಮಾಲೀಕರಿಗೆ ಕಟ್ಟಡಗಳನ್ನು ಕಟ್ಟಿ ಎಂದು ಮುನಿಸಿಪಾಲಿಟಿಯವರು ನಿರ್ಬಂಧಿಸಿದುದು ತಪ್ಪು. ಯಾರೋ ಖಾಸಗಿ ಮನುಷ್ಯರು ತಮ್ಮ ಸ್ವಂತ ಭೂಮಿಯನ್ನು ಈ ರೀತಿಯಾಗಿ ಸೈಟುಗಳಾಗಿ ವಿಂಗಡಿಸಿ ಮಾರಿದ್ದರೆ ಮುನಿಸಿಪಾಲಿಟಿಯವರು ಆಕ್ಷೇಪಣೆ ಮಾಡುತ್ತಿದ್ದರು. ಆ ಸೈಟುಗಳಲ್ಲಿ ಈಗಾಗಲೇ ಅನೇಕ ಮನೆಗಳಾಗಿವೆ. ಆ ಮನೆಗಳ ಮೇಲೆ ತೆರಿಗೆ ವಸೂಲ್ ಮಾಡಲು ಮುನಿಸಿಪಾಲಿಟಿಗಳಿಗೆ ಹಕ್ಕಿಲ್ಲ. ಏಕೆಂದರೆ ಮುನಿಸಿಪಾಲಿಟಿಯವರು ರಸ್ತೆ ಡ್ರೈನು ಮುಂತಾದುವುಗಳ ಬಗ್ಗೆ ಅಲ್ಲಿ ತಮ್ಮ ಕರ್ತವ್ಯವನ್ನು ಮಾಡಿಲ್ಲ. ಕುಡಿಯುವ ನೀರು ನೈರ್ಮಲ್ಯರಕ್ಷೆ, ಡ್ರೈನೇಜ್ ಇವುಗಳಿಲ್ಲದೆ ಆ ಮನೆಗಳಲ್ಲಿ ವಾಸಮಾಡುವವರು ಖಾಯಿಲೆ ಕಸಾಲೆಗಳಿಗೆ ಗುರಿಯಾಗಿದ್ದಾರೆ. ಅಪಾಯಕರವಾದ ಅಂಟುರೋಗಗಳು ತಲೆಯೆತ್ತುವ ಚಿಹ್ನೆಯಿದೆ. ಇಂತಹ ಮುನಿಸಿಪಾಲಿಟಿಯಿರುವುದಕ್ಕಿಂತ ಇಲ್ಲದಿರುವುದೇ ಲೇಸು. ೨೧ ತಿಂಗಳ ನೋಟಾರಿತನ ಕಳೆದ ಮೇಲೆ ಮುನಿಸಿಪಾಲಿಟಿಯವರು ರಸ್ತೆ ಹಾಕಲು ಮೊದಲಿಟ್ಟಿರುವುದು ಅಂತಹ ದೊಡ್ಡ ಕೆಲಸವಲ್ಲ. ಡ್ರೈನುಗಳಿಲ್ಲದೆ ರಸ್ತೆ ಹಾಕಿ ಪ್ರಯೋಜನವೇನು? ಡ್ರೈನುಗಳು, ವೈರು, ಇವುಗಳಿಗಾಗಿ ಪುನಃ ರಸ್ತೆಯನ್ನು ಕಡಿಯಬೇಕಾಗುತ್ತದೆ. ಡ್ರೈನು ಮತ್ತು ಕುಡಿಯುವ ನೀರಿನ ಪ್ರಶ್ನೆಯು ರಸ್ತೆಗಿಂತಲೂ ಮುಖ್ಯವಾದುದು.

ಮುನಿಸಿಪಾಲಿಟಿಯವರೂ ಈ ಡಿವಿಜನ್ನಿನಿಂದ ಚುನಾಯಿತರಾದ ಕೌನ್ಸಿಲ್ಲರೂ ತಮ್ಮ ಕರ್ತವ್ಯವನ್ನು ಮಾಡಿಲ್ಲ. ದಿವಾನರವರಿಗೂ ನಾನು ಅರ್ಜಿ ಹಾಕಿದೆ. ಇನ್ನೂ ಫಲವಾಗಿಲ್ಲ.

ಇನ್ನು ನಾನು ಮತ್ತೊಂದು ಕೆಲಸ ಮಾಡಬೇಕಾಗಿದೆ. ಏಪ್ರಿಲ್ ೧೦ ನೇ ತಾರೀಖಿನಿಂದ ಮನೆಮನೆಗೂ ಹೋಗಿ ಕಂದಾಯ ಕೊಡಬೇಡಿ ಎಂದು ಬೋಧಿಸಬೇಕಾಗುತ್ತದೆ. ಅದಕ್ಕಾಗಿ ಒಂದು ಪ್ರಚಾರ ವನ್ನೇ ಮಾಡುತ್ತೇನೆ.

ಪಾಟಿಯಾಲಾ ಮಹಾರಾಜರ ಮರಣ

ಪಾಟಿಯಾಲಾ ಮಹಾರಾಜರಾದ ಸರ್ ಭೂಪೇಂದ್ರಸಿಂಗ್ ಮೊಹೀಂದರ್ ಬಹದ್ದೂರ್ ಯವರು ಕಳೆದ ಬುಧವಾರ ಸ್ವರ್ಗಸ್ಥರಾದರು. ಇವರು ೧೮೯೧ ರಲ್ಲಿ ಜನ್ಮ ತಾಳಿದರು. ೯—೧೧—೧೯೧೦ ರಲ್ಲಿ ಸಿಂಹಾಸನವೇರಿದರು. ಇವರಿಗೆ ೧೯ ಕುಶಾಲು ತೋಪುಗಳ ಶಾಶ್ವತ ಗೌರವವಿತ್ತು. ೧೯೧೮ ರಲ್ಲಿ ನಡೆದ ಇಂಪೀರಿಯಲ್ ವಾರ್ ಕ್ಯಾಬಿನೆಟ್‌ನಲ್ಲಿ ಭಾರತದ ಸಂಸ್ಥಾನಾಧೀಶರ ಪ್ರತಿನಿಧಿಗಳಾಗಿ ಹೋಗಿದ್ದರು. "ಲೀಗ್ ಆಫ್ ನೇಷನ್ಸ್" ನಲ್ಲಿ ೧೯೨೫ ರಲ್ಲಿ ಭಾರತದ ಸಂಸ್ಥಾನಗಳ ಪ್ರತಿನಿಧಿಗಳಾಗಿದ್ದರು. ಅಲ್ಲದೆ ೧೯೨೬ ರಿಂದ ೧೯೩೦ ರ ವರೆಗೂ ೧೯೩೩ ರಲ್ಲೂ ನರೇಂದ್ರಮಂಡಲದ "ಛಾನ್ಸಲರ್" ಆಗಿದ್ದರು. ಭಾರತ ಕ್ರಿಕೆಟ್ ಕ್ಲಬ್ಬಿನ ಅಧ್ಯಕ್ಷರಾಗಿಯೂ ಇದ್ದರು.

ಪಂಜಾಬಿನ ೧೪ ಸಂಸ್ಥಾನದಲ್ಲಿ ಪಾಟಿಯಾಲಾವು ಒಂದು ಬಹಳ ಮುಖ್ಯವಾದುದು. ಅದರ ವಿಸ್ತೀರ್ಣ ೫,೯೪೨ ಚದರ ಮೈಲಿಗಳು. ಜನಸಂಖ್ಯೆ ೧೬,೨೫,೫೨೦. ಸಂಸ್ಥಾನದ ವರಮಾನ ಸುಮಾರು ೧॥ ಕೋಟಿ ರೂ.

ಪಂಚಾಂಗ ಸ್ವೀಕಾರ

ಮೈಸೂರು ಹಳ್ಳದಕೇರಿಯಲ್ಲಿರುವ ವೇ॥ ಬ್ರ॥ ಸಿದ್ಧಾಂತಿ ಸುಬ್ರಹ್ಮಣ್ಯ ಶಾಸ್ತ್ರಿ ದಾನಂದ ಜ್ಯೋತಿಷ್ಯರು ತಾವು ಪ್ರಕಟಿಸಿರುವ ಶ್ರೀ ಬಹುಧಾನ್ಯ ನಾಮ ಸಂವತ್ಸರದ ಮೈಸೂರು ಸಿದ್ಧಾಂತ ಪಂಚಾಂಗದ ಒಂದು ಪ್ರತಿಯನ್ನು ನಮಗೆ ಕಳುಹಿಸಿರುತ್ತಾರೆ. ಅದನ್ನು ಕೃತಜ್ಞತೆಯಿಂದ ಸ್ವೀಕರಿಸುತ್ತೇವೆ. ಶ್ರೀ ಜೋಯಿಸರವರು ಆರ್ಯವಾಗಿ ಪಂಚಾಂಗಗಳನ್ನು ಗುಣಿಸಿ ಪ್ರಕಟಿಸತಕ್ಕ ಸುಪ್ರಸಿದ್ಧ ವಂಶಕ್ಕೆ ಸೇರಿದವರು. ಇವರು ಜ್ಯೋತಿಷ್ಯವನ್ನು ಹೇಳುವುದರಲ್ಲಿಯೂ ಬಹಳ ಹೆಸರುವಾಸಿಯನ್ನು ಪಡೆದಿದ್ದಾರೆ. ಇವರು ಪ್ರಕಟಿಸಿರತಕ್ಕ ಪಂಚಾಂಗದಲ್ಲಿ ತಿಥಿ ವಾರ, ನಕ್ಷತ್ರ, ಮುಂತಾದ ಅಂಶಗಳಲ್ಲದೆ, ಇತರ ಅನೇಕ ಉಪಯುಕ್ತ ವಿಷಯಗಳೂ ಸೇರಿಸಲ್ಪಟ್ಟಿವೆ. ಅವುಗಳ ಪ್ರಯೋಜನವನ್ನು ವಾಚಕರು ಹೊಂದುವರೆಂದು ನಂಬಿದ್ದೇವೆ. ಬೆಲೆ 0—1—3.

ಈಗಾಗಲೇ ನಮಗೆ ಅನೇಕ ತೊಂದರೆ ಗಳಿವೆ. ಮುನಿಸಿಪಾಲಿಟಿಯವರು ಇನ್ನು ಮುಂದಾದರೂ ತಮ್ಮ ಕರ್ತವ್ಯವನ್ನು ಮರೆಯದೆ ನಿರ್ವಹಿಸಿದರೆ ಒಳ್ಳೆಯದು. ಇಲ್ಲದೇ ಹೋದರೆ ತೆರಿಗೆಯ ನಿರಾಕರಣೆಯ ಚಳುವಳಿಯನ್ನು ನಾನು ನಡೆಸಬೇಕಾಗುತ್ತದೆ.

ರೈಲ್ವೆ ಕೆಲಸಗಾರರ ಕುಂದು ಕೊರತೆಗಳು.

— —

೧೯೩೨ ನೇ ಆವಿಭಾಗದಲ್ಲಿ ಎಂ. ಎಸ್. ಎಂ ರೈಲ್ವೆಗೆ ಸೇರಿದ್ದ ಮರಹರದ ಭಾಗವನ್ನು ತಮ್ಮ ವಶಕ್ಕೆ ತೆಗೆದುಕೊಂಡಮೇಲೆ, ಸಂಬಳಗಳನ್ನು ಹೆಚ್ಚಿಸುವರೆಂದು ಕೂಲಿಗಾರರು ನಂಬಿದ್ದರು. ಏಕೆಂದರೆ, ಎಂ. ಎಸ್. ಎಂ ರೈಲ್ವೆಯ ಕೆಲಸಗಾರರಿಗೆ ಇಲ್ಲಿಯವರಿಗಿಂತಲೂ ಎರಡರಷ್ಟು ಹೆಚ್ಚು ಸಂಬಳಗಳಿವೆ. ಆದ್ದರಿಂದ ಇನಂನ್ನೂ ಅವರನ್ನೂ ಒಂದೇ ಸಮ ತೋಕದಲ್ಲಿಡಲು, ಹೀಗೆ ಮಾಡುವರೆಂದು ನಿರೀಕ್ಷಿಸಲ್ಪಟ್ಟಿತ್ತು. ಆದರೆ ಹಾಗೆ ಆಗಲಿಲ್ಲ.

ಈಚಿನ ಸಂಬಳದ ಬಡ್ತಿಯ ನಿರ್ಣಯದ ಪ್ರಕಾರ [illegible] ಆಣೆ ಕೂಲಿಯವನು [illegible] ಆಣೆ ಪಡೆಯಬೇಕಾದರೆ ಸುಮಾರು [illegible] ವರ್ಷಗಳಾಗುವವು ಎಂದು ಒಂದು ಅರ್ಜಿಯಿದೆ. [illegible] ಏಕೆಂದರೆ [illegible] ಬರುವವರೆಗೆ ಇಲ್ಲ. ಈ ನಿರ್ಣಯದ ಪ್ರಕಾರ [illegible] ಒಂದು ಘಟ್ಟ, [illegible] ಒಂದು ಘಟ್ಟ. ಹೀಗೆ ಘಟ್ಟಗಳು ನಿರ್ಮಾಣವಾದ [illegible] ಬರುವವನಿಗೆ ಅವರ [illegible] ಮುಗಿಯುತ್ತದೆ. [illegible] ಘಟ್ಟದಿಂದ [illegible] ಆಣೆ ಘಟ್ಟಕ್ಕೆ ಬರಬೇಕಾದರೆ, ಏನಾದ ಏರುವುದು ಮಾತ್ರ ಬರಬೇಕೆಂಬುದೇನೂ ಇಲ್ಲ. [illegible] ಕೂಲಿಯಿಂದ ಕಡಿಮೆ ಬರುವವರಿಗೆ "ಪ್ರಾವಿಡೆಂಟ್ ಫಂಡ್" ಸೌಕರ್ಯವಿಲ್ಲ. ಈಗ ಸಂಬಳದ ಬಡ್ತಿಯ ನಿರ್ಣಯದ ಪ್ರಕಾರ ಅವನು [illegible] ಗೆ ಏರುವುದು ಬರುತ್ತಾನೋ ಆ ಭಗವಂತನೇ ಬಲ್ಲ.

ಈ [illegible] ಆಣೆ ಘಟ್ಟದಿಂದ [illegible] ಘಟ್ಟಕ್ಕೆ ತಕರಾರಿಲ್ಲದೆ ಏರುವನೆಂದು ಇಟ್ಟುಕೊಳ್ಳೋಣ. [illegible] ಆಣೆಯಿಂದ [illegible] ಬರಬೇಕಾದರೆ [illegible] ವರ್ಷಗಳು ಕಳೆಯಬೇಕು. [illegible] ವರ್ಷಗಳ ಬಳಿಕ [illegible] ಬರಬೇಕಾದ [illegible] ವರ್ಷಗಳನ್ನೂ ಸೇರಿಸಿದರೆ [illegible] ವರ್ಷಗಳು ಮುಗಿದು ಅವನು ರಿಟೈರ್ ಆಗೋ ಸಮಯ.

ಅವನು ರಿಟೈರ್ ಆದಮೇಲೆ ಕೈಲಿ ಒಂದೂ ಕಾಸೂ ಇಲ್ಲದ ಇರುವವನಿಗೆ ವರ್ಕ್‌ಷಾಪ್ ಬಾಗಿಲಿನಿಂದಲೇ ಏರೀ ಕೈಯ್ಯಲ್ಲಿ ಹೋಗಬೇಕು. ರಿಟೈರ್ ಆಗುವಾಗ ಮಾಡುವ ಈ ನಿರ್ಣಯ "ಉಟಕ್ಕಿಲ್ಲದ ಉಪ್ಪಿನಕಾಯಿ" ಎಂದಾಗಿ ಆಗುವುದು. ಈ ಎಂಟು ವರ್ಷಗಳ ಸರ್ವಿಸ್ಸಿನಲ್ಲಿ ಮಧ್ಯೆ ಯಾವಾಗಾದರೂ, ಇಲ್ಲಿಗೆ [illegible] ಆದ ಯಾವುದಾದರೂ [illegible] ಅಥವ ಯಂತ್ರಗಳ ಕಟಕದಲ್ಲಿ ಆ [illegible] ಬೇಕಿನ ಮೆಷ್ಟಿನಿಂದಲೋ ಅವನು ಸತ್ತರೆ, ಅವನ ಹೆಂಡತಿ ಮಕ್ಕಳ [illegible] ತ್ರಿಯೋಗ [illegible] ಎಂದು 'ರಿಕ್ರೈಟ್' ಎಂದರೆ ಏರಿಸುವುದು ತ್ವರೆ ಎಂದು ಪತ್ರ ಇವೇ ಎಲ್ಲ ಬಟ್ಟೆ ಹೋಗುವ ಅಷ್ಟಿ.

ಸಂಸ್ಥಾನಿಕ ಪ್ರಜೆಗಳೂ ಕಾಂಗ್ರೆಸ್ಸೂ

——

ದಾ॥ ಪಟ್ಟಾಭಿ ಮತ್ತು ಶ್ರೀ॥ ಮೆಹತಾ ರವರ ಸಲಹೆ

——

[illegible] ದ ಸಂಸ್ಥಾನಿಕ ಪ್ರಜಾ ಪರಿಷತ್ತಿನ ಅಧ್ಯಕ್ಷರಾದ ಡಾ॥ ಪಟ್ಟಾಭಿರಾಮಯ್ಯ, ಕಾರ್ಯದರ್ಶಿಗಳಾದ ಶ್ರೀ॥ ಬಲವಂತರಾಯ್ ಮೆಹತಾರವರೂ ಸಂಸ್ಥಾನಿಕ ಕಾರ್ಯಕರ್ತರ [illegible] ಒಂದು ಸರ್ಕ್ಯುಲರ್ ಹೊರಡಿ[illegible] ಅದರಲ್ಲಿ ಈ ರೀತಿ ಸೂಚಿಸಿದ್ದಾರೆ—

ಸಂಸ್ಥಾನಿಕ ಕಾಂಗ್ರೆಸ್ ಸಮಿತಿಗಳ ಬಗ್ಗೆ ಕಾಂಗ್ರೆಸ್ಸು ಮಾಡಿರುವ ನಿರ್ಣಯದಿಂದ ಸಂಸ್ಥಾನಿಕ ಕಾಂಗ್ರೆಸ್ [illegible] ತಿಗಳ [illegible] ನ್ಯಾಷ್ಟಿಯು ಬಹುಮಟ್ಟಿಗೆ ಕಡಿಮೆಯಾಗಿದೆಯಷ್ಟೆ. ಇಂಥಾ [illegible] ಸಂಸ್ಥಾನಿಕ ಕಾಂಗ್ರೆಸ್ಸಿನವರು ಏನು ಮಾಡಬೇಕೆಂಬ ಪ್ರಶ್ನೆ [illegible] ಈ ಪ್ರಶ್ನೆಯು ಹೆಚ್ಚು ಹೆಚ್ಚಾಗಿ [illegible] ಉತ್ಪನ್ನವಾಗಿತ್ತು.

ಸಂಸ್ಥಾನಿಕ ಕಾಂಗ್ರೆಸ್ ಸಮಿತಿಗಳ [illegible] ನಾಡು [illegible] ಕಾರ್ಯಕ್ರಮಗಳನ್ನು ಕೈಗೊಳ್ಳಲು ಕಾಂಗ್ರೆಸ್ಸು ಅವಕಾಶ ಕೊಡದಿದ್ದರೂ [illegible] ಕಾಂಗ್ರೆಸ್ಸಿನ [illegible] ಒಪ್ಪಿಲ್ಲವೆಂದು ಸಂಸ್ಥಾನಿಕ ಕಾಂಗ್ರೆಸ್ ಸಮಿತಿಗಳ ಅಭಿಪ್ರಾಯ [illegible] ತಿಳಿಸುತ್ತೇವೆ.

ಪಾರ್ಲಿಮೆಂಟರಿ [illegible] ಮೂರು ವರ್ಷಕ್ಕೆ ಒಂದು ಸಲಕ್ಕಿಂತಲೂ ಹೆಚ್ಚಾಗಿ ಸಂಸ್ಥಾನಿಕ ಪ್ರಜೆಗಳ ಗಮನಕ್ಕೆ ಬರುವುದಿಲ್ಲ. ಪಾರ್ಲಿಮೆಂಟರಿ ಕಾರ್ಯಕ್ರಮಗಳನ್ನು ಕೈಗೊಳ್ಳುವ ವಿಷಯವು ಉಂಟಾಗುವುದು ಕೇವಲ ಆರಿಸಲು ಸಂಸ್ಥಾನಗಳಲ್ಲಿ ಮಾತ್ರ. ಶಾಸನ ಭಂಗ ಕಾರ್ಯಕ್ರಮವು ಉತ್ಪನ್ನವಾಗುವುದು ಸ್ಥಾನಿಕವಾಗಿ ಕೇವಲ ತಾತ್ವಿಕ ದೃಷ್ಟಿಯಿಂದಲೇ ಹೊರತು ಆಚರಣೆಯ ದೃಷ್ಟಿಯಿಂದಲ್ಲ. ಎಲ್ಲ [illegible] ಗಳನ್ನೂ ಕುಂದುಕೊರತೆಗಳನ್ನೂ ಪರಿಶೀಲಿಸಿ ಅವುಗಳ ನಿಜಸ್ವರೂಪವನ್ನು ಪ್ರಕಟಪಡಿಸುವುದು ಸಂಸ್ಥಾನಿಕ ಕಾಂಗ್ರೆಸ್ ಸಮಿತಿಗಳ ಶ್ರೇಷ್ಠ ಕರ್ತವ್ಯವಾಗಿದೆ.

ಈ ಎಲ್ಲ ದೂರುಗಳನ್ನೂ ಕುಂದುಕೊರತೆಗಳನ್ನೂ ಪರಿಹರಿಸಲು ಸಂಸ್ಥಾನದ ಅಧಿಕಾರಿಗಳಲ್ಲಿ ಅರಿಕೆಮಾಡಿಕೊಳ್ಳಬೇಕಾದದ್ದೂ, [illegible] ರೀತ್ಯ ಇದಕ್ಕಾಗಿ ಕೈಗೊಳ್ಳಬಹುದಾದ ಎಲ್ಲ ಕಾರ್ಯಕ್ರಮಗಳನ್ನೂ ಸಂಸ್ಥಾನಿಕ ಕಾಂಗ್ರೆಸ್ ಸಮಿತಿಗಳು [illegible] ಅದ್ದರಿಂದ [illegible]

— — — — —

[illegible]

ವಿಜಾರಕ.

ತಗಡೂರಿನ ಕಾರ್ಯಕ್ರಮ

ಅಧಿಕಾರಿಗಳ ಬೆಂಬಲ

——

ತಗಡೂರಲ್ಲಿ ಆರ್ಥಿಕ ಮುಗ್ಗಟ್ಟನ್ನು ಪರಿಹಾರ ಮಾಡುವ ಸಲುವಾಗಿ ಗ್ರಾಮ ಪಂಚಾಯಿತಿ ಸದಸ್ಯರುಗಳೂ ಮತ್ತು ಎಲ್ಲಾ ಕೋಮಿನ ಮುಖಂಡರುಗಳೂ ಸಭೆ ಸೇರಿ ಗ್ರಾಮ ಸರ್ವೆ ಮಾಡಲು ತಾ॥ [illegible] ರಲ್ಲಿ ಒಂದು ಸಮಿತಿಯನ್ನು ನೇಮಕಮಾಡಿದರು. ಆ ಸಮಿತಿಯವರು ತಾ॥ [illegible] ರಲ್ಲಿ ತಗಡೂರು ಗ್ರಾಮ ಸರ್ವೆ ವರದಿಯನ್ನು ಪಂಚಾಯಿತಿಗೆ ಒಪ್ಪಿಸಿದರು. ಪಂಚಾಯಿತಿಯವರು ಈ ವರದಿಯನ್ನು ಅಂಗೀಕಾರ ಮಾಡಿ ಅದನ್ನು ಜಾರಿಗೆ ತರುವ ಸಲುವಾಗಿ ಒಂದು ಸ್ಕೀಂ ತಯಾರು ಮಾಡಿದರು. ವರದಿಯನ್ನೂ ಸ್ಕೀಮನ್ನೂ ದಿವಾನರವರ, ಕೌನ್ಸಿಲರುಗಳ, ಕೈಗಾರಿಕಾ ಡೈರೆಕ್ಟರ್, ಡೆಪ್ಯುಟೀ ಕಮಿಷನರ್, ಸಬ್‌ಡಿವಿಜನ್ ಆಫೀಸರ್ ಮತ್ತು ಅಮಲ್ದಾರ್ ಇವರುಗಳೇ ಮುಂತಾದ ಅಧಿಕಾರಿಗಳಿಗೂ ಮತ್ತು ಪರಿಂಬರಿಕೆಯ ಬಗ್ಗೆ ಕಳುಹಲಾಗಿತ್ತು. ಇದು ಹೊಸ ಸ್ಕೀಂ ಆದುದರಿಂದ ಹೀಗೆ ಮಾಡಲಾಯಿತು. ಪ್ರತಿಯೊಬ್ಬ ಅಧಿಕಾರಿಗಳಲ್ಲಿಯೂ ನಾನೇ ಖುದ್ದಾಗಿ ಹೋಗಿ ಈ ಹೊಸ ಸ್ಕೀಮಿನ ಉದ್ದೇಶವನ್ನು ಮನದಟ್ಟಾಗುವಂತೆ ವಿವರಿಸಿದ್ದೇನೆ. ಎಲ್ಲ ಅಧಿಕಾರಿಗಳೂ ನಾನು ಭೇಟಿ ಮಾಡಿದಾಗ ಒಳ್ಳೇ ಅಭಿಪ್ರಾಯಗಳನ್ನೇ ಕೊಟ್ಟಿದ್ದಾರೆ. ಅವನ್ನು ಆಗಾಗ್ಗೆ ಪತ್ರಿಕೆಗಳ ಮುಖಾಂತರ ಮಹಾಜನರ ಮುಂದಿಟ್ಟಿದ್ದೇನೆ. ತಾಲ್ಲೂಕು ಅಮಲ್ದಾರ್, ಸಬ್‌ಡಿವಿಜನ್ ಆಫೀಸರ್ ಮತ್ತು ಡೆಪ್ಯುಟೀ ಕಮಿಷನರ್ ಇವರುಗಳು ಗ್ರಾಮಕ್ಕೆ ದಯಮಾಡಿಸಿ ಖುದ್ದು ಪರಾಂಬರಿಸಿ ವಿದ್ಯಮಾನಗಳನ್ನು ಸಂಪೂರ್ಣವಾಗಿ ತಿಳಿದುಕೊಂಡಿದ್ದಾರೆ.

ತಾ॥ [illegible] ರ ಬೆಳಿಗ್ಗೆ [illegible] ಗಂಟೆಯಿಂದ ಮೈಸೂರು ಜಿಲ್ಲಾ ಕಛೇರಿಯಲ್ಲಿ ಡೆಪ್ಯುಟಿ ಕಮಿಷನರ್‌ರವರ ಕೂಡ ತಗಡೂರು ಗ್ರಾಮಪಂಚಾಯಿತಿ ಸ್ಕೀಮಿನ ವಿಷಯವಾಗಿ ನನ್ನ ಅಭಿಪ್ರಾಯವನ್ನು ತಿಳಿಸಿದೆನು. ನಂತರ ಡೆಪ್ಯುಟೀ ಕಮಿಷನರವರು ಎಲ್ಲವನ್ನೂ ಪರಿಶೀಲಿಸಿ ಸ್ಕೀಮನ್ನು ಸಂಪೂರ್ಣವಾಗಿ ಅಂಗೀಕಾರ ಮಾಡಿದರು. [illegible] ರಲ್ಲಿ ಈ ಸ್ಕೀಂ ಜಾರಿಗೆ ತರುವಂತೆ ಏರ್ಪಾಡು ಮಾಡಲು ನಂಜನಗೂಡು ಸಬ್‌ಡಿವಿಜನ್ ಸಾಹೇಬ ರವರಿಗೆ ಅಪ್ಪಣೆಯನ್ನು ಸಹ ಕಳುಹಿಸಿದ್ದಾರೆ. ಅಮಲ್ದಾರ್‌ರವರ ಮುಖಾಂತರ ಪಂಚಾಯಿತಿಗೆ ಕಾರ್ಯಾರಂಭ ಮಾಡಲು ಶೀಘ್ರವಾಗಿ ಅನುಮತಿಯು ಹೋಗುತ್ತದೆ.

ಈ ರೀತಿಯಾಗಿ ಅನುಮತಿಯನ್ನು ಕೊಟ್ಟು ಆರ್ಥಿಕ ಮುಗ್ಗಟ್ಟಿನ ಪರಿಹಾರಕ್ಕಾಗಿ ತಗಡೂರು ಗ್ರಾಮ ಪಂಚಾಯಿತಿಯನ್ನು ಆದರ್ಶವನ್ನಾಗಿ ಮಾಡಲು ಸಹಾಯವನ್ನೂ ಸಹಕಾರವನ್ನೂ ನೀಡಿದ್ದಕ್ಕಾಗಿ ಡೆಪ್ಯುಟೀ ಕಮೀಷನರವರಿಗೆ ಗ್ರಾಮ ಪಂಚಾಯಿತಿಯ ಪರವಾಗಿ ನನ್ನ ಧನ್ಯವಾದವನ್ನು ಅರ್ಪಿಸುತ್ತೇನೆ.

ತಗಡೂರು ರಾಮಚಂದ್ರರಾವ್.

ಪಂಡಿತ ತಾರಾನಾಥ

ತುಂಗಭದ್ರಾ, ಇವರಿಂದ

ಜ್ಯೋತಿರ್ವಿದ್ಯಾಭೂಷಣ, ಪಂಡಿತ ಶ್ರೀ ವೀರನಗೌಡ, ಮೊಣಕಿಗಿ ಇವರಿಗೆ.

ಪ್ರಿಯರೆ,

ತಾವು ಕಳಿಸಿದ ಭಾಗ್ಯೋದಯ ಪಂಚಾಂಗಕ್ಕಾಗಿಯೂ ಸತ್ಕಾರಕ್ಕಾಗಿಯೂ ಕೃತಜ್ಞನಾಗಿದ್ದೇನೆ. ವಿಧವಿಧವಾದ ವಿಷಯಗಳನ್ನು ಸುಂದರವಾಗಿ ಅಚ್ಚುಹಾಕಿಸಿ ತಾವು ಮಾಡಿದ ಪಂಚಾಂಗವು ನಮ್ಮ ಜನರನ್ನು ಸಹಜವಾಗಿಯೇ ಆಕರ್ಷಿಸುವದು ಎಂಬುದಕ್ಕೆ ಸಂದೇಹವಿಲ್ಲ. ಅದರ ಅರ್ಹತೆಗೆ ಯೋಗ್ಯವಾದ ಮಾನವು ಅದಕ್ಕೆ ಅವಶ್ಯವಾಗಿ ದೊರೆಯುದಿರದು.

ತಮ್ಮ ಸಕಲ ಸತ್ಕಾರ್ಯಗಳಲ್ಲಿಯೂ ಯಶಸ್ಸುಂಟಾಗಲಿ ಎಂದು

ಜಗತ್ತಿಯನ್ನೇ ಪ್ರಾರ್ಥಿಸುವ,

ತಮ್ಮ,

ತಾರಾನಾಥ.

ವಿಶೇಷೋಪನ್ಯಾಸೋತ್ಸವ

[illegible] ಭಗಿನೀ ಸೇವಾ ಸಮಾಜದವರು ಒಂದು ವಿಶೇಷೋಪನ್ಯಾಸ, ಸ್ವಾತ್ರವನ್ನು ನಡೆಸುತ್ತಿರುವರು. ಅದು [illegible] ರ [illegible] ತ್ಸವವನ್ನು ಕಳೆದ ಗುರುವಾರ [illegible] ನಡೆಸಿದರು. ಸೂರಾರು ಜನ ಮಹಿಳೆಯರು ನೆರೆದಿದ್ದರು. ಪ್ರತಿದಿನವೂ ಬೆಳಿಗ್ಗೆ ಮತ್ತು ಸಾಯಂಕಾಲಗಳಲ್ಲಿ ಉಪಯುಕ್ತ ವಿಷಯಗಳಮೇಲೆ ಉಪನ್ಯಾಸಗಳೂ, ಪ್ರವರ್ಚನಗಳೂ, ನಡೆಯುತ್ತಿವೆ. ಅನೇಕ ಮಹಿಳೆಯರು ಇವುಗಳಿಂದ ವಿಶೇಷ ಪ್ರಯೋಜನವನ್ನು ಹೊಂದುತ್ತಿರುವರು.

ಧನ್ವಂತ್ರಿ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

— ಬಾಲಸುಧಾ —

[illegible] ಲಿವರ್ (ಪಿತ್ತಕೋಶ) [illegible] ಇತರ ರೋಗಗಳಿಂದ [illegible] ವರ್ಷಗಳಿಂದಲೂ [illegible]

[illegible]

ಮೈಸೂರು, ಬೆಂಗಳೂರು, ಮದ್ರಾಸು [illegible]

ಸದ್ವೈದ್ಯಶಾಲಾ, ನಂಜನಗೂಡು.

ಲವಂಗವನ್ನು ಬಹಿಷ್ಕರಿಸಿರಿ

—

ಜಾಂಜಿಬಾರಿನ ಲವಂಗಗಳು ಮಾರ್ಗ ಗೋವಾ ಮಾರ್ಗವಾಗಿ ಬರುತ್ತಿರುವುದು ಎಲ್ಲರಿಗೂ ತಿಳಿದಿದೆ. ಇದುವರೆಗೆ ಒಂದಾ ವರ್ತಕರು, ಮತ್ತೊಂದಾವರ್ತಕರು ೩೦೦ ಮತ್ತು ಮೊನ್ನೆ ಮೊನ್ನೆ ೬೫೦ ಚೀಲಗಳು ಬಂದಿರುವವು. ಇವನ್ನು ಕರ್ನಾಟಕದ ಬೇರೆ ಬೇರೆ ಭಾಗಗಳಿಗೆ ಕಳುಹಿಸಲಾಗಿದೆ. ಎಲ್ಲ ಕಾಂಗ್ರೆಸ್ ಕಮಿಟಿಗಳು ಈ ಲವಂಗವು ತಮ್ಮ ಪ್ರಾಂತ್ಯಕ್ಕೆ ಬಾರದಂತೆ ನೋಡಿಕೊಳ್ಳಬೇಕು. ಯಾವ ತರಹದ ಲವಂಗಗಳನ್ನೂ ಕೊಂಡುಕೊಳ್ಳುವುದಿಲ್ಲ ವೆಂದು ವರ್ತಕರಿಂದ ಪ್ರಮಾಣ ತೆಗೆದು ಕೊಳ್ಳಬೇಕು. ಈಗಾಗಲೇ ಲವಂಗದ ಚೀಲಗಳು ಬಂದಿದ್ದರೆ ಅವುಗಳನ್ನು ಕಟ್ಟಿ ಸೀಲು ಮಾಡಿಡಲು ಪ್ರಯತ್ನಿಸಬೇಕು. ಇದು ಸಾಧ್ಯವಾಗದಿದ್ದರೆ ಬೇರೆ ರೀತಿ ಯಿಂದ ಪಿಕೆಟಿಂಗ್ ಪ್ರಾರಂಭಿಸಿ ಲವಂಗ ದ ವ್ಯಾಪಾರವನ್ನು ಸಂಪೂರ್ಣವಾಗಿ ಒಂದು ಮಾಡಿ ಈ ಬಹಿಷ್ಕಾರವು ಯಶಸ್ವಿಯಾ ಗುವಂತೆ ಮಾಡಬೇಕು.

ಜಾಂಜಿಬಾರಿನ ಲವಂಗಗಳು ಯಾವವು ಮತ್ತು ಇತರ ಕಡೆಯ ಲವಂಗಗಳು ಯಾ ವವು ಎಂಬುದನ್ನು ತಿಳಿಯಲು ಕಷ್ಟವಾಗ ಬಹುದು. ಆದ್ದರಿಂದಲೇ ಎಲ್ಲ ಬಗೆಯ ಲವಂಗಗಳನ್ನೂ ಸಂಪೂರ್ಣವಾಗಿ ಬಹಿ ಷ್ಕರಿಸುವಂತೆ ಅಧ್ಯಕ್ಷ ಸುಭಾಷರು ಹೇಳಿ ರುವರು. ಈ ಅಂಶವನ್ನು ಎಲ್ಲಾ ಕಾಂಗ್ರೆ ಸ್ ಕಾರ್ಯಕರ್ತರೂ ಗಮನಿಸಲ್ಪಟ್ಟು ತ ಮ್ಮ ಕಾರ್ಯಕ್ರಮಗಳ ವರದಿಯನ್ನು ಕ ಳುಹಿಸಿಕೊಡಬೇಕೆಂದು ಕರ್ನಾಟಕ ಪ್ರಾಂ ತಿಕ ಕಾಂಗ್ರೆಸ್ ಕಾರ್ಯದರ್ಶಿಗಳು ಕೋ ರಿರುತ್ತಾರೆ.

—

ಶಿವಪುರದ ರಾಷ್ಟ್ರಕೂಟ

ಇದು ಪರೀಕ್ಷೆಗಳ ಸಮಯವಾದ್ದರಿಂದ ಅನೇಕ ಸ್ವಯಂಸೇವಕರು ಏಪ್ರಿಲ್ ೧ ನೇ ತಾ|| ನಂತರ ಬರುವುದಾಗಿ ಬರೆದಿರು ವರು. ರಾಷ್ಟ್ರಕೂಟವು ೧೧ ಮತ್ತು ೧೨ ನೇ ತಾರೀಖುಗಳಲ್ಲಿ ನಡೆಯುವಂತೆ ತೀರ್ಮಾನವಾಗಿರುವುದು. ಒಂದು ಸ್ವಯಂ ಸೇವಕ ದಳದ ಪ್ರಾಥಮಿಕ ಶಿಕ್ಷಣವನ್ನು ಪಡೆದಿರುವ ಸ್ವಯಂಸೇವಕರು ಏಪ್ರಿಲ್ ೧ ನೇ ತಾರೀಖಿಗೆ ಬರಲು ಅನುಮತಿ ಕೊಡಲಾಗಿದೆ. ಯೂನಿಫಾರಂಗಳೊಡನೆ ಬಂದು ಸ್ವಯಂಸೇವಕರ ನಾಯಕರಲ್ಲಿ ಹಾಜರಾಗಬೇಕು. ಮತ್ತು ಎಷ್ಟು ಜನ ಬರುವರೆಂಬುದನ್ನು ಮುಂಚಿತವಾಗಿ ತಿಳಿಸಬೇಕು.

ಸರ್ ಪುಟ್ಟಣ್ಣಶೆಟ್ಟರ ದಾನ

ಬೆಂಗಳೂರಿನ ಪ್ರಸಿದ್ಧ ದಾನಶೂರರಾದ ಸರ್ ಕೆ ಪಿ ಪುಟ್ಟಣ್ಣ ಶೆಟ್ಟರು [illegible] ವಿದ್ಯಾರ್ಥಿ ನಿಲಯ ಫಂಡನ್ನು [illegible] 35,000 ರೂಪಾಯಿಗಳನ್ನು [illegible] ಕೊಟ್ಟಿರುವರು. ಇದುವರೆಗೆ ಇವರು ಲಕ್ಷಾಂತರ ರೂಪಾಯಿ ಧರ್ಮ ಮಾಡಿರು ವರು. ಇವರಿಗೆ ಭಗವಂತನು ಮಂಗಳ ವನ್ನುಂಟುಮಾಡಲಿ

ಆಕಾಶಕ್ಕೆ ಗೌಸೆ?

—

ಬೆಂಗಳೂರು ಸಿಟಿ ರೈಲ್ವೇ ಸ್ಟೇಷನ್‌ನಲ್ಲಿ ಮದರಾಸ್ ರೈಲ್ ನಿಲ್ಲುವ ಸ್ಥಳದಲ್ಲಿ ಮೇ ಲ್ಛಾವಣಿ ಕಟ್ಟಿಸಲು ಒಂದು ಲಕ್ಷ ರೂಪಾ ಯಿ ಮಂಜೂರಾಗಿದೆಯಂತೆ. ಇದು ಆಕಾ ಶಕ್ಕೆ ಗೌಸು ಹಾಕಿಸುವಂತಿದೆ.

ಬೆಂಗಳೂರು ಸ್ಟೇಷನ್ ಕಟ್ಟಿ ಎಷ್ಟು ವರ್ಷಗಳಾಯಿತು? ಇದುವರೆವಿಗೆ ಕೆಲವು ಜನಗಳು ನೆನೆಯುತ್ತಲೇ ಇಲ್ಲ ವೇ? ಎಂ ಎಸ್. ಎಂ. ರೈಲ್ವೆ ಕಂಪೆನಿಗೆ ಈ ಕಾರ್ಯ ಕೈಗೊಳ್ಳಲು ಮತ್ತಿನ್ನಿ ಆ ಗಲಿ ಕೆಲಸದವರಿಗಾಗಲಿ ಏನಾದರೂ ಕುಂದಿತ್ತೆ? ಇಷ್ಟೆಲ್ಲಾ ಇದ್ದರೂ ಉಪಾ ಯದಲ್ಲಿ ಮಿತವ್ಯಯದಿಂದ ಪ್ರಯಾಣಿ ಸುವುದೇ ಮುಖ್ಯ ಆದಿಯನಾಗಿತ್ತೆಂದು ಭಾಸವಾಗುವುದಿಲ್ಲವೇ? ಆ ಪ್ಲಾಟ್‌ಫಾ ರಂ ಘನ ಸರ್ಕಾರಕ್ಕೆ ಬಂದು ಇನ್ನೂ ಮೂ ರು ತಿಂಗಳೂ ಕೂಡ ಇಲ್ಲ. ಮಾಡಿಸಬೇ ಕಾಗಿದ್ದರೂ ಈಗಲೇ ಕಾಲವೇ? ಇದ ಕ್ಕಿಂತಲೂ ಉತ್ತಮವೂ ಅವಶ್ಯಕವೂ ಆ ಗಿರುವ ಕಾರ್ಯಗಳು ಕಾಣು ಕಾಣಲಿಲ್ಲವೇ!

ಮಾಚಿಕ.

—

ಭಾಗ್ಯೋದಯ ಪಂಚಾಂಗ

ಕರ್ನಾಟಕ ಪತ್ರಿಕೆಗಳಲ್ಲಿ ಭವಿಷ್ಯ ವನ್ನು ಬರೆಯುತ್ತ ಬರುವ ಕರ್ನಾಟಕದ ಲ್ಲಿಯೂ ಮಾನ್ಯರಾದ ಗದಗಿನ ಜ್ಯೋತಿ ರ್ವಿದ್ಯಾಭೂಷಣ ಪಂಡಿತ ವೀರನಗೌಡ ಪಾಟೀಲ ಮಣಕಿನ ಇವರು ರಚಿಸುವ ಬಹುಮಾನ್ಯ ನಾಲ್ಕನೆಯ ಭಾಗ್ಯೋದ ಯ ಪಂಚಾಂಗದ ಒಂದು ಪ್ರತಿಯನ್ನು ನಮಗೆ ಕಳುಹಿಸಿದ್ದಾರೆ ಇದನ್ನು ಕೃತಜ್ಞ ತೆಯಿಂದ ಸ್ವೀಕರಿಸಿದ್ದೇವೆ. ಇದನ್ನು ಅನ ರು [illegible] ಶ್ರೀಮನ್ಮಹಾರಾಜರವರಿಗೂ ಸರ್ ಮಿರ್ಜಾ ಇಸ್ಮಾಯಿಲರಿಗೂ ಅರ್ಪಿಸಿರು ತ್ತಾರೆ. ಈ ಪಂಚಾಂಗವಲ್ಲ ಪ್ರತೀಕ ಉಪಯುಕ್ತ ವಾಗಿದೆ. ಕನ್ನಡಿಗರೆಲ್ಲ ರೂ ಇದನ್ನು ತೆಗೆದುಕೊಂಡು ಉಪಯೋ ಗ ಪಡೆಯುವರೆಂದು ನಂಬಿದ್ದೇವೆ.

—

ಆ ಕಾ ಶ ವಾ ಣಿ

ಸೋಮವಾರ—೬-೩೦ ರಿಂದ ೧೦ ಆ ರ್ಕೆಸ್ಟ್ರಾ ಸಂಗೀತ. ಮೈಸೂರು ಹೈಕೋ ರ್ಟಿನ ನಿವೃತ್ತ ನ್ಯಾಯಾಧೀಶರಾದ ಶ್ರೀ|| ಪಿ ಎಸ್ ಆರ್ ಚಾರಿಯವರ ಉಪನ್ಯಾ ಸ, "ಉಪನ್ಯಾಸ ಸಂದೇಶ" ಇದೋಸ್ಟ್ ಸಂ ಗೀತ. ಮಂಗಳವಾರ — ೬-೩೦ ರಿಂದ [illegible] ಕರ್ನಾಟಕ ವಾದ್ಯಗಾನ. "ಕನ್ನಡ ಕವಿ [illegible] , ಉಪನ್ಯಾಸ, ಶ್ರೀ [illegible] ಕೃಷ್ಣಸ್ವಾಮಿಯಿಂದ. ಬುಧವಾರ—೬-೩೦ ರಿಂದ [illegible] ಕರ್ನಾಟಕ ಗಾನ, ಜನಪದ [illegible] [illegible] ಗುರುವಾರ—೬-೩೦ ರಿಂದ [illegible] ಶ್ರೀ ಕೃಷ್ಣ [illegible] ಸಂಗೀತ [illegible] [illegible]

ಪಾಶ್ಚಾತ್ಯ ದೇಶದಲ್ಲಿ ಶವ ದಹನ.

—

ಪಾಶ್ಚಾತ್ಯ ದೇಶಗಳಲ್ಲಿ ಹೆಣಗಳನ್ನು ಸುಡುವ ಪದ್ಧತಿಯು ಹೆಚ್ಚುತ್ತಿರುವುದು. 1933 ರಿಂದ 1935 ರ ವರೆಗೆ ಜರ್ಮನಿ ಯಲ್ಲಿ 11,450, ಜೆಕೋಸ್ಲೊವೇಕಿಯಾದ ಲ್ಲಿ 12,033, ಬ್ರಿಟನ್ನಿನಲ್ಲಿ 9613, ಫ್ರಾನ್ಸಿನಲ್ಲಿ 1330, ಸ್ವಿಟ್ಜರ್ ಲೆಂಡಿನಲ್ಲಿ 6,397 ಇಟಲಿಯಾದಲ್ಲಿ 3,111, ಡೆನ್ಮಾ ರ್ಕಿನಲ್ಲಿ 3301, ಜೆಕೋಸ್ಲೋವೇಕಿಯಾ ದಲ್ಲಿ 5,092 ಹೆಣಗಳು ಸುಡಲ್ಪಟ್ಟವು ಈ ಎರಡು ವರ್ಷಗಳಲ್ಲಿ ಯೂರೋಪಿನಲ್ಲಿ ಇವರ ಸಂಖ್ಯೆಯು 1,05,267 ರಿಂದ 1,12,885 ಕ್ಕೆ ಏರಿರುವುದು. ಜರ್ಮನಿ ಯಲ್ಲಿ 115 ಬ್ರಿಟನ್ನಿನಲ್ಲಿ 39, ಮತ್ತು ಸ್ವಿಟ್ಜರ್‌ಲೆಂಡಿನಲ್ಲಿ 30 ಹೆಣಗಳನ್ನು ಸು ಡುವ ವಿದ್ಯುತ್ ಯಂತ್ರಾಲಯಗಳಿರು ವುವು. ಯೂರೋಪಿನಲ್ಲಿ ಈ ಪದ್ಧತಿಯ ನ್ನು ಪ್ರಚಾರ ಮಾಡುವುದಕ್ಕೋಸ್ಕರ ಅ ನೇಕ ಸಂಘಗಳಿರುವುವು. ಸೆಪ್ಟೆಂಬರ್ 1937 ರಲ್ಲಿ ಲಂಡನ್ ನಗರದಲ್ಲಿ ಈ ಸಂ ಸ್ಥೆಗಳ ಒಂದು ಸಮ್ಮೇಳನವು ಜರುಗಿ ಅದ ರಲ್ಲಿ ಶವಗಳನ್ನು ದಹಿಸುವ ಪದ್ಧತಿಯನ್ನು ಪ್ರಚಾರಮಾಡಲು ಒಂದು ಅಂತರ್‍ರಾಷ್ಟ್ರೀ ಯ ಸಂಘವನ್ನು ಸ್ಥಾಪಿಸಲ್ಪಟ್ಟಿತು.

ಶವ ದಹನ ಸಂಸ್ಕಾರವು ವೈದಿಕ ಧ ರ್ಮದ, ಸ್ವಾಸ್ಥ್ಯಕ್ಕೆ ಸಂಬಂಧಪಟ್ಟ ಒಂ ದು ಉತ್ತಮ ವೈಜ್ಞಾನಿಕ ಪದ್ಧತಿಯಾಗಿ ರುತ್ತದೆ. ಯೂರೋಪಿನಲ್ಲಿ ಈ ಪದ್ಧತಿ ಯು ಅತಿ ವೇಗವಾಗಿ ಆಚರಣೆಗೆ ಬರುತ್ತಿ ರುವುದು ಯೂರೋಪು ಬಂದವು ಕ್ರೈ ಸ್ತ ಧರ್ಮದ ಪ್ರಭಾವ ಹೀನವಾಗಿದ್ದು ಕ್ರೈಸ್ತ ಧರ್ಮವು ಶವಗಳನ್ನು ದಹಿಸುವು ದಕ್ಕೆ ಆಜ್ಞೆ ಕೊಡುವುದಿಲ್ಲವಾದ್ದರಿಂದ ಈ ಪದ್ಧತಿಯ ಮಹತ್ವವು ಮತ್ತೂ ವಿ ಶೇಷವಾದುದು.

ಟಿ.ಕೆ. ಎಂ.ಗೋಪಾಲ್,
ಆರ್ಯ ಸಮಾಜ, ಮೈಸೂರು.

—

ಪರಿಹಾರಕ್ಕಾಗಿ ಭಾರಿ ದಾನ

ಮೈಸೂರು ಒಡೆಯರ ಆನಂದಭವನ ಮತ್ತು ಮದರಾಸಿನ ಮೈಸೂರು ಸ್ಟೋರ್ಸ್ ಮಾಲೀಕರಾದ ಶ್ರೀ ಕೆ ಗುರುರಾಜಾ ಚಾರ್ಯರು ಮೈಸೂರು ನಗರದ ದುರ್ಘಟ ನೆ ಮತ್ತು ಮದರಾಸಿನ ಪಾರಿವ್ಯ ಕಷ್ಟ ಪಾಲಿಕರಾದ [illegible] ಯರ [illegible] ಮೈಸೂರ್ ಸ್ಟೋರ್ಸ 9000 ರೂಪಾಯಿಗಳ ಪರಿಹಾರಕ್ಕಾಗಿ [illegible] ಶ್ರೀ [illegible] ಒಂದ ಶ್ರೀ [illegible] ಮೈಸೂರು [illegible]

ಸೊದರಿ ಸಂಸ್ಥಾನದಲ್ಲಿನ ಸೊದರಿ ತಾಲ್ಲೂಕು

—

(ಸ್ವಂತ ಬಾತ್ಮೀದಾರರಿಂದ)

ಪ್ರಜೆಗಳಿಗೆ ಹಣಕಾಸಿನ ವಿಚಾರದಲ್ಲಿ ಪ್ರವೇಶಿಸಲು ಅವಕಾಶವಿದ್ದೂ ಇಲ್ಲ. ಸರ್ಕಾರಿ ತಾಲ್ಲೋಕಿನ ಪ್ರಜೆಗಳನ್ನು ಸೌಕ ರ್ಯ ಹೊಂದಬೇಕೆಂತ, ಇದ್ದಾ ಯಿ ಲ್ಲ. ರಿಜಾಂಕ ತಿಳಿದವರಿಗೆ ಮಾತನಾ ಡಲು ಅವಕಾಶವೇ ಇಲ್ಲ. ಜಹಗೀರ್ ದಾರರವರ ಆಡಳಿತದಲ್ಲಿನ ತೊಂದರೆಯ ನ್ನು ತಪ್ಪಿಸಲು ಮೈಸೂರು ಸರ್ಕಾರದ ಆಡಳಿತಕ್ಕೆ ತೆಗೆದುಕೊಂಡ ಮೇಲೆ ಯಳಂ ದೂರು ತಾಲ್ಲೂಕು ಪ್ರಜೆಗಳಿಗೆ ನಿಯಮಿತ ವಾದ ಸಾಮೂಹಿಕ ಅಧಿಕ ಕಾನೂನು ಪ್ರಯೋಗದಿಂದ ತೊಂದರೆ. ಪ್ರಜೆಗಳಿಗಿರ ತಕ್ಕ ಆರ್ಥಿಕ ತೊಂದರೆ ಸುಧಾರಣೆಗೆ ಬದಲಾಗಿ ಉಗ್ರ ವಸೂಲಿಯ ನೀತಿ, ಕಮ್ಮಿ ಬಂಡವಾಳದ ಪರಸ್ಪರ ಸಹಾಯ ಸಂಘ, ನಿರ್ವೀರ್ಯ ಪ್ರಜಾಸೇವಾ ಸಮಾ ಜ, ಯಾರೂ ಗುರ್ತು ಅರಿಯದ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರು, ಪನ್ನೆರಡನೆಯ ೧೯೩೭ ನೇ ಸಾಲಿನಲ್ಲಿ ಹೆಚ್ಚು ಮಳೆಯಿಂ ದ ಸರ್ಕಾರಿ ತಾಲ್ಲೂಕಿನ ಕೆರೆಗಳಂತೆ ಇಲ್ಲೂ ಕೆರೆಗಳು ಒಡೆದು ಹೋದವು. ಸರ್ಕಾರಿ ತಾಲ್ಲೂಕಿನಲ್ಲಿ ತೊಂದರೆ ಪಟ್ಟವರಿಗೆ ಸರಿ ಯಾದ ಸಹಾಯ, ಕಂದಾಯ ರಿಯಾಯಿ ತಿ, ಕಂಟ್ರಿಬ್ಯೂಷನ್ ಇಲ್ಲದೆ ಕೆರೆಗಳ ಕಾಂ ಗಾರಿ, ಮೊರೆಯುತ್ತಿವೆ ಈ ತಾಲ್ಲೂಕಿನಲ್ಲಿ ತೊಂದರೆ ಪಟ್ಟವರ ಗುರ್ತೇ ಸರಿಯಾಗಿ ಲ್ಲ. ಕಂದಾಯ ರಿಯಾಯಿತಿ ಬದಲು ನಿರ್ಬಂಧದ ಕಂಟ್ರಿಬ್ಯೂಷನ್ ದಾಖಲು. ಇದ ರಿಂದ ಕೆಲವು ಬಂಡವಾಳಗಾರರಿಗೆ ಮಾತ್ರ ಸೌಕರ್ಯ. ಇಲ್ಲಿ ಇರುವ ಕಾಂಗ್ರೆಸ್ ಕಮಿ ಟಿಯಾದರೂ ಇವುಗಳನ್ನು ಕ್ರಮಪಡಿಸ ಬಹುದೆಂತ ಅನೇಕರು ನಿರೀಕ್ಷಿಸುತ್ತಿರು ತ್ತಾರೆ.

ಯವಲ್ಲಿ ಮದರಾಸಿನಲ್ಲಿ ಆರಂಭಿಸಲಿದ್ದ ಮೈಸೂರು ಕಡೆಯಿಂದ ತಮ್ಮ ವ್ಯಾಪಾರ ಕ್ಕೆ ಹೈಕೋರ್ಟಿಯಿಂದಾಗುವುದೆಂದು ಭಾವಿ ಸಿ ಶ್ರೀ| ಸೀತಾರಾಮರಾಯರು ನಡೆಸಿದ ರಿಂದ ಹೇಳಲಾಗಿರುವ ಕೆಲವು ಕಾರ್ಯಕ್ರ ಮಗಳಿಂದ ಶ್ರೀ| ಗುರುರಾಜಾಚಾರ್ಯರಿಗೆ ಉಂಟಾದ ಮಾನೋ ವ್ಯಥೆ ಮತ್ತು ವ್ಯಾಪಾ ರದ ನಷ್ಟಗಳ ಬಗ್ಗೆ ಕೋರ್ಟಿನಿಂದ ಪರಿಹಾರ ವನ್ನು ಕೋರಿ ದಾವಾ ಹೂಡಿರುವುದಾ ಗಿ ತಿಳಿದು ಬಂದಿದೆ.

ANANDA SODA FACTORY

Best Aerated Water Suppliers.

Complete Requisites For Aerated Water Manufacturers Available.

ಆನಂದಾ ಸೋಡಾ ಫ್ಯಾಕ್ಟರಿ

ದೊಡ್ಡ ಪೇಟೆ, ಮೈಸೂರು.

ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆ.

ಶ್ರೀ|| ಎಲ್. ಎಸ್. ರಾಜುರವರ ಹೇಳಿಕೆ

ಮೈಸೂರು ನಾಗರಿಕ ಸ್ವಾತಂತ್ರ್ಯ ಸಂಘದ ಅಧ್ಯಕ್ಷರಾದ ಶ್ರೀ ಎಲ್. ಎಸ್. ರಾಜುರವರು ಒಂದು ಹೇಳಿಕೆಯನ್ನು ಹೊರಡಿಸಿ ರಾಜಕೋಟೆಯಲ್ಲಿ ಸ|| ಪಟೇಲರು ದೇಶೀಯ ಸಂಸ್ಥಾನಗಳ ಸಂಬಂಧವಾಗಿ ಹೇಳಿರುವ ಅಭಿಪ್ರಾಯವನ್ನು ಸ್ವಾಗತಿಸಿ ನಂತರ "ಅವರು ತಮ್ಮ ಅಭಿಪ್ರಾಯವನ್ನು ಒಳ್ಳೆಯ ಸಮಯದಲ್ಲಿ ಉಚಿತ ರೀತಿಯೊಡನೆ ವ್ಯಕ್ತ ಪಡಿಸಿದ್ದಾರೆ. ಅವರು ಫೆಡರೇಷನ್ನಲ್ಲಿ ಸಂಸ್ಥಾನಾಧಿಪರ ಪ್ರತಿನಿಧಿಗಳೊಡನೆ ಬ್ರಿಟಿಷ್ ಇಂಡಿಯಾ ಪ್ರಜೆಗಳ ಪ್ರತಿನಿಧಿಗಳು ಕೂಡ ಇರಬೇಕೆಂದು ಸ್ಪಷ್ಟವಾಗಿ ತಿಳಿಸಿರುವುದು, ದೇಶೀಯ ಸಂಸ್ಥಾನಗಳಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಯಾಗಲು ನಡೆಯುತ್ತಿರುವ ಚಳುವಳಿಗೆ ಅದ್ಭುತ ಬೆಂಬಲವನ್ನು ಕೊಟ್ಟಂತಾಗಿದೆ. ಭಾರತಕ್ಕೆ ನಿಜವಾದ ಫೆಡರೇಷನು ಬರಬೇಕು, ಇದಕ್ಕೆ ಮುಂಚೆ ಸಂಸ್ಥಾನಗಳಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಯಾಗಬೇಕು. ಇಷ್ಟೇ ಅಲ್ಲದೆ, ಫೆಡರೇಷನ್ ಬರಲಿ ಅಥವ ಬರದಿರಲಿ, ದೇಶೀಯ ಸಂಸ್ಥಾನಗಳಲ್ಲಿ ಜವಾಬ್ದಾರಿ ಸರ್ಕಾರ ಬೇಕು. ಪ್ರಗತಿಪರವಾದ ಮೈಸೂರು, ಜವಾಬ್ದಾರಿ ಸರ್ಕಾರ ಎಂಬ ಎರಡು ಪದಗಳಿಗೆ ಏಕೆ ಹೆದರುತ್ತದೆಯೋ ಅರ್ಥವಾಗುವುದಿಲ್ಲ. ಈ ಎರಡು ಪದಗಳೇ ಯಾವುದೇ ಸಂಸ್ಥಾನದ ಪ್ರಗತಿಗೆ ಅಸ್ತಿಭಾರದಂತಿರುವುವೆಂಬುದರಲ್ಲಿ ತಪ್ಪಾಗಲಾರದು. ಸಂಸ್ಥಾನ ಪ್ರಜೆಗಳು ಜವಾಬ್ದಾರಿ ಸರ್ಕಾರವನ್ನು ಪಡೆಯುವುದರಲ್ಲಿ ಸಂಶಯವಿಲ್ಲ. ಯಾವತ್ತಾದರೂ ಒಂದು ದಿನ ಇದು ಒಂದೇ ಬರಬೇಕು. ಈ ಸಮಯದಲ್ಲಿ ಈ ಪ್ರಶ್ನೆಯು ಪ್ರಾಮುಖ್ಯತೆಯನ್ನು ವಹಿಸಿರುವುದು ಸಂತೋಷದ ವಿಷಯ. ಸಂಸ್ಥಾನಗಳಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಯಾದರೆ, ಅಲ್ಲಿಯ ಸಂಸ್ಥಾನಾಧೀಶರಿಗೇ ಒಳ್ಳೆಯದು. ಮೈಸೂರು ಸರ್ಕಾರದ ಫೆಡರೇಷನು ಮತ್ತು ರಾಜಕೀಯ ಸುಧಾರಣಾ ಸಮಿತಿಗಳು ಸರ್ದಾರ್ ಪಟೇಲರ ಮಾತುಗಳನ್ನು ಗಮನದಲ್ಲಿಟ್ಟುಕೊಳ್ಳುವುವೆಂದು ನಾನು ನಂಬುತ್ತೇನೆ."

ಭಾವಚಿತ್ರ ಪ್ರಕಾಶನ

ದಿವಂಗತ ಆಸ್ಥಾನ ಧರ್ಮಾಧಿಕಾರಿ ವೇ|| ಬ್ರ|| ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯರ ಜ್ಞಾಪಕಾರ್ಥವಾಗಿ ಕಳೆದ 20 ನೇ ತಾ|| ಭಾನುವಾರ ಮೈಸೂರು ಸಂಸ್ಕೃತ ಪಾಠಶಾಲೆಯಲ್ಲಿ ಅವರ ಶಿಷ್ಯ ಮಂಡಲಿಯವರು ಆಚಾರ್ಯರ ಭಾವಚಿತ್ರ ಪ್ರಕಾಶನವನ್ನು ನಡೆಸಿದರು. ಶ್ರೀಮಾನ್ ಮಹಾರಾಜರ ಟಿ|| ಸಕ್ರೆಟರಿ ರಾವ್ ಶ್ರೀ|| ಎಂ. ರಾಮರಾಯರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಆಚಾರ್ಯರ ಜೀವನ ಚರಿತ್ರೆಯು ಸರ್ಕಾರ [illegible]

ಉಪಾಧ್ಯಾಯರ ಸಂಘ

ತಗಡೂರು.

ತಾ|| 13—3—38 ನೇ ಭಾನುವಾರ ಈ ಗ್ರಾಮದಲ್ಲಿ ಉಪಾಧ್ಯಾಯರ ಸಂಘವೊಂದನ್ನು ಸ್ಥಾಪಿಸಲು ಇದರ ಸಮೀಪದ ಗ್ರಾಮಗಳ ಉಪಾಧ್ಯಾಯರುಗಳಿಗೆ ಆಹ್ವಾನವನ್ನು ಕಳುಹಿಸಿಕೊಟ್ಟಿದ್ದಿತು. ಅದರಂತೆ ಎಲ್ಲರೂ ದಯಮಾಡಿಸಿದ್ದರು.

ಗರ್ಲ್ಸ್ ಸ್ಕೂಲ್ ಹೆ|| ಮಾ|| ಮ|| ಶಂಕರನಾರಣಪ್ಪನವರು ಸ್ಕೂಲ್ ಬಾಲಕಿಯರಿಂದ ದೇವರ ಪ್ರಾರ್ಥನೆಯನ್ನು ನಡೆಸಿದರು.

ಸ್ಕೂಲ್ ಬೋರ್ಡ್ ಅಸಿಸ್ಟೆಂಟ್ ಇನ್ಸ್ಪೆಕ್ಟರನಾದ ಶ್ರೀಮಾನ್ ಎಂ. ಸಿ. ಸುಬ್ಬಪ್ಪನವರು ಉಪಾಧ್ಯಾಯರ ಸಂಘದ ಉಪಯುಕ್ತ ವಿಷಯವಾಗಿ ಸ್ವಾರಸ್ಯವಾದ ಭಾಷಣವನ್ನು ಮಾಡಿದರು. ತಗಡೂರು ಪ್ರೈ|| ಸ್ಕೂ|| ಹೆ|| ಮಾ|| ಮ|| ದೇವರಾಜೇ ಅರಸಿನವರು ಉಪಾಧ್ಯಾಯರ ಸಂಘದ ಆವಶ್ಯಕತೆ ಮತ್ತು ಅನುಕೂಲತೆ ವಿಷಯವಾಗಿ ಭಾಷಣ ಮಾಡಿದರು. ಅಧ್ಯಕ್ಷರಾದ ಮ|| ಎಂ. ಸಿ. ನರಸಿಂಗರಾವ್‌ರವರು ಆರಂಭ ಭಾಷಣವನ್ನು ಉಪಾಧ್ಯಾಯರುಗಳ ಮತ್ತು ಪ್ರೇಕ್ಷಕರ ಮನಸ್ಸು ಕರಗುವಂತೆ ಸ್ವಾರಸ್ಯವಾಗಿ ಮಾಡಿದರು. ಶ್ರೀಗಳಾದ ಎಸ್. ಶ್ರೀನಿವಾಸಯ್ಯನವರಿಂದ ಭಾರತಪರಸ್ಪರ ಎಸ್. ನಂಜುಂಡಸ್ವಾಮಯ್ಯನವರಿಂದ ಲೇಖನವೂ ರಾಮಣ್ಣನವರಿಂದ ಪ್ರೋತ್ಸಾಹ ಬೋಧಕರ ಸಂಘದ ವಿಷಯವಾಗಿಯೂ ಸುತ್ತೂರು ಪ್ರೈ|| ಸ್ಕೂಲ್ ಹೆ|| ಮಾ|| ರಿಂದ ವಿದ್ಯಾಭ್ಯಾಸದ ಮಹತ್ವದ ವಿಚಾರವಾಗಿಯೂ ಉಪನ್ಯಾಸ ನಡೆದಿತು.

ಈ ಸಂಘಕ್ಕೆ ಸ್ಕೂ|| ಬೋ|| ಇ|| ಎಂ. ಸಿ. ಸುಬ್ಬಪ್ಪನವರು ಪ್ರೆಸಿಡೆಂಟರವರಾಗಿಯೂ ದೇವರಾಜೇ ಅರಸರವರು ಸಕ್ರೆಟರಿಯವರಾಗಿಯೂ ಸರ್ವಾನುಮತದಿಂದ ಚುನಾಯಿತರಾದರು. ಅಧ್ಯಕ್ಷರ ಮುಕ್ತಾಯ ಭಾಷಣವೂ ಶ್ರೀ ವಸ್ತ್ರಹಾರಾಜರ ವಂದನೆಯ ಪ್ರಾರ್ಥನೆಯೂ ನಡೆದು ರಾಷ್ಟ್ರಗೀತೆಯೊಡನೆ ಸಭೆಯು ಭರಖಾಸ್ತಾಯಿತು. ಪ್ರಜಾಹಿತೈಷಿ

ಛಾಯರು ಸಮ್ಮೇಳನ

ಮೈಸೂರು ಸಂಸ್ಥಾನದ ಛಾಯರುಗಳ 14 ನೇ ಸಮ್ಮೇಳನವು ಬರುವ ಏಪ್ರಿಲ್ 9 ಮತ್ತು 10 ನೇ ತಾ|| ಗಳಲ್ಲಿ ಮಂಡ್ಯದ ಶ್ರೀ ಜಯಚಾಮರಾಜೇಂದ್ರ ಟೌನ್ ಹಾಲಿನಲ್ಲಿ ನಡೆಯುವಂತೆ ಏರ್ಪಾಡಾಗಿದೆ. ಶ್ರೀ|| ಕೆ. ಟಿ. ಭಾಷ್ಯಂ ಅಯ್ಯಂಗಾರ್ಯರವರು ಅಧ್ಯಕ್ಷಸ್ಥಾನವನ್ನು ವಹಿಸುವರು. 9ನೇ ತಾ|| ಬೆಳಿಗ್ಗೆ ಹತ್ತು ಗಂಟೆಗೆ ಮೆರವಣಿಗೆಯೊಡನೆ ಕಾರ್ಯಕ್ರಮವು ಜರುಗುವುದು.

ಮಾದರಿ ಗೃಹಗಳ ಆರಂಭೋತ್ಸವ

ಮೈಸೂರು ಕರುಹಟ್ಟಿ, ಲಕ್ಷ್ಮೀಪುರದ ಹೊಸದಾಗಿ ಕಟ್ಟಲಾಗಿರುವ ಬಡವರ ಮಾದರಿ ಮನೆಗಳ ಆರಂಭೋತ್ಸವವನ್ನು ಶ್ರೀ ಮದ್ಯುವರಾಜರವರು ಏಪ್ರಿಲ್ 1ನೇ ತಾ|| ಶುಕ್ರವಾರ ಸಾಯಂಕಾಲ ನೆರವೇರಿಸುವರು.

ಚಿತ್ರಶಾಲಾ ಸ್ಪರ್ಧೆ ನಂ. ೪೫ ರ ಸರಿಯಾದ ಉತ್ತರ



ಬೇಕಾಗಿದೆ

ನಮ್ಮ ಫ್ಯಾಕ್ಟರಿಯಲ್ಲಿ ತಯಾರಾಗುವ ಬೆಂಕಿ ಪೆಟ್ಟಿಗೆ ಗಿರಾಕಿಗಳನ್ನೊದಗಿಸಲು ಅಖಿಲ ಕರ್ನಾಟಕದಲ್ಲಿಯೂ ಡಿಸ್ಟ್ರಿಬ್ಯೂಟರರ್, ಏಜಂಟರೂ ಬೇಕಾಗಿದೆ. ಇಷ್ಟವುಳ್ಳವರು 2 ಆಣೆ ಪೋಸ್ಟೇಜ್ ಸ್ಟಾಂಪಿನೊಡನೆ ಕೂಡಲೆ ಬರೆದುಕೊಳ್ಳಿರಿ.

ಶ್ರೀ ಸಂಜೀವಿನಿ ವರ್ಕ್ಸ್,
ಸೋಲ್ ಏಜಂಟ್ಸ್.
ಕೆನಾರ್ಂಬಿಕೆ ಅಂಡ್ ಬಸವಲಿಂಗಂ, ಮ್ಯಾಚ್ ವರ್ಕ್ಸ್,
2830 ಹಳ್ಳದಕೇರಿ, ಮೈಸೂರು.

ಅ ಮೃ ತಾ ೦ ಜ ನ

ಶೀಘ್ರವಾಗಿ ಗುಣಪಡಿಸುತ್ತದೆ.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ, ಬಿಳುಪು, ತಲೆ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ್ ಲಿಮಿಟೆಡ್
ಬೊಂಬಾಯಿ— ಮದರಾಸು.

೧೮೬೦ ನೇ ಬಹುಧಾನ್ಯನಾಮ ಸಂವತ್ಸರದ ಪಂಕ್ತಿ ಸೂಕ್ಷ್ಮ—ಸೌರಮಾನದ ರೀತ್ಯಾ

: ವರ್ಷ ಭವಿಷ್ಯ :

ಲೇಖಕರು — ಜ್ಯೋತಿರ್ವಿದ್ಯಾಭೂಷಣ, ಪಂಡಿತ ಶ್ರೀ ವೀರನಗೌಡರು, ವಿ. ಎಸ್. ಪಾಟೀಲ ಮೆಣಸಿಗಿ, ಭಾಗ್ಯೋದಯ ಪಂಚಾಂಗಕರ್ತರು, ಗದಗ ಸಿಟಿ.

ಮೇಷ ರಾಶಿ ಮೇಷ ಲಗ್ನ

ಈ ವರ್ಷ, ಗುರುವು ೧೧ನೇಯವನಾಗಿ, ಬೆಳ್ಳಿಯ ಪಾದದಿಂದ ಬಂದಿರುವನು. ಶನಿಯಾದರೂ ಈ ವರ್ಷ ಲೋಹ ಪಾದದಿಂದ ೧೨ನೇಯವನಾಗಿರುವನು! ಅಂದಾಗ್ಯೂ ಹರ ಮುನಿದರೆ, "ಗುರು ಕಾಯುವನೆಂಬ ವಾಕ್ಯದಂತೆ"

ಈ ವರ್ಷ ಅವರವರ ಜನ್ಮ ಕುಂಡಲಿಯ ಗ್ರಹಗಳ ಬಲಾ-ಬಲದಂತೆ ಅಕಸ್ಮಾತ್ ತಾ॥ ೧೫-೬-೩೮ ರಿಂದ, ೧೮-೬-೩೮ ರ ವರೆಗೆ, ಜನ್ಮದಲ್ಲ ಕಾಣದಂಥ ಚಿಕ್ಕಟ್ಟಿನ ಪ್ರಸಂಗಗಳನ್ನು ಕಾಣಬಹುದು! ಜಾಗ್ರತೆಯಿಂದಿರತಕ್ಕದ್ದು. ಮಿಕ್ಕಾದ ಕಾಲವು, ಸರ್ವಾನುಕೂಲ ದಿವಸಗಳೆಂದು ಕಂಡುಬರುತ್ತೆ!

ವೃಷಭ ರಾಶಿ—ವೃಷಭ ಲಗ್ನ

ಈ ವರ್ಷ ಗುರುವು ಲೋಹ ಪಾದದಿಂದ ಶನಿಯು ಸುವರ್ಣ ಪಾದದಿಂದ ಇರುವದರಿಂದ, ಅವರವರ ಜನ್ಮಲಗ್ನದ ಗ್ರಹಗಳ ಮೇಲೆ ಯಾವ ಗ್ರಹಗಳು ಶುಭಾ ಶುಭ ಫಲಗಳನ್ನು ಕೊಡುವವೋ ಆ ಪ್ರಕಾರ ಬುದ್ಧಿವಂತರಿಂದ ಪರಿಶೋಧಿಸಿಕೊಳ್ಳತಕ್ಕದ್ದು. ಆದರೆ, ತಾ॥ ೧೫-೪-೩೮ ರಿಂದ ೨೫-೫-೩೮ ರ ವರೆಗೆ ತಾ॥ ೧೯-೩೮ ರಿಂದ ೧೩-೧೦-೩೮ ರ ವರೆಗೆ ಒಳ್ಳೇ ಜಾಗ್ರತೆಯಿಂದಿರತಕ್ಕದ್ದು! ಉಳಿದ ಕಾಲವು "ಭಾಗ್ಯವೃದ್ಧಿಯೋಗವಿದೆ!" ಅಕಸ್ಮಾತ್ ಧನಯೋಗ, ಸ್ತ್ರೀಸಂಪತ್ತಿ ಸಂಪ್ರದ, ಮಂಗಲ ಕಾರ್ಯಯೋಗ, ಪ್ರಮೋಷನ್, ಬಡ್ತಿ, ಭಕ್ತಿ ಯೋಗ ಯಶಪ್ರದ! ಲಾಭ! ಮಾನ ಸನ್ಮಾನ ಯೋಗವಿದೆ! ನಿಶ್ಚಯ!

ಮಿಥುನ ರಾಶಿ—ಮಿಥುನ ಲಗ್ನ

ಈ ವರ್ಷ ಗುರುವು ತಾಮ್ರ ಪಾದದಿಂದಲೂ, ಶನಿಯಾದರೂ, ತಾಮ್ರ ಪಾದದಿಂದಲೂ, ಬಂದಿರುವದರಿಂದ "ಬಹು ಭಾಗ್ಯ ಯೋಗ ಉಂಟಾಗುತ್ತದೆ!" ಈ ಫಲವು ಅವರವರ ಜನ್ಮ ಲಗ್ನ ಕುಂಡಲಿಯ ಮೇಲೆ ಅವಲಂಬಿಸಿರುತ್ತೆ! ಆದರೆ ತಾ॥ ೧೫-೪-೩೮ ರಿಂದ ೩೦-೫-೩೮ ರವರೆಗೆ, ಇಲ್ಲವೆ ೨೫-೫-೩೮ ರಿಂದ ೧೫-೭-೩೮ ರವರೆಗೆ ಕಡುತರ ಕಷ್ಟವಾಗಿದೆ. ಮಿಕ್ಕಾದ ಕಾಲವು ಧನ ಕನಕಾದಿ ಸರ್ವ ಸುಖ ಭೋಗ ಯೋಗ ದಿವ್ಯ ಕಾಲವಾಗಿದೆ! ಖಂಡಿತ!

ಕರ್ಕ ರಾಶಿ—ಕರ್ಕ ಲಗ್ನ

ಈ ವರ್ಷ ಗುರು ಮಹಾರಾಜನು ೯ನೇಯವನಾದಾಗ್ಯೂ ಬೆಳ್ಳಿಯ ಪಾದದಿಂದ ಬಂದಿರುವುದರಿಂದಲೂ, ಶನಿಯಾದರೂ ಬೆಳ್ಳಿಯ ಪಾದದಿಂದ ಬಂದಿರುವದರಿಂದಲೂ, ತಾ॥ ೨೫-೬-೩೮ ರಿಂದ, ೨೫-೭-೩೮ ರ ವರೆಗೆ ಭಾಗ್ಯಶಾಲಿಗಳಿರತಕ್ಕದ್ದು ಕಡುತರ ಕಷ್ಟಕಾಲವೆಂದೇ ಗ್ರಹಿಸತಕ್ಕದ್ದು. ಮಿಕ್ಕಾದ ಕಾಲವು, 'ಒಳ್ಳೇ ಭಾಗ್ಯವೃದ್ಧಿ ಯೋಗವಿದೆ" ಸಂಶಯವಿಲ್ಲ. ಅವರವರ ಜನ್ಮ ಲಗ್ನದ ಕುಂಡಲಿಯ ಮೇಲಿಂದ ಅವರ ಯೋಗ್ಯತೆಗೆ ತಕ್ಕಂತೆ ವೃದ್ಧಿ ಕಾಲ ಸಂಭವ!

ಸಿಂಹ ರಾಶಿ—ಸಿಂಹ ಲಗ್ನ

ಈ ವರ್ಷ ಗುರುವು ಬೆಳ್ಳಿಯ ಪಾದದಿಂದ ೭ನೇಯವನಾಗಿಯೂ, ಶನಿಯು ಲೋಹಪಾದದಿಂದ ೮ನೇಯವನಾಗಿಯೂ, ಬಂದದ್ದರಿಂದ ತಾ॥ ೧೫-೬-೩೮ ರಿಂದ ೧೬-೧೦-೩೮ ರ ವರೆಗೆ ಒಳ್ಳೇ ದಕ್ಷತೆಯಿಂದಲೂ, ಹುಷಾರಿಯಿಂದಲೂ, ಇರತಕ್ಕದ್ದು. ಮಿಕ್ಕಾದ ಕಾಲವು "ಸರ್ವಾನುಕೂಲ ಯೋಗವಾಗಿದೆ!" ಆದರೂ ಅವರವರ ಜನ್ಮ ಚಕ್ರದ ಗ್ರಹಗಳ ಮೇಲಿಂದ, ಸುಖ ದುಃಖಗಳು ಸಮಾವೇಶವಾಗಿದೆ.

ಕನ್ಯಾ ರಾಶಿ—ಕನ್ಯಾ ಲಗ್ನ

ಈ ವರ್ಷ ಗುರು ಮಹಾರಾಜನು ಲೋಹ ಪಾದದಿಂದ ೬ನೇಯವನಾಗಿರುವದರಿಂದಲೂ, ಶನಿಯು ತಾಮ್ರ ಪಾದದಿಂದ ೭ನೇಯವನಾಗಿರುವದರಿಂದಲೂ ತಾ॥ ೧-೯-೩೮ ರಿಂದ ೩೦-೧೦-೩೮ ರ ವರೆಗೆ ಬಹು ಸಂಕಟವಾಗಿದೆ! ಎಚ್ಚರಿಕೆ!! "ಉಳಿದ ಕಾಲವು ಸರ್ವಾನುಕೂಲ ಯೋಗವಾಗಿದೆ" ಅವರವರ ಜನ್ಮದ ಗ್ರಹಗಳ ಮೇಲಿಂದ ಸುಖ-ದುಃಖಗಳು ಅವಲಂಬಿಸಿರುತ್ತವೆ!

ತುಲಾ ರಾಶಿ—ತುಲಾ ಲಗ್ನ

ಈ ವರ್ಷ ಗುರು ಮಹಾರಾಜನು ತಾಮ್ರ ಪಾದದಿಂದ ೫ನೇಯವನಾಗಿರುವದರಿಂದಲೂ, ಶನಿಯು ೬ನೇಯವನಾಗಿ ಸುವರ್ಣ ಪಾದದಿಂದ ಬಂದಿರುವದರಿಂದಲೂ, ತಾ॥ ೧೫-೪-೩೮ ರಿಂದ ಬಹು ಜಾಗ್ರತೆಯಿಂದಲೂ, ದಕ್ಷತೆಯಿಂದಲೂ ಇರತಕ್ಕದ್ದು! ಮಿಕ್ಕಾದ ಕಾಲವು, ಅಕಸ್ಮಾತ್ ಧನ ಪ್ರಾಪ್ತಿ, ಅಧಿಕಾರ ವೃದ್ಧಿ ಕೀರ್ತಿ ಯೋಗವೂ ಸರ್ವಾನುಕೂಲವೂ ಕಂಡು ಬರುತ್ತೆ! ಅವರವರ ಜನ್ಮ ಲಗ್ನದ ಗ್ರಹಗಳ ಪರಿಸ್ಥಿತಿಯ ಮೇಲಿಂದ ಫಲಗಳುಂಟಾಗುತ್ತವೆ. ಈ ರಾಶಿಯವರಿಗೆ ಈ ವರ್ಷ ಜನ್ಮದಲ್ಲಿ ಕಾಣದಂಥ ದಿವ್ಯ ಯೋಗ ಬಂದಿದೆ!!

ವೃಶ್ಚಿಕ ರಾಶಿ—ವೃಶ್ಚಿಕ ಲಗ್ನ

ಈ ವರ್ಷ ಗುರು ಮಹಾರಾಜನು ಬೆಳ್ಳಿಯ ಪಾದದಿಂದ ೪ನೇಯವನಾಗಿದ್ದರಿಂದಲೂ, ಶನಿ ಮಹಾರಾಜನು ಪಂಚಮ ಸ್ಥಾನದಲ್ಲಿದ್ದರೂ ಕೂಡ, ಬೆಳ್ಳಿಯ ಪಾದದಿಂದ ಬಂದಿರುವುದರಿಂದಲೂ ತಾ॥ ೧೫-೪-೩೮ ರ ವರೆಗೆ, ಕಡುತರ ಕಷ್ಟಕಾಲವಿದ್ದು ಅಕಸ್ಮಾತ್ ಕಷ್ಟ ನಷ್ಟಗಳಿಗೆ ಗುರಿಯಾಗುವ ಯೋಗವಿದೆ ಅತ್ಯಂತ ಭಯ ಕಾಲ ಯೋಗವಿದೆ! "ಉಳಿದಾದ ಕಾಲವು ದಿವ್ಯ ಯೋಗವಿರುವುದು ಕೀರ್ತಿ ಸ್ಫೂರ್ತಿ, ಜಯ, ಲಾಭ, ತುಂಬಾ ಲಭಿಸುವುದು. ಅವರವರ ಜನ್ಮ ಚಕ್ರದ ಆಧಾರದಿಂದ ಉದಯಕಾಲ ಪ್ರಮಾಣವನ್ನು ಸಿದ್ಧಮಾಡಲು ಅಡ್ಡಿಯಿಲ್ಲ.

ಧನು ರಾಶಿ—ಧನುರ್ಲಗ್ನ

ಈ ವರ್ಷ ಗುರು ಮಹಾರಾಜನು ಸುವರ್ಣ ಪಾದದಿಂದ ೩ನೇಯವನಾಗಿರುವುದರಿಂದಲೂ, ಶನಿಯು ೪ನೇಯವನಾಗಿ ಲೋಹ ಪಾದದಿಂದ ಬಂದಿರುವುದರಿಂದಲೂ, ತಾ॥ ೧೫-೭-೩೮ ರ ವರೆಗೆ ಕಡುತರ ಕಷ್ಟಕಾಲವಾಗಿರುವದು! ಎಚ್ಚರಿಕೆ!! ಹುಷಾರಿ!!! ಮಿಕ್ಕಾದ ಕಾಲವು ಸರ್ವಾನುಕೂಲವೆಂದು ತಿಳಿಯತಕ್ಕದು! ಅವರವರ ಜನ್ಮ ಲಗ್ನದಿಂದ, ಶುಭಾ ಶುಭ ಫಲಗಳನ್ನು ತಿಳಿದುಕೊಳ್ಳಬಹುದು!

ಮಕರ ರಾಶಿ—ಮಕರ ಲಗ್ನ

ನಿಯಮಗಳು — 1. ಮೊಹರಾದ ಉತ್ತರವು ಕೃಷ್ಣರಾಜಸಾಗರದ ಕೋ-ಆಪರೇಟಿವ್ ಸೊಸೈಟಿಯಲ್ಲಿ ಇಡಲ್ಪಟ್ಟಿರುತ್ತೆ. ಅದಕ್ಕೆ ಪ್ರತ್ಯಕ್ಷವಾಗಿ ಸರಿಹೋಲುವ ಉತ್ತರಕ್ಕೆ ಪ್ರಥಮ ಬಹುಮಾನ. 1 ಮತ್ತು 2 ತಪ್ಪಿನ ಉತ್ತರಗಳಿಗೆ ದ್ವಿತೀಯ ಮತ್ತು ತೃತೀಯ ಬಹುಮಾನಗಳು. 2. ಬಹುಮಾನಕ್ಕೆ ಯೋಗ್ಯವಾದ ಉತ್ತರಗಳು ಒಂದಕ್ಕಿಂತ ಹೆಚ್ಚಾಗಿದ್ದರೆ ಬಹುಮಾನದ ಹಣವು ಹಂಚಲ್ಪಡುವುದು. 3. ಪ್ರವೇಶಧನ ಕೂಪನ್ 1 ಕ್ಕೆ ನಾಲ್ಕಾಣೆ, 2 ಕ್ಕೆ ಎಂಟಾಣೆ, 3 ಕ್ಕೆ ಹನ್ನೆರಡಾಣೆ, 6 ಕ್ಕೆ ಒಂದು ರೂಪಾಯಿ. 4. ಉತ್ತರಗಳನ್ನು ಬಿಳಿಯ ಕಾಗದದಲ್ಲಿ ಚಿತ್ರಿಸಿದಂತೆ ಶಾಯಿಯಲ್ಲಿ ಬರೆಯಬೇಕು. ಮುದ್ರಣವಾದ ಕೂಪನ್ನುಗಳು ಸಾಲದಿದ್ದಲ್ಲಿ ಸೂಚಿತವ ಆಕಾರದಲ್ಲಿಯೇ ಬರೆದು ಕಳುಹಿಸಬಹುದು. ಚಿತ್ರಿಸಿರುವ ಕೂಪನ್ನುಗಳಿಗೆ ಶುಲ್ಕ ಇಲ್ಲ. 5. ಪ್ರವೇಶಧನವನ್ನು 'ಇಂಡಿಯನ್ ಪೋಸ್ಟಲ್ ಆರ್ಡರ್' ಅಥವಾ ಮನಿಯಾರ್ಡರ್ ಮೂಲಕ ಕಳುಹಿಸಬೇಕು. ಮನಿಯಾರ್ಡರು ರಶೀದಿ ಅಥವಾ ಪೋಸ್ಟಲ್ ಆರ್ಡರ್, ಕೂಪನ್ನಿಗೆ ಲಗತ್ತಿಸಬೇಕು. 6. ಸಮಸ್ಯೆಯ ಎಲ್ಲಾ ವಿಚಾರದಲ್ಲಿಯೂ ಮ್ಯಾನೇಜರ ತೀರ್ಮಾನವೇ ಕೊನೆಯದೆಂದೂ, ಆ ಬಗ್ಗೆ ಯಾವ ವಿಧವಾದ ಪತ್ರವ್ಯವಹಾರಕ್ಕೂ ಅವಕಾಶವಿಲ್ಲವೆಂದೂ, ಉತ್ತರಗಳನ್ನು ಕಳುಹಿಸುವವರೆಲ್ಲರೂ ಈ ನಿಯಮಗಳಿಗೆ ಒಪ್ಪಿರುವರೆಂದೂ ಭಾವಿಸಲ್ಪಡುವುದು. 7. ಒಂದು ಸಮಸ್ಯೆಗಾಗಿ ಕಳುಹಿಸಿದ ಪ್ರವೇಶಧನವನ್ನು ಯಾವಕಾರಣದಿಂದಲೂ ಮತ್ತೊಂದು ಸಮಸ್ಯೆಗಾಗಿ ತೆಗೆದುಕೊಳ್ಳಲಾಗುವುದಿಲ್ಲ. ಅಥವಾ ವಾಪಸ್ ಕೊಡಲಾಗುವುದಿಲ್ಲ. 8. ಮೊಹರಾದ ಉತ್ತರವು ತಾರೀಖು ಮುಂದಿನ ಸಮಸ್ಯೆ ಯೊಡನೆ 25—4—38 ರ 'ಸಾಧ್ವಿ' ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವುದು. ಬಹುಮಾನವನ್ನು ಹಂಚುವ ವಿವರವು, ತಾರೀಖು 23—5—38 ರ 'ಸಾಧ್ವಿ' ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವುದು. 9. ಕೃಷ್ಣರಾಜಸಾಗರದಲ್ಲಿ ಉತ್ತರಗಳು ಪ್ರವೇಶಧನದೊಡನೆ ತಾರೀಖು 16—4—38ರ ಸಾಯಂಕಾಲ 5 ಘಂಟೆಯೊಳಗಾಗಿ ಸಾದರಪಡಿಸಬೇಕು.

ಸರಸಕಲಾ ಸಮಸ್ಯೆ ನಂ ೨. ಕೂಪನ್ ನಂ ...



ಮ್ಯಾನೇಜರ ತೀರ್ಮಾನಕ್ಕೆ ಬದ್ಧನಾಗಿರುತ್ತೇನೆ

ಹೆಸರು ....

ವಿಳಾಸ ....

.... ಪೋ॥ ಆ॥ ನಂ॥ ....

ಎಡದಿಂದ ಬಲಕ್ಕೆ :—೧. ಫಾಲ್ಗುಣ ಮಾಸದಲ್ಲಿ ಈ ಹಬ್ಬ. ೩. ಪ್ರಯಾಣ ಮತ್ತು ಶುಭ ಕಾರ್ಯಗಳಲ್ಲಿ ಇದನ್ನು ಅನೇಕರು ಪರಿಗಣಿಸುವರು. ೬. ಶ್ರೀರಾಮನು ಇದರಲ್ಲಿ ಜನಿಸಿದನು. ೮. ಪಕ್ಷಿ ಎಂಬುದಕ್ಕೆ ಬದಲಾಗಿ ಉಪಯೋಗಿಸುವ ಪದ. ೯. ಮಹಾಕಾವ್ಯದಲ್ಲಿ ಪ್ರಮುಖನನ್ನು ಕುರಿತು ಹೇಳುವುದು. ೧೧. ಹಳೆಯ ಕಾಲದವರು ಪುಸ್ತಕದ ಮೇಲೆ ಅದನ್ನು ಕೊಟ್ಟಿದ್ದಾರೆ. ೧೨. ನವಿಲಿನ ಕಣ್ಣನ್ನು ಹೋಗಿಸುವುದು. ೧೪. ಹತ್ತಿರದಲ್ಲಿ ಇವರ ಚಿತ್ರವು ಕೇಳಿಸುತ್ತಿದ್ದರೆ ಸಿದ್ಧಿಯೇ ಬರುವುದಿಲ್ಲ. ೧೬. ಗಂಟು. ೧೮. ಭೂಮಿ. ೨೦. ಬೇಡನು ನೋಡಿದ ಜೋಡಾದರೆ ತಕ್ಕ ಇದೂ ಬೇಕು. ೨೧. ಇದು ಹೇಗಿದೆಯೆಂಬುದನ್ನು ನೋಡಲು ಬೇಕು ಬೇಕು. ೨೨. ಪ್ರಿಯ ವಸ್ತು.

ಮೇಲಿನಿಂದ ಕೆಳಕ್ಕೆ :—೧. ಶ್ರೀ ಕೃಷ್ಣನನ್ನು ಹೋಗಿಸುವುದು. ೨. ಆಂಜನೇಯ. ೪. ವೇಗವಾಗಿ ಓಡುವ ಪ್ರಾಣಿ. ೫. ಹಾಸ್ಯಗಾರನ ಮಾತಿಗೆ ಎಲ್ಲರೂ ... ವರು. ೭. "ಕೇಶವ" ಎಂಬ ಪದವು ಇದಾಗಿದೆ. ೧೦. ಸರಪಳಿಯ ಒಂದು ಬಿಡಿ ಮಾತ್ರ. ಪಾರಸ್ಯ. ೧೩. ಸುವ್ಯಕ್ತ. ೧೫. ನಾಟಕರಂಗದಲ್ಲಿ ಈತನ ಕಾರ್ಯವು ಜನರು ಮೆಚ್ಚುವಂತಿರಬೇಕು. ೧೭. ಹೆಚ್ಚು ಅನಾರೋಗ್ಯವಿದ್ದವರು ಇದನ್ನು ಪದೇ ಪದೇ ತಿನ್ನಬಹುದು. ಬಡವರಿಗೆ ಇದೇ ಬೇಕೆಂಬುದಿಲ್ಲ. ೧೮. ಊರೂರಿಗೂ ಇದೊಂದುಂಟು. ೧೯. ಕಾಣದುದು ಕಾಣಿಸುವುದು ಇತರಿಂದ.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

— ಬಾಲಸುಧಾ —

ಮಕ್ಕಳ ಜ್ವರದ ಗಡ್ಡೆಯನ್ನು ಶೀಘ್ರ ಗುಣ ಪಡಿಸುತ್ತೆ. ಲಿವರ್ (ಪಿತ್ತಕೋಶ) ದಪ್ಪನಾಗಿ ಕಣ್ಣು ಹಳದಿ ಬಣ್ಣವಾಗಿದ್ದರೆ ಇದರ ಸೇವನೆಯಿಂದ ವಿಶೇಷ ಗುಣವಾಗುತ್ತೆ. 20 ವರ್ಷಗಳಿಂದಲೂ ಅನುಭವ ಸಿದ್ಧವಾಗಿದೆ—ದುರ್ಬಲ ಶರೀರಿಗೆ ನಮ್ಮ ಬಾಲಸಂಜೀವಿನಿಯು ಶ್ರೇಷ್ಠ ಉಪಯೋಗಿ.

ಬಾಲಸುಧಾ ಬೆಲೆ 1 ರೂ. ಬಾಲಸಂಜೀವಿನಿ ೪ ಆ

ಮೈಸೂರು, ಬೆಂಗಳೂರು, ಮದ್ರಾಸುಗಳಲ್ಲಿ ನಮ್ಮ ಏಜೆಂಟರಿದ್ದಾರೆ.

ಸದ್ವೈದ್ಯಶಾಲಾ, ನಂಜನಗೂಡು

ಬೇಕಾಗಿದೆ

ನಮ್ಮ ಫ್ಯಾಕ್ಟರಿಯಲ್ಲಿ ತಯಾರಾಗುವ ಬೆಂಕಿ ಪೆಟ್ಟಿಗೆಗೆ ಗಿರಾಕಿಗಳನ್ನೊದಗಿಸಲು ಅಖಿಲ ಕರ್ನಾಟಕದಲ್ಲಿಯೂ ಡಿಸ್ಟ್ರಿಬ್ಯೂಟರು, ಏಜಂಟರು ಬೇಕಾಗಿದೆ. ಇಷ್ಟವುಳ್ಳವರು ೨ ಆಣೆ ಪೋಸ್ಟೇಜ್ ಸ್ಟ್ಯಾಂಪಿನೊಡನೆ ಕೂಡಲೆ ಬರೆದುಕೊಳ್ಳಿರಿ.

ಶ್ರೀ ನಂದೀಶ್ವರ ವರ್ಕ್ಸ್,

ಸೋಲ್ ಏಜೆಂಟ್ಸ್.

ರಮಾಕಾಂತ ಅಂಡ್ ಬಸವಲಿಂಗಂ, ಮ್ಯಾಚ್ ವರ್ಕ್ಸ್,

೨೯೨೦ ಹಳ್ಳದಕೇರಿ, ಮೈಸೂರು.

MYSORE RACES & GOLD CUP SWEEP 1938.

Races on—28th May, 1st, 4th, 7th, 9th, and 11th June.

GOLD CUP SWEEP:—(BY PERMISSION OF THE GOVERNMENT OF MYSORE)

Half Tickets. Rs. 2—8—0 each.

Full Tickets. Rs. 5—0—0 each.

To close on 25th May 1938.

Drawing on 3rd June 1938

Bonus given to sellers of winning tickets

Total collection of 1937—Rs. 43,000/—

For prospectus and particulars apply to:

Honorary Secretr[illegible]

MYSO[illegible] CES.



॥ ಸತ್ಯಮೇವೋದ್ಧರಾಮ್ಯಹಮ್ ॥

ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.

ವೃದ್ಧ ಓದಾರ್ಯ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.

ಸಂಪಾದಕರು.. ಅಗರಂ ರಂಗಯ್ಯ, ಬಿ.ಎ.

ಸಂಪುಟ ೪] MYSORE : MONDAY 11—4—38 — ಮೈಸೂರು : ಸೋಮವಾರ ೧೧—೪—೩೮ [ಸಂಚಿಕೆ ೬

ದಿವಾನರುಗಳಿಗೆ ಐದೈದು ವರ್ಷ

[illegible]

ಮಂತ್ರಿಗಳು ಬೀದಿ ಗುಡಿಸಿದರು

[illegible]

ತಿರುವಾಂಕೂರಿನಲ್ಲಿ [illegible]

[illegible]

ಪ್ರಕೃತಿ [illegible]

[illegible]

ಪಾರ್ಲಿಮೆಂಟಿನಲ್ಲೂ ತಕರಾರು

[illegible]

ಪಂಚಿನ ಆಗಮನ

[illegible]

ರಾಜಕೀಯವಾದರೆ [illegible]

[illegible]

ಜವಾಬ್ದಾರಿ ಸರ್ಕಾರವೆಂದರೇನು?

ಲೇಖಕರು:—ಶ್ರೀ।। ಎಂ. ಎಸ್. ಸೀತಾರಾಮಯ್ಯನವರು.

ಈಗಿನ ಕಾಲದಲ್ಲಿ ಕಾಂಗ್ರೆಸ್, ಸ್ವರಾಜ್ಯ, ಜವಾಬ್ದಾರಿ ಸರ್ಕಾರ ಎಂಬ ಹೆಸರುಗಳು ದಿನಕ್ಕೆ ೮-೧೦ ಸಾರಿಯಾದರೂ ನಮ್ಮ ಕಿವಿ ಮೇಲೆ ಬೀಳದೆ ಇರುವುದಿಲ್ಲ. ಆದುದರಿಂದ ಈ "ಸ್ವರಾಜ್ಯ—ಜವಾಬ್ದಾರಿ ಸರಕಾರ" ಎಂದರೆ ಏನೆಂಬುದನ್ನು ತಿಳಿದುಕೊಳ್ಳುವುದು ಆವಶ್ಯಕ.

ಸ್ವ ಅಂದರೆ ನಮ್ಮ ರಾಜ್ಯಕ್ಕೆ 'ಸ್ವರಾಜ್ಯ' ಎಂದು ಹೆಸರು. ಈಗ ದೇಶದಲ್ಲಿ ರಾಜ್ಯವಿದೆ. ಆದರೆ ಇದು ನಮ್ಮದಲ್ಲ ಎಂದರೆ ನಮ್ಮ ಅಧೀನದಲ್ಲಿಲ್ಲ. ಪರಕೀಯರ ಅಧೀನ. ನಮ್ಮಿಂದ ಒಂದು ಹಣವನ್ನು ಕಸಿಯಬೇಕಾದರೆ, ಅದರ ಖರ್ಚಿನ ತರದಲ್ಲಿ ಸಂಪಾದನೆ ಅಥವಾ ಖರ್ಚಿನಲ್ಲಿ ಲಾಭ ಅಥವಾ ನಷ್ಟದಲ್ಲಿ ನಮಗೆ ಅಧಿಕಾರವೂ, ಸ್ವತಂತ್ರವೂ ಇರಬೇಕಲ್ಲವೆ? ನಾಗರಿಕರಾದ ಪ್ರಜೆಗಳಾದವರೂ ಒಂದು ರಾಜ್ಯವನ್ನು ನಮ್ಮ ರಾಜ್ಯವೆನ್ನಬೇಕಾದರೆ ಆ ರಾಜ್ಯದ ವಿಷಯದಲ್ಲಿಯೂ ಹಾಗೆಯೇ ಇರಬೇಕು. ಆದರೆ ಈಗ ಹಾಗಿಲ್ಲ. ರಾಜ್ಯದ ಖಜಾನೆ ಆಡಳಿತದ ಮೇಲೂ ಪ್ರಜೆಗಳಿಗೆ ಅಧಿಕಾರವಿಲ್ಲ. ರಾಜ್ಯವನ್ನು ನಡೆಸುವ ಹಣದ ಉಪಯೋಗಗಳ, ಕೆಟ್ಟದು ಒಳ್ಳೆಯದರ ಮೇಲೂ ನಮಗೆ ಅಧಿಕಾರವಿಲ್ಲ. ರಾಜ್ಯದ ಉತ್ಪತ್ತಿಯ ವಿಷಯದಲ್ಲಿಯಾಗಲಿ ಆಗುತ್ತಿರುವ ಖರ್ಚಿನ ವಿಷಯದಲ್ಲಿಯಾಗಲಿ ಅಧಿಕಾರವಿಲ್ಲ. ನಮಗೆ ವಿಧಾಯಕವಾದ ಕಂದಾಯವನ್ನಾಗಲಿ ತೆರಿಗೆಯನ್ನಾಗಲಿ ಕೊಡಲೇಬೇಕೆನ್ನುವುದು ಅಷ್ಟೇ ಹೊರತು, ಆ ಕಂದಾಯ ತೆರಿಗೆಯು ಹಣವಾಗಬೇಕೆಂದಾಗಲಿ, ಏತಕ್ಕೆ, ಎಷ್ಟು ಖರ್ಚಾಗಬೇಕೆಂದಾಗಲಿ ನಿರ್ಧರಿಸುವ ಸ್ವತಂತ್ರವು ಪ್ರಜೆಗಳಿಗಿಲ್ಲ. ಪ್ರಜೆಗಳಿಂದ ಬರುತ್ತಿರುವ ಕಂದಾಯವೆಂಬ ಉತ್ಪತ್ತಿಯಿಂದ ಸಂಬಳಸಾರಿಗೆಗಳನ್ನು ತೆಗೆದುಕೊಳ್ಳುತ್ತಿರುವ ಅಧಿಕಾರಿಗಳು ಅವರ ಸಂಬಳಗಳಿಗೆ ಆಧಾರವಾದ ಕಂದಾಯವನ್ನು ಕೊಡುವ ಪ್ರಜೆಗಳ ಅಧೀನರಲ್ಲ. ಆ ಪ್ರಜೆಗಳ ಇಷ್ಟದಂತೆ ನಡೆಯಬೇಕೆಂಬ ವಿಧಾಯಕವಿಲ್ಲ. ತಾವು ಮಾಡುತ್ತಿರುವ ಕೆಲಸ ಕಾರ್ಯಗಳ ವಿಷಯದಲ್ಲಿ ಪ್ರಜೆಗಳಿಗೆ ಜವಾಬು ಹೇಳಬೇಕಾಗಿಲ್ಲ; ಪ್ರಜೆಗಳಿಗೆ ಜವಾಬ್ದಾರರಲ್ಲ. ಅನೇಕ ವೇಳೆ ಪ್ರಜೆಗಳ ಮನಸ್ಸಿನ ನಿಜವಾದ ಅನುಭವವು ಅವರಿಗೆ ಇರುವುದು ಸಾಧ್ಯವಿಲ್ಲ. ಪ್ರಜೆಗಳು ಏನನ್ನಾದರೂ ಬೇಡಿದರೆ ಅಧಿಕಾರಿಗಳು ದಯಮಾಡಿದರೆ ನಡೆಸಬಹುದು ಇಲ್ಲವಾದರೆ ಇಲ್ಲ. ಅವರನ್ನು ದಂಡಿಸುವ ಅಧಿಕಾರವು, ಆವಶ್ಯಕವಾದರೆ ಅವರನ್ನು ದಂಡಿಸುವ ಹಕ್ಕು ಪ್ರಜೆಗಳಿಗಿಲ್ಲ. ಏಕೆಂದರೆ ಅವರನ್ನು ನೇಮಿಸಿದವರು ಪ್ರಜೆಗಳಲ್ಲ, ಪ್ರಜೆಗಳಿಂದ ಚುನಾಯಿಸಲ್ಪಟ್ಟವರಲ್ಲ. ಅವರಾಗಿದ್ದರೆ ಅವರಿಂದ ತಮಗೆ ಬೇಕಾದುದನ್ನು ಪಡೆಯುವ ಹಕ್ಕು, ಆವಶ್ಯಕವಾದರೆ ಬದಲಾಯಿಸುವ ಹಕ್ಕು ಪ್ರಜೆಗಳಿಗೆ ಇರುತ್ತಿತ್ತು. ಆ ಅಧಿಕಾರವು ತಕ್ಕ ಪ್ರಜೆಗಳಿಗೆ ಇದೆಯೆಂದು ಅಧಿಕಾರಿಗಳಿಗೆ ಗೊತ್ತಾದರೆ ಆಗ ಅವರು ಯಾವಾಗಲೂ ತಮ್ಮ ಲಕ್ಷ್ಯವನ್ನೆಲ್ಲಾ ಪ್ರಜೆಗಳ ಕಡೆ ಇಡುತ್ತಾರೆ. ಪ್ರಜೆಗಳಿಗೆ ಯಾವುದು ಬೇಕೋ ಅದನ್ನು ಮಾಡಬೇಕಾಗುತ್ತೆ. ಪ್ರಜೆಗಳಿಗೆ ಯಾವುದು ಬೇಡವೋ ಅದನ್ನು ಬಿಡಬೇಕಾಗುತ್ತೆ. ಆದುದರಿಂದ ಪ್ರಜೆಗಳ ನಂಬಿಕೆಗೆ ಪಾತ್ರರಾಗಿರುವವರೆಗೂ ಅವರು ಅಧಿಕಾರದಲ್ಲಿರುತ್ತಾರೆ. ಆದರೆ ಈ ನಂಬಿಕೆಯನ್ನು ಕಳೆದುಕೊಂಡ ಕೂಡಲೇ ಅಧಿಕಾರಗಳನ್ನು ಕಳೆದುಕೊಳ್ಳುತ್ತಾರೆ. ಏಕೆಂದರೆ ಅವರು ತಮ್ಮ ಎಲ್ಲಾ ಕೆಲಸಗಳಲ್ಲೂ ಪ್ರಜೆಗಳಿಗೆ ಜವಾಬ್ದಾರರಾಗಿರಬೇಕಾಗುತ್ತೆ. ಈ ಪ್ರಕಾರ ಇರುವುದನ್ನೇ "ಜವಾಬ್ದಾರಿ ಸರ್ಕಾರ" ಎನ್ನುತ್ತಾರೆ.

ಇಂಗ್ಲೆಂಡಿನಲ್ಲಿ ಹೆಸರಿಗೆ ಅರಸನಿದ್ದರೂ ಅಧಿಕಾರಗಳೆಲ್ಲವೂ ಪ್ರಜೆಗಳ ಅಧೀನದಲ್ಲಿವೆ. ದೊಡ್ಡ ದೊಡ್ಡ ಸಮಾರಂಭಗಳಲ್ಲಿ ಅವನ ಮೆರವಣಿಗೆಯು ದೇವರ ಮೆರವಣಿಗೆಯಂತೆ ಹೊರಡುತ್ತವೆ. ಆದರೆ ರಾಜ್ಯದ ಕಾರ್ಯಭಾರವನ್ನು ನಡೆಸುವ ಅಧಿಕಾರವು ಮಾತ್ರ ಪ್ರಜೆಗಳಿಂದ ಚುನಾಯಿತರಾದವರಿಗಿರುವುದು.

ಬ್ರಿಟಿಷರು ತಮ್ಮ ರಾಜ್ಯದಲ್ಲಿ ಎಂಥಾ ಸ್ವಾತಂತ್ರ್ಯವನ್ನು ಅನುಭವಿಸುತ್ತಿರುವರೋ ನಮಗೂ ಅಷ್ಟು ಸಿಕ್ಕಬೇಕು. ಇಂಗ್ಲೆಂಡು ಮೊದಲಾದುವುಗಳಂತೆ ಒಳ ಆಡಳಿತ, ಸೈನ್ಯ, ಹಣಕಾಸು, ವಿದೇಶಾಂಗ ಮೊದಲಾದ ಯಾವ ವಿಷಯದಲ್ಲೂ ಇತರರಿಗೆ ಅಂಕೆ ಅಧೀನವಿಲ್ಲದೆ ಪ್ರಜೆಗಳ ಹಿತವನ್ನು ಕೋರುವ ಪ್ರಜಾಪ್ರಭುತ್ವವಿರುವ ರಾಜ್ಯಕ್ಕೆ ಸ್ವರಾಜ್ಯವೆಂದು ಹೆಸರು.

ಸ್ವರಾಜ್ಯ ಪ್ರಶ್ನೆಯೆಂದರೆ ರಾಜ್ಯಕಾರಭಾರ ಪ್ರಶ್ನೆ. ಸ್ವರಾಜ್ಯವೆಂದರೆ ಪ್ರಜೆಗಳ ರಾಜ್ಯ. ಪ್ರಜೆಗಳ ಅಧಿಕಾರ ಸತ್ತೆಯಿರುವ ಸ್ವತಂತ್ರ ರಾಜ್ಯ. ಪೂರ್ಣ ಸ್ವರಾಜ್ಯ. ಇಂಥ ಸ್ವರಾಜ್ಯವನ್ನು ಸಂಪಾದಿಸಬೇಕಾದುದು ಎಲ್ಲರ ಕರ್ತವ್ಯವಾಗಿದೆ. ಏಕೆಂದರೆ ಅದೊಂದಿಲ್ಲದಿದ್ದರೆ ನಮ್ಮ ದುಃಖಗಳು ಕಡಮೆಯಾಗಲಾರವು. ಇದನ್ನು ಸತ್ಯವೂ, ಶಾಂತಿಯುತವೂ ಆದ ಮಾರ್ಗದಿಂದ ಸಂಪಾದಿಸೋಣ.

ರೈಲ್ವೆ ನೌಕರರ ವಿಚಾರ

ಇದುವರೆಗೂ ವರ್ಕ್‌ಷಾಪಿನ ಕೂಲಿಗಾರರ ಮತ್ತು ಅಪ್ರೆಂಟಿಸ್‌ಗಳ ವಿಚಾರ ತಿಳಿಸಿದ್ದಾಯಿತು. ಈಗ ರೈಲ್ವೆ ವಿಭಾಗಕ್ಕೆ ಮುಖ್ಯರಾದ ಟ್ರಾಫಿಕ್ ನೌಕರರ ವಿಚಾರವನ್ನು ಕೊಂಚಮಟ್ಟಿಗೆ ಬರೆಯುತ್ತೇವೆ. ಇವರಲ್ಲಿ ಅಧಿಕಾರಿಗಳು, ಮಿನಿಸ್ಟೀರಿಯಲ್, ಸ್ಟೇಷನ್ ಸ್ಟಾಫ್ ಮತ್ತು ರನ್ನಿಂಗ್ ಸ್ಟಾಫ್ ಎಂದು ನಾಲ್ಕು ಭಾಗಗಳಾಗಿವೆ. ಒಂದನೇ ಭಾಗಕ್ಕೆ ಸೇರಿದ ಅಧಿಕಾರಿಗಳು ೧೦೦ ರೂ. ಗಳಿಂದ ಪ್ರಾರಂಭಿಸಿದರೆ ಎರಡು ವರುಷಗಳಲ್ಲಿ ೨೦೦ ರೂ. ಗಳಿಗೂ ೮—೧೦ ವರ್ಷಗಳಲ್ಲಿ ೮೦೦ ಮತ್ತು ೧೦೦೦ ರೂ. ಗಳಿಗೂ ಏರಿಸಲ್ಪಟ್ಟಿದ್ದಾರೆ. ಎರಡನೇ ಭಾಗದ ಮಿನಿಸ್ಟೀರಿಯಲ್ ಸ್ಟಾಫ್ ೩೫ ರೂ. ನಿಂದ ಪ್ರಾರಂಭವಾದರೆ ೮—೧೦ ವರ್ಷಗಳಲ್ಲಿ ೫೦ ರೂ. ಗಳಿಗೂ ೨೦ ವರ್ಷಗಳಲ್ಲಿ ೬೦ ರೂ. ಗಳಿಗೂ ಏರಿಸಲ್ಪಟ್ಟಿದ್ದಾರೆ. ಮೂರನೆ ಭಾಗದ ಸ್ಟೇಷನ್ ಸ್ಟಾಫ್ ೨೦ ರೂ. ಗಳಿಂದ ಪ್ರಾರಂಭಿಸಿ ೧೦ ವರ್ಷಗಳಲ್ಲಿ ೩೫ ರೂ. ಗಳನ್ನು ೨೦ ವರ್ಷಗಳಲ್ಲಿ ೮೫ರೂ. ಗಳನ್ನೂ ಪಡೆದಿದ್ದಾರೆ. ನಾಲ್ಕನೇ ಭಾಗದ ರನ್ನಿಂಗ್ ಸ್ಟಾಫ್ ೨೦ ರೂ. ಗಳಿಂದ ಪ್ರಾರಂಭಿಸಲ್ಪಟ್ಟು ೧೦ ವರ್ಷಗಳಲ್ಲಿ ೩೦ ರೂ. ಗಳನ್ನು, ೨೦ ವರ್ಷಗಳಲ್ಲಿ ೪೫ ರೂ. ಗಳನ್ನೂ ಪಡೆದಿದ್ದಾರೆ. ಒಟ್ಟಿನಲ್ಲಿ ಇವರುಗಳಿಗೆ ಇರತಕ್ಕ ಬಡಾವಣೆಗಳನ್ನು ನೋಡಿದರೆ ಒಂದನೇ ಭಾಗದವರಿಗೆ ಪ್ರಾರಂಭಿಸಲ್ಪಟ್ಟಾಗ ಇದ್ದ ವೇತನವು ಸೇರಿದ ೧೦ ವರ್ಷಗಳ ಅವಧಿಯಲ್ಲಿ ಎರಡರಷ್ಟಾಗಿಯೂ ಇಪ್ಪತ್ತು ವರ್ಷಗಳಲ್ಲಿ ೩ ಅಥವಾ ೪ ರಷ್ಟಾಗಿಯೂ ಜಾಸ್ತಿ ಮಾಡಲ್ಪಟ್ಟಿದೆ. ಎರಡನೇ ಭಾಗದ ಮಿನಿಸ್ಟೀರಿಯಲ್ ಕೆಲಸಗಾರರೂ ಸಹ ಇದೇ ರೀತಿ ಮೊದಲನೇ ೧೦ ವರ್ಷಗಳ ಅವಧಿಯಲ್ಲಿ ಎರಡರಷ್ಟಾಗಿಯೂ ೨೦ ವರ್ಷಗಳಲ್ಲಿ ಮೂರರಷ್ಟಾಗಿಯೂ ಪಡೆದಿದ್ದಾರೆ. ಮೂರನೇ ಭಾಗದವರಾದ ಸ್ಟೇಷನ್ ಸ್ಟಾಫ್ ಪ್ರಾರಂಭಿಸಲ್ಪಟ್ಟಾಗಿದ್ದ ವೇತನವನ್ನು ಹತ್ತು ವರ್ಷಗಳಲ್ಲಿ ಒಂದೂವರೆಯಷ್ಟು ಇಪ್ಪತ್ತು ವರ್ಷಗಳಲ್ಲಿ ಒಂದೂ ಮುಕ್ಕಾಲಿನಷ್ಟು ಪಡೆದಿರುತ್ತಾರೆ. ನಾಲ್ಕನೇ ಭಾಗದ ರನ್ನಿಂಗ್ ಸ್ಟಾಫ್‌ಗೂ ಸಹ ಹೇಳ್ಪಂತ ಮೂರನೆ ಭಾಗದವರಷ್ಟೇ ಅನುಕೂಲವಾಗಿರುತ್ತೆ.

ಈಗ್ಗೆ ಸುಮಾರು ಹದಿನೆಂಟು ವರ್ಷಗಳಿಂದಲೂ ಮೂರು ಮತ್ತು ನಾಲ್ಕನೇ ದರ್ಜೆಗಳನ್ನು ಬದಲಾಯಿಸಲ್ಪಡದೇ ಇರುವ ಮತ್ತು ಇವರಿಗಿಂತಲೂ ಕೆಳಗಿನ ದರ್ಜೆಯಲ್ಲಿ ಕೆಲ್ಸ ಮಾಡುವ ವಿಸಾಬ್ಯಲ್ಸ್‌ಗಳೂ ಸಹ ೧೯೩೮ ನೇ ಜನವರಿಯನ್ನೇ ಎದುರು ನೋಡುತ್ತಾ ಇದ್ದರು. ಏಕೆಂದರೆ ಎಂ. ಎಸ್. ಎಂ. ರೈಲ್ವೆಯಿಂದ ಮೈಸೂರು ರೈಲ್ವೆಗೆ ಸೇರಿಸಲ್ಪಟ್ಟಿರುವ ಬೆಂಗಳೂರು-ಹರಿಹರ ಮತ್ತು ಬೆಂಗಳೂರು-ಹಿಂದೂಪುರ ಲೈನುಗಳಲ್ಲಿ ಕೆಲಸ ಮಾಡುವ ಬಡ ನೌಕರರ ಸಂಬಳಗಳು ಈ ಕೆಳಗೆ ನಿರೂಪಿಸಿರುವ ರೀತಿ ಇರುತ್ತೆ.

ಮೇಲ್ಕಂಡ ಲೈನುಗಳು ಮೈಸೂರು ರೈಲ್ವೆಗೆ ಸೇರಿಸಲ್ಪಟ್ಟಾಗಲಾದರೂ ಕೂಡ ಹಿಂದೆ ೧೯೧೯ ನೇ ಇಸವಿಯಲ್ಲಿ ಮಾಡಿದ ರೀತಿಯಾಗಿ ಲಾಭವನ್ನೇ ಮುಖ್ಯ ಧ್ಯೇಯವಾಗಿ ಉಳ್ಳ ಪರದೇಶದ ಬಂಡವಾಳಗಾರರಿಂದ ನಿರ್ಧರಿಸಲ್ಪಟ್ಟ ಮೇಲ್ಕಂಡ ಲೈನುಗಳಲ್ಲಿ ಕೆಲ್ಸ ಮಾಡುವ ಬಡ ನೌಕರರ ದರ್ಜೆಗಳಾದರೂ ಏರಿಸಲ್ಪಡಬಹುದೆಂದು ನಂಬಿದ್ದರು. ಆದರೆ ೧೯೩೮ ನೇ ಇಸವಿಯೇನೋ ಬಂದೇ ಬಂತು. ಅಧಿಕಾರಿಗಳ ಸಂಬಳ ಮತ್ತು ದರ್ಜೆಗಳು ಏರಿಸಲ್ಪಟ್ಟವೇ ಹೊರತು ಬಡ ನೌಕರರ ಗೋಳಾಟ ಮಾತ್ರ ಕೊನೆಗಾಣಲಿಲ್ಲ. ಅಲ್ಲದೆ ಹಿಂದೆ ಐದು ವರ್ಷಗಳಿಗೆ ಮೇಲ್ಪಟ್ಟು ಭದ್ರ ಇಲ್ಲದ ನೌಕರರುಗಳಿಗೆ ಕೊಡುತ್ತಿದ್ದ ಎರಡೂವರೆ ಮತ್ತು ಐದು ರೂಪಾಯಿನ ಪರ್ಸನಲ್ ಅಲೋಯನ್ಸ್ ಸಹ ನಿಲ್ಲಿಸಲ್ಪಟ್ಟಿದೆ.

ಮೇಲ್ಕಂಡ ಎಂ. ಎಸ್. ಎಂ. ರೈಲ್ವೆ ಭಾಗದ ಬೆಂಗಳೂರು—ಹರಿಹರ ಮತ್ತು ಬೆಂಗಳೂರು ಹಿಂದೂಪುರ ಲೈನುಗಳಲ್ಲಿ ಹೆಚ್ಚು ಸಂಬಳ ಪಡೆದು ಕೆಲ್ಸ ಮಾಡುವ ನೌಕರರು ದಿನ ಒಂದಕ್ಕೆ ಹತ್ತು ಅಥವಾ ಹನ್ನೆರಡು ಗಂಟೆಗಳನ್ನು ದುಡಿಯಬೇಕಾದರೆ ಒರಿಜಿನಲ್ ರೈಲ್ವೆಯ ಭಾಗವಾದ ಬೆಂಗಳೂರು—ಮೈಸೂರು ಲೈನಿನಲ್ಲಿ ಕಡಿಮೆ ಸಂಬಳ ಪಡೆಯುವ ಬಡ ನೌಕರರು ದಿನ ಒಂದಕ್ಕೆ ಹದಿನಾರು-ಹದಿನೆಂಟು ಗಂಟೆಗಳನ್ನು ದುಡಿಯಬೇಕಾಗುತ್ತೆ. ಇವೆರಡಕ್ಕೂ ಇರುವ ಅಂತರ ನೋಡಿದರೆ, ಹೆಚ್ಚಿನ ಸಂಬಳ ಪಡೆಯುವ ಕೆಲಸಗಾರರು ಮಾಡುವ ಒಂದೂವರೆಯಷ್ಟು ಹೆಚ್ಚು ಕೆಲಸವನ್ನು ೩ ರಷ್ಟು ಕಂಬಳ ಪಡೆಯುವ ಕಮ್ಮಿ ಸಂಬಳದ ಒರಿಜಿನಲ್ ಮೈಸೂರು ರೈಲ್ವೆ ಬಡ ನೌಕರರು ಮಾಡಬೇಕಾಗಿದೆ. ಅದ್ದರಿಂದ ಕೆಲಸ ಜಾಸ್ತಿಯಾದದ್ದೂ ವಿಶ್ರಾಂತಿ ಕಮ್ಮಿಯಾಗಿ ತಪ್ಪುಗಳಿಗೆ ಸಹ ದಾರಿಯಾಗುತ್ತೆ. ಇಂಥಾ ತಪ್ಪುಗಳನ್ನು ಜಾಸ್ತಿ ಸಂಬಳ ಪಡೆಯುವ ನೌಕರರು ಮಾಡಿದ್ದೇ ಆದರೆ ಅವರಿಗೆ ೦-೪-೦; ೦-೮-೦ ಮತ್ತು ೧-೦-೦ ಜುಲ್ಮಾನೆಯಾದರೆ ಕಮ್ಮಿ ಸಂಬಳ ಪಡೆಯುವ ಬಡ ನೌಕರರುಗಳಿಗೆ ಸೇ ೫೦; ೧೫ ರಂತೆ ಅವರ ಸಂಬಳಗಳ ಮೇಲೆ ಜುಲ್ಮಾನೆ ವಿಧಿಸಲ್ಪಟ್ಟಿರುತ್ತೆ.

ಈಗಲಾದರೂ ನಮ್ಮ ಘನ ಸರ್ಕಾರದವರು ಮೇಲ್ಕಂಡ ತೊಂದರೆಗಳನ್ನು ವಿಚಾರಣೆ ಮಾಡಿ ಕಂಪನಿ ಲೈನ್ಸ್‌ಗಳಲ್ಲಿರುವ ಕೂಲಿಗಾರರ ಸೌಕರ್ಯಗಳಷ್ಟಾದರೂ ಅನುಕೂಲ ಪಡಿಸಿಕೊಟ್ಟು ಮೈಸೂರು ಸಂಸ್ಥಾನದ ರೈಲ್ವೆ ಬಡ ಕೂಲಿಗಾರರ ತೊಂದರೆಗಳನ್ನು ನಿವಾರಣೆ ಮಾಡಬೇಕಾಗಿ ಬೇಡುವ

[ಬಿ. ತಿ. ರಕ.

	ಎಂ. ಎಸ್. ಎಂ.		ಎಂ. ಆರ್.	
	ಆರಂಭ	ಅಂತ್ಯ	ಆರಂಭ	ಅಂತ್ಯ
ಸ್ಟೇಷನ್ ಮಾಸ್ಟರ್	೮೦	೧೨೦	೪೨	೬೫
ಅಸಿಸ್ಟೆಂಟ್ ,,	೬೦	೬೫	೩೫	೪೭
ಕ್ಲಾರ್ಕ್ಸ್	೨೫	೪೭	೨೫	೩೫
ಪೋರ್ಟರ್ಸ್	೧೪	೨೦	೧೧	೧೩
ಗಾರ್ಡ್ಸ್	೪೦	೧೨೦	೩೫	೬೫
ಬ್ರೇಕ್ ಗಾರ್ಡ್ಸ್	೨೫	೩೫	೯೦	೩೦

ಜವಾಬ್ದಾರಿ ಸರಕಾರದ ಘೋಷಣೆ

ಶ್ರೀ ಜಯಚಾಮರಾಜ ಒಡೆಯರ ವಿವಾಹ

ಹಿಂದೂಸ್ಥಾನದ ಭವಿಷ್ಯ

ಚಿತ್ರಪದಬಂಧ ಸ್ಪರ್ಧೆ ೪೦ ರ ಸರಿಯಾದ ಉತ್ತರ



ಸಾಧ್ವಿ

೧೧—೪—೩೮ ನೇ ಸೋಮವಾರ

ರಾಷ್ಟ್ರಕೂಟ

ಮೈಸೂರು ಸಂಸ್ಥಾನದ ರಾಜಕೀಯ ಇತಿಹಾಸದಲ್ಲಿ ಇದೊಂದು ಸುದಿನ. ಇಂದು ಮೈಸೂರು ಸಂಸ್ಥಾನದ ಮೇಲ್ಮೆಯ ಜನಗಳೆಲ್ಲರೂ ಶಿವಪುರದಲ್ಲಿ ಸೇರುವರು. ಸಮಸ್ತ ದೇಶದ ಮುಂದಿನ ಮಾರ್ಗವನ್ನು ನಿರ್ಣಯಿಸುವರು. ರಾಷ್ಟ್ರೀಯ ಪಕ್ಷದ ಮೈಸೂರು ಮುಂದಾಳುಗಳು ಅವಶ್ಯಕವಾದ ಕಾರ್ಯಕ್ರಮಗಳನ್ನು ಗೊತ್ತುಮಾಡುವರು. ಕಳೆದ ಆರು ತಿಂಗಳಿಂದ ಮೈಸೂರಿನಲ್ಲಿ ಉದ್ಭವಿಸಿರುವ ನವ ಚೈತನ್ಯವು ಇಂದು ಶಿವಪುರದಲ್ಲಿ ರೂಪುಗೊಳ್ಳುವುದಾಗಿದೆ.

ಇಂತಹ ಸಮಾರಂಭವು ಮೈಸೂರಿನಲ್ಲಿ ಹಿಂದೆ ಎಂದೂ ನಡೆದಿರಲಿಲ್ಲವೆಂದು ಧಾರಾಳವಾಗಿ ಹೇಳಬಹುದು. ಬ್ರಿಟಿಷ್ ಇಂಡಿಯಾದಲ್ಲಿ ನಡೆಯುವ ರಾಷ್ಟ್ರೀಯ ಮಹಾ ಸಭೆಯ ಅಧಿವೇಶನಗಳಿಗೆ ನಮ್ಮ ಸಂಸ್ಥಾನದಿಂದಲೂ ಪ್ರತಿನಿಧಿಗಳು ಹೋಗಿ ಭಾರತಮಾತೆಗೆ ಕಾಣಿಕೆಯನ್ನು ಸಲ್ಲಿಸುವಷ್ಟು ಮಾತ್ರ ಅವಕಾಶವು ದೊರೆಯುತ್ತಿತ್ತು. ಆದರೆ ಈಗ ನಡೆಸುತ್ತಿರುವಂತೆ ಒಂದು ದೊಡ್ಡ ರಾಷ್ಟ್ರೀಯ ಸಮಾರಂಭವನ್ನು ನಡೆಸುವ ಪ್ರಸಂಗವು ಬಂದಿರಲಿಲ್ಲ. ಈಗ ಬಂದಿರುವುದು ಮೈಸೂರಿನವರ ಪುಣ್ಯೋದಯವೆಂದು ಅರಿಯಬೇಕು. ಇದಕ್ಕೆ ಮಹಾಜನರಲ್ಲಿ ಸ್ವಾಭಾವಿಕವಾಗಿ ಉತ್ಪನ್ನವಾಗಿರುವ ಸ್ವಾತಂತ್ರ್ಯ ಕಾಂಕ್ಷೆಯೂ, ದೇಶಾಭಿಮಾನವೂ ಮುಖ್ಯ ಕಾರಣಗಳಾಗಿವೆ. ಇವುಗಳಲ್ಲದೆ ನೆರೆಹೊರೆಯ ಪ್ರಾಂತಗಳಲ್ಲಿ ಆಗುತ್ತಿರುವ ಬದಲಾವಣೆಗಳೂ ಅಧಿಕಾರಿ ವರ್ಗದವರು ಹೂಡಿದ ಬುದ್ಧಿ ಆತಂಕಗಳೂ ಬಹಳಮಟ್ಟಿಗೆ ಸಹಕಾರಿಗಳಾಗಿವೆ.

ಎಲ್ಲಾ ದೊಡ್ಡ ದೊಡ್ಡ ಚಳುವಳಿಗಳಂತೆ ಮೈಸೂರಿನ ಇಂದಿನ ಚಳುವಳಿಯೂ ಕೇವಲ ಸಣ್ಣ ಪ್ರಮಾಣದಲ್ಲಿಯೇ ಆರಂಭವಾಯಿತು. ಬೆಂಗಳೂರಿನಲ್ಲಿ ಸಭಾಬಂಧನದ ಆಜ್ಞೆಯಿಂದ ಪ್ರಾರಂಭವಾಯಿತು. ಅದಕ್ಕೆ ಪ್ರತಿಭಟನೆಗಳಾದವು. ಅನಂತರ ವಿದ್ಯಾರ್ಥಿಗಳ ಕ್ರೋಸ್ ಮೇಚ್ ಘಟನೆ. ಅದರ ಪರಿಣಾಮವಾಗಿ ಸ್ಥಳೀಯ ಸಂಸ್ಥೆಗಳ ಸಮ್ಮೇಳನ. ಅನಂತರ ಸರ್ಕಾರದವರ ದಮನ, ಬಂಧನ, ಗುಂಡಿನೇಟಿನ ಪ್ರಕರಣ. ಆಮೇಲೆ ಸಂಸ್ಥಾನದಲ್ಲೆಲ್ಲಾ ವಾಗ್ಬಂಧನ, ಸಭಾ ಬಂಧನ, ಪತ್ರಿಕಾ ಬಂಧನ, ದಸ್ತಗಿರಿಗಳು, ಗಡೀಪಾರು, ತರುಣರ ಅಬ್ಕಾರಿ ಪಿಕೆಟಿಂಗ್, ರಾಜೀನಾಮೆಗಳ ಸುರಿಮಳೆ, ಪ್ರೈಜುಗಳ ಹಿಂದಿಕೆ, ಚುನಾವಣೆಗಳ ಬಹಿಷ್ಕಾರ ಇವುಗಳೆಲ್ಲಾ ನಡೆದವು. ಒಂದೇ ಎರಡೇ ಕಾಣದ ಕೇಳದ ಪ್ರಸಂಗಗಳೆಲ್ಲಾ ನಡೆದು ಹೋದುವು. ಮೈಸೂರಿನ ಹೆಸರು ಇಡೀ ಭಾರತದಲ್ಲೆಲ್ಲಾ ಮುಂದಕ್ಕೆ ಬಂತು. ಕೇವಲ ವೇಷ ಭೂಷಣಗಳಲ್ಲಿ ಮಾತ್ರವಲ್ಲದೆ ಪ್ರಜಾ ಸ್ವಾತಂತ್ರ್ಯ ಸಾಧನೆಯಲ್ಲಿಯೂ ಮೈಸೂರು ಇತರ ಪ್ರಾಂತ್ಯಗಳಿಗೆ ಮಾದರಿಯನ್ನು ಹಾಕಬಲ್ಲುದೆಂಬ ಸಿದ್ಧಾಂತವು ಸ್ಥಾಪಿಸಲ್ಪಟ್ಟಿತು.

ಈ ಪರಿಸ್ಥಿತಿಯಲ್ಲಿ ಸರ್ಕಾರದವರು ಶ್ರೀ ಮನ್ಮಹಾರಾಜರವರ ಅಪ್ಪಣೆಯ ಮೇರೆ ರಾಜಕೀಯ ಸಲಹಾ ಸಮಿತಿಯೊಂದನ್ನೂ, ಫೆಡರಲ್ ರಾಜ್ಯಾಂಗ ಸಲಹಾ ಸಮಿತಿಯೊಂದನ್ನೂ ರಚಿಸಿರುವರು. ಈ ಸಮಿತಿಗಳ ವಿಷಯದಲ್ಲಿ ಕಾಂಗ್ರೆಸ್ಸಿನ ವರ್ತನೆಯೇನೆಂದು ಗೊತ್ತುಮಾಡುವುದು ಶಿವಪುರದ ಮುಂದಿರುವ ಕರ್ತವ್ಯ. ಅಲ್ಲದೆ ನಮ್ಮ ರಾಜಕೀಯ ಪ್ರಯತ್ನಗಳ ಫಲವಾದ ಸಂಪೂರ್ಣ ಜವಾಬ್ದಾರಿ ಸರ್ಕಾರ ಸ್ಥಾಪನೆಗೆ ಸರಿಯಾದ ತಳಹದಿಯನ್ನು ಹಾಕುವುದು ಬಹಳ ಮುಖ್ಯವಾದ ಉದ್ದೇಶ. ಇದಕ್ಕೆ ನಮ್ಮ ದೇಶಾಭಿಮಾನಿಗಳೆಲ್ಲರೂ ಪೂರ್ಣವಾದ ಸಹಕಾರವನ್ನು ನೀಡುವರೆಂದು ನಂಬುತ್ತೇವೆ.

ಈ ಸಮಿತಿಗಳ ವಿಷಯವಾಗಿ ಮೈಸೂರು ಕಾಂಗ್ರೆಸ್ ಕಾರ್ಯಕಾರೀ ಮಂಡಲಿಯವರು ತಮ್ಮ ಸಮುಚಿತವಾದ ಅಭಿಪ್ರಾಯವನ್ನು ಈಗಾಗಲೇ ವ್ಯಕ್ತಪಡಿಸಿದ್ದಾರೆ. ಜವಾಬ್ದಾರಿ ಸರ್ಕಾರದ ಶಿಫಾರಸನ್ನು ಮಾಡಬಹುದೆಂದು ಸರ್ಕಾರದವರು ಸ್ಪಷ್ಟವಾಗಿ ಹೇಳಬೇಕು. ಮೈಸೂರು ಕಾಂಗ್ರೆಸ್ ಸಂಸ್ಥೆಯನ್ನು ಅಂಗೀಕರಿಸಬೇಕು. ಕಾಂಗ್ರೆಸ್ಸಿನವರಿಗೆ ಸಮರ್ಪಕವಾದ ಪ್ರತಿನಿಧಿಗಳನ್ನು ಸಮಿತಿಗಳಿಗೆ ಚುನಾಯಿಸಬೇಕು. ಇವೇ ಕಾಂಗ್ರೆಸ್ಸಿನ ಷರತ್ತುಗಳು. ಇವಕ್ಕೆ ಮಹಾತ್ಮ ಗಾಂಧಿಯವರ ಅನುಮತಿಯ ಮುದ್ರೆ ಬಿದ್ದಿದೆ. ಇವನ್ನು ಸರ್ಕಾರದವರು ಅಂಗೀಕರಿಸಿದರೆ ಕಾಂಗ್ರೆಸ್ಸು ಸಮಿತಿಗಳೊಡನೆ ಸಹಕರಿಸುತ್ತದೆ. ಇಲ್ಲದಿದ್ದರೆ ಇಲ್ಲ. ಈ ಅಂಶವನ್ನು ಸರ್ಕಾರದವರು ಸೌಹಾರ್ದದಿಂದ ಸ್ವೀಕರಿಸಲೆಂದು ನಾವು ಹಾರೈಸುತ್ತೇವೆ.

ಇವಲ್ಲದೆ ನಮ್ಮ ಸಂಸ್ಥಾನಕ್ಕೂ ಇಡೀ ಭರತಖಂಡಕ್ಕೂ ಸಂಬಂಧಪಟ್ಟ ಅನೇಕ ಮುಖ್ಯವಾದ ಅಂಶಗಳು ಶಿವಪುರದಲ್ಲಿ ಚರ್ಚೆಗೆ ಬರುವುವು. ನಮ್ಮ ದೇಶದ ಅಭ್ಯುದಯಕ್ಕೆ ಸಾಫಲ್ಯವಾದ ರೀತಿಯಲ್ಲಿ ದೇಶಾಭಿಮಾನಿಗಳೆಲ್ಲರೂ ಈ ಸಮಸ್ಯೆಗಳನ್ನು ಬಗೆಹರಿಸಿ ಶಿವಪುರವು ಪೂರ್ಣ ಸ್ವಾತಂತ್ರ್ಯ ಸಾಧನೆಯ ಪ್ರಥಮ ಸೋಪಾನವಾಗುವಂತೆ ಮಾಡಲೆಂದು ಪ್ರಾರ್ಥಿಸುತ್ತೇವೆ.

ನೀರಿನ ಕೊರತೆ

ರಾಜಧಾನಿಯಲ್ಲಿ ನೀರಿನ ವೆಚ್ಚವು ಅಧಿಕವಾಗಿರುವುದರಿಂದ ಕೆಲವು ಮೊಹಲ್ಲಾಗಳಲ್ಲಿ ರಾತ್ರಿ ೧೧ ಗಂಟೆಯಿಂದ ಬೆಳಗ್ಗೆ ೫ ಗಂಟೆವರೆಗೆ ನಲ್ಲಿಗಳಲ್ಲಿ ನೀರನ್ನು ನಿಲ್ಲಿಸಲಾಗುವುದೆಂದು ಪೌರಸಭಾಧ್ಯಕ್ಷರು ಪ್ರಕಟಿಸಿರುತ್ತಾರೆ. ಆದರೂ ಅನೇಕ ದಿವಸಗಳಲ್ಲಿ ಹಗಲು ಹೊತ್ತಿನಲ್ಲೇ ಗೊತ್ತುಗುರಿಯಿಲ್ಲದೆ ನೀರನ್ನು ನಿಲ್ಲಿಸಲಾಗುತ್ತಿದೆ. ಮೊನ್ನೆ ಯುಗಾದಿ ಹಬ್ಬದ ದಿನ ಬೆಳಗ್ಗೆಯೇ ಅನೇಕ ಕಡೆಗಳಲ್ಲಿ ಬೆಳಗಿನ ಹೊತ್ತು ನೀರು ನಿಲ್ಲಿಸಲ್ಪಟ್ಟಿತ್ತೆಂದು ತಿಳಿದುಬಂದಿದೆ. ಇದು ಕೇವಲ ವಿಷಾದಕರ. ತಿಳುವಳಿಕೆಯನ್ನು ಕೊಡದೆ ಹೀಗೆ ನೀರನ್ನು ನಿಲ್ಲಿಸುವುದರಿಂದ ಜನರಿಗೆ ಬಹಳ ತೊಂದರೆಯಾಗುತ್ತದೆ.

ಈಗ ಎಲ್ಲಿ ನೋಡಿದರೂ ಮನೆಗಳ ನಲ್ಲಿಗಳಿಗೆ ಮೀಟರುಗಳನ್ನು ಹಾಕುವ ಕಾರ್ಯವು ರಭಸದಿಂದ ನಡೆಯುತ್ತಿದೆ. ಇದೇ ಮುತುವರ್ಜಿಯು ನೀರು ಸರಬರಾಜಿನ ವಿಷಯಕ್ಕೂ ಇದ್ದಿದ್ದರೆ ಎಷ್ಟೋ ಚೆನ್ನಾಗಿತ್ತು.

ಈ ಮೀಟರುಗಳನ್ನು ಹಾಕುವ ರೀತಿಯು ಕೇವಲ ಅಕ್ರಮವಾದುದೆಂದು ತಿಳಿದಿದೆ. ಮೀಟರುಗಳನ್ನು ಹಾಕುವಾಗ ಮೊದಲು ಸರಕಾರಿ ಕಟ್ಟಡಗಳಿಗೂ, ಪಾರ್ಕುಗಳಿಗೂ ಬಾಡಿಗೆ ಕಟ್ಟಡಗಳಿಗೂ, ಹೋಟಲ್, ಕೋಟೆ ಮುಂತಾದುವುಗಳಿಗೂ ಹಾಕಿ ಅನಂತರ ಮನೆಗಳಿಗೆ ಹಾಕಬೇಕೆಂದು ನಿರ್ಣಯವಾಗಿದೆ. ಆದರೆ ಈಗ ಅದು ಕೆಳಗಿನ ವ್ಯಾಪಾರದಂತೆ ನಡೆಯುತ್ತಿದೆ. ಮೇಲ್ಕಂಡ ಕಟ್ಟಡಗಳನ್ನೆಲ್ಲಾ ಬಿಟ್ಟು ಮೊದಲು ಜನರ ಮನೆಗಳಿಗೆ ತೋಚಿದಂತೆ ಹಾಕುತ್ತಿದ್ದಾರೆ.

ಇದಲ್ಲದೆ ಮೀಟರು ಬಾಡಿಗೆ ಎಂದು ಪ್ರತಿಯೊಂದು ಮನೆಗೂ ತಿಂಗಳಿಗೆ ನಾಲ್ಕಾಣೆ ಫೀಯನ್ನು ಹಾಕಬೇಕೆಂದಿರುವರು. ಎಂದರೆ ವರ್ಷಕ್ಕೆ ಮೂರು ರೂಪಾಯಿ ಆಯಿತು. ಮನೆಗಳ ಮಾಲೀಕರು ಈಗ ನೀರಿಗಾಗಿ ಕೊಡುತ್ತಿರುವ ತೆರಿಗೆಯು ಇನ್ನು ಮುಂದೆ ಮೀಟರ್ ಬಾಡಿಗೆ ಮತ್ತು ನೀರಿನ ಬಾಡಿಗೆ ಸೇರಿ ಒಂದಕ್ಕೆ ಎರಡರಷ್ಟಾದರೂ ಆಗಬಹುದು.

ಈಗಾಗಲೇ ಪುರನಿವಾಸಿಗಳೆಲ್ಲರೂ ಜನರಲ್ ವಾಟರ್ ಟ್ಯಾಕ್ಸ್ ಎಂಬ ಬೇರೆ ನಲ್ಲಿ ತೆರಿಗೆಯನ್ನೂ ಕೊಡುತ್ತಿದ್ದಾರೆ. ಅದರ ಜೊತೆಗೆ ಮನೆಗಳಲ್ಲಿ ನಲ್ಲಿಗಳನ್ನು ಇಟ್ಟುಕೊಂಡಿರುವವರು ಬೇರೆ ನೀರಿನ ತೆರಿಗೆಯನ್ನೂ ತೆರುತ್ತಿರುವರು. ಇದು ಸಾಲದೆ ಈಗ ಮೀಟರ್ ಬಾಡಿಗೆ ಮತ್ತು ಹೆಚ್ಚಿಗೆ ನೀರಿನ ಬಾಡಿಗೆಗಳು ಅವರ ತಲೆ ಮೇಲೆ ಬೀಳುವುವು.

ಇದರಿಂದ ಪುರನಿವಾಸಿಗಳಿಗೆ ಬಹಳ ತೊಂದರೆಯುಂಟಾಗುವುದು. ಪೌರಸಭೆಯಲ್ಲಿರುವ ಪ್ರತಿನಿಧಿಗಳು ಇದನ್ನು ಕಣ್ಣು ಬಿಟ್ಟು ನೋಡಿ ತೆರಿಗೆಯ ಹೊರೆಯನ್ನು ತಪ್ಪಿಸುವರೆಂದು ನಂಬುತ್ತೇವೆ.

ವಕೀಲರ ಸಮ್ಮೇಳನ

ಮಂಡ್ಯದ ಟೌನ್ ಹಾಲಿನಲ್ಲಿ ಮೊನ್ನೆ ದಿನ ಆರಂಭವಾದ ಹದಿನಾಲ್ಕನೇ ವಕೀಲರ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿ ಶ್ರೀ ಕೆ.ಟಿ. ಭಾಷ್ಯಂರವರು ಒಂದು ಅಮೂಲ್ಯವಾದ ಭಾಷಣವನ್ನು ಮಾಡಿದರು.

ಲಾಯರುಗಳು ಸ್ವಾಭಾವಿಕವಾಗಿ ಸಮಾಜದ ಮುಖಂಡರೆಂದೂ ಅವರು ಜನಾಂಗದ ಸಮಸ್ಯೆಗಳನ್ನೂ ಬಗೆಹರಿಸಲು ಮುಂದೆ ಬರಬೇಕೆಂದೂ ಹೇಳಿದರು. ಮೈಸೂರಿನಲ್ಲಿ ನ್ಯಾಯ ಇಲಾಖೆಯವರಿಗೆ ಸ್ವಾತಂತ್ರ್ಯವಿಲ್ಲವೆಂದೂ ಆಡಳಿತ ಮಂಡಲಿಯವರ ಕಟಾಕ್ಷಕ್ಕೆ ಅವರು ಅಧೀನರೆಂದೂ ಆದ್ದರಿಂದ ನಮ್ಮ ಸೀಮೆಯಲ್ಲಿ ನ್ಯಾಯನಿರ್ಣಯವು ಸ್ವತಂತ್ರವಾಗಿಯೂ ತೃಪ್ತಿಕರವಾಗಿಯೂ ನಡೆಯಲು ಸಾಧ್ಯವಿಲ್ಲವೆಂದೂ ಹೇಳಿದರು. ತತ್ರಾಪಿ ಮ್ಯಾಜಿಸ್ಟ್ರೇಟರುಗಳು ಸರ್ಕಾರದವರ ಕೈಯ್ಯಲ್ಲಿನ ಸೂತ್ರದ ಗೊಂಬೆಗಳೆಂದು ತಿಳಿಸಿದರು. ಹೈಕೋರ್ಟು ಸಹ ಸರ್ಕಾರದವರ ಪ್ರೇರೇಪಣೆಗಳಿಂದ ವರ್ತಿಸಲ್ಪಡುವುದೆಂದು ಅಭಿಪ್ರಾಯಪಟ್ಟರು. ವಕೀಲರುಗಳು ವ್ಯಾಜ್ಯಗಳಲ್ಲಿ ವಕಾಲತ್ತು ವಹಿಸಿ ಹಣಸಂಪಾದನೆಮಾಡುವುದೇ ತಮ್ಮ ಪರಮ ಕರ್ತವ್ಯವೆಂದು ತಿಳಿಯದೆ ಪ್ರಜೆಗಳ ಹಕ್ಕು ಬಾಧ್ಯತೆಗಳನ್ನು ರಕ್ಷಿಸುವುದರಲ್ಲಿಯೂ ದೇಶದ ಸ್ವಾತಂತ್ರ್ಯವನ್ನು ಸ್ಥಾಪಿಸುವುದರಲ್ಲಿಯೂ ಸಂಪೂರ್ಣವಾದ ಆಸಕ್ತಿಯನ್ನು ವಹಿಸಬೇಕೆಂದು ಹೇಳಿದರು.

ಇವರ ಭಾಷಣವು ನಮ್ಮ ವಕೀಲರ ಮೇಲೆ ಉತ್ತಮವಾದ ಪರಿಣಾಮವನ್ನುಂಟುಮಾಡುವುದೆಂದು ನಂಬಿದ್ದೇವೆ.

ಪೌರಸಭೆಗೆ ರಾಜೀನಾಮೆ

ರಾಜಧಾನಿಯ ಪೌರ ಸಭೆಗೆ ನಜರ್ ಬಾದ್ ಮೊಹಲ್ಲಾದಿಂದ ಚುನಾಯಿತರಾಗಿರುವ ಮ|| ಸಾಹುಕಾರ್ ಎಸ್. ಲಿಂಗಣ್ಣನವರು ತಮ್ಮ ಸ್ಥಾನಕ್ಕೆ ರಾಜೀನಾಮೆಯಿತ್ತಿರುವರಷ್ಟೆ. ಅವರು ತಮ್ಮ ರಾಜೀನಾಮೆಗೆ ಕೆಳಗೆ ಕಂಡ ಕಾರಣಗಳನ್ನು ಕೊಟ್ಟಿರುತ್ತಾರೆ:

೧ ಬಜೆಟ್ ಸಭೆಯು ಮುಗಿಯುವವರೆಗೆ ಉಪಚುನಾವಣೆಗಳನ್ನು ಅನಾವಶ್ಯಕವಾಗಿ ಮುಂದೆ ಹಾಕಿರುವುದು.

೨ ಚುನಾಯಿತ ಸದಸ್ಯರ ಪೈಕಿ ಅರ್ಧ ಜನರು ರಾಜೀನಾಮೆ ಕೊಟ್ಟಿರುವಾಗ ಇಂತಹ ಸಭೆಯಲ್ಲಿ ಇದುವರೆಗೆ ಇಲ್ಲದೆ ಇದ್ದ ಅನೇಕ ಹೊಸ ತೆರಿಗೆಗಳನ್ನು ಹೇರಲು ಪ್ರಯತ್ನಿಸುವುದು.

ಇದು ನನಗೆ ಬಹಳ ಅನುಚಿತವೆಂದು ಕಾಣುತ್ತದೆ. ಉಪಚುನಾವಣೆಯು ಮುಗಿಯುವವರೆಗೆ ತೆರಿಗೆಗಳ ವಿಷಯವನ್ನು ಮುಂದೆ ಹಾಕಬೇಕೆಂದು ನಮ್ಮಲ್ಲಿ ಕೆಲವರು ಪ್ರಾರ್ಥಿಸಿದಾಗ್ಯೂ ಲಕ್ಷಿಸದೆ ಈಗಿನ ಸಭೆಯು ಸದರಿ ವಿಷಯವನ್ನು ಮುಂದೆ ಹಾಕಲು ಒಪ್ಪಲಿಲ್ಲ. ಈ ಪರಿಸ್ಥಿತಿಯಲ್ಲಿ ಈಗಾಗಲೇ ಅನೇಕ ವಿಧದ ತೆರಿಗೆಗಳ ಭಾರದಿಂದ ಬಳಲಿ ಬೆಂಡಾಗಿರುವ ಪುರನಿವಾಸಿಗಳ ಮೇಲೆ ಇನ್ನೂ ಹೆಚ್ಚು ಹೆಚ್ಚಾದ ತೆರಿಗೆಗಳನ್ನು ಹೇರುವ ಪ್ರಯತ್ನದಲ್ಲಿ ಭಾಗಿಯಾಗಿ ಈ ಸಭೆಯಲ್ಲಿರಲು ನನ್ನ ಆತ್ಮಸಾಕ್ಷಿಯು ಒಪ್ಪುವುದಿಲ್ಲ.

ಶಿವಪುರದ ರಾಷ್ಟ್ರಕೂಟ

ಕಾರ್ಯಕ್ರಮ

10-4-38 ಭಾನುವಾರ: ಮಧ್ಯಾಹ್ನ 1 ರಿಂದ 4 ರ ವರೆಗೆ ವಿಷಯನಿಯಾಮಕ ಸಮಿತಿ ಚಪ್ಪರದಲ್ಲಿ ಕಾರ್ಯಕಾರಿ ಮಂಡಲಿಯ ಸಭೆ. 6 ರಿಂದ 8 ರ ವರೆಗೆ ಮದ್ದೂರಿನಿಂದ ಶಿವಪುರಕ್ಕೆ ಅಧ್ಯಕ್ಷರ ಮೆರವಣಿಗೆ (ಎತ್ತಿನ ಗಾಡಿಯಲ್ಲಿ).

11—4—38 ಸೋಮವಾರ ಬೆಳಗ್ಗೆ 8 ಘಂಟೆಗೆ ರಾಷ್ಟ್ರಧ್ವಜಾರೋಹಣ, 9 ರಿಂದ 12 ರ ವರೆಗೆ ವಿಷಯನಿಯಾಮಕ ಸಮಿತಿ ಮೀಟಿಂಗು; ಮಧ್ಯಾಹ್ನ 2 ರಿಂದ 4 ರ ವರೆಗೆ ಕಮಿಟಿ ಮೀಟಿಂಗು, ಸಂಜೆ 5-30 ಕ್ಕೆ ಬಹಿರಂಗ ಅಧಿವೇಶನ.

12—4—38 ಮಂಗಳವಾರ ಬೆಳಗ್ಗೆ 8 ಗಂಟೆಗೆ ರಾಷ್ಟ್ರಧ್ವಜಾರೋಹಣ 8-30 ರಿಂದ 12 ರ ವರೆಗೆ ವಿಷಯ ನಿಯಾಮಕ ಸಮಿತಿ. ಸಭೆ. 5-30 ಕ್ಕೆ ಬಹಿರಂಗ ಅಧಿವೇಶನ.

13—4—38 ಬುಧವಾರ. ಬೆಳಗ್ಗೆ 8 ಗಂಟೆಗೆ ರಾಷ್ಟ್ರಧ್ವಜಾರೋಹಣ. 8-30 ರಿಂದ 11 ರ ವರೆಗೆ ಕಿಸಾನರ ಸಭೆ

10ನೇ ತಾ॥ ಭಾನುವಾರ ರಾತ್ರಿ ಶ್ರೀ॥ ಹಗಡೂರು ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ಯುವಕ ಸಮ್ಮೇಳನವು ನಡೆಯುವುದು. ಶ್ರೀ॥ ಕೆ. ಟಿ. ಭಾಷ್ಯಂರವರು ಇದರ ಆರಂಭ ಭಾಷಣವನ್ನು ಮಾಡುವರು.

ಇದಲ್ಲದೆ ಒಂದು ರಾಷ್ಟ್ರೀಯ ಪ್ರದರ್ಶನವೂ ನಡೆಯುವುದು. ಪ್ರದರ್ಶನದಲ್ಲಿ ಕಾಂಗ್ರೆಸ್ಸಿನ ಚಳವಳಿಗೆ ಸಂಬಂಧಪಟ್ಟ ಚಿತ್ರ ಪಟಗಳೂ, ಸಾಹಿತ್ಯವೂ ಇತರ ವಸ್ತುಗಳೂ ಇಡಲ್ಪಡುವುವು.

ರಾಮೋತ್ಸವ

ಗಾನವಿಹಾರದ ಬಿಡಾರಂ ಕೃಷ್ಣಪ್ಪನವರ ಶ್ರೀ ಪ್ರಸನ್ನ ಸೀತಾರಾಮ ಮಂದಿರದಲ್ಲಿ [illegible] ವಿಸ್ತಾರವಾದ ಸಂಗೀತ ಕಛೇರಿಗಳು ನಡೆಯುತ್ತವೆ. [illegible] ವಿದ್ವಾಂಸರ ಕಛೇರಿಯೊಂದು, [illegible] ಪ್ರತಿದಿನವೂ ಎರಡು ಕಛೇರಿಗಳು ನಡೆಯುತ್ತಿರುವುದು [illegible].

ಶಿವರಾಂಪೇಟೆಯ ಶ್ರೀರಾಮಚಂದ್ರ ಮಂದಿರದಲ್ಲಿಯೂ ಶ್ರೀರಾಮೋತ್ಸವದ ಪ್ರಯುಕ್ತ ಪ್ರತಿದಿನವೂ ದೊಡ್ಡ ದೊಡ್ಡ ವಿದ್ವಾಂಸರುಗಳಿಂದ ಸಂಗೀತ ಕಛೇರಿಗಳು ನಡೆಯುತ್ತಿವೆ

ಮೈಸೂರು ದೊಡ್ಡಪೇಟೆ ಶ್ರೀರಾಮ [illegible] ಶ್ರೀರಾಮನವಮಿ ಪ್ರಯುಕ್ತ ಪ್ರತಿದಿನವೂ ಕಥಾಕಾಲಕ್ಷೇಪ, [illegible] ನಡೆಯುತ್ತಿವೆ [illegible] ಭಾಗವಹಿಸಬೇಕೆಂದು ಕೋರುತ್ತಾರೆ.

[illegible] ಭಕ್ತಿ [illegible]

ಖೈದಿಗಳ ಸುಯೋಗ

ಸಂಯುಕ್ತ ಪ್ರಾಂತದ ಸುಧಾರಣೆಗಳು

ಸಂಯುಕ್ತ ಪ್ರಾಂತದ [illegible] ಜೈಲು ಸುಧಾರಣಾ [illegible] ಪರಿಪೂರ್ಣವಾದ [illegible]. ಈ ವಿಚಾರದಲ್ಲಿ [illegible] ಕೆಳಗೆ ಕಂಡ ಸುಧಾರಣೆಗಳನ್ನು [illegible]:—

೧ [illegible] ಖೈದಿಗಳಿಗೆ [illegible] ಕೊಡುವುದು.

೨ [illegible] ಕೊಡುವುದು.

೩ [illegible] ಕೊಡುವುದು.

೪ ಪ್ರತಿ ಖೈದಿಗೂ [illegible] ಕೊಡುವುದು. [illegible]

೫ ಪ್ರತಿ ಖೈದಿಗೂ ಒಂದೊಂದು [illegible] ಕೊಡಬೇಕಾಗುವುದು.

೬ ಅಪರಾಧಿಗಳಾದ ಖೈದಿಗಳಿಗೆ [illegible] ಕೊಡಲ್ಪಡುವುದು.

೭ [illegible]

೮ [illegible]

೯ [illegible]

[illegible] ಕೊಡಬೇಕಾಗುವುದು. [illegible] ಮಾಡಲಾಗುವುದು. [illegible] ಕೊಡಲಾಗುವುದು.

ಶ್ರೀ ನಂದಪ್ಪನವರ [illegible]

ಮೈಸೂರಿನಲ್ಲಿ ನಡೆದ [illegible] ಆರಂಭೋತ್ಸವದಲ್ಲಿ [illegible] ಗೌರವಾಧ್ಯಕ್ಷರಾದ ಶ್ರೀ॥ ಎ. ಎ. ಕೃಷ್ಣಸ್ವಾಮಿ [illegible]

(ಫೋಟೋ ಶ್ರೀ [illegible])

[illegible] ದೊಡ್ಡ ದೊಡ್ಡ ಖೈದಿಗಳ [illegible] ಮಾಡಲಾಗುವುದು.

[illegible] ಮಾಡಲಾಗುವುದು.

[illegible] ಜಾತ್ರೆ

[illegible] 7-30 ರಿಂದ 10. [illegible]

[illegible] ಬ್ಯಾಂಕ್, (ಲಿಮಿಟೆಡ್)

ಹೆಡ್ ಆಫೀಸು.— ದೊಡ್ಡ ಪೇಟೆ, ಸಿಟಿ. ಬೆಂಗಳೂರು, [illegible]

ಲೋಕಲ್ ಆಫೀಸ್.— ಮಲ್ಲೇಶ್ವರಂ ಬೆಂಗಳೂರು.

ಬ್ರಾಂಚುಗಳು:— ಚನ್ನಪಟ್ಟಣ, ಮಂಡ್ಯ, ಮೈಸೂರು, [illegible]

ಡಿಪಾಜಿಟ್ಟುಗಳ ಮೇಲೆ ಬಡ್ಡಿ ದರ

[illegible]

ಫಿಕ್ಸೆಡ್ ಡಿಪಾಜಿಟ್

[illegible]

[illegible]

ಪಿ. ಕೆ. ರಂಗಪ್ಪ,
ಮ್ಯಾನೇಜಿಂಗ್ ಡೈರೆಕ್ಟರ್

ಆಟೋಮ್ಯಾಟಿಕ್ ಅಲಾರಂ ಪಿಸ್ತೂಲು



[illegible]

ಬೆಲೆ (100 ಕಾಡತೂಸು ಸಹಿತ) ರೂ 2-12-0

ಹೆಚ್ಚಿನ ಕಾಡತೂಸುಗಳು 50 ಕ್ಕೆ ರೂ. 1-0-0

[illegible] 0-12-0

EASTREN TRADING CO.
Post Box No 12201
Calcutta (S.I.)

[illegible]

ಆರ್ಥಿಕ ಮುಗ್ಗಟ್ಟಿನ ಪರಿಹಾರ

ತಗಡೂರು ಗ್ರಾಮ ಪಂಚಾಯಿತಿ ಸ್ಕೀಂ

ಅಧಿಕಾರಿಗಳು ಅಂಗೀಕರಿಸಿ ಜಾರಿಗೆ ಕೊಟ್ಟಿದ್ದಾರೆ.

[illegible]

ತಗಡೂರು. ರಾಮಚಂದ್ರರಾವ್.

ANANDA SODA FACTORY

Best Aerated Water Suppliers.

Complete Requisites For Aerated Water Manufacturers Available.

ಆನಂದಾ ಸೋಡಾ ಫ್ಯಾಕ್ಟರಿ

ದೊಡ್ಡಪೇಟೆ, ಮೈಸೂರು

ಚಂದ್ರಕಲಾ ಸ್ಪರ್ಧೆ ನಂಬರು ೧೫೮ ರ ಉತ್ತರ



[illegible]

ರಾಜಕೀಯ ಮತ್ತು ಶಿಸ್ತು

ಲೇಖಕ. —ಬಿ. ನಾರಾಯಣಸ್ವಾಮಿ, ಬಿ.ಎ., ಬಿ.ಎಲ್., ಮೈಸೂರು.

ಶಿಸ್ತೆಂಬುದು ಒಳ್ಳೆಯ ಜೀವನಕ್ಕೆ. ರಾಜಕೀಯವು ಹೇಗೆ ಹಾಗೆ ಸಾಮಾಜಿಕ ಜೀವನಕ್ಕೆ ಒಂದು ದಾರಿ. ಮನುಷ್ಯನ ವಿಶಿಷ್ಟ ಗುಣಗಳನ್ನು ಪರಿಪೂರ್ಣವಾಗಿ ರಾಜಕೀಯದಲ್ಲಿ ಉಪಯೋಗಿಸದ ಯಾವ ಮನುಷ್ಯನಿಗೆ ಆಗಲಿ ರಾಜಕೀಯದಲ್ಲಿ ಮಹತ್ವವಿಲ್ಲದಿದ್ದಲ್ಲಿ ಅವನ ಜೀವನವು ಅಸಾರ್ಥಕವಾದಂತೆ. ಆದ ಮೇಲೆ, ಎಲ್ಲರೂ ರಾಜಕೀಯದಲ್ಲಿ ಪ್ರವೇಶಿಸಬೇಕು. ಎಲ್ಲರೂ ತಕ್ಷಣವಲ್ಲೇ ರಾಜಕೀಯ [illegible] ಬೇಕು, ಅಥವ ಎಲ್ಲರಿಗೂ ಸಾತ್ವಿಕವನ್ನು ಬಿಡಿಸುವ [illegible] ವಾಗಬೇಕೆಂದಿಲ್ಲ! ರಾಜಕೀಯ ನಿಪುಣತ್ವ ಅಥವ ನಾಯಕತ್ವ ಸಾಧಾರಣವಲ್ಲ. ಆ ಸ್ಥಾನವನ್ನು ಸಂಪಾದಿಸಬೇಕಾದರೆ ಬಹಳ ವರ್ಷಗಳ ಕಾಲ ರಾಜಕೀಯ ಶಾಸ್ತ್ರ ಶಿಕ್ಷಣ ಮತ್ತು ಸಾಧನೆಗಳ ಅಭ್ಯಾಸ ಎಲ್ಲವನ್ನೂ ಶ್ರಮದಿಂದ ಸಂಪಾದನೆ ಮಾಡಬೇಕು. ಶಿಸ್ತು ರಾಜಕೀಯ ಪ್ರಾಣವಾಗಿದೆ. ಅಥವ ನಾಯಕನಾಗಬೇಕು ಎಂಬ ಆಕಾಂಕ್ಷೆ ಎಲ್ಲರಿಗೂ ಇರುವುದು ಸಹಜ. ಈ ಆಕಾಂಕ್ಷೆ ಇಟ್ಟುಕೊಂಡೇ ಪ್ರತಿಯೊಬ್ಬರೂ ರಾಜಕೀಯದಲ್ಲಿ ಕೈಹಾಕಬೇಕು. ಆದರೆ ತನ್ನ ಆಕಾಂಕ್ಷೆಯನ್ನು ಈಡೇರಿಸಿಕೊಳ್ಳಬೇಕಾದರೆ ಮೊದಲು ಆ ಮನುಷ್ಯನು ತನ್ನ ಜೀವನದ ಮುಖ್ಯ ಚರ್ಯೆ 'ಶಿಸ್ತು' ಅಂದರೆ ಪ್ರಾಮಾಣಿಕತ್ವ, ಸ್ವಾರ್ಥತ್ಯಾಗ, ಧೈರ್ಯ ಮತ್ತು ಎಲ್ಲಕ್ಕಿಂತಲೂ ಮುಖ್ಯವಾಗಿ ತನ್ನ ನಡತೆಯಲ್ಲಿ ಶಿಸ್ತು ಇವೆಲ್ಲಾ ಗುಣಗಳನ್ನು ಅಭ್ಯಾಸಿಸಿ, [illegible] ಪ್ರದರ್ಶಿಸಬೇಕು.

ರಾಜಕೀಯದಲ್ಲಿ ಪ್ರಾಮಾಣಿಕತ್ವ ಮತ್ತು ಶಿಸ್ತು ಬಹಳ ಮುಖ್ಯವಾದ ಅಂಗಗಳಾಗಿರುತ್ತವೆ. ಈ ಗುಣಗಳಲ್ಲಿ ಶಿಸ್ತು ಇಲ್ಲದಿದ್ದರೆ, ಆ ಮನುಷ್ಯನು ನಾಶಕ್ಕೆ ಬರುತ್ತಾನೆ. ಎಲ್ಲದರ ರಾಜಕೀಯದಲ್ಲಿರುವವರಿಗೆ ಪ್ರಪಂಚದ ವ್ಯವಹಾರ ಜ್ಞಾನ, ಜನಗಳ ಕಷ್ಟ ನಿಷ್ಠುರಗಳ ಅನುಭವ ತಿಳಿದಿರಬೇಕು. ಅಲ್ಲದೆ ಕೇವಲ ಬುದ್ಧಿವಂತಿಕೆ, ಜ್ಞಾನ ಮತ್ತು ಚುರುಕಾದ ತೀಕ್ಷ್ಣಬುದ್ಧಿ ಬೇಕು. ಈ ಮೇಲೆ ಹೇಳಿದ ಗುಣಗಳನ್ನೆಲ್ಲಾ ಸಂಪಾದನೆ ಮಾಡಬೇಕಾದರೆ, ಕೇವಲ ಕಲಿತು ಓದಿದ ಅಥವ ಪಠನದಿಂದ ಅನುಭವವಿಲ್ಲ. ಇದಕ್ಕೆ ಅನೇಕ ವರ್ಷಗಳ ಅನುಭವ ಬೇಕಾಗುತ್ತೆ, ಅನೇಕ ನಾಯಕರುಗಳು ತಮ್ಮ ಜೀವನವನ್ನೇ [illegible] ಕಳೆದಿದ್ದಾರೆ. ಇಂತಹವರು ಒಂದು ರಾಜ್ಯಾಂಗ ಸೂತ್ರವನ್ನು ಹಿಡಿಯಲು ಅರ್ಹರಾಗುತ್ತಾರೆ. [illegible] ರಾಜಕೀಯ [illegible] ರಾಜ್ಯಾಂಗದ ಜೀವನವು [illegible] ಆದರೆ [illegible] ನಾಯಕರುಗಳು ನಮ್ಮ ರಾಜಕೀಯ [illegible] ಲೀ ಶಿಸ್ತಿನವರಾಗಲೀ ತಪ್ಪು ನಡೆದಲ್ಲಿ ಅದರ ಪರಿಣಾಮಕ್ಕೆ ಗುರಿಯಾಗುತ್ತಾರೆ.

ನಾನಾ ದೇಶಗಳಲ್ಲಿ ಈ ತರಹ ಸನ್ನಿವೇಶಗಳು ಒದಗಿರುವುದನ್ನು ಈಚೀಚೆಗೆ ನಿತ್ಯ ಕೇಳುತ್ತೇವೆ. ಈಗೀಗ ಬ್ರಿಟನಿನಲ್ಲಿ ಒದಗಿದ ಇತ್ತೀಚಿನ ದೃಷ್ಟಾಂತ ಮನ್ನಿಸಲು ಸ್ಥಿತಿಯಲ್ಲೂ ದೇಶ ಹೇಗೆ ಚಲಿಸುವಂತೆ ತನ್ನ ದೇಶದ ಜನಗಳ ಹಿತದೃಷ್ಟಿಯಿಂದ ಯಾವ ರೀತಿ ನಡೆಸಬೇಕೆಂಬುದನ್ನು, ಇಂಗ್ಲೆಂಡಿನ ಮುಖ್ಯಮಂತ್ರಿಯಾಗಿದ್ದ ಎಂ. ಈಡನ್ನರು ತನ್ನ ರಾಜಕೀಯ ಸಂಗದ ಶಿಸ್ತಿಗೆ ತಲೆಬಾಗಿ ರಾಜೀನಾಮೆ ಕೊಟ್ಟಿದ್ದಲ್ಲದೆ ಮತ್ತು ಇದೇ ಸಂದರ್ಭದಲ್ಲಿ ಮುಖ್ಯ ಮಂತ್ರಿಯಾದ ಚೇಂಬರ್ಲೇನ್ ಮತ್ತು ಈಡನ ಇವರು ತಮ್ಮ ಸಂಗದಲ್ಲಿ ಒದಗಿದ ಭಿನ್ನ ಅಭಿಪ್ರಾಯಗಳನ್ನು ಪರಿಹರಿಸಿದ್ದನ್ನು ಮತ್ತು ಎಷ್ಟು ಶಿಸ್ತಿನಿಂದ ಈಗ ಒದಗಿರುವ ಅಂತರ್ರಾಷ್ಟ್ರೀಯ ಕಲಹದಿಂದ ಇಂಗ್ಲೆಂಡು ದೂರವಿರಬೇಕೆಂಬ ಮುಖ್ಯ ಉದ್ದೇಶವನ್ನು, ನಾವುಗಳು ಗಮನಿಸಬೇಕು.

ಇದೆಲ್ಲಾ ನೋಡಿದರೆ ಪ್ರತಿಯೊಂದು ರಾಜಕೀಯ ಸಂಗವೂ ಒಂದು ಶಿಸ್ತಿನ ಮೇಲೆ ನಿಂತಿರುತ್ತದೆ. ಚೆನ್ನಾಗಿ ವ್ಯಕ್ತವಾಗುತ್ತೆ. ಅಷ್ಟು ದೂರ ಹೋಗಬೇಕಾಗಿಲ್ಲ. ನಮ್ಮ ಅಖಿಲ ಭಾರತ ಕಾಂಗ್ರೆಸ್ ಸಮಿತಿಯವರು ಬಿಹಾರ್ ಮತ್ತು ಸಂಯುಕ್ತ ಪ್ರಾಂತ್ಯಗಳಲ್ಲಿ ಒದಗಿದ ಪ್ರಶ್ನೆಗಳ ಬಗ್ಗೆ ಸಮಿತಿ ಮತ್ತು ಇದರ ಫಲವಾಗಿ ಉಂಟಾದ ಮಂತ್ರಿಗಳ ರಾಜೀನಾಮೆ ಪ್ರಶ್ನೆಗಳನ್ನು ಎಷ್ಟು ಶಿಸ್ತಿನಿಂದ, ನಯದಿಂದ ನಿಷ್ಪಕ್ಷಪಾತವಾಗಿ ಬಗೆಹರಿಸಿದ್ದಾರೆ! ಈ ತರಹ ಶಿಸ್ತನ್ನು ಪ್ರದರ್ಶಿಸಿದ್ದರಿಂದಲೇ ಬ್ರಿಟಿಷ್ ಸಾಮ್ರಾಜ್ಯ ಸರಕಾರ ಕಾಂಗ್ರೆಸ್ಸಿನ ಮನೋಭಾವಕ್ಕೆ ತಲೆಬಾಗ ಬೇಕಾಯಿತು.

ಈ ವಿಧವಾದ ಶಿಸ್ತು ಮತ್ತು ಪರರ ರಾಜಕೀಯ ನಿಷ್ಠಾ ಮತ್ತು ವೈಷಮ್ಯ [illegible] ನಮ್ಮ ಮೈಸೂರು ಕಾಂಗ್ರೆಸ್ಸಿನವರಲ್ಲಿ ಅಂಕುರಿಸಬೇಕೆಂಬುದೇ ನಮ್ಮಗಳ ಆಸೆ. ಈ ವಿಷಯಗಳನ್ನೆಲ್ಲಾ ಕುರಿತು ನಮ್ಮ ನಾಯಕರುಗಳು ನಮ್ಮ ಕಾಂಗ್ರೆಸ್ ಕಾರ್ಯಕರ್ತರಿಗೆ ಸರಿಯಾದ ತಿಳುವಳಿಕೆ ಕೊಡಬೇಕೆಂತ ನನ್ನ ವಿನಂತಿ. ನಮ್ಮ ಕಾಂಗ್ರೆಸ್ಸಿನ ಸದಸ್ಯರುಗಳು ಅಭಿಪ್ರಾಯಗಳನ್ನು ನಮ್ಮ ದೇಶದ ಹಿತಕ್ಕೆ ಸಮರ್ಪಿಸಿ ಸಂಘದ ಶಿಸ್ತನ್ನು [illegible] ಕಟ್ಟಿನ ಗೋಡೆಯಂತೆ ಕಾಪಾಡಬೇಕು.

ಆಕಸ್ಮಿಕ ಧನಯೋಗ ನಿರ್ಣಯ

ಈ [illegible] ಸಂವತ್ಸರದಲ್ಲಿ ಮೇಷಾದಿ ದ್ವಾದಶ ರಾಶಿಯವರಿಗೆ ಲಾಟ್ರಿ, ಕುದುರೆ ಜೂಜು ಮೊದಲಾದವುಗಳಲ್ಲಿ ಧನಪ್ರಾಪ್ತಿಯಾಗತಕ್ಕ ಯೋಗವಿದ್ದರೆ, ಅಂಥವರಿಗೆ ತಿಳಿವು ಬರುವಂತೆ:—

ವಿ ಸೂ.:—ಜನನ ಕಾಲದಲ್ಲಿ ಆಕಸ್ಮಿಕ ಧನಯೋಗವನ್ನು ಗ್ರಹಗಳ ಮೇಲಿಂದ ಪರಿಶೀಲಿಸಬೇಕು. ಯಾವ ಜನ್ಮಕುಂಡಲಿಯಲ್ಲಿ ಶುಕ್ರ ಚಂದ್ರರು [illegible] ಸಮಾಂತ ಕುಂಡಲಿಯಲ್ಲಿ [illegible] ಅಂಥ ಜಾತಕರಿಗೆ ಲಾಟ್ರಿ ಯೋಗ ಬಂದೀತು.

ಈ ವರ್ಷದಲ್ಲಿ ಶುಕ್ರ-ಚಂದ್ರರ ಶುಭಯೋಗವಾಗಿ [illegible] ಧನ, ಸ್ತ್ರೀ ಧನಲಾಭ ಪ್ರಾಪ್ತಿ, ಸ್ವಲ್ಪ [illegible] ಸಂಭವವುಂಟು.

ಮೇಷ ರಾಶಿಯವರು—ಶ್ರಾವಣ, ಕಾರ್ತಿಕ, ಪುಷ್ಯ ಮಾಸಗಳಲ್ಲಿ ಲಾಟ್ರಿ ಟಿಕೇಟು ಗಳನ್ನು ಕೊಳ್ಳಬಹುದು.

ವೃಷಭ ರಾಶಿಯವರು—ಚೈತ್ರ, ಜ್ಯೇಷ್ಠ, ಭಾದ್ರಪದ, ಮಾರ್ಗಶಿರ ಮಾಸಗಳಲ್ಲಿಯೂ, ಟಿಕೇಟು ಪಡೆಯಬಹುದು.

ಮಿಥುನ ರಾಶಿಯವರು ಜ್ಯೇಷ್ಠ, ಆಶ್ವೀಜ ಮತ್ತು ಮಾಘ ಮಾಸಗಳಲ್ಲಿ (ಒಬ್ಬರ ಜೊತೆ ಸೇರಿ) ಪಾಲಿನಿಂದ ಟಿಕೇಟು ಪಡೆಯಬಹುದು.

ಕರ್ಕಾಟಕ ರಾಶಿಯವರು—ಕಾರ್ತಿಕ, ಫಾಲ್ಗುಣ ಮಾಸಗಳಲ್ಲಿಯೂ, ಸಿಂಹರಾಶಿಯವರು ಜ್ಯೇಷ್ಠ, ಶ್ರಾವಣ, ಆಶ್ವೀಜ, ಮಾಸಗಳಲ್ಲಿಯೂ, ಟಿಕೇಟು ಪಡೆಯಬಹುದು.

ಕನ್ಯಾ ರಾಶಿಯವರು—ಭಾದ್ರಪದ, ಕಾರ್ತಿಕ, ಮಾಘ ಮಾಸಗಳಲ್ಲಿ ಪಾಲಿನಿಂದ ಟಿಕೇಟು ಪಡೆಯಬಹುದು.

ತುಲಾ ರಾಶಿಯವರು—ಚೈತ್ರ, ಆಶ್ವೀಜ, ಪುಷ್ಯ ಮಾಸಗಳಲ್ಲಿಯೂ, ವೃಶ್ಚಿಕ ರಾಶಿಯವರು, ವೈಶಾಖ, ಆಶ್ವೀಜ, ಫಾಲ್ಗುಣ ಮಾಸಗಳಲ್ಲಿಯೂ, ಧನೂರಾಶಿಯವರು, ಜ್ಯೇಷ್ಠ, ಕಾರ್ತಿಕ, ಮಾರ್ಗಶೀರ್ಷ ಮಾಸಗಳಲ್ಲಿಯೂ, ಮಕರ ರಾಶಿಯವರು ಶ್ರಾವಣ, ಭಾದ್ರಪದ, ಮಾರ್ಗಶಿರ, ಮಾಘ ಮಾಸಗಳಲ್ಲಿಯೂ, ಕುಂಭರಾಶಿಯವರು ಚೈತ್ರ, ಶ್ರಾವಣ, ಪುಷ್ಯ ಮಾಸಗಳಲ್ಲಿಯೂ, ಮೀನ ರಾಶಿಯವರು, ಜ್ಯೇಷ್ಠ, ಆಶ್ವೀಜ, ಮಾರ್ಗಶಿರ ಮಾಸಗಳಲ್ಲಿಯೂ, ಲಾಟರಿ ಟಿಕೇಟುಗಳನ್ನು ಪಡೆಯಬಹುದು.

ಆದರೆ, ಹನ್ನೆರಡು ರಾಶಿಗಳ ಸ್ಥಿತಿ, ಸ್ವಭಾವ ಮತ್ತು ವೈಯಕ್ತಿಕ ಜಾತಕ ವಿಚಾರ [illegible] ಹೊಂದಿಕೊಂಡಿದೆ.

(ಜಾ. ಪ.)

ಅಮೃತಾಂಜನ

ಶೀಘ್ರವಾಗಿ ಗುಣಪಡಿಸುತ್ತದೆ.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿಬ್ಬ, [illegible], [illegible] ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಲಿಮಿಟೆಡ್
ಬೊಂಬಾಯಿ — ಮದರಾಸು

ಅದ್ಭುತ ಗಾನ ನರ್ತನಗಳು! ಪವಿತ್ರ ಪ್ರೇಮಮಹಿಮೆ!!! ಅಸಾಧಾರಣ ದೃಶ್ಯಗಳು!!!

ಚಾಮುಂಡೇಶ್ವರಿ ಟಾಕೀಸ್, ಮೈಸೂರು

ಏಪ್ರಿಲ್ 9ನೇ ಶನಿವಾರದಿಂದ

ಜೀವನ ಪ್ರಭಾತ

ಬಾಂಬೆ ಟಾಕೀಸ್‌ರವರ ಅದ್ವಿತೀಯವಾದ ಸಾಮಾಜಿಕ ಚಿತ್ರ

ದೇವಿಕಾರಾಣಿಯವರ ಅಭಿನಯ

ಇದರ ಜೊತೆಯಲ್ಲಿ

ಕಾಂಗ್ರೆಸ್ ಟಾಪಿಕಲ್

(ಸುಭಾಷ ಚಂದ್ರ ಬೋಸರವರಿಗೆ ಬೊಂಬಾಯಿನಲ್ಲಿ ಸ್ವಾಗತ)

ಕಥಾ ಸಾರಾಂಶ

ಸಾಂಪ್ರದಾಯಿಕ ಬ್ರಾಹ್ಮಣ ಮನೆತನದ ಹುಡುಗಿಯಾದ ಉಮೆಯು ಬಾಲ್ಯಕಾಲದವರಾದ ಕುಂಬಾರರ ಜೊತೆಯಲ್ಲಿ ಗೆಳೆತನ ಕಟ್ಟಿಕೊಂಡು, ಅನಂತರ ಕಾಲದಲ್ಲಿ ಪಟ್ಟದ ಕಾಡಿನಲ್ಲಿ ಸೇರಿದಳೆಂದು ಊರಲ್ಲೆಲ್ಲರೂ ಆಡಿಕೊಳ್ಳತೊಡಗಿದರು. ಉಮೆಯ ತಾಯಿ ರುಕ್ಮಿಣಿಯು, ಅವಳನ್ನು ಬಲವಂತ ತಕ್ಕೊಂಡುಹೋಗಿ ಗಂಗೆಯಲ್ಲಿ ಮುಳುಗಿಸಲಾಗಿ ಎಷ್ಟು ಬಂದು ಹುಡುಗಿಯು ಪುನಃ ಬಿಟ್ಟು ಅಪ್ಪನಿಗೆ ಕಟ್ಟಿಯನ್ನು ಮುಟ್ಟಿ, ಸ್ವಾಮಿಗೆ ಸೂಚಿಸಿಕೊಂಡಳು. ರುಕ್ಮಿಣಿಯು ಕೂಗಿ ದೇವಿ ಉಮೆಯನ್ನು ಮರಳಿ ಗಂಗೆಯಲ್ಲಿ ಅದ್ದಿದಳು. ಈ ಪರಿಯು ಸಾವಿತ್ರಿಗೆ ಬಗ್ಗೆ ಸಂಸ್ಕೃತ ಅವಳಿಗೆ ಬಹಿಷ್ಕರಿಸಿದ್ದು.

ಪತಿವ್ರತೆ ಉಮೆಯು ಮಗ್ಗಿಗಾಗಿ ತನ್ನ ಸೇವೆ ಸಲ್ಲಿಸುತ್ತಿದ್ದ ಬ್ರಾಹ್ಮಣ ಯುವಕನು, ಆದರೆ ತಾತನ ಹುಡುಗಿಯನ್ನೇ ಮದುವೆಯಾಗಬೇಕೆಂದು ಬಯಸಿ ಸತ್ಯ ಪ್ರಯತ್ನದಿಂದಲೂ ತನ್ನ ಆಸೆಯನ್ನು ಸಾಧಿಸುವನು. ಉಮೆಯೂ ಅವಳ ಕಂಬಾರ ಗೆಳೆಯನೂ ಅಗಲಬೇಕಾಗಿ ಬಂದಿತು. ಉಮೆಯೇ ಪ್ರಾಣವಾಗಿದ್ದ ರಮ್ಯನಂತೂ ಅವಳ ಅಗಲಿಕೆಯನ್ನು ಸಹಿಸಲಾರದಾದನು. ಆದರೂ ಉಮೆಯ ಸಂತೋಷವೇ ಮುಖ್ಯವೆಂದೆಣಿಸಿ ಬಹುಕಷ್ಟದಿಂದ ಬೀಳ್ಕೊಂಡನು.

ಉಮೆಯೂ ಗಂಡನೊಡನೆ ಸಂಸಾರದಲ್ಲಿ ಆನಂದ ಸುಖವನ್ನು ಅನುಭವಿಸುತ್ತಿದ್ದರೂ ಮಕ್ಕಳಾಗಲಿಲ್ಲವೆಂಬ ಕೊರತೆಯು ಉಮೆಯನ್ನು ಕಾಡಿತು. ಅವಳು ಪ್ರಯತ್ನಪಟ್ಟು ಪಕ್ಕದ ಚೆಲುವಾದ ಹುಡುಗಿಯನ್ನು ಗಂಡನಿಗೆ ಮದುವೆಮಾಡಿಸಿದಳು. ಆದರೆ ಇದರಿಂದ ಸುಖವಾಗುವುದಕ್ಕೆ ಬದಲು ಉಮೆಗೆ ಕಷ್ಟಪರಂಪರೆಗಳು ಆರಂಭವಾದವು. ಉಮೆಯು ಪ್ರಾಣಸಂಕಟದಲ್ಲಿ ಸಿಕ್ಕಿಕೊಂಡಿದ್ದ ಗಂಡನಿಗೆ ಸಹಾಯ ಮಾಡಲು ಹೋದಳು. ಸವತಿಯು ಇವಳ್ಳೆ ದ್ರೋಹವೆಸಗಿದಳು. ಅವಳ ಪೀಡೆ ಬಾಧಿಸತೊಡಗಿತು. ಕೃಷ್ಣ ಕಾಲ ಕಳೆದ ಮೇಲೆ ಗರ್ಭವತಿಯಾದ ಉಮೆಯು ಗಂಡನ ಮನೆಗೆ ಹಿಂದಿರುಗಿದಳು. ಆದರೆ ಅವನು ಒಪ್ಪದೆ ಅವಳನ್ನು ಹೊರಗಟ್ಟಿದನು.

ಉಮೆಗೆ ಸುಖವಿಲ್ಲವೆಂದು ಕೊರಗಿ ರಮ್ಯನು ಕಾಯಿಲೆ ಬಿದ್ದನು. ರಮ್ಯನನ್ನು ಅತ್ಯಂತ ಪ್ರೀತಿಸುತ್ತಿದ್ದ ಸೋದರಿಯು, ಉಮೆಯ ವರ್ತನದಿಂದ ರಮ್ಯನು ನೊಂದಿರುವನೆಂದು ಉಮೆಯನ್ನು ರಮ್ಯನ ಮನೆಗೆ ಕರೆತಂದಳು. ಅವಳೆಣಿಸಿದಂತೆ ರಮ್ಯನಿಗೆ ಸ್ವಾಸ್ಥ್ಯ ಹೊಂದಿತು. ಅವನು ಸಂತೋಷದಿಂದ ತಮ್ಮ ಬಾಲ್ಯಲೀಲೆಯ ನೆನಪಿನಲ್ಲಿ ಸುಖಿಸುತ್ತಿರಲು, ಗಂಡನು ಇವರ ಸ್ನೇಹಕ್ಕೆ ವಿಪರೀತ ಕಲ್ಪನೆಮಾಡಿಕೊಂಡು ಉಮೆಯನ್ನು ಬಿಟ್ಟು ಹೊರಟುಹೋದನು. ಹೋದಮೇಲೆ ಅವನಿಗೆ ಉಮೆಯು ಗರ್ಭವತಿಯಾಗಿರುವಳೆಂದು ಅಷ್ಟರಲ್ಲಿ ತಿಳಿಯಿತು. ಸಂತೋಷಿಸುವುದಕ್ಕೆ ಬದಲು ಉಮೆಯ ಪಾತಿವ್ರತ್ಯದಲ್ಲಿ ಅವನ ಸಂಶಯವೇ ದೃಢವಾಯಿತು.

ಉಮೆಯು ಗಂಡನಿಂದ ತ್ಯಕ್ತಳಾಗಿ ಸಂಪ್ರದಾಯ ಸಮಾಜದ ಹಿಂದೆಗೆ ಗುರಿಯಾಗಿ ಅನುಭವಿಸಲಾರದ ಕಷ್ಟಗಳಿಗೆ ಒಳಗಾದಳು. ರಮ್ಯ ಮತ್ತು ಸೋದರಿಯೂ ಇವರು ಅಸಾಮಾನ್ಯವಾದ ಪ್ರಯತ್ನದಿಂದ ಉಮೆಯ ಮೇಲಿನ ಸಂಶಯ ಮಿಥ್ಯಾಪವಾದಗಳನ್ನು ಹೋಗಲಾಡಿಸಿ ದಂಪತಿಗಳನ್ನು ಪುನಃ ಒಂದುಗೂಡಿಸುವುದನ್ನೂ ಜೀವನ ಪ್ರಭಾತದ ಉದಯವಾಗಿ ಸರ್ವರೂ ಆನಂದಸಾಗರದಲ್ಲಿ ಮುಳುಗುವುದನ್ನೂ ಪಟದಮೇಲೆ ನೋಡಿ ಸಂತೋಷಪಡಬೇಕು.

ಶಿವಪುರದ ರಾಷ್ಟ್ರಕೂಟ

ಶ್ರೀಮಾನ್ ಟಿ. ಸಿದ್ದಲಿಂಗಯ್ಯನವರು ಅಧ್ಯಕ್ಷರು.

ಈ ದಿನ ಮತ್ತು ನಾಳೆ ಮದ್ದೂರು ತಾ॥ ಶಿವಪುರದಲ್ಲಿ ನಡೆಯುವ ಮೈಸೂರು ಕಾಂಗ್ರೆಸ್ ಅಧಿವೇಶನಕ್ಕೆ ಶ್ರೀ॥ ಟಿ. ಸಿದ್ದಲಿಂಗಯ್ಯನವರನ್ನು ಬಹುಮತದಿಂದ ಅಧ್ಯಕ್ಷರನ್ನಾಗಿ ಚುನಾಯಿಸಲಾಗಿದೆ. ಮೈಸೂರು ಬೆಂಗಳೂರು, ಶಿವಮೊಗ್ಗ, ಚಿತ್ರದುರ್ಗ ಕಡೂರು ಮತ್ತು ಹಾಸನ ಜಿಲ್ಲೆಗಳವರು ಶ್ರೀ॥ ಸಿದ್ದಲಿಂಗಯ್ಯನವರ ಹೆಸರನ್ನು ಸೂಚಿಸಿದರು. ತುಮಕೂರು ಮತ್ತು ಕೋಲಾರ ಜಿಲ್ಲೆಗಳವರು ಶ್ರೀ॥ ಕೆ.ಟಿ. ಭಾಷ್ಯಂರವರ ಹೆಸರನ್ನು ಸೂಚಿಸಿದ್ದರು.

ಹಾಸನವಾದರಿ! ಆನಂದಪಡಿರಿ!

ಹೆಚ್ಚು ಸುವಾಸನೆಯೂ, ರುಚಿಕರವೂ ಇರುವಂಥಾ ಆದ

ಬ್ಲೂ ಬರ್ಡ್ ಬ್ರಾಂಡ್ ಟೀ

ಯನ್ನೇ ಉಪಯೋಗಿಸಿರಿ!

ಇದು ಸ್ವದೇಶೀಯವಾದ ಟೀ. ಇದು ಭಾರತೀಯರಿಗೆ ಯೋಗ್ಯವಾದ ಟೀ. ಎಲ್ಲಾ ಕಡೆಯೂ ದೊರೆಯುತ್ತೆ

ಮೈಸೂರ್ ಸೋಲ್ ಏಜೆಂಟರು — ಚಾರಿ ಮತ್ತು ಪ್ರದರ್

ಸ್ಪೇಷನರಿ ರೋಡು, ಮೈಸೂರು

DON'T SAY
CAN'T "AFFORD"

Who carries risk on your life? If you are not insured, your wife and children carry it. And if you die without insurance your family has to bear the loss. Would you like to let them carry the risk any longer? And above all, who would like to leave them for some one else to support?

May we suggest you to call on any of our nearest representatives or write to us for necessary advice?

National Insurance Co., Ltd.,

(Head Office — Calcutta)

Sub-Office :—

DEVANGA BANK BUILDINGS,

KEMPEGOWDA ROAD, — BANGALORE CITY.

ಶ್ರೀ ರಾಜಲಕ್ಷ್ಮಿ ಟೈಲರಿಂಗ್ ಹಾಲ್ ಅಂಡ್ ಇನ್ಸ್ಟಿಟ್ಯೂಟ್

ಶಿವರಾಂಪೇಟೆ, ಮೈಸೂರು.

ಬೇಸಿಗೆ ರಜದ ಕಾಲದಲ್ಲಿ ಸ್ಪೆಷಲ್ ಟೈಲರಿಂಗ್ ಶಿಕ್ಷಣದ ತರಗತಿಗಳನ್ನು ನಡೆಸಲಾಗುತ್ತದೆ. ತರಗತಿಗಳು ಎರಡು ತಿಂಗಳ ಕಾಲ ನಡೆಯುತ್ತವೆ. ಒಟ್ಟು ಫೀ 35 ರೂ.

ಕೆ. ಎಂ. ಉತ್ತರಕರ್, ಫಸ್ಟ್ ಕ್ಲಾಸ್ ಲಂಡನ್ ಡಿಪ್ಲೊಮಾ ಹೋಲ್ಡರ್.

ಅಕಾಲ ವಾರ್ಧಿಕ್ಯ

ವನ್ನು ಪರಿಹರಿಸುವುದು.

ಮದನ ಮಂಜರಿ ಮಾತ್ರೆಗಳೆ.

ಅತಿ ಯೋಗದಿಂದಲೊ, ಮರಭ್ಯಾಸದಿಂದಲೊ ಅಥವಾ ಮತ್ಯಾವ ಕಾರಣದಿಂದಲೊ ಯೌವನದಲ್ಲೆ ಬಂದ ಮುಪ್ಪನ್ನು ಪರಿಹರಿಸುವುದರಲ್ಲಿ ಇದು ಚಕ್ರವರ್ತಿ ಸ್ಥಾನದಲ್ಲಿದೆ.

40 ಮಾತ್ರೆಗಳ ಡಬ್ಬಿ ಕ್ರಯ ರೂ. 1

ಮದನಮಂಜರಿ ಫಾರ್ಮಸಿ

191 ಜೈನಾ ಬಜಾರ್, ಮದ್ರಾಸ್.

ಏಜೆಂಟರು :—

ದಿ ಆರ್ಯ ಮೆಡಿಕಲ್ ಸ್ಟೋರ್ಸ್,

291, ಚಿಕ್ಕಪೇಟೆ ಬೆಂಗಳೂರು ಸಿಟಿ.

"ಸುವಾಸಿನಿ"

ತನ್ನ ಹೆಸರಿಗನುಗುಣವಾಗಿ ಸುವಾಸನೆ ಹೊಗೆ ಕೊಡುವ

ಶ್ರೀಗಂಧದ ಬತ್ತಿಗಳು

48 ಬತ್ತಿಗಳಿರುವ (ಸುಮಾರು 3 ತೊಲ) ಸಿಲೋಫೇನ್ ಪೇಪರಿನಲ್ಲಿ ಅಂದವಾಗಿ ಪ್ಯಾಕ್ ಮಾಡಿರುವ ರಟ್ಟಿನ ಪೆಟ್ಟಿಗೆಗಳಲ್ಲಿ ದೊರೆಯುತ್ತವೆ.

ಪೆಟ್ಟಿಗೆಯೊಂದಕ್ಕೆ ಬೆಲೆ 0—2—0

ಸಮಸ್ತ ಕರ್ನಾಟಕದಲ್ಲೂ ಏಜೆಂಟರು ಬೇಕಾಗಿದ್ದಾರೆ. ವ್ಯಾಪಾರ ಪೆಟ್ಟಿಗೆಗೂ, ಏಜೆನ್ಸಿ ನಿಬಂಧನೆಗಳಿಗೂ ನಾಲ್ಕು ಆಣೆ ಸ್ಟಾಂಪಿನೊಂದಿಗೆ ಸೋಲ್ ಏಜೆಂಟರಲ್ಲಿ ವಿಚಾರ ಮಾಡಬಹುದು.

ಸೋಲ್ ಏಜೆಂಟ್ —

ಪಿ. ಪಿ. ಕೃಷ್ಣಮೂರ್ತಿ,

ಚಾಮುಂಡಿ ಎಕ್ಸ್ಟೆನ್ಷನ್, ಮೈಸೂರು.

ಝಾಂಜೀಬಾರ ಲವಂಗವನ್ನೇಕೆ ಬಹಿಷ್ಕರಿಸಬೇಕು ?

ಸ್ವದೇಶದ ಮಾನವನ್ನು ಕಾಯಿರಿ.

ಅಂತರ ರಾಷ್ಟ್ರಗಳಲ್ಲಿ ಭಾರತದ ಸ್ಥಾನವನ್ನು ಭದ್ರಪಡಿಸಿರಿ.

ಝಾಂಜೀಬಾರದ ರಾಜ್ಯಾಡಳಿತ

ಝಾಂಜೀಬಾರ್-ಇದು ಬ್ರಿಟಿಷ್ ಈಸ್ಟ್ ಆಫ್ರಿಕದಲ್ಲಿರುವ ಬ್ರಿಟಿಷ ಸಂರಕ್ಷಣೆಗೊಳಪಟ್ಟ ಒಂದು ಪಾಸಸಂಸ್ಥಾನ. ಈ ಸಂಸ್ಥಾನದ ಸ್ಸುಲ್ತಾನನ ಆಳಿಕೆಯಲ್ಲಿದೆ. ಆದರೆ ಈ ಸಂಸ್ಥಾನದ ನಿಜವಾದ ಅಧಿಕಾರವು ಆತನ ಕಡೆಗಿರದೆ ಅಲ್ಲಿ ನಿಯಮಿಸಲ್ಪಟ್ಟಿರುವ ಬ್ರಿಟಿಶ ರೆಸಿಡೆಂಟನ ಕಡೆಗೆ ಇರುತ್ತದೆ. ರೆಸಿಡೆಂಟನ ಸಹಾಯಾರ್ಥವಾಗಿ ಒಂದು ಲೆಜಿಸ್ಲೇಟಿವ್ಹ ಕೌನ್ಸಿಲು ಇರುತ್ತದೆ. ಆದು ಯಾನಾಗಲೂ ಅವನಿಗೆ ಸಹಾಯ ಮಾಡುತ್ತದೆ. ಕೌನ್ಸಿಲ್ಲಿನ ಎಲ್ಲ ಸದಸ್ಯರನ್ನು ನಾಮಿನೇಶನ್ ಪದ್ಧತಿಯ ಪ್ರಕಾರ ಆ ರೆಸಿಡೆಂಟನೇ ನಿಯಮಿಸುತ್ತಾನೆ. ನಿಯಮಿಸಿದ ಸದಸ್ಯರಲ್ಲಿ ಅಧಿಕಾರಿಗಳೇ ಹೆಚ್ಚು ಜನರಿರುತ್ತಾರೆ. ಅವರದೇ ಬಹುಮತವಾಗುತ್ತದೆ.

ಝಾಂಜೀಬಾರವು ಲವಂಗ ಬೆಳೆಯುವ ದೇಶ

ಝಾಂಜೀಬಾರವು ಲವಂಗ ಬೆಳೆಯುವ ದೇಶಗಳಲ್ಲೊಂದು. ಇಲ್ಲಿ ಬೆಳೆದಷ್ಟು ಲವಂಗಗಳು ಇನ್ನೆಲ್ಲಿಯೂ ಬೆಳೆಯುವದಿಲ್ಲ. ಪ್ರತಿ ನಾಲ್ಕು ವರ್ಷಕೊಮ್ಮೆ ಅಲ್ಲಿ ಲವಂಗದ ಬೆಳೆಯು ವಿಪರೀತವಾಗಿ ಬರುತ್ತದೆ. ಹೀಗೆ ಬಂದಿತೆಂದರೆ ಬೇಡಿಕೆಯಿಲ್ಲದೆ ಎಷ್ಟೋ ಲವಂಗವನ್ನು ನಾಶಮಾಡಬೇಕಾಗುತ್ತದೆ. ಅಲ್ಲಿ ಲವಂಗ ಬೆಳೆಯುವರೆಂದರೆ ಅಲ್ಲಿಯ ಮೂಲ ನಿವಾಸಿಗಳು ಮತ್ತು ಅರಬರು. ಅಲ್ಲಿಂದ ಹಿಂದೂಸ್ಥಾನಕ್ಕೆ ಗಂ೦೦ ಕ್ಕ ಲವಂಗವು ಒಯ್ಯಲ್ಪಡುತ್ತದೆ. ಅಲ್ಲಿಯ ಲವಂಗದ ವ್ಯಾಪಾರಿಗಳೆಲ್ಲರೂ ಭಾರತೀಯರಿದ್ದು ಮುಖ್ಯವಾಗಿ ಮೂರು ನಾಲ್ಕುಸಾವಿರ ಜನರು ಮುಸಲ್ಮಾನರೇ ಇರುತ್ತಾರೆ. ಒಟ್ಟು ಝಾಂಜೀಬಾರದಲ್ಲಿ ೧೫೦೦೦ ಜನ ಭಾರತೀಯರಿರುತ್ತಾರೆ.

ಝಾಂಜೀಬಾರಕ್ಕೂ ಹಿಂದೂಸ್ಥಾನಕ್ಕೂ ಸಂಬಂಧ

ವ್ಯಾಪಾರದಿಂದ ಈ ಎರಡೂ ದೇಶಗಳ ಸಂಬಂಧವು ಬಲವಾಗಿದೆ. ಗಾಗ ನೇ ಶತಮಾನ ಪೂರ್ವದಲ್ಲಿ ಅಲ್ಲಿಗೆ ಪೋರ್ಚುಗೀಜರು ಹೋಗುವದಕ್ಕಿಂತ ಮೊದಲು ಅಲ್ಲಿ ಹಿಂದಿಯರು ನೆಲಸಿದ್ದರು. ಅಂದಿನಿಂದ ಇಂದಿನವರೆಗೆ ಎರಡೂ ದೇಶಗಳಲ್ಲಿ ವ್ಯಾಪಾರ ಸಂಬಂಧವು ಹೆಚ್ಚುತ್ತ ಬಂದಿದೆ. ಇತ್ತೀಚೆಗೆ ಹಿಂದೂಸ್ಥಾನಕ್ಕೆ ಲವಂಗದ ವಿಕ್ರಯ ... ಪರದೇಶಕ್ಕೆ ಹೋಗುವ ಲವಂಗದ ... ವ್ಯಾಪಾರವು ನಮ್ಮವರ ಕೈಯಲ್ಲಿಯೇ ಇದ್ದಿತು. ಅದು ಹಿಂದೂಸ್ಥಾನ ಹೋಗಿ ಸರಿಸಿದ ಬ್ರಿಟಿಶರು ... ಈಗ ಮೊದಲು ಲವಂಗದ ವ್ಯಾಪಾರವನ್ನು ತಮ್ಮ ಕಡೆಗೆ ಸೆಳೆದುಕೊಳ್ಳಬೇಕೆಂದು ಪ್ರಯತ್ನ ನಡೆಯಿಸಿದರು.

ಬ್ರಿಟಿಷರ ಆಕ್ರಮಣ

ಈ ಹಿಂದೆ ಹೇಳಿದಂತೆ ಝಾಂಜೀಬಾರದ ಲವಂಗವೆಲ್ಲ ಭಾರತೀಯರ ಅಂದರೆ ಬಹುಸಂಖ್ಯಾಕರಾದ ನಮ್ಮ ಮುಸಲ್ಮಾನ ಬಾಂಧವರ ಕೈಯಲ್ಲಿ ಇದ್ದಿತು. ಆ ವ್ಯಾಪಾರವನ್ನು ಕಸಿದುಕೊಳ್ಳಲು ಅನೇಕ ಉಪಾಯಗಳನ್ನು ಮಾಡುವದು ಅಷ್ಟು ಯಶಸ್ವಿಯಾಗಲಿಲ್ಲ. ಕೊನೆಗೆ ೧೯೩೪ನೇ ಇಸವಿಯಲ್ಲಿ ಲೆಜಿಸ್ಲೇಟಿವ್ಹ ಕೌನ್ಸಿಲ್ಲಿನಲ್ಲಿ "ಲವಂಗ ಬೆಳೆಯುವವರ ಸಂಸ್ಥೆ" ಎಂಬ ಹೆಸರಿನಲ್ಲಿ "ಕ್ಲೋವ್ಸ್ ಬಿಲ್ಲು" ಎಂದರೆ ಲವಂಗದ ಶಾಸನ ಎಂಬ ಶಾಸನವನ್ನು ಮಾಡಿ ಆ ಶಾಸನದಂತೆ ಈಗ ಕೆಲವು ತಿಂಗಳುಗಳ ಹಿಂದೆ ಒಂದು ಲವಂಗ ಬೆಳೆಯುವವರ ಸಂಘವನ್ನೇ ಸ್ಥಾಪಿಸಿದರು. ಬಹುಜನರು ಬೆಳೆಯುವವರು ಈ ಸದಸ್ಯರಾಗಿಲ್ಲ. ಲವಂಗದ ಒಳದೇಶದ ಮತ್ತು ಹೊರದೇಶದ ವ್ಯಾಪಾರವನ್ನು ಗೊತ್ತುಪಡಿಸುವ ಮತ್ತು ಲವಂಗ ಕೊಳ್ಳುವ ಮತ್ತು ಮಾರುವ ಅಧಿಕಾರ ಲವಂಗದ ವ್ಯಾಪಾರವೆಲ್ಲವೂ ಆ ಸಂಘಕ್ಕೆ ಇರುತ್ತದೆ. ಆ ಮೊದಲೇ ಹೇಳಿದಂತೆ ಸಂಘದ ಹೆಸರು "ಲವಂಗ ಬೆಳೆಯುವವರ ಸಂಘ" ಎಂದು, ಅದರ ಅಧಿಕಾರಿಗಳೆಲ್ಲರೂ ಬ್ರಿಟಿಶರ ಕೈಯಲ್ಲಿದ್ದಾರೆ. ಇಂಥ ಸ್ಥಿತಿಯ ಸಂಘಕ್ಕೆ ಬ್ರಿಟಿಶರ ಸಂಘವೆಂದು ... ಈ ರೀತಿ ಶಾಸನ ಮಾಡಿ ಈಗ ಸಿಯ ಬ್ರಿಟಿಶರು ಲವಂಗದ ವ್ಯಾಪಾರದಲ್ಲಿ ಭಾರತೀಯರಾದ ನಮ್ಮ ಮುಸಲ್ಮಾನ ಬಂಧುಗಳ ಕೈಯಿಂದ ಕಸಿದುಕೊಂಡು ತಮ್ಮ ಕಡೆಗೆ ಸೆಳೆದುಕೊಂಡಿದ್ದಾರೆ. ಇದರಿಂದ ಅಲ್ಲಿ ಈ ವರೆಗೆ ನೆಲಸಿರುವ ಭಾರತೀಯರು ... ಈ ಮಾಡಿದ ವ್ಯಾಪಾರಗಳನ್ನು ಬಿಟ್ಟು ಹಿಂದೂಸ್ಥಾನಕ್ಕೆ ತಿರುಗಿ ಬರಬೇಕು, ಇಲ್ಲವೆ ಅಲ್ಲಿ ಉಪವಾಸ ಸಾಯಬೇಕು. ಇಂಥ ಪರಿಸ್ಥಿತಿಯು ಅಲ್ಲಿ ನಮ್ಮ ಮುಸಲ್ಮಾನ ಮತ್ತು ಹಿಂದೂ ಬಂಧುಗಳಿಗೆ ಬಂದೊದಗಿದೆ.

ಬಹಿಷ್ಕಾರವನ್ನು ಏಕೆ ಹಾಕಬೇಕಾಯಿತು?

ಅಲ್ಲಿನ ನಮ್ಮ ಬಂಧುಗಳು ತಮ್ಮ ಮೇಲಿನ ಈ ಅನ್ಯಾಯವನ್ನು ಹೋಗಲಾಡಿಸಿಕೊಳ್ಳಬೇಕೆಂದು ಹೋರಾಡಿದರು. ಅಲ್ಲಿಯ ಸರಕಾರಕ್ಕೆ ಅರ್ಜಿಗಳನ್ನು ಕಳಿಸಿದರು, ಮತ್ತು ಹಿಂದೂಸ್ಥಾನ ಸರಕಾರವು ... ಈ ಬಗ್ಗೆ ಲೆಜಿಸ್ಲೇಟಿವ್ಹ ಅಸೆಂಬ್ಲಿ ಕೌನ್ಸಿಲ್ ... ಗಳನ್ನು ಮಾಡಿದರು. ... ವ್ಯಾಪಾರ ಸ್ಥಗಿತವಾಯಿತು. ಆದರೆ ಎಲ್ಲವೂ ವ್ಯರ್ಥವಾಗಿ ಹೋಯಿತು. ಆವರ ಎಲ್ಲ ಪ್ರಯತ್ನ ಸಮಯದಲ್ಲಿ ಹೋದ ಮೇಲೆ ಈಗ ... ಸ್ಥಾನವು ಪರಾಧೀನ ಮತ್ತು ನಿಕೃಷ್ಟವಾದ ದೇಶದವರೆಂಬುದು ಸೇರಿದಾಗ ... ಆದರೆ ನಮ್ಮಲ್ಲಿ ಒಂದು ಒಳ್ಳೆ ಪ್ರವಾಸದ ... ಈ ಪ್ರಸಂಗದಲ್ಲಿ ... ಹಿಂದೂಸ್ಥಾನದ ರಾಷ್ಟ್ರೀಯ ಸಭೆಯು ... ಈ ಪ್ರಸಂಗದಲ್ಲಿ ಆ ದೇಶದವರು ಬಂದು ... ಝಾಂಜೀಬಾರ ಲವಂಗಕ್ಕೆ ಬಹಿಷ್ಕಾರ ಹಾಕಬೇಕೆಂದು ... ಬಹಿಷ್ಕಾರವನ್ನು ಒಳ್ಳೆ ಜೋರಿನಿಂದ ನಡೆಸಬೇಕೆಂದು ...

ಬಹಿಷ್ಕಾರದ ಆನಂತರ ಪರಿಸ್ಥಿತಿ

ಕಾಂಗ್ರೆಸ್ಸಿನ ಅಪ್ಪಣೆಯಂತೆ ಝಾಂಜೀಬಾರ ಲವಂಗಕ್ಕೆ ಬಹಿಷ್ಕಾರ ... ಹಾಕಲಾಯಿತು. ಹಿಂದೂಸ್ಥಾನಕ್ಕೆ ಬ್ರಿಟಿಶರು ಹಡಗಿನಿಂದ ಕಳಿಸಿದ ಎಷ್ಟೋ ಲವಂಗದ ಚೀಲಗಳು ... ಮುಂಬಯಿ ... ಬಂದರು ... ಕಾಂಗ್ರೆಸ್ಸಿನ ... ಈ ಬಂದರಗಳಲ್ಲಿ ... ಕಾಂಗ್ರೆಸ್ಸಿನ ...

ಅಂತರ ರಾಷ್ಟ್ರಗಳಲ್ಲಿ ಭಾರತೀಯರಿಗಿರುವ ಸ್ಥಾನ

ಬಹಿಷ್ಕಾರವಲ್ಲದೆ ... ಈ ರೀತಿ ... ಅಂತರರಾಷ್ಟ್ರಗಳಲ್ಲಿ ನಮ್ಮ ಅಧಿಕಾರ ... ದಿವಸದ ಸ್ಥಾನವು ... ಸ್ಥಾನವನ್ನು ... ರಾಷ್ಟ್ರಗಳಿಗೆ ... ಎಲ್ಲ ರಾಷ್ಟ್ರಗಳು ... ಬಹಿಷ್ಕಾರದ ಮಾರ್ಗ ...

ಹೇಗೆ ಬಹಿಷ್ಕರಿಸಬೇಕು ?

ಈ ಸಾರೆ ಲವಂಗ ಬಹಿಷ್ಕಾರದ ... ಪ್ರತಿಯೊಬ್ಬ ... ಲವಂಗವನ್ನು ... ಕಾಂಗ್ರೆಸ್ ... ರಾಷ್ಟ್ರೀಯ ... ಕಾರ್ಯಕರ್ತರು ...

(ನೇರ ಪುಟವನ್ನು ನೋಡಿ)

ಪಾಶ್ಚಿಮಾತ್ಯರ ರೀತ್ಯಾ ವರ್ಷ ಫಲ

ಸುಭಿಕ್ಷಯೋಗ—ರಾಜರಲ್ಲಿ ಕಲಹ—ಹಿಂದೂಸ್ಥಾನಕ್ಕೆ ಹೊರಗಿನವರ ಭಯ—ಕಡೆಯಲ್ಲಿ ಶಾಂತಿಸ್ಥಾಪನೆ.

[illegible]

[illegible]

[illegible]

[illegible]

[illegible]

ಲವಂಗ ಬಹಿಷ್ಕಾರ

(11 ನೆಯ ಪುಟದಿಂದ ಮುಂದುವರಿದುದು)

[illegible]

(೧) [illegible]

(೨) [illegible]

(೩) [illegible]

[illegible]

[illegible]



[illegible]

ಎಡದಿಂದ ಬಲಕ್ಕೆ

[illegible]

ಮೇಲಿನಿಂದ ಕೆಳಕ್ಕೆ

[illegible]





... ವೆಂಕಟಾಚಲ ಪಂಡಿತ ಅಂಡ್ ಸನ್,

... ಕಸ್ತೂರಿ ಮಾತ್ರೆಗಳು

[illegible]

... ವೆಂಕಟಾಚಲ ಪಂಡಿತ ಅಂಡ್ ಸನ್,

[illegible]

... ಪತ್ರಿಕೆ ... ನಿಶ್ಚಯಿಸಿದ್ದಾರೆ. ...

[illegible]

ಎಲ್ಲಾ ದಾರಿಗಳೂ ಎಲ್ಲಿ ಸೇರುತ್ತವೆ?

... ಅಸ್ಪತ್ರೆ ಇವಕ್ಕೆಲ್ಲಾ ಕೇಂದ್ರಸ್ಥಾನವಾವುದು?

ಇಲ್ಲಿಯೇ ಅಲ್ಲವೇ?

ಶ್ರೀ ಕೃಷ್ಣ ಭವನ

ಮಾರ್ಕೆಟ್ ಚೌಕ, : : ಮೈಸೂರು.

ಹಿಂದೂಸ್ಥಾನಕ್ಕೆ

ಅಚ್ಚುಮೆಚ್ಚಿನದಾದ ಸ್ನಾನದ ಸಾಬೂನು



ಇದಕ್ಕೆ ಏಕಾಗದು?

ಮೈಸೂರು ಗಂಧದ ಸಾಬೂನು

... ಕಡೆಯಲ್ಲಿಯೂ ದೊರೆಯುತ್ತದೆ

ಗೌರ್ನಮೆಂಟ್ ಸಾಬೂನು ಕಾರ್ಖಾನೆ, ಬೆಂಗಳೂರು.



ಟಿ. ಸಿ. ನಟರಾಜ್ ಔಷಧಾಲಯ,

ಸಯ್ಯಾಜಿರಾವ್ ರೋಡು, ಮೈಸೂರು

ಇದರಲ್ಲಿ ನೇತ್ರ ಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

... ಔಷಧಿಗಳೂ ... ದೊರಕುತ್ತವೆ

Printed & Published by Agaram Rangiah B.A., at Sri Rama Press ... Road Mysore.

Regd No M 3534

Half Anna

ಸಂಪುಟ ೩ : ಸಂಚಿಕೆ ೭

SADHVI

ತಾ|| ೧೮-೪-೧೯೩೮

ಮೈಸೂರು ರಾಷ್ಟ್ರಪತಿ

ಶ್ರೀ|| ಟಿ. ಸಿದ್ದಲಿಂಗಯ್ಯನವರು



ವಿವರಗಳಿಗೆ ಬರೆಯಿರಿ:

ಓರಿಯಂಟಲ್

ಗೌರ್ನಮೆಂಟ್ ಸೆಕ್ಯೂರಿಟಿ
ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಸ್ಥಾಪಿತ 1874 ಮುಖ್ಯ ಕಚೇರಿ : ಬೊಂಬಾಯಿ

ಭಾರತದಲ್ಲೆಲ್ಲಾ ಈ ಸಂಸ್ಥೆಯ ಶಾಖೆಗಳೂ, ಪ್ರತಿನಿಧಿಗಳೂ ಇದ್ದಾರೆ.

ಎಂ. ಹೆಚ್. ಕೃಷ್ಣಮೂರ್ತಿ,
ಇನ್ಸ್‌ಪೆಕ್ಟರ್,
ಸಂತ್ಯಾಪಿನಾಸ್ ರೋಡ್, ಮೈಸೂರು.

ಎಸ್. ಸ್ವಾಮಿನಾಥನ್, ಬಿ. ಎ.,
ಬ್ರಾಂಚ್ ಸೆಕ್ರೆಟರಿ,
ಓರಿಯಂಟಲ್ ಬಿಲ್ಡಿಂಗ್ಸ್,
ಸೌತ್ ಪರೇಡ್, ಬೆಂಗಳೂರು.

ನಿಮ್ಮ ಕರ್ತವ್ಯ

ಪ್ರತಿಯೊಬ್ಬ ತಂದೆಯಾಗಲಿ, ಗಂಡನಾಗಲಿ, [illegible] ಬಡವನಾಗಲಿ, ಐಶ್ವರ್ಯವಂತನಾಗಲಿ, ಆತನನ್ನು ಅವಲಂಬಿಸಿರುವವರು ಇದ್ದೇ ಇರುತ್ತಾರೆ. ಆತನು ಮರಣ ಹೊಂದುವುದಕ್ಕೆ ಮುಂಚೆ ತನ್ನನ್ನು [illegible] ಜೀವನಕ್ಕೆ ಸಾಕಾಗುವಷ್ಟು ಸೌಕರ್ಯಗಳನ್ನು ಒದಗಿಸಿಕೊಡಬೇಕಾದುದು ಆತನ ಕರ್ತವ್ಯ.

ಓರಿಯಂಟಲ್

ಈ ಕರ್ತವ್ಯವನ್ನು ನೆರವೇರಿಸಲು ನಿಮಗೆ ಸಹಕಾರಿಯಾಗಲಿ.

ಸಂಪಾದನೆ ಮಾಡುವವರ ಮರಣದಿಂದ ಸಂಸಾರದಲ್ಲಿ ಆಕಸ್ಮಿಕವಾಗಿ ಬಂದೊದಗುವ ಕಷ್ಟಕಾಲದಲ್ಲಿ ಓರಿಯಂಟಲ್ ಪಾಲಿಸಿಗಳು ಕಳೆದ 61 ವರ್ಷಗಳಿಂದ ಸಾವಿರಾರು ಕುಟುಂಬಗಳಿಗೆ ಸಹಾಯ ಮಾಡಿವೆ.

ಒಂದು ದಿನ ಹೆಚ್ಚು ಕಳೆದರೆ ಪ್ರತಿಯೊಬ್ಬ ಮನುಷ್ಯನಿಗೂ ವಿಮೆ ಮಾಡಬಹುದಾದ ಕಾಲವು ಮೀರಿ ಹೋಗುತ್ತದೆ. ಆದ್ದರಿಂದ ನಿಮ್ಮ ಕರ್ತವ್ಯ ಪಾಲನೆಯಲ್ಲಿ ತಡಮಾಡಬೇಡಿರಿ.

ಓರಿಯಂಟಲ್‌ನಲ್ಲಿ ವಿಮೆ ಮಾಡಿರಿ

ನಿಮ್ಮ ಆಪ್ತರ ಭವಿಷ್ಯವನ್ನು ಭದ್ರಪಡಿಸಿರಿ.

ಧನ್ವಂತರಿ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

— ಬಾಲಸುಧಾ —

ಮಕ್ಕಳ ಜ್ವರದ ರೋಗವನ್ನು ಬೇಗನೆ ಗುಣ ಪಡಿಸುತ್ತೆ. ಲಿವರ್ (ಪಿತ್ತಕೋಶ) ದೊಡ್ಡದಾಗಿ ಕಣ್ಣು ಹಳದಿ ಬಣ್ಣವಾಗಿದ್ದರೆ ಇದರ ಸೇವನೆಯಿಂದ ಬೇಗನೆ ಗುಣವಾಗುತ್ತೆ. 30 ವರ್ಷಗಳಿಂದಲೂ ಅನುಭವ ಸಿದ್ಧವಾಗಿದೆ—ಮಕ್ಕಳ ಶೀತಕ್ಕೆ ನಮ್ಮ ಬಾಲ ಸಂಜೀವಿನಿ ಮಾತ್ರೆ ಉಪಯೋಗಿಸಿರಿ.

ಬಾಲಸುಧಾ ಬೆಲೆ 1 ರೂ. ಬಾಲಸಂಜೀವಿನಿ 4 ಆ.

ಮೈಸೂರು, ಬೆಂಗಳೂರು, ಮದ್ರಾಸುಗಳಲ್ಲಿ ನಮ್ಮ ಶಾಖೆಗಳಿವೆ.

ಸದ್ವೈದ್ಯಶಾಲಾ, ನಂಜನಗೂಡು

“ಸುವಾಸಿನಿ”

ಎಂಟು ದಿವಸಗಳವರೆಗೆ ಸುವಾಸನೆ ಹೊಗೆ ಕೊಡುವ

ಶ್ರೀಗಂಧದ ಬತ್ತಿಗಳು

18 ಬತ್ತಿ ಗಳುಳ್ಳ (ಸುಮಾರು 3 ತೊಲ) ಸೆಲೋಫೇನ್ ಪೇಪರಿನಲ್ಲಿ [illegible] ಮಾಡಿರುವ ಚಿತ್ರದ ಪೆಟ್ಟಿಗೆಗಳಲ್ಲಿ ದೊರೆಯುತ್ತವೆ. ಪೆಟ್ಟಿಗೆಯೊಂದಕ್ಕೆ ಬೆಲೆ 0—2—0

ಸಮಸ್ತ ಕರ್ನಾಟಕದಲ್ಲೂ ಏಜೆಂಟರು ಬೇಕಾಗಿದ್ದಾರೆ. [illegible] ಸ್ಟಾಂಪಿನೊಂದಿಗೆ [illegible] ವ್ಯವಹಾರ ಮಾಡಬಹುದು.

[illegible] ಬರೆಯಿರಿ:—

ಸದಕಿ ಕೃಷ್ಣಮೂರ್ತಿ,
ಚಾಮುಂಡಿ ಎಕ್ಸ್‌ಟೆನ್ಷನ್, ಮೈಸೂರು.

ಅಮೃತಾಂಜನ

ಶೀಘ್ರವಾಗಿ ಗುಣಪಡಿಸುತ್ತದೆ.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿಬ್ಬು, [illegible] ಚರ್ಮ ರೋಗಗಳಿಗೂ ಉತ್ತಮ ಔಷಧ.

ಅಮೃತಾಂಜನ ಲಿಮಿಟೆಡ್
ಬೊಂಬಾಯಿ - ಮದರಾಸು.



॥ ಸತ್ಯಮೇವೋದ್ಧರಾಮ್ಯಹಮ್ ॥

ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.

ವೃದ್ಧಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.

ಸಂಪಾದಕರು: ಅಗರಂ ರಂಗಯ್ಯ, ಬಿ.ಎ.

ಸಂಪುಟ ೩] MYSORE : MONDAY 18—4—38 — ಮೈಸೂರು : ಸೋಮವಾರ ೧೮—೪—೩೮ [ಸಂಚಿಕೆ ೭

ಕೋರ್ಟಿನ ನ್ಯಾಯಕ್ಕೂ ಸ್ಥಳವಿಲ್ಲವೆ?

ಶ್ರೀ ಕೆ. ಟಿ. ಭಾಷ್ಯಂ ರವರು

ಪ್ರತಿ ಸ್ಪರ್ಧಿಗಳೇ ಇಲ್ಲ

ರಾಷ್ಟ್ರಪತಿಯ ಬೇಡಿಕೆ

ಅಹಿಂಭಾವದ ಆಕ್ಷೇಪಣೆ

ಶ್ರೀ ಕೆ. ಚೆಂಗಲರಾಯ ರೆಡ್ಡಿಯವರು

ಸ್ವಾಗತ ಭಾಷಣ

ಮೈಸೂರು ಕಾಂಗ್ರೆಸ್ ರಾಷ್ಟ್ರಕೂಟದ ಪ್ರಾರಂಭ ಅಧಿವೇಶನದಲ್ಲಿ ಅಧ್ಯಕ್ಷರಾದ ಶ್ರೀಯುತ ಎಸ್. ಚನ್ನಯ್ಯನವರ ಸ್ವಾಗತ ಭಾಷಣದ ಸಾರಾಂಶ :—

ಪ್ರಿಯ ಸ್ನೇಹಿತರೇ,

ಸ್ವಾಗತ ಸಮಿತಿಯ ಪರವಾಗಿ ತಮ್ಮೆಲ್ಲರಿಗೂ ಈ ಮೈಸೂರು ಕಾಂಗ್ರೆಸ್ ಸಭೆಯ ಪ್ರಥಮ ಅಧಿವೇಶನಕ್ಕೆ ಸ್ವಾತ್ಯಾವೇಶರಾದವರ ಸ್ವಾಗತವನ್ನು ಅತ್ಯಂತ ಹರ್ಷದಿಂದ ಬಯಸುತ್ತೇನೆ.

ಚಿತ್ರದುರ್ಗದ ರಾಷ್ಟ್ರಕೂಟವು ನಡೆದ ಮೇಲೆ ಕ್ಷಿಪ್ರದಲ್ಲೇ ಈ ಅಧಿವೇಶನವು ಸೇರಬೇಕಾಗಿ ಸೇರಿಸಲ್ಪಟ್ಟಿರುವುದನ್ನು ನೋಡಿ ಸುಖವು ವಿಷಾದ ಮಿಶ್ರಿತ ಹರ್ಷದ ಪರಿಸ್ಥಿತಿಯು ವಿಷಯವಾಗಿ ನಾನೇನನ್ನೂ ಹೇಳಬೇಕಾಗಿಲ್ಲ. ನಾವು ಚಿತ್ರದುರ್ಗದಲ್ಲಿ ಸೇರಿದಾಗ ನಮ್ಮ ಮುಖಂಡರನೇಕರು ಕಾರಾಗೃಹದಲ್ಲಿದ್ದರು. ದಬ್ಬಾಳಿಕೆಯೂ ಪ್ರತಿಬಂಧಕಾಜ್ಞೆಗಳೂ ಸರ್ವವ್ಯಾಪಿಯಾಗಿದ್ದುವು; ಕೆಲವು ಪತ್ರಿಕೆಗಳು ನಿಲ್ಲಿಸಲ್ಪಟ್ಟವು; ಅವುಗಳಲ್ಲೊಂದರ ಸಂಪಾದಕರು ಸಂಸ್ಥಾನದಿಂದ ಹೊರಡಿಸಲ್ಪಟ್ಟರು. ಚಿತ್ರದುರ್ಗದ ಸಭೆಯು ಬಹಿರಂಗವಾಗಿ ನಡೆಯಿತು, ಸಾರ್ವಜನಿಕ ಸ್ಥಳಗಳಲ್ಲಿ ಸಭೆ ನಡೆಸಕೂಡದೆಂದು ಪ್ರತಿಬಂಧಕಾಜ್ಞೆಯು ಜಾರಿಯಲ್ಲಿದ್ದುದರಿಂದ, ಅವಕಾಶವಾಗಲಿಲ್ಲ. ಮೈಸೂರಿನ ಕಾಂಗ್ರೆಸ್ ಸಭೆಯು ಅದಕ್ಕೆ ಮುಂಚಿತವಾಗಿಯೇ ಸ್ವಾರ್ಥಪರಿತ್ಯಾಗದ ಕಟ್ಟಳೆಯೊಂದನ್ನು ವಿಧಿಸಿದ್ದುದರಿಂದ ಕಾಂಗ್ರೆಸ್ ಸದಸ್ಯರೂ ಪ್ರತಿಬಂಧಕ ಶಾಸನಗಳನ್ನು ಮುರಿಯಲಾಗಲಿಲ್ಲ. ಚಿತ್ರದುರ್ಗದ ಸಮ್ಮೇಳನದಲ್ಲಿ ಈ ಸ್ವಾರ್ಥಪರಿತ್ಯಾಗದ ಕಟ್ಟಳೆಯನ್ನು ಫೆಬ್ರವರಿ 6 ನೇ ತಾರೀಖಿನಿಂದ ಪ್ರತಿಬಂಧಕಾಜ್ಞೆಗಳನ್ನು ಮುರಿಯುವ ಸ್ವಾತಂತ್ರ್ಯವು ಸ್ವೇಚ್ಛೆಯಾಗಿ ಕಾಂಗ್ರೆಸ್ ಸದಸ್ಯರಿಗೆ ಕೊಡಲ್ಪಟ್ಟಿತು. ಈ ನಿರ್ಧಾರದಿಂದ ಸರ್ಕಾರದ ಕ್ರೋಧ ಗಾಬರಿಯುಂಟಾಗಿ ರಾಜದ್ರೋಹದ ಮತ್ತು ಇತರ ಅಪಾದನೆಗಳ ಮೇಲೆ ಮುಖಂಡರನ್ನು ಬಂಧಿಸಿ ವಿಚಾರಣೆಗೆ ಗುರಿಪಡಿಸಿದ ನಿದರ್ಶನಗಳು ಹೊರಬೀಳುವುದರಲ್ಲಿದ್ದವು. ಕೆಲವು ಮುಖಂಡರು ಬಂಧಿಸಲ್ಪಟ್ಟು ವಿಚಾರಣೆಗೂ ಗುರಿಯಾದರು. ಇಷ್ಟರಲ್ಲಿ ಸಂಧಾನವಾರಂಭವಾಯಿತು. ಕಾಂಗ್ರೆಸ್ಸಿನ ಅಧ್ಯಕ್ಷರೂ ಹಲವು ಮುಖಂಡರೂ ಸೆರೆಯಲ್ಲಿರುವಾಗ ಸಂಧಾನವಾರಂಭವಾದ ವಿಷಯದಲ್ಲಿ ಭಿನ್ನಾಭಿಪ್ರಾಯವಿತ್ತು. ಹೇಗೂ ಸಂಧಾನವು ಫಲಕಾರಿಯಾಗಲಿಲ್ಲ. ಸರಕಾರವು ಕಾಂಗ್ರೆಸ್ ಸಂಸ್ಥೆಯನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ. (ಸಂಧಾನವು ಮುರಿದುಬೀಳಲು ಜವಾಬ್ದಾರಿತ ಅಧಿಕಾರದ ಕಾರಣವೇ ಹೊರತು ಬೇರೆ ಅಲ್ಲವೆಂಬುದು ನನ್ನ ಅಭಿಪ್ರಾಯ.) ಒಡನೆಯೇ ರಾಜಕೀಯ ಬಂದಿಗಳನ್ನು ಬಿಡುಗಡೆ ಮಾಡಬೇಕೆಂದೂ ಮೊಕದ್ದಮೆಗಳನ್ನು ವಾಪಸು ತೆಗೆದುಕೊಳ್ಳಬೇಕೆಂದೂ ನಿರೂಪವು ಹೊರಬಿದ್ದು

ದೇಶೀಯ ಸಂಸ್ಥಾನಗಳಿಗೆ ಸಂಬಂಧಪಟ್ಟ ಹರಿಪುರ ನಿರ್ಣಯವು ಕಾಂಗ್ರೆಸ್ಸಿನ ಧ್ಯೇಯವನ್ನು ಸಂಪೂರ್ಣ ಜವಾಬ್ದಾರಿ ಸರಕಾರದ ಸ್ಥಾಪನೆ ಮತ್ತು ವ್ಯಕ್ತಿ ಸ್ವಾತಂತ್ರ್ಯವೆಂಬುದರನ್ನು ನಿಸ್ಸಂದೇಹವಾಗಿ ಸ್ಪಷ್ಟಪಡಿಸಿದರೂ ತಾತ್ಕಾಲಿಕವಾಗಿ ಸಂಸ್ಥಾನಗಳಲ್ಲಿ ಅಖಿಲಭಾರತ ಕಾಂಗ್ರೆಸ ಸಮಿತಿಗಳ ಸ್ಥಾಪನೆಗೆ ಕೊಡಲಿಯಿಟ್ಟಿತು. ಇದು ಸಂಸ್ಥಾನಗಳ ಬಹು ಮಂದಿ ಪ್ರಜೆಗಳ ಮನಸಿಗೆ ತಟ್ಟದೇ ಇರಲಿಲ್ಲ. ಹರಿಪುರದ ಅಧಿವೇಶನದಲ್ಲಿ ಈ ನಿರ್ಣಯವು ಬಿದ್ದುಹೋಗಬಹುದೆಂಬ ಆಶೆಯೊಂದಿಗಿದ್ದ ಸಂಸ್ಥಾನದ ಪ್ರಜೆಗಳು ನಿರಾಶರಾಗಲಿಲ್ಲ.

ಹರಿಪುರದ ನಿರ್ಣಯವು ಕಾಂಗ್ರೆಸ್ಸಿನ ಎರಡು ಪಕ್ಷಗಳ ಮಧ್ಯೆ ಸಮಾಗಮವನ್ನು ಸಾಧಿಸಿತು. ಸಂಸ್ಥಾನದ ಪ್ರಜೆಗಳಿಗೆ ಈ ನಿರ್ಣಯವು ತೃಪ್ತಿಕರವಾಗಲಿಲ್ಲ. ಮೈಸೂರಿಗಂತೂ ಈ ನಿರ್ಣಯವು ಕೇವಲ ಅನಾನುಕೂಲವನ್ನೇ ಉಂಟುಮಾಡಿದೆ. ಅಖಿಲಭಾರತ ಕಾಂಗ್ರೆಸ್ಸಿನ ಅಂಗ ಸಂಸ್ಥೆಯಾಗಿ ಕಾಂಗ್ರೆಸ್ ಸಮಿತಿಗಳು ಸಂಸ್ಥಾನಗಳಲ್ಲಿ ಸ್ಥಾಪಿತವಾದರೆ ಆ ಸಂಸ್ಥೆಗಳು ಯಶಸ್ವಿಯಾಗಿ ಸಂಸ್ಥಾನಗಳಲ್ಲಿ ಕೆಲಸ ಮಾಡಬಾರದೆಂಬ ಭಾವನೆಯು, 16 ವರ್ಷಗಳಿಂದ ನಡೆಯುತ್ತಿರುವ 17,000 (ಹೋದ ವರ್ಷದಲ್ಲಿ) ಸದಸ್ಯರಿಂದ ಕೂಡಿರುವ ಮೈಸೂರು ಕಾಂಗ್ರೆಸ್ಸಿಗೆ ಅನ್ವಯಿಸಲಾರದು. ರಾಷ್ಟ್ರಧ್ವಜಕ್ಕೆ ಉಂಟಾಗಬಹುದಾದ ಅವಮಾನದ ಆಪತ್ತಿಗಾಗಿ ಸಂಸ್ಥಾನಗಳಲ್ಲಿ ಕಾಂಗ್ರೆಸ್ ಸಮಿತಿಗಳಿರಕೂಡದೆಂದು ಆ ತೆರನಾದ ಅವಮಾನಗಳನ್ನು ಮೈಸೂರು ಸಹಿಸಲಾರದೆಂದೂ ಮೈಸೂರು ಕಾಂಗ್ರೆಸ್ ತೋರಿಸಿಕೊಟ್ಟಿದೆ. ಜಿಲ್ಲಾ ಮ್ಯಾಜಿಸ್ಟ್ರೇಟರ ಆಜ್ಞೆಯನ್ನುಲ್ಲಂಘಿಸಿ ಶ್ರೀಮತಿ ಸುಬ್ಬಮ್ಮನವರು, ಸ್ವಾತಂತ್ರ್ಯ ಪ್ರತಿಜ್ಞೆಯನ್ನು ತೆಗೆದುಕೊಂಡುದೂ, ಸ್ವಾತಂತ್ರ್ಯ ದಿನಾಚರಣೆಯ ದಿನ ಶ್ರೀ ರಂಗಯ್ಯನವರು ರಾಷ್ಟ್ರಧ್ವಜವನ್ನು ಎತ್ತಿಹಿಡಿದು ಹರ್ತಾಳವನ್ನು ಪ್ರಸಿದ್ಧಿಪಡಿಸಿದೂ ಮೈಸೂರು ಕಾಂಗ್ರೆಸ್ಸು ರಾಷ್ಟ್ರಧ್ವಜಕ್ಕೆ ಎಂದಿಗೂ ಅವಮಾನ ತರಲಾರದೆಂಬುದಕ್ಕೆ ನಿದರ್ಶನಗಳಾಗಿವೆ. ಹೇಗೂ ಹರಿಪುರದ ನಿರ್ಣಯದ ಫಲವಾಗಿ ರಾಷ್ಟ್ರೋದ್ದೇಶಪರವಾಗಿಯೂ ಸ್ವಾಯತ್ತವಾಗಿಯೂ ರಾಜಕೀಯ ಧೋರಣೆಗಳನ್ನು ನಡೆಸಲು, ಅಖಿಲಭಾರತ ಕಾಂಗ್ರೆಸ್ ಸಂಸ್ಥೆಯಿಂದ ಪ್ರತ್ಯೇಕವಾದ, ಒಂದು ಸಂಸ್ಥೆಯ ಆವಶ್ಯಕತೆ ಹುಟ್ಟಿತು. (ಅಖಿಲಭಾರತ ಕಾಂಗ್ರೆಸ್ಸಿನ ಅಂಗ ಸಂಸ್ಥೆಯಾದ ಸಮಿತಿಗಳು ಕಾಂಗ್ರೆಸ್ಸಿನ ರಚನಾತ್ಮಕ ಕಾರ್ಯಕ್ರಮಗಳನ್ನು ಮಾತ್ರ ನಡೆಸಿಕೊಂಡು ಹೋಗುವುವು.)

ಇದಕ್ಕಿಂತಲೂ ಅಧಿಕವಾದ ಮತ್ತು ಅತ್ಯವಶ್ಯಕವಾದ ಸಮಸ್ಯೆಯೊಂದಿದೆ (ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪಿಸುವ) ನಮ್ಮ ಗುರಿಯನ್ನು ಸಾಧಿಸುವ ಬಗೆ ಹೇಗೆ ಎಂಬುದೇ. ಸುಧಾರಣಾ ಸಮಿತಿಯಲ್ಲಿ ಸಹಕರಿಸುವುದರಿಂದಲೇ, ಅಥವಾ ಸ್ವತಂತ್ರವಾಗಿಯೇ? ಈ ಸಮಯದಲ್ಲಿ ಒಂದಂಶವನ್ನು ಮಾತ್ರ ನಾವು ಮರೆಯಬಾರದು ಮತ್ತು ಮರೆಯಲೂ ಕೂಡದು. ಇಡೀ ಸಂಸ್ಥಾನವೇ ಕಾಂಗ್ರೆಸ್ಸಿನ ಹಿಂದಿರುವುದನ್ನು ನೆನಪಿನಲ್ಲಿಡಬೇಕು. ಈಗಷ್ಟೇ ನಡೆದ ಉಪಚುನಾವಣೆಗಳಲ್ಲಿ 11 ಸ್ಥಾನಗಳೂ ಕಾಂಗ್ರೆಸ್ಸಿಗೇ ಲಭಿಸಿದವು. 7 ಸ್ಥಾನಗಳು ಪ್ರತಿಸ್ಪರ್ಧಿಗಳಿಲ್ಲದೆಯೇ ಲಭಿಸಿದವು, ಉಳಿದ ನಾಲ್ಕು ಸ್ಥಾನಗಳಲ್ಲಿ ಪ್ರತಿಸ್ಪರ್ಧಿಗಳಿಗಿಂತ ಎಷ್ಟೋ ಹೆಚ್ಚು ಓಟುಗಳನ್ನು ಕಾಂಗ್ರೆಸ್ ಪಡೆಯಿತು. ಈ ಚುನಾವಣೆಗಳು ನ್ಯಾಯ ವಿಧಾಯಕ ಸಭೆಯ 10 ಸಾಮಾನ್ಯ ಸ್ಥಾನಗಳಲ್ಲಿ ನಡೆದ ಚುನಾವಣೆಗಳ ಫಲಿತಾಂಶವೆಂಬುದೂ ನೆನಪಿನಲ್ಲಿರಲಿ. ಸಮಸ್ತ ಸ್ಥಾನವೂ ಭದ್ರವಾದುದೆಂದೂ ನಮ್ಮ ಸಹಕಾರವು ಇಷ್ಟಪಟ್ಟರೆ ಅಥವಾ ಬದಲಿಸುವ ಧ್ಯೇಯವನ್ನು ಸಾಧಿಸಬಹುದೆಂದೂ ತೋರಿಸಿಕೊಡುವುದಕ್ಕಾಗಿ ನಾನಿದನ್ನು ಇಲ್ಲಿ ಸೂಚಿಸಿದ್ದೇನೆ. ಸರಕಾರವು ಮಾಡಲಿರುವ ವ್ಯವಸ್ಥೆಗಳು ಯಾವ ರೀತಿಯಲ್ಲಿ ಉಪಯುಕ್ತವಾಗಿಯೂ ಇರಬಹುದು; ಇಲ್ಲವಾದರೆ ಕಾಂಗ್ರೆಸ್ಸಿನ ಕರ್ತವ್ಯವು ಕಷ್ಟತರವೂ ದುರ್ಗಮವೂ ಆಗಬಹುದು. ಆದರೆ ಕಾಂಗ್ರೆಸ್ಸಿನ ಜಯವು ನಿಶ್ಚಯ, ಅದರಲ್ಲಿ ಸಂದೇಹವಿಲ್ಲ. ಯಾಗಾನುಭವಗಳಿಂದ ತಮ್ಮ ಸೇವೆಯ ಫಲವನ್ನನುಭವಿಸಲು ಪ್ರಜೆಗಳು ಸಿದ್ಧತೆಯನ್ನು ಪಡೆಯಬಹುದು. ಇದು ಒಂದು ಕಡೆ ಪ್ರಜೆಗಳ ಸಹನಶಕ್ತಿಯನ್ನೂ ವಿರೋಧ ಸಾಮರ್ಥ್ಯವನ್ನೂ ಅಭಿವೃದ್ಧಿಗೊಳಿಸುವುದು, ಮತ್ತೊಂದು ಕಡೆ ಜಾಗೃತಿಯನ್ನು ಉಂಟುಮಾಡುವುದು. ಹಾಗೆಯೇ ಮುಂದಾಳುತನವನ್ನೂ ನಿಯಮಪಾಲನ ಸಾಮರ್ಥ್ಯವನ್ನೂ ಬೆಳೆಸುವುದು.

ಈ ಸಮಯದಲ್ಲಿ ಇನ್ನೊಂದು ವಿಷಯವನ್ನು ನಾವು ಮರೆಯಕೂಡದು. ಅಖಿಲಭಾರತ ಸಂಯುಕ್ತ ರಾಜ್ಯಾಂಗ ವಿಷಯವು ಸಂಸ್ಥಾನಗಳ ಸಮಸ್ಯೆಯನ್ನು ಮತ್ತೂ ಜಟಿಲವಾಗಿ ಮಾಡಿದೆ. ಭರತಖಂಡವು ಒಂದೇ ಅಖಂಡ ದೇಶ. ನಮ್ಮ ಸಂಸ್ಥಾನದ ಸ್ವಾತಂತ್ರ್ಯದ ಪಥದಲ್ಲಿ ಮುಂದೆ ಮುಂದೆ ಹೆಜ್ಜೆಯಿಡುತ್ತಿರುವ ಈ ಸಮಯದಲ್ಲಿ ನಮ್ಮ ಮಾತೃಭೂಮಿ ಭರತಖಂಡವು ರಾಜಕೀಯ ಸ್ವಾತಂತ್ರ್ಯ ಸಂಪಾದನೆಯಲ್ಲಿ ಹಿಂದೆ ಬೀಳದಂತೆ ನೋಡಿಕೊಂಡು ಮುಂದುವರಿಯಬೇಕಾಗಿದೆ. ಇತರ ಸಂಸ್ಥಾನಗಳಿಗಿಂತ ಮುಂಚಿತವಾಗಿಯೇ ಮೈಸೂರು ಸ್ವಾತಂತ್ರ್ಯ ಪಥದಲ್ಲಿ ನಡೆಯಬೇಕೆಂಬುದೆ ಆದ ಮತ್ತು ಹೊಳೆದ ಸಂದರ್ಭದ ಕಥೆಯನ್ನು ಇಲ್ಲಿ ಸೂಚಿಸಬಹುದು? ನಮಗೀಗ ಕಾಲಕಳೆಯಲು ಅವಕಾಶವಿಲ್ಲ. ಜನಗಳು ಬೇಕೆಂದಿರುವಾಗ, ಅಧಿಕ ಪ ಕಾಲ ಸ್ವಾಸ್ಥ್ಯವಾಗಿರುವಾಗ, ಜವಾಬ್ದಾರಿ ಸರ್ಕಾರ ಸ್ಥಾಪನೆಯನ್ನು ಮುಂದೂಡಕೂಡದು. ಸಾಧ್ಯವಿಲ್ಲ. ಸುಧಾರಣಾ ಸಮಿತಿ ಜವಾಬ್ದಾರಿ ಸರ್ಕಾರ ಸ್ಥಾಪನೆಯ ಧ್ಯೇಯವನ್ನೊಪ್ಪಿ ಸ್ಪಷ್ಟಪಡಿಸಿದ್ದರೆ ಬಹಳ ಚೆನ್ನಾಗಿರುತ್ತಿತ್ತು. ನನಗೆ ತೋರುವುದು, ಧ್ಯೇಯ ಸ್ಪಷ್ಟವಿಲ್ಲದೆ ಸಮಿತಿಯು ಮಾಡಬಹುದಾದ ಕೆಲಸವು ಪಟ್ಟವನ್ನೊಡೆದು ಇಲಿಯನ್ನು ಹಿಡಿದಂತಾಗುವುದು. ಸಮಿತಿಯ ಸದಸ್ಯತ್ವದ ವಿಷಯದಲ್ಲಿ ಎಷ್ಟು ಸ್ವಲ್ಪ ಹೇಳಿದರೆ ಅಷ್ಟು ಉತ್ತಮ. ಸ್ವಾತಂತ್ರ್ಯ ಭಾವನೆಯನ್ನು ಹಂಗಿಸಿ ಕೋಮುವಾರು ಭಾವನೆಯನ್ನುಂಟುಮಾಡುವ ಪ್ರತಿನಿಧಿಗಳು ಸಮಿತಿಯಲ್ಲಿ ಸೇರಿಸಲ್ಪಟ್ಟರು. ಸಂಸ್ಥಾನದಲ್ಲೇ ಬಲಿಷ್ಠವಾಗಿರುವ ಕಾಂಗ್ರೆಸ್ಸಿಗೆ ಸ್ಥಾನವಿಲ್ಲ. ವೈಯಕ್ತಿಕವಾಗಿ ಸರಕಾರದಿಂದ ನಾಮಕರಣ ಮಾಡಲ್ಪಟ್ಟಿರುವ ಕಾಂಗ್ರೆಸ್ ಸದಸ್ಯರ ಸಂಖ್ಯೆಯೂ ಸಮಿತಿಯ ಸದಸ್ಯರ ಸಂಖ್ಯೆಯಲ್ಲಿ ೧/೩ ಭಾಗವನ್ನು ಮೀರುವುದಿಲ್ಲ. ನನಗೆ ಇಲ್ಲಿ ನೆರೆದಿರುವ ಪ್ರಜೆಗಳ ಪ್ರತಿನಿಧಿಗಳಲ್ಲಿ ನಂಬಿಕೆಯಿದೆ. ಸರಕಾರವು ಹೂಡಿರುವ ಈ ಮಾರ್ಗಕ್ಕೆ ಉತ್ತರ ಕೊಡಬೇಕೆಂಬುದು ಅವರಿಗೆ ಗೊತ್ತು. ಪ್ರಜಾವರ್ಗದಿಂದ ಚುನಾಯಿಸಲ್ಪಟ್ಟ ಪ್ರತಿನಿಧಿಗಳಿಂದ ಕೂಡಿದ ಪ್ರತಿನಿಧಿ ಸಭೆಯಿಂದ ರಚಿಸಲ್ಪಟ್ಟ, ವ್ಯವಸ್ಥೆಯೊಂದೇ ಪ್ರಜೆಗಳಿಂದ ಅಂಗೀಕಾರ ಯೋಗ್ಯವಾದದ್ದೆಂಬುದನ್ನು ಸೂಚಿಸುವುದಕ್ಕಿಂತ ಹೆಚ್ಚೇನನ್ನೂ ಈ ಸಮಯದಲ್ಲಿ ಹೇಳಲಾರೆ.

ಆನುಷಂಗಿಕವಾಗಿ ಮೈಸೂರಿನ ದೃಷ್ಟಿಯಿಂದ ಸಂಯುಕ್ತ ರಾಜ್ಯಾಂಗ ವಿಷಯವನ್ನು ವಿಮರ್ಶಿಸಲು ಏರ್ಪಟ್ಟಿರುವ ಸಮಿತಿಯಿಂದ ರಾಜಕೀಯ ವಿಷಯಗಳಲ್ಲಿ ತೊಂದರೆಯುಂಟಾಗಬಹುದು. 1935 ನೇ ಇಸವಿಯ ಇಂಡಿಯಾ ಶಾಸನದಲ್ಲಿ ನಿರೂಪಿತವಾಗಿರುವ ಕೇಂದ್ರ ಸಂಯುಕ್ತ ರಾಜ್ಯಾಂಗದ ವಿಷಯವಾಗಿ ಅಖಿಲ ಭಾರತ ಕಾಂಗ್ರೆಸ್ಸಿನ ಅಭಿಪ್ರಾಯವೇನೆಂಬುದು ನಿಮ್ಮೆಲ್ಲರಿಗೂ ತಿಳಿದೇ ಇದೆ. ನರೇಂದ್ರರೂ ತಮ್ಮ ಪ್ರತಿನಿಧಿಗಳು ಪ್ರಜೆಗಳಿಂದ ಚುನಾಯಿಸಲ್ಪಟ್ಟು ಕಳುಹಿಸಲ್ಪಡಬೇಕೆಂಬುದನ್ನೊಪ್ಪಿದರೆ ಮಾತ್ರ ಸಂಯುಕ್ತ ರಾಜ್ಯಾಂಗವೇರ್ಪಡಬಹುದೇ ಹೊರತು ಇಲ್ಲದಿದ್ದಲ್ಲಿ ಖಂಡಿತವಾಗಿಯೂ ಸಂಯುಕ್ತ ರಾಜ್ಯಾಂಗವು ಯಶಸ್ವಿಯಾಗಲಾರದು. ಸಂಸ್ಥಾನದ ಪ್ರಜೆಗಳ ಮತ್ತು ಕಾಂಗ್ರೆಸ್ಸಿನ ಬೇಡಿಕೆಗಳಿಗೆ ಎಲ್ಲಿಯವರೆಗೆ ನರೇಂದ್ರರು ಗಮನ ಕೊಡುವುದಿಲ್ಲವೋ ಅಲ್ಲಿಯವರೆಗೂ ಸಂಯುಕ್ತ ರಾಜ್ಯಾಂಗದ ವಿಷಯವಾಗಿ ಮಾತನಾಡುವುದು ಕೇವಲ ರುಷ್ಟವಾದ.

ಸ್ವಾತಂತ್ರ್ಯ ದೇವಿಯ ಉಪಾಸನೆಗೆ ಕಾರಾಗೃಹವನ್ನನುಭವಿಸಿ ಹೊರಗೆ ಬಂದ ಶ್ರೀಯುತ ಸಿದ್ದಲಿಂಗಯ್ಯನವರಿಗೂ ಅವರ ಅನುಯಾಯಿಗಳಿಗೂ ಸ್ವಾಗತ ಬಯಸಲು ನನಗೆ ಅತ್ಯಂತ ಸಂತೋಷವಾಗಿದೆ. ಅವರ ತ್ಯಾಗವು ಅನರ್ಘ್ಯವಾದುದು. ನಾವೆಲ್ಲರೂ ಅವರನ್ನು ಗೌರವಿಸುತ್ತೇವೆ. ನಮ್ಮ ಸಂಸ್ಥಾನವು ಶ್ರೀ ಸಿದ್ದಲಿಂಗಯ್ಯನವರನ್ನು ಅಧ್ಯಕ್ಷರನ್ನಾಗಿ ಆರಿಸಿರುವುದು ಹೆಮ್ಮೆಯ ವಿಷಯ. ಸಿದ್ದಲಿಂಗಯ್ಯನವರು ಶೀಲವಂತರೂ ನಿಸ್ವಾರ್ಥರೂ ಸ್ವಾರ್ಥತ್ಯಾಗಿಗಳೂ ನಿರ್ಭಯರೂ ಆದ ದೇಶಸೇವಕರು. ಇಂತಹ ಮಹನೀಯರ ನಾಯಕತ್ವದಲ್ಲಿ ಈ ಸಂಸ್ಥಾನವು ತನ್ನ ಮುಖ್ಯ ಗುರಿಯಾದ ಸ್ವಾತಂತ್ರ್ಯ ದೇವಿಯ ಆರಾಧನೆಯಲ್ಲಿ ತಾತ್ಕಾಲಿಕವಾದ ವಿಘ್ನಗಳಿಂದಲೇ ನಿಲ್ಲದೆ ಧೈರ್ಯ ಸಾಹಸಗಳಿಂದ ಪೂರ್ಣ ಸ್ವಾತಂತ್ರ್ಯ ಸಂಪಾದನೆ ಮಾಡುವುದೆಂಬ ಭಾವನೆಯು ಸಂಪೂರ್ಣವಾಗಿದೆ.

ಶಿವಪುರದ ರಾಷ್ಟ್ರಕೂಟ

ಅಧ್ಯಕ್ಷ ಸಿದ್ಧಲಿಂಗಯ್ಯನವರ ಭಾಷಣ

ಸ್ನೇಹಿತರೇ!

ತಾವುಗಳು ನನ್ನನ್ನು ... [illegible] ... ಕಾಂಗ್ರೆಸ್ಸಿನ ... [illegible] ... ಅಧ್ಯಕ್ಷ ... [illegible] ... ತಮ್ಮ ... [illegible] ... ನನ್ನ ಕರ್ತವ್ಯವಾಗಿ ...

ಶ್ರೀ ಟಿ. ತಿರುಮಲೇ ಗೌಡರು

[illegible]

... [illegible] ... ಸಂಸ್ಥಾನಗಳ ಪ್ರಜೆಗಳು ... [illegible] ... ನಮ್ಮ ... [illegible] ...

... [illegible] ... ಸ್ಪಷ್ಟವಾಗಿ ... [illegible] ...

... [illegible] ... ಜವಾಬ್ದಾರಿ ಸರಕಾರವನ್ನು ... [illegible] ...

ಶ್ರೀ ಎಸ್. ಚನ್ನಯ್ಯನವರು

[illegible]

... [illegible] ... ಜವಾಬ್ದಾರಿ ಸರಕಾರವನ್ನು ... [illegible] ...

... [illegible] ...

ಶ್ರೀ ಎಸ್. ರಂಗನಾಯ್ಯನವರು

[illegible]

... [illegible] ...

(೪ ನೇ ಪುಟವನ್ನು ನೋಡಿ.)

ಚಂದಾದಾರರಲ್ಲಿ ವಿನಂತಿ

ನಮ್ಮ ಪತ್ರಿಕೆ ಆರಂಭವಾಗಿ ಎರಡು ವರ್ಷಗಳು ಕಳೆದು ಮೂರನೇ ವರ್ಷವು ಆರಂಭವಾಗಿದೆ. ಚಂದಾದಾರರು ತಮ್ಮ ಹಿಂದಿನ ಬಾಕಿಗಳನ್ನೂ, ಮುಂದಿನ ಸಾಲಿನ ಚಂದಾ ಹಣಗಳನ್ನೂ ಪಾವತಿ ಮಾಡಬೇಕಾಗಿ ಕೋರುತ್ತೇವೆ.

ಮ್ಯಾನೇಜರ್.

ಸಾಧ್ವಿ
೧೮—೪—೩೮ ನೇ ಸೋಮವಾರ

ಶಿವಪುರದ ಸಂದೇಶ.

ಶಿವಪುರದ ರಾಷ್ಟ್ರಕೂಟವು ಮೈಸೂರಿನ ರಾಷ್ಟ್ರೀಯ ನವ ಚೈತನ್ಯದ ಪ್ರತಿಬಿಂಬವಾಗಿ, ಶಿಸ್ತು, ತ್ಯಾಗ, ದೇಶಾಭಿಮಾನಗಳಲ್ಲಿ ಮೈಸೂರಿನವರು ಯಾರಿಗೂ ಕಡಿಮೆಯಿಲ್ಲವೆಂಬುದನ್ನು ಸ್ಪಷ್ಟಪಡಿಸುತ್ತದೆ. ಕೇವಲ ಒಂದೂವರೆ ತಿಂಗಳ ಅಂತರದಲ್ಲಿ ಸಮಾರಂಭ ಸುಂದರವೂ ಶಿಸ್ತುಪೂರ್ಣವೂ ಆದ ಒಂದು ಹೊಸ ನಗರವನ್ನೇ ನಿರ್ಮಾಣ ಮಾಡಿ ಸಹಸ್ರಾರು ಜನರಿಗೆ ಸೌಕರ್ಯಗಳನ್ನೊದಗಿಸಿ ನಮ್ಮ ಪ್ರಾಂತದಲ್ಲಿ ಅಖಿಲ ಭಾರತ ಕಾಂಗ್ರೆಸ್ಸಿನ ಕೀರ್ತಿಯನ್ನೇ ತಂದುಕೊಟ್ಟಿದೆ. ಹಲವು ಭಾಗಗಳಲ್ಲಿ ಹರಿಪುರದ ಅಧಿವೇಶನವನ್ನೂ ಸಹ ಮೀರಿಸಿದಂತಿತ್ತು. ಮೈಸೂರಿನಲ್ಲಿ ರಾಷ್ಟ್ರೀಯ ಜಾಗೃತಿಯು ಎಷ್ಟು ಮಟ್ಟಿಗೆ ಬೆಳೆದಿದೆಯೆಂಬುದು ಎಲ್ಲರಿಗೂ ಈಗ ಗೋಚರವಾಯಿತು.

ಶಿವಪುರದ ಈ ಸಾರಿನ ಕೂಟದಲ್ಲಿ ಅನೇಕ ಹೊಸ ಅಂಶಗಳಿದ್ದವು. ಉತ್ತಮವಾದ ಸ್ವಾಗತಗಳಿದ್ದವು. ಅಲ್ಲಿ ನೆರೆದಿದ್ದ ಪ್ರತಿಯೊಬ್ಬರ ಮುಖದಲ್ಲಿಯೂ ದೇಶಾಭಿಮಾನದ ಸ್ಫೂರ್ತಿಯು ತುಂಬಿತುಳುಕುತ್ತಿತ್ತು. ಮೇಳದ ಎಲ್ಲೆಗಳ ಸಮಸ್ತವನ್ನೂ ಭಾಗವಹಿಸುವ ಆತುರತೆಯು ಎಲ್ಲರಲ್ಲಿಯೂ ಕಾಣಬರುತ್ತಿತ್ತು. ದೊಡ್ಡವರೂ ಚಿಕ್ಕವರೂ, ಹೆಂಗಸರೂ, ತರುಣರೂ, ಬಾಲಕ ಬಾಲಿಕೆಯರೂ ಸಮಾನವಾಗಿಯೇ ಒಂದೇ ಮನಸ್ಸಿನಿಂದ ಭಾಗವಹಿಸುತ್ತಿದ್ದರು. ಇಂತಹ ಸಮಾರಂಭವು ಮೈಸೂರಿನ ಇತಿಹಾಸದಲ್ಲಿ ಹಿಂದೆ ಎಂದೂ ನಡೆದಿರಲಿಲ್ಲ. ಇದನ್ನು ನೋಡಿ ಸಹಿಸದ ಒಂದು ಯೋಗ

ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸುವುದೇ ಮೈಸೂರು ಕಾಂಗ್ರೆಸ್ಸಿನ ಮುಖ್ಯ ಗುರಿ. ಈಗ ಸರ್ಕಾರದವರು ರಚಿಸಿರುವ ಸಮಿತಿಗಳಲ್ಲಿ ಈ ವಿಷಯವನ್ನು ಸೇರಿಸಲು ಉಚಿತವಾದ ಅವಕಾಶವನ್ನು ಕಲ್ಪಿಸಿಲ್ಲ. ಆದ್ದರಿಂದ ಆ ಸಮಿತಿಯೊಡನೆ ಸಹಕರಿಸಕೂಡದೆಂದು ಬಲವಾದ ನಿರ್ಧಾರವಾಯಿತು. ಭಾರತ ರಾಜ್ಯಾಂಗ ರಚನೆಯಲ್ಲಿ ಸಂಸ್ಥಾನದ ಪ್ರಜೆಗಳಿಗೆ ಪ್ರಾತಿನಿಧ್ಯವಿಲ್ಲ. ಅಲ್ಲದೆ ಸಂಸ್ಥಾನಗಳಲ್ಲಿ ಜವಾಬ್ದಾರಿ ಸರ್ಕಾರ ಮತ್ತು ಮೂಲಭೂತ ಹಕ್ಕುಗಳ ಸ್ಥಾಪನೆಗೆ ಭರವಸೆ ಕೊಟ್ಟಿಲ್ಲ. ಆದ್ದರಿಂದ ಈ ಸಂಬಂಧವಾಗಿ ರಚಿಸಿರುವ ಸಮಿತಿಯೊಡನೆಯೂ ಸಹಕರಿಸಕೂಡದೆಂದು ನಿರ್ಧರಿಸಲಾಯಿತು. ಇನ್ನುಳಿದ ಪ್ರಜೆಗಳ ಅವಶ್ಯ ಹಕ್ಕುಗಳು, ರೈತರ ಉದ್ಧಾರ, ಇವೇ ಮುಂತಾದ ವಿಷಯಗಳಿಗೆ ಸಂಬಂಧಪಟ್ಟ ಠರಾವುಗಳೂ ಆದವು.

ಶಿವಪುರದಲ್ಲಿ ಮುಖ್ಯವಾಗಿ ಕಾಣಬರುತ್ತಿದ್ದುದು ಶಿಸ್ತು, ಈ ಶಿಸ್ತಿನಿಂದಲೇ ಸಕಲ ಕಾರ್ಯಗಳೂ ಸಿದ್ಧಿಸುವುವು. ಇನ್ನು ಮುಂದೆ ಅನೇಕ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗುವುದು. ಅವುಗಳಿಗೆಲ್ಲಾ ಶಿಸ್ತೇ ಮೂಲಾಧಾರ. ಶಿವಪುರದ ಶಿಸ್ತನ್ನು ನಮ್ಮ ಕಾಂಗ್ರೆಸ್ ಅನುಯಾಯಿಗಳೆಲ್ಲರೂ ಪಾಲಿಸಿಕೊಂಡು ಬಂದರೆ ಸಕಲ ಕಾರ್ಯಗಳಲ್ಲಿಯೂ ಯಶಸ್ಸು ಸಿಕ್ಕುವುದು ಸಿದ್ಧ.

ರಾಜಕುಮಾರರ ವಿವಾಹ

ಶ್ರೀ ಜಯಚಾಮರಾಜ ಒಡೆಯರವರ ವಿವಾಹವು ಮೇ ತಿಂಗಳು ೧೫ ನೇ ತಾ|| ರಾಜಧಾನಿಯಲ್ಲಿ ನಡೆಯುವುದು. ಈ ಮಹೋತ್ಸವಕ್ಕೆ ಅನೇಕ ರಾಜರುಗಳೂ ದೊಡ್ಡ ಮನುಷ್ಯರೂ ಆಹ್ವಾನಿಸಲ್ಪಡುವರು.

ರಾಜಕೀಯ ವಿಚಾರ ಸಮಿತಿ.

ರಾಜಕೀಯ ವಿಚಾರಗಳ ವಿಮರ್ಶೆ ಬಗ್ಗೆ ಸರ್ಕಾರದವರು ರಚಿಸಿರುವ ಸಮಿತಿಯ ಪ್ರಥಮ ಸಭೆಯು ಪ್ರಥಮ ಸಚಿವರ ಅಧ್ಯಕ್ಷತೆಯಲ್ಲಿ ಮೊನ್ನೆ ಆರಂಭವಾಯಿತು. ಹನ್ನೆರಡು ಜನ ಸದಸ್ಯರು ಬಂದಿದ್ದರು. ಶ್ರೀಗಳಾದ ಡಿ. ಎಸ್. ಮಲ್ಲಪ್ಪ ಮತ್ತು ಎಂ. ವೆಂಕಟಕೃಷ್ಣಯ್ಯನವರು ಶಿವಪುರದ ನಿರ್ಣಯದ ಪ್ರಕಾರ ಸಮಿತಿಗೆ ರಾಜೀನಾಮೆ ಕೊಟ್ಟರು.

ಅಧ್ಯಕ್ಷರು ಒಂದು ಭಾಷಣವನ್ನು ಮಾಡಿದರು. ಕೆಲವರಿಂದ ಕೂಡಿರುವ ರಾಜಕೀಯ ಸಂಘಗಳನ್ನು ಬಹಿಷ್ಕರಿಸಿದವರು ಮನವೊಲಿಸಬೇಕೆಂದು ಕೋರಿದರು. ಸಭೆಯು ಬಹಿರಂಗವಾಗಿ ನಡೆಯಲಿಲ್ಲ. ಆದರೂ ಕೆಲವು ಅಂಶಗಳು ಹೊರಬಿದ್ದಿವೆ. ಅವು ನಿಜವಾಗಿದ್ದರೆ ಅಭಿನಂದನೀಯ.

ಜವಾಬ್ದಾರಿ ಸರ್ಕಾರದ ಘೋಷಣೆಯು ಅತ್ಯಗತ್ಯವೆಂದು ಸೂಚಿಸಲಾಯಿತೆಂದು ಹೇಳಲಾಗಿದೆ. ರಾಷ್ಟ್ರ ಧ್ವಜದ ವಿಷಯದಲ್ಲಿ ಸರ್ಕಾರದವರು ತಮ್ಮ ನೀತಿಯನ್ನು ಬದಲಾಯಿಸಿ ಈಗ ಬಂಧನದಲ್ಲಿರುವ ವ್ಯಕ್ತಿಗಳೆಲ್ಲರನ್ನೂ ಬಿಟ್ಟು ಬಿಡಬೇಕೆಂದೂ ಸೂಚಿಸಲ್ಪಟ್ಟಿತ್ತೆಂದು ಗೊತ್ತಾಗಿದೆ. ಒಂದೆರಡು ದಿನಗಳಲ್ಲಿಯೇ ಎಲ್ಲರೂ ಖುಲಾಸೆಯಾದರೆ ಆಶ್ಚರ್ಯವಿಲ್ಲ.

ಡಾ|| ಜಯಸಿಂಹ ಜೋಯಿಸ್

ಈ ಮಗುವೂ ಸ್ವಾತಂತ್ರ್ಯ ಸಾಧನೆಯಲ್ಲಿ ತನ್ನ ಪಾತ್ರವನ್ನು ವಹಿಸಿತು

ಬೆಂಗಳೂರಿನಲ್ಲಿ ದಸ್ತಗಿರಿಗಳು

ಈ ದಿನದ ಹಂಗಾಮದ ಸಂಬಂಧವಾಗಿ ಬೆಂಗಳೂರು ನಗರದ ಬೀದಿಗಳಲ್ಲೆಲ್ಲಾ ಪ್ರಚಾರಮಾಡುತ್ತಿದ್ದ ಶ್ರೀಮತಿ ಲಲಿತಮ್ಮ ಜಿ. ಆರ್. ಸ್ವಾಮಿ, ಡಾ|| ಪಾರ್ಥನಾರಾಯಣ ಪಂಡಿತ್, ಪಿ. ಎಂ. ಶ್ರೀಪಾದ ಮುಖ್ಯ, ಟಿ. ಎಂ. ಶೀನಪ್ಪ ಮತ್ತು ರಾಮಲಾಲ್ ತಿವಾರಿ ಇವರುಗಳನ್ನು ಪೋಲೀಸಿನವರು ನಿನ್ನೆ ಬಂಧಿಸಿದರೆಂದು ಗೊತ್ತಾಗಿದೆ.

ಧ್ವಜದ ಮೇಲೆ ಕೈ ಮಾಡಬೇಡಿ

ರಾಷ್ಟ್ರಧ್ವಜದ ಮೇಲೆ ಹಲವು ವರ್ಷಗಳಿಂದ ಕೈ ಮಾಡಿ ಮೈಸೂರಿನ ಅಧಿಕಾರಿಗಳು ಇಡೀ ಭಾರತೀಯರ ಅಸಮಾಧಾನಕ್ಕೆ ಒಳಗಾಗಿದ್ದಾರೆ. ಧ್ವಜದ ವಿಷಯದಲ್ಲಿ ಅವರು ಇಟ್ಟುಕೊಂಡಿರುವ ಧೋರಣೆಯು ಕೇವಲ ನಿರರ್ಥಕವಾದುದು. ಅದರಿಂದ ಮೈಸೂರು ಶ್ರೀಮನ್ಮಹಾರಾಜರ ಗೌರವಕ್ಕೆ ಕುಂದರವುಂಟಾಗುತ್ತದೆಂದೂ ರಾಜಭಂಗವಾಗುತ್ತದೆಂದೂ ಹೇಳುತ್ತಾರೆ. ಇದು ಒಂದು ತೋರಿಕೆ ನೆವ.

ಯಾವ ಧ್ವಜದಿಂದಲೂ ಯಾರಿಗೂ ಅವಮಾನವಾಗುವುದಿಲ್ಲ. ಹಾಗೆ ಆಗಬೇಕೆಂದು ಯಾರೂ ಬಯಸುವುದಿಲ್ಲ. ಶ್ರೀಮನ್ಮಹಾರಾಜರಿಗಾಗಲಿ, ಮೈಸೂರಿನ ಧ್ವಜಕ್ಕಾಗಲೀ, ಕಾಂಗ್ರೆಸ್ಸಿನವರು ತಿರಸ್ಕಾರವನ್ನು ಯಾವಾಗಲೂ ತೋರಿಸಿಲ್ಲ. ಪ್ರತಿಬಂಧಕಗಳನ್ನು ಹಾಕಿ ಅಧಿಕಾರಿಗಳೇ ರಾಷ್ಟ್ರಧ್ವಜಕ್ಕೆ ಅವಮಾನ ಮಾಡುತ್ತಿರುವರು.

ಸುಮಾರು ೧೫ ವರ್ಷಗಳ ಕೆಳಗೆ ನಾಗಪುರದಲ್ಲಿ ರಾಷ್ಟ್ರಧ್ವಜಕ್ಕಾಗಿ ಸತ್ಯಾಗ್ರಹವು ನಡೆಯಿತು. ಸಾವಿರಾರು ಜನರು ಜೈಲಿಗೆ ಹೋದರು. ಅಧಿಕಾರಿಗಳು ಸೋತರು. ಯಾರು ಬೇಕಾದರೂ ಧ್ವಜವನ್ನು ಹಾರಿಸಬಹುದೆಂದು ತೀರ್ಮಾನವಾಯಿತು. ಸತ್ಯಾಗ್ರಹವು ನಿಂತಿತು. ಅಂದಿನಿಂದೀಚೆಗೆ ಎಲ್ಲಿಯೂ ಧ್ವಜದ ಮೇಲೆ ಬ್ರಿಟಿಷ್ ಇಂಡಿಯದಲ್ಲಿ ಯಾರೂ ಧಾಳಿ ನಡೆಸಿಲ್ಲ. ಅಲ್ಲದೆ ಈಚೆಗೆ ಕಾಂಗ್ರೆಸ್ ಮಂತ್ರಿಗಳ ಆಡಳಿತದಲ್ಲಿ ರಾಷ್ಟ್ರಧ್ವಜವು ಸಾರ್ವಜನಿಕ ಸ್ಥಳಗಳಲ್ಲಿಯೂ, ಕಟ್ಟಡಗಳ ಮೇಲೆಯೂ ನಿರಾತಂಕವಾಗಿ ವಿರಾಜಿಸುತ್ತಿದೆ. ಇದನ್ನು ನಮ್ಮ ಸರ್ಕಾರದವರು ತಿಳಿಯುವುದು ಮೇಲು.

ನಾವು ಭಾರತೀಯರು. ರಾಷ್ಟ್ರಧ್ವಜವು ಭಾರತೀಯರಾದ ಪ್ರತಿಯೊಬ್ಬರಿಗೂ ಸೇರಿದ್ದು. ನಿಜವಾದ ಭಾರತೀಯರೆಲ್ಲರೂ ಅದಕ್ಕೆ ಮನ್ನಣೆಯೀಯಬೇಕು.

ನಮ್ಮ ದೇಶಬಾಂಧವರಿಗೆ ಧ್ವಜದ ವಿಷಯದಲ್ಲಿ ಎಷ್ಟು ಗೌರವವಿದೆಯೆಂಬುದು ಶಿವಪುರದಲ್ಲಿ ಸಕಲರಿಗೂ ವೇದ್ಯವಾಗಿದೆ. ಅದನ್ನು ಜನರು ದೇವರಂತೆ ಭಾವಿಸುತ್ತಾರೆ. ಉರಿಯುವ ಬಿಸಿಲಿನಲ್ಲಿ ಬೆಳಗ್ಗೆ ಎಂಟುಗಂಟೆಯಿಂದ ಸಂಜೆ ಆರು ಗಂಟೆವರೆಗೆ ಸಹಸ್ರಾರು ಜನ ಸ್ತ್ರೀಪುರುಷರು ಅನ್ನಪಾನಗಳನ್ನು ಬಿಟ್ಟು ಧ್ವಜದ ಗೌರವವನ್ನು ಕಾಯ್ದ ಸನ್ನಿವೇಶವು ಮಹಾತ್ಮ ಗಾಂಧಿಯವರಿಗೂ ಇಡೀ ಭರತಖಂಡಕ್ಕೂ ಆನಂದವನ್ನುಂಟುಮಾಡಿದೆ. ನಮ್ಮ ಸರ್ಕಾರದವರೂ ಇದನ್ನು ಅರಿತು ಜನರಿಗೆ ಪ್ರಾಣಪ್ರಾಯವಾಗಿರುವ ಧ್ವಜದ ವಿಷಯದಲ್ಲಿ ಇನ್ನು ಮೇಲೆ ಗೌರವದಿಂದ ವರ್ತಿಸಬೇಕೆಂದು ಬಯಸುತ್ತೇವೆ.

ಶ್ರೀ ಎಂ. ಎನ್. ಜೋಯಿಸ್

ಸ್ವಯಂಸೇವಕರ ದಳಪತಿ

ಸಹಾನುಭೂತಿ

ಮೈಸೂರಿನ ವೀರ ಕನ್ನಡಿಗರಿಗೆ—

ಪ್ರಿಯ ಬಾಂಧವರೇ,

ನಮ್ಮ ಪ್ರಾಣ ಸದೃಶವಾಗಿರುವ ರಾಷ್ಟ್ರ ಧ್ವಜದ ಸನ್ಮಾನ ರಕ್ಷಣೆಗಾಗಿ ನೀವು ಕೈಕೊಂಡಿರುವ ಶಾಂತಿಯುತ ಸಂಗ್ರಾಮದಲ್ಲಿ ನಾವೆಲ್ಲರೂ ನಿಮಗೆ ಬೆಂಬಲವಾಗಿ ನಿಲ್ಲುವೆವು. ಅಖಂಡ ಕರ್ನಾಟಕದ ಕೀರ್ತಿಯನ್ನು ಮೈಸೂರಿನವರು ಇಂದಿನವರೆಗೆ ರಾಷ್ಟ್ರೀಯ ಚಳುವಳಿಯಲ್ಲಿ ಬೆಳಗಿಸುತ್ತ ಬಂದಿರುವುದನ್ನು ಕನ್ನಡನಾಡಿನ ಬೇರೆ ಭಾಗಗಳವರು ಎಂದಿಗೂ ಮರೆಯಲಾರರು. ನಿಮ್ಮ ಸ್ವತಂತ್ರ ಸಾಹಸದಲ್ಲಿ ಕರ್ನಾಟಕದ ಕರುಣಾನಿಧಿಗಳಾದ ಅಖಿಲ ಪಕ್ಷ ಸ್ತ್ರೀಪುರುಷರೂ ನೀವು ಅಪೇಕ್ಷಿಸಿದ್ದಕ್ಕೂ ನಿಮಗೆ ಅಖಂಡವಾಗಿ ಸೇರುವಾಗದಿರಲಾರರೆಂಬ ಭರವಸೆಯನ್ನು ಈ ಮೂಲಕ ನಿಮಗೆ ಅಂತಃಕರಣ ಪೂರ್ವಕವಾಗಿ ಕೊಡುಯುತ್ತೇನೆ. ಭಗವಂತನು ನಿಮ್ಮ ಆಕಾಂಕ್ಷೆಯನ್ನು ಈಡೇರಿಸದಿರಲಾರನು.

ಸತ್ಯಮೇವ ಜಯತೇ!

ಮುದವೀಡು ಕೃಷ್ಣರಾಯ.

ಕರ್ನಾಟಕ ಏಕೀಕರಣ

ಪರಿಷತ್ತಿನ ವಿಶೇಷ ಅಧಿವೇಶನ

ಇಲ್ಲಿನ ಜನಜಾಗ್ರತಿ ಸಂಘದ ಮುಂದಾಳುಗಳಾದ ಶ್ರೀಯುತರುಗಳು, ಟಿ. ಎಸ್. ಸುಬ್ಬಣ್ಣ, ರಾಜಶೇಖರಯ್ಯ ಆರ್. ರಂಗಯ್ಯನವರುಗಳನ್ನು ೧೦೭ ನೇ ಸೆಕ್ಷನ್ ಅಪರಾಧಕ್ಕೆ ಗುರಿ ಮಾಡಲಾಗಿದೆ. ಇವರುಗಳು [illegible] ಒಂದು ವರ್ಷದ ವರೆಗೆ ಒಳ್ಳೆಯ ನಡತೆಯಲ್ಲಿರುವರೆಂಬ ಬಗ್ಗೆ ತಲಾ ಐನೂರು ರೂಪಾಯಿಗಳ ಜಾಮೀನನ್ನು ಕೊಡಬೇಕೆಂದು ಕೇಳಿದ್ದಾರೆ. ಆ ಪಾದನೆಯಲ್ಲಿ ರಾಜಕೀಯ ಸುಧಾರಣಾ ಸಮಿತಿಯು ಹೊರಡಿಸಿದಂತಹ ಒಂದು ಬೋರ್ಡನ್ನು ಹೊತ್ತು ಬೀದಿಯಲ್ಲಿ ಉತ್ಸವ ಹೊರಡುವುದೂ, ಇಂತಹ ಹಲವು ವಿಷಯಗಳನ್ನು ಮಾಡುತ್ತಿರುವುದೂ ಕಾರಣಗಳೆಂದು ಫಿರ್ಯಾದಿನಲ್ಲಿ ನಮೂದಿಸಿರುವರು.

ಮೈಸೂರಿನಲ್ಲಿ ಧ್ವಜಾರೋಹಣ

ನಾರಾಯಣಶಾಸ್ತ್ರಿ ರಸ್ತೆಯ ವೈದ್ಯಶಾಲೆ ಬಳಿ ನೆನ್ನೆ ದಿನ ಸುಮಾರು ಸಾಯಂಕಾಲಕ್ಕೆ ಹೇಳಿಟ್ಟ ಸಭೆ ಸಂಭವಿಸಿತು. ಸುಮಾರು ಇಪ್ಪತ್ತು ಮಂದಿ ಪೋಲೀಸಿನವರು ಲಾಠಿಗಳೊಡನೆ ಸುಸಜ್ಜಿತರಾಗಿ ನಿಂತಿದ್ದರು. ಬಂದೂಕುಗಳೊಡನೆ ರಿಸರ್ವ್ ಪೋಲೀಸರೂ ಇದ್ದರು.

ಶ್ರೀ ಸುಬ್ಬರಾವ್ ಉಪಾಧ್ಯರವರು ಧ್ವಜಾರೋಹಣಕ್ಕೆ ಯತ್ನಿಸಿ ದಸ್ತಗಿರಿಯಾದರು. ಶ್ರೀ ರಾಜಾರಾವರು ಧ್ವಜವನ್ನು ಹಾರಿಸಿ ನಂತರ ಪೋಲೀಸರ ವಶವಾದರು. ಶ್ರೀಮತಿ ಬಾಲಸುಂದರಮ್ಮ, ಶ್ರೀಗಳಾದ ಟಿ. ಮರಿಯಪ್ಪ, ಕೆ. ವಿ. ಪುಟ್ಟರಾಜ್, ರಂಗರಾಮಯ್ಯನವರುಗಳು ಭಾಷಣಗಳನ್ನು ಮಾಡಿದರು. ಎಲ್ಲರೂ ಧ್ವಜವಂದನೆಯನ್ನು ಆಚರಿಸಿದರು. ಜನಸಂದಣಿಯ ಮತ್ತು ಪೋಲೀಸಿನವರ ಶಿಸ್ತು ಮೆಚ್ಚುವಂತಹುದಾಗಿತ್ತು.

ಅಭಿಪ್ರಾಯಗಳು

ಮಹಾತ್ಮ ಗಾಂಧೀಜಿಯವರು

ಭಾರತದಲ್ಲಿ ಎಲ್ಲಿದ್ದರೂ ನಾನು ಅವಶ್ಯಕತೆ ಬಿದ್ದರೆ ಮೈಸೂರನ್ನು ಸೇರಲು ಸಿದ್ಧನಿದ್ದೇನೆ

ಪಂ| ಜವಹರಲಾಲ್ ನೆಹರು

ಧ್ವಜದ ಗೌರವವನ್ನು ಮೈಸೂರು ಚೆನ್ನಾಗಿ ಕಾಪಾಡಿಕೊಂಡಿತು.

ಶ್ರೀ ಸುಭಾಷ್ ಚಂದ್ರಬೋಸ್

ಈ ಅದ್ಭುತ ಪ್ರಾಣತ್ಯಾಗಗಳು ವ್ಯರ್ಥವಾಗದಿರಲಿ, ಜವಾಬ್ದಾರಿ ಸರ್ಕಾರವನ್ನು ಗಳಿಸಿ.

ಸರ್ದಾರ್ ವಲ್ಲಭಭಾಯಿಯವರು

ಜನರು ಹೋರಾಡುವುದರ ಸ್ವಾತಂತ್ರ್ಯಕ್ಕೆ ಈ ಪ್ರಾಣತ್ಯಾಗಗಳು ತಕ್ಕಷ್ಟು ಬೆಲೆಯಲ್ಲ.

ಸುಧಾರಣಾ ಸಮಿತಿಯ ಅಧ್ಯಕ್ಷರು

ಈ ಘಟನೆಯಲ್ಲಿ ನೊಂದವರಿಗೆ ಸಂತಾಪವನ್ನು ಸೂಚಿಸುವ ಅಧಿಕಾರವು ಈ ಸಭೆಗಿಲ್ಲವಾದರೂ ಅಂತಹ ಸಹಾನುಭೂತಿಯು ಇದ್ದೇ ಇದೆ.

ಪಬ್ಲಿಸಿಟಿ ಆಫೀಸರ್ :

ಈ ದುರ್ಘಟನೆಗೆ ಗುಂಪಿನವರಿಗೆ ಸರ್ಕಾರದ ಸಹಾನುಭೂತಿ ಇದ್ದೇ ಇದೆ.

ಸಂಪಾದಕರು—ಇಂಡಿಯನ್ ಎಕ್ಸ್‌ಪ್ರೆಸ್ :—ಇದು ಮೈಸೂರಿನ ಜಲಿಯನ್ ವಾಲಾಬಾಗ್ ಆಗಿದೆ. ಅದರ ಅಸ್ತಿತ್ವ ಸರಿಪ್ಪ ಪಟ್ಟಣ; ಇದು ಸತ್ಯ.

ಆನರಬಲ್ ಶ್ರೀ ಗೋಪಾಲರೆಡ್ಡಿ ಮಂತ್ರಿಗಳು—ಕಾಂಗ್ರೆಸ್ ಧ್ವಜದಲ್ಲಿ ಕೇವಲ ಬಟ್ಟೆ ಮಾತ್ರವಿಲ್ಲ; ಅದರ ಹಿಂದೆ ರಕ್ತವಿದೆ ಅದೆಂತಹ ಸನ್ನಿವೇಶ. ಇನ್ನು ನೂರಾರು ಜನರೂ ಮುಂತಾಗಿ ಬರಲಿದ್ದಾರೆ.

ಮೈಸೂರು ಕಾಂಗ್ರೆಸ್ ಅಧ್ಯಕ್ಷರು

ಈ ವಿಪತ್ತನ್ನು ಅನುಭವಿಸಿ ಜನಗಳು ಒಟ್ಟುಗೂಡಬೇಕಾಗಿದ್ದಾರೆ; ಹಾಗೆ ಮಾಡಲಿಲ್ಲ.

ಈ ವಾರದ ಕಥೆ

"ಶಿಕ್ಷೆ"

ಲೇಖಕರು:— ಜಿ. ಕೆ. ಹಾವಂಜೆ, ಮೈಸೂರು.

ದೊಡ್ಡ ದೊಡ್ಡ ಅಧಿಕಾರಿಗಳೂ, ಮಂತ್ರಿ ಸರದಾರರೂ, ಪುರಪ್ರಮುಖ ಕೆಲವರೂ ಆ ದರ್ಬಾರಿನಲ್ಲಿ ಭಾಗವಹಿಸಿದ್ದರು. ನಡುವೆ ರತ್ನಖಚಿತ ಸಿಂಹಾಸನದಲ್ಲಿ ರಾಜನು ಕುಳಿತುಕೊಂಡು ನೆರೆದಿದ್ದ ಸಭಿಕರ ಕಡೆಗೊಮ್ಮೆ ದೃಷ್ಟಿಹೊರಳಿಸಿದನು. ಅದು ಹೊತ್ತಿನಲ್ಲಿಯೇ ವಿವಿಧ ರೀತಿಯಲ್ಲಿ ಸಿಂಗರಿಸಿಕೊಂಡು, ವಿವಿಧ ಹಾವಭಾವಗಳೊಡನೆ ರಾಜ ನರ್ತಕಿಯು ಪ್ರವೇಶಿಸಿ, ಸಿಂಹಾಸನಾರೂಢನಾಗಿದ್ದ ರಾಜನಿಗೆ ವಂದಿಸಿ ತನ್ನ ಕಲಾಪೂರ್ಣ ನೃತ್ಯದಿಂದ ನೆರೆದಿದ್ದ ಎಲ್ಲಾ ಸಭಾಸದರನ್ನೂ ರಾಜನನ್ನೂ ಮುಗ್ಧಗೊಳಿಸುತ್ತಿರುವಳು. ಆ ಆಸ್ಥಾನವು ಸಂತಸದ ನೆಲೆವೀಡಾಗಿತ್ತು!

ಆದರೆ ಇಂತಹ ಆನಂದ ಸಮಯದಲ್ಲಿ, ಮಹಾದ್ವಾರದಲ್ಲಿ ಅಮಿತ ಕೋಲಾಹಲ! ನೂರಾರು ಜನರ ಗಲಭೆ! ಸಣ್ಣ ದೊಂಬಿಯ ಹಾಗೆ. ಹತ್ತಾರು ಜನರ ಬಿಚ್ಚುಗತ್ತಿ ಕಾವಲಿನಲ್ಲಿ, ಕಬ್ಬಿಣದ ಸರಪಳಿಗಳಿಂದ ಬಂಧಿಸಲ್ಪಟ್ಟ ಭಯಂಕರಾಕೃತಿಯುಳ್ಳವನೊಬ್ಬನನ್ನು ಸಾಹಸದಿಂದ ಎಳೆತರುತ್ತಿದ್ದರು.

ಕೃಷ್ಣವರ್ಣದ ಆಜಾನುಬಾಹು ದೇಹ, ಕೆಂಡವನ್ನು ಗುಳುತ್ತಿರುವ ಕಣ್ಣುಗಳು. ಕೆದರಿದ ಕೇಶರಾಶಿ; ಸಂತಾಪದಿಂದ ಬೆವರಿರುವ ಆ ರೌದ್ರ ಮುಖ; ಆದರೂ ಅದರಲ್ಲೊಂದು ಗಾಂಭೀರ್ಯ! ಅವನೊಬ್ಬ ಅಪರಾಧಿ!

ಆ ಯಮ ಸದೃಶ ವ್ಯಕ್ತಿಯನ್ನು ಕಂಡ ಕೂಡಲೆ ನರ್ತಿಸುತ್ತಿದ್ದ ನರ್ತಕಿಯು ಬೆದರಿ ಪಲಾಯನ ಮಾಡಿದಳು. ರಾಜಾಸ್ಥಾನವೆಲ್ಲ ತುಟಿಪಿಟಕ್ಕೆನ್ನದೆ ಮೌನತಾಳಿತ್ತು.

ಚಿತ್ರದ ಬೊಂಬೆಯಂತೆ ರಾಜನು ಸಿಂಹಾಸನದಲ್ಲಿ ಕುಳಿತಿದ್ದನು. ಎದುರಿಗೆ ಹತ್ತಾರು ಬಿಚ್ಚುಗತ್ತಿಗಳ ಹಾರದಲ್ಲಿ ಅಪರಾಧಿ.

ಯಾರು ಪ್ರಜೆಗಳನ್ನು ಬಹುವಾಗಿ ಪೀಡಿಸುತ್ತಿದ್ದನೋ, ಯಾರಿಗೋಸ್ಕರ ಪ್ರಜೆಗಳು ಅನುದಿನವೂ ಹೆದರಿಕೆಯ ಬಾಳನ್ನನುಭವಿಸುತ್ತಿದ್ದರೋ ಆ ಅಪರಾಧಿ ಇಂದು ರಾಜನ ಮುಂದೆ ನಿರಾಯುಧನಾಗಿ ನಿಂತಿದ್ದಾನೆ! ಬೋನಿನಲ್ಲಿ ಸಿಕ್ಕಿ ಮೃಗರಾಜನಂತೆ ಚಡಪಡಿಸುತ್ತಿದ್ದಾನೆ.

ರಾಜನು ಅವನನ್ನೇನು ಬೇಕಾದರೂ ಮಾಡಬಹುದು. ಮನಸ್ಸಿಗೆ ಬಂದ ದಂಡನೆಯನ್ನು ವಿಧಿಸಬಹುದು. ಹಿರಣ್ಯಕಶಿಪು ಪ್ರಹ್ಲಾದನನ್ನು ನೂಕಿಸಿದಂತೆ ದೊಡ್ಡ ಬೆಟ್ಟದ ಮೇಲಿಂದ ನೂಕಿಸಬಹುದು, ಸಜೀವವಾಗಿ ಸುಡಿಸಬಹುದು. ಮೈಯ ಚರ್ಮವನ್ನು ಸುಲಿಸಬಹುದು. ರಾಜನು ಒಮ್ಮೆ ಕಣ್ಣು ಮಿಟುಕಿಸಿದರೆ ಸಾಕಾಗುತ್ತಿತ್ತು. ಆ ದುರ್ವರ್ತನ ಪಾಪಪೂರಿತ ದೇಹವು ನೂರಾರು ತುಂಡುಗಳಾಗಿ ಬೀಳುತ್ತಿದ್ದವು. ಅವನಿಗೆ ಶಿಕ್ಷೆ ವಿಧಿಸುವಲ್ಲಿ ರಾಜನು ಸ್ವತಂತ್ರನು. ಅವನಾರ ಸಲಹೆಯನ್ನೂ ಕೇಳಬೇಕಾಗಿದ್ದಿಲ್ಲ. ಆದರೆ ರಾಜನು ಅಂತಹ ಕಾರ್ಯವನ್ನು ಮಾಡಲಿಲ್ಲ. ಬಂದಿಯು ತನಗೆದುರಾಗಿ ತುಸು ದೂರದಲ್ಲಿ ನಿಂತಿರಲು ರಾಜನು ತಾನೇ ಸ್ವತಃ ಸಿಂಹಾಸನದಿಂದಿಳಿದು ಬಂದನು.

ರಾಜನು ಸಿಂಹಾಸನದಿಂದ ಕೆಳಗಿಳಿದ ರೀತಿಯನ್ನು ನೋಡಿ ಆ ದುರುಳನಿಗೆ ವಿಧಿಸುವ ಶಿಕ್ಷೆಯ ಬಗ್ಗೆ ನೆರೆದಿದ್ದ ಪ್ರತಿ ಸಭಾಸದನ ಮನಸ್ಸೂ ವಿಧ ವಿಧವಾಗಿ ಚರ್ಚಿಸುತ್ತಿತ್ತು. ಪ್ರತಿಯೊಬ್ಬನೂ ಆ ದುರುಳನಿಗೆ ವಿಧಿಸುವ ಶಿಕ್ಷೆಯು ಭಯಂಕರವಾದದ್ದಿರಬೇಕೆಂದು ಆಶಿಸುತ್ತಿದ್ದನು. ಆದರೆ ರಾಜನ ಮನವು ಇದಕ್ಕೆ ತೀರ ಭಿನ್ನವಾಗಿತ್ತೆಂದು ಅವರಿಗೇನು ಗೊತ್ತು?

ರಾಜನು ಅಪರಾಧಿಯ ಮುಂದೆ ಬಂದು ನಿಂತನು. ಮುತ್ತುಗಟ್ಟಿದ್ದ ಕತ್ತಿ ಕಾವಲಿನವರು ಹಿಂದಕ್ಕೆ ಸರಿದರು. ಅವನನ್ನು ಹಿಡಿದಿದ್ದವರು ತುಸು ಸಡಿಲಬಿಟ್ಟರು. ರಾಜನು ಅಪರಾಧಿಯನ್ನು ಆಪಾದ ಮಸ್ತಕವೂ ದೃಷ್ಟಿಸಿ ಸೌಮ್ಯದಿಂದ "ಅಪರಾಧಿ"; ಎಂದನು.

ಕೂಡಲೆ ಬಂಧಿಸಿದ್ದ ಕಬ್ಬಿಣದ ಸಂಕೋಲೆಯ "ಕಣ ಕಣ" ಲೆಂಬ ಶಬ್ದವು ಆ ಆಸ್ಥಾನದಲ್ಲಿ ಮರುದನಿಗೊಟ್ಟಿತು. ಅಪರಾಧಿಯು ತನ್ನನ್ನು ಹಿಡಿದಿದ್ದವರನೊಮ್ಮೆ ಕೊಡಹಿ ಬಂಧಿಸಿದ ಮುಷ್ಟಿಯೊಡನೆ ಎರಡು ಹೆಜ್ಜೆ ಮುಂದೆ ಬಂದನು. ಇದ್ದಕ್ಕಿದ್ದಂತೆಯೇ ಆ ಸ್ಥಾನದಲ್ಲಿದ್ದ ಪ್ರತಿಯೊಬ್ಬನ ಕತ್ತಿಯೂ ಒರೆಯಿಂದ ಹೊರಗೆ ಬಂದುವು. ಪ್ರತಿಯೊಬ್ಬನ ದೃಷ್ಟಿಯೂ ಆ ದುರುಳನ ಕಡೆಗೆ ಭಯಂಕರವಾಗಿತ್ತು. ರಾಜನ ಮುಖವು ಇನ್ನೂ ಪ್ರಫುಲ್ಲವಾಗಿಯೇ ಇತ್ತು. ಆ ರೌದ್ರ ಆದರೂ ಗಂಭೀರವಾದ ಮುಖ, ಆಜಾನುಬಾಹು ದೇಹ, ಅಪ್ರತಿಮ ಬಾಹು ಶಕ್ತಿ ಇವೆಲ್ಲಾ ರಾಜನನ್ನು ತುಸು ಬೆರಗುಗೊಳಿಸಿತು! ರಾಜನ ನೋಟವು ಆ ದುರುಳನ ಮುಖದಲ್ಲಿತ್ತು.

"ನೀನು ರಾಜ ಮತ್ತು ಪ್ರಜಾದ್ರೋಹಿ" ಸೌಮ್ಯದಿಂದಲೇ ರಾಜನೆಂದನು. "ಅನೇಕರು ನಿನ್ನಿಂದ ಕಷ್ಟನಷ್ಟಗಳನ್ನನುಭವಿಸಿದ್ದಾರೆ ಮತ್ತು ಅನುಭವಿಸುತ್ತಿದ್ದಾರೆ. ಅನೇಕರು ನಿನ್ನಿಂದ ಹತರಾಗಿದ್ದಾರೆ. ನಿನ್ನನು ಬದಿಯಟ್ಟಿಂದವರೆಲ್ಲರನ್ನು ನೀನು ಮೃತ್ಯುವಿಗೆ ಬಲಿಗೊಟ್ಟೆ. ಅಂದರೆ ನೀನು ಅವರೆಲ್ಲರಿಗೂ ಮಾಗಿಸಿದ ವೀರನೆಂದಾಯಿತು. ಆದರೆ ರಾಜ ಮತ್ತು ಪ್ರಜಾದ್ರೋಹಿ! ಅಪರಾಧಿ!! ನಿನ್ನಾ ಶೂರತನ ಪ್ರಜೆಗಳನ್ನು ಪೀಡಿಸುವದರಲ್ಲಿ ಪ್ರಕಟಗೊಳಿಸುತ್ತಿ. ಪ್ರಜೆಗಳು ನಿನಗೆ ಹೆದರುವರು. ನಿನ್ನಿಂದ ಅವರಿಗೆ ಅನುದಿನವೂ ಹೆದರಿಕೆಯ ಬಾಳು. ಅದನ್ನು ತಪ್ಪಿಸಲು ನನ್ನ ಸರಕಾರದವರಿಂದಲೂ ಇದುವರೆಗಾಗಲಿಲ್ಲ. ನೀನು ಪ್ರಜೋಪಕಾರಿಯಾಗಿದ್ದ ಪಕ್ಷದಲ್ಲಿ ಅದೆಷ್ಟು ಗೌರವವಿತ್ತು? ನಿನಗೆ ಸಾವಿರಾರು ಜನರ ಬೆಂಬಲ ಕೂಡ ಇರುತ್ತಿತ್ತು. ಈಗ ನಿನಗೆ ಹೆದರುತ್ತಿದ್ದವರೆಲ್ಲರೂ—ಅವರು ಅಂತರಂಗದಲ್ಲಿ ನಿನ್ನನ್ನು ದ್ವೇಷಿಸುವರು—ಆ ದ್ವೇಷವನ್ನು ಪ್ರಕಟಗೊಳಿಸಲು ನಿನ್ನ ಎದುರಿಗೆ ಹೆದರುವರು—ನೀನು ಪ್ರಜೋಪಕಾರಿಯಾಗಿದ್ದಲ್ಲಿ ಅವರೆಲ್ಲರೂ ನಿನ್ನನ್ನು ಗೌರವಿಸುತ್ತಿದ್ದರು. ನಿನ್ನನ್ನು ಪ್ರೀತಿಸುತ್ತಿದ್ದರು.

ಸಭಿಕರೆಲ್ಲರೂ ಚಿತ್ರದ ಬೊಂಬೆಯಂತೆ ಕುಳಿತು ನೋಡುತ್ತಿದ್ದರು. ಅಪರಾಧಿಯನ್ನು ಯಾರೂ ಹಿಡಿದಿರಲಿಲ್ಲ. ಬಿಚ್ಚುಗತ್ತಿಯನ್ನು ಯಾರೂ ಹಿಡಿದಿರಲಿಲ್ಲ. ಬಿಚ್ಚುಗತ್ತಿಯವರೂ ಇರಲಿಲ್ಲ. ಅವನೊಬ್ಬನೇ ರಾಜನ ಮುಂದೆ ನಿಂತಿದ್ದನು. ಅವನ ದೃಷ್ಟಿಯು ರಾಜನ ವಕ್ಷಸ್ಥಲದಲ್ಲಿತ್ತು. ಆ ದೃಷ್ಟಿಯಲ್ಲಿ ಮೊದಲಿನ ರಾಕ್ಷಸ ಕೃತ್ಯದ ಭೀಕರ ಸ್ವಭಾವವಿದ್ದಿಲ್ಲ. ಅದೊಂದು ಅಪೂರ್ವ ಜ್ಯೋತಿಯು ಅಜ್ಞಾತದಿಂದ ಅವನ ಹೃದಯವನ್ನು ಪ್ರವೇಶಿಸಲು ಹವಣಿಸುತ್ತಿತ್ತು. ಹಿಂದಿನ ಆ ರಾಕ್ಷಸ ಸ್ವಭಾವಕ್ಕೂ ಈ ನವೀನ ಜ್ಯೋತಿಗೂ ನಡುವೆ ಅಜ್ಞಾತ ಯುದ್ಧವಾಗುತ್ತಿತ್ತು.

ರಾಜನು ಹೇಳತೊಡಗಿದನು—

"ಅಪರಾಧಿ! ನನ್ನ ರಾಜ್ಯದವರೆಲ್ಲರೂ ನನಗೆ ಪ್ರಜೆಗಳು. ನೀನೂ ಸಹ ನನ್ನ ಪ್ರಜೆಗಳಲ್ಲೊಬ್ಬ. ನನ್ನ ಪ್ರಜೆಗಳೆಲ್ಲರೂ ಒಬ್ಬರೊಡನೊಬ್ಬರು ಸಹೋದರರಂತೆ ವರ್ತಿಸಬೇಕೆಂಬುದೇ ನನ್ನ ಆಶಯ. ಇಂತಿರಲು ಯಾವನೊಬ್ಬನು ರಾಜ್ಯದಲ್ಲಿನ ಪ್ರಜೆಗಳಿಗೆ ಹಿಂಸೆ ಮಾಡುತ್ತಿದ್ದನೆಂದರೆ ಅದು ರಾಜನಿಗೆ ಹೇಗೆ ಸಹಿಸಲು ಸಾಧ್ಯವಾಗುವುದು?

"ನಿನಗೆ ಪ್ರಜೆಗಳಿಂದ ಅಥವಾ ನನ್ನ ಅಧಿಕಾರಿಗಳಿಂದ ಅನಾನುಕೂಲವಾಗಿರಬಹುದು. ಅದನ್ನು ನೀನು ಸೇಡಿನ ರೂಪದಲ್ಲಿ ಅವರ ಮೇಲೆ ತೀರಿಸಬಾರದಿತ್ತು. ನನ್ನ ಪ್ರಜೆಗಳಿಂದ, ನನ್ನ ಅಧಿಕಾರಿಗಳಿಂದ ನಿನಗೆ ತೊಂದರೆಯಾಗಿದ್ದಲ್ಲಿ ನನ್ನ ಬಳಿಗೆ ಬಂದು ಹೇಳಬಹುದಿತ್ತು. ನೀನು ಹಾಗೆ ಮಾಡಲಿಲ್ಲ. ಅನೇಕರನ್ನು ಕಷ್ಟಕ್ಕೀಡು ಮಾಡಿದೆ. ಅನೇಕರನ್ನು ಕೊಂದೆ. ಇದರ ಪರಿಣಾಮ! ನನ್ನ ರಾಜ್ಯದಲ್ಲಿ ಎಲ್ಲೆಲ್ಲಿಯೂ ಘೋರಭಯವೇ ಇಂದು ತಲೆಗೊಳಿಸುತ್ತಿದೆ. ನಿನ್ನ ಸಾಹಸೋಚ್ಚಾರಣವೇ ಅವರಿಗೆ ಕೃತಾಂತ ಸಂದರ್ಶನ. ಅವರಿಗೆ ನೆಮ್ಮದಿಯಿಲ್ಲ ಬಾಳಿನಲ್ಲಿ ಸುಖ ಸಂತಸವಿಲ್ಲ. ನನಗೂ ಹಾಗೆಯೇ ನಿನಗೂ ಹಾಗೆಯೇ! ನನ್ನ ಅಧಿಕಾರಿಗಳಿಂದ ಯಾವ ಕಾಲಕ್ಕೆ ಎಂತಹ ಅಪಾಯ ಸಂಭವಿಸುವುದೋ ಎಂಬ ಕಿಂಚಿತ್ ಭಯವಾದರೂ ರಕ್ಷಿವಾಹಿಯಾದ ನಿನ್ನ ಹೃದಯದಲ್ಲಿ ಸುಳಿದಿರುವುದು. ನಿನ್ನೊಬ್ಬನಿಂದ ನನ್ನ ರಾಜ್ಯಕ್ಕೇ ನೆಮ್ಮದಿ ಇಲ್ಲ."

ರಾಜನೊಮ್ಮೆ ಅಪರಾಧಿಯ ಮುಖವನ್ನು ನೋಡಿದನು. ಅಪರಾಧಿಯ ದೃಷ್ಟಿಯು ರಾಜನ ಪದತಲದಲ್ಲಿತ್ತು. ಆ ನೋಟವು ಕೆಂಡವನ್ನು ಗುಳುತ್ತಿರಲಿಲ್ಲ. ಮುಖದಲ್ಲಿ ಸೇಡಿನ ದೈತ್ಯ ಲಕ್ಷಣವಿದ್ದಿಲ್ಲ. ಅದೊಂದು ಅಪೂರ್ವ ಜ್ಯೋತಿ ಅವನ ಮುಖದಲ್ಲಿ ನಲಿಯುತ್ತಿತ್ತು.

ನಿಜವಾಗಿಯೂ ಅಪರಾಧಿಯು ತನ್ನ ಕೃತ್ಯಗಳಿಗಾಗಿ ಪಶ್ಚಾತ್ತಾಪ ಪಟ್ಟಿದ್ದನು. ಇಲ್ಲಿಯವರೆಗೆ ಮಾಡಿದ ಕೃತ್ಯಗಳು ಹೀನವಾದುವೆಂದು ತಿಳಿಯಿತವನ ಮನವು. ತಾನು ಹೀನ ಕೃತ್ಯಗಳನ್ನು ಮಾಡಿದ ಅಪರಾಧಿಯು ನಿಜವೆಂದು ಅವನು ಒಪ್ಪಿದನು. ಅವನ ಬಗ್ಗೆ ಅವನಿಗೇ ತುಚ್ಛಭಾವನೆಯು ಉತ್ಪನ್ನವಾಯಿತು.

ಮೊದಲು —ಸಿಪಾಯಿಗಳು ತನ್ನನ್ನು ಬಂಧಿಸಿ ತಂದಾಗ ರಾಜನು ತನ್ನನ್ನು ಭಯಂಕರವಾಗಿ ಶಿಕ್ಷಿಸುವನೆಂದು ತಿಳಿದಿದ್ದನು. ಅದರಿಂದ ರಾಜನಲ್ಲಿ ಅವನಿಗೆ ದ್ವೇಷವೂ, ತಿರಸ್ಕಾರವೂ ಉಂಟಾಗಿದ್ದಿತು.

ಆದರೆ ಈಗ! ರಾಜನು ತನ್ನ ಅಗಾಧ ತಪ್ಪುಗಳನ್ನು ಮನ್ನಿಸುವನು. ಅಪರಾಧಿಯಾದವನನ್ನು ರಾಜನು ಪ್ರೇಮದಿಂದ ಆದರಿಸುತ್ತಿರುವನು. ರಾಜನಲ್ಲಿ ಅವನಿಗೆ ಪೂಜ್ಯತೆಯುಂಟಾಯಿತು. ರಾಜನ ಪ್ರೇಮ ಶಿಕ್ಷೆಯು ಆ ಕಟುಕನಂತಹ ಅಪರಾಧಿಯನ್ನು ಸಹ ಪಶ್ಚಾತ್ತಾಪಪಡುವಂತೆ ಮಾಡಿತು. ಪ್ರೇಮವು ಭಯಂಕರ ಕ್ರೂರ ಸ್ವಭಾವವನ್ನು ಗೆದ್ದಿತು.

ರಾಜನ ಮುಖವು ಅತ್ಯಂತ ಸೌಮ್ಯವಾಗಿತ್ತು. ಕಣ್ಣುಗಳು ಪ್ರೇಮ, ಕ್ಷಮಾ ಜ್ಯೋತಿಗಳನ್ನು ಹೊರಹೊಮ್ಮುತ್ತಿದ್ದುವು. ಅವನ ಬಲಗೈ ಅಪರಾಧಿಯ ಬಲಭುಜದ ಮೇಲಿತ್ತು. ರಾಜನು ಹೇಳತೊಡಗಿದನು.

"ನಿನ್ನ ತಮ್ಮಂದಿರನ್ನು ಹಿಂಸಿಸುವೆಯಾ? ನಿನ್ನ ಹೃದಯದಲ್ಲಿ ಪ್ರೇಮವಿಲ್ಲವೆ? ಅಹಿಂಸೆಯು ನಿನಗೊಪ್ಪಿಗೆಯಾಗಲಾರದೆ? ಅಪರಾಧಿ! ಈಗ ಹೇಳು. ನೀನು ನನಗೆ ಹೆದರಬೇಕಾದುದಿಲ್ಲ. ನಿನ್ನ ಮನ ಬಿಚ್ಚಿ ಹೇಳು."

ರಾಜನ ಪಾದದಲ್ಲಿ ಏನೋ ಬಿದ್ದಂತಾಯಿತು ಎರಡು ಹನಿ ಕಣ್ಣೀರು. ಪಶ್ಚಾತ್ತಾಪದಿಂದ ದಹಿಸಲ್ಪಟ್ಟ ಹೃದಯದ ಎರಡು ಹನಿ ಕಣ್ಣೀರು. ಅಪರಾಧಿಯ ಶಿರವು ರಾಜನ ಪಾದವನ್ನಾಶ್ರಯಿಸಿತ್ತು. ಆಸ್ಥಾನದ ಒಂದು ಪಾರ್ಶ್ವದಿಂದ ಗುಲ್ ಗುಲ್ ಎಂಬ ಗೆಜ್ಜೆಯ ಸದ್ದಿನೊಡನೆ ನರ್ತಕಿಯು ಪುನಃ ಪ್ರವೇಶಿಸಿದಳು. ಸಭಾಸದರ ದೃಷ್ಟಿಯು ಅತ್ತ ಹೋಯಿತು. ನರ್ತಕಿಯು ಸಿಂಹಾಸನದ ಮುಂದಿನ ನೋಟವನ್ನು ಕಂಡು ದಿಗ್ಭ್ರಾಂತಳಾದಳು. ಯಾರು ಬರುತ್ತಿದ್ದವನನ್ನು ಕಂಡು ತಾನು ಹೆದರಿ ಓಡಿದ್ದಳೋ! ಅವನೀಗ—ರಾಜನ ಬಾಹುಬಂಧನದಲ್ಲಿ! ಅಹುದು, ರಾಜನ ಪ್ರೇಮಶಿಕ್ಷೆಯ ಮೂಲಕ—ಪಶ್ಚಾತ್ತಾಪದಿಂದ ದಹಿಸಲ್ಪಟ್ಟು ಪರಿಶುದ್ಧ ವ್ಯಕ್ತಿ ಅವನು. ಆದುದರಿಂದಲೇ ಅವನೀಗ ರಾಜನ ಬಾಹುಪಾಶದ ಬಂಧಿ. ರಾಜನು ಅವನನ್ನು ಆಲಿಂಗಿಸಿದನು.

ವಿ ವಿ ಧ ವಾ ರ್ತೆ ಗ ಳು

ಕಂದಾಯ ನಿರಾಕರಣೆ ಪ್ರತಿಧ್ವನಿ

ಬೆಂಗಳೂರು ಸ್ಟೀಲ್ ಕಂಪೆನಿಯ ಮಾಲೀಕರಾದ ಶ್ರೀ ಮೆ. ಸಿ. ಸೂರ್ಯನಾರಾಯಣ ರಾಯರು ತಾವು ಹೊಸ ಮನೆಗಳನ್ನು ಕಟ್ಟಿರುವ ಸ್ಥಳಗಳಲ್ಲಿ ಪೌರಸಭೆಯವರು ನಲ್ಲಿ, ದೀಪ, ಚರಂಡಿ ಮುಂತಾದ ಯಾವ ಸೌಕರ್ಯಗಳನ್ನೂ ಒದಗಿಸಿಕೊಟ್ಟಿಲ್ಲವೆಂದೂ, ಎಷ್ಟು ಅರ್ಜಿಗಳನ್ನೂ ಬರೆದರೂ ಪ್ರಯೋಜನವಾಗಲಿಲ್ಲವೆಂದೂ ಸೂಚಿಸಿ ಮೇಲ್ಕಂಡ ಸೌಕರ್ಯಗಳನ್ನು ಕೂಡಲೆ ಒದಗಿಸದಿದ್ದರೆ ತಾವು ಮನೆ ಮನೆಗೆ ಹೋಗಿ ಪೌರಸಭೆಯ ಮೇಲೆ ಪ್ರಚಾರ ಮಾಡಿ ಕಂದಾಯವನ್ನು ಕೊಡದಂತೆ ಮಾಡುವುದಾಗಿ ತಿಳಿಸಿದ್ದರು. ಅನಂತರ ಮೇಲೆ ಪೌರಸಭಾಧಿಕಾರಿಗಳು ಅವರಿಗೆ ಪತ್ರ ಬರೆದು ಸದರಿ ಮೊಹಲ್ಲಾದಲ್ಲಿ ಎಲ್ಲಾ ಸೌಕರ್ಯಗಳನ್ನೂ ಒದಗಿಸಲು ಸರ್ಕಾರದವರು ಮಂಜೂರು ಮಾಡಿರುವ ರೀಂದೂ, ಅವರ ಗಾಬರಿಗೆ ಕಾರಣವಿಲ್ಲವೆಂದೂ ತಿಳಿಸಿದ್ದಾರೆ. ನಲ್ಲಿ, ದೀಪ, ಚರಂಡಿ ಮುಂತಾದ ನಿರ್ಮಾಣಗಳು ಸಧ್ಯದಲ್ಲಿಯೇ ಆಗುವುದಂತಿವೆ.

ರಾಜೀನಾಮೆ.

ಮಿ॥ ಸಂಪಿಗೆ ವೆಂಕಟಪತಯ್ಯನವರು ರಾಜಕೀಯ ವಿಚಾರ ಸಮಿತಿಗೆ ರಾಜೀನಾಮೆ ಕೊಟ್ಟಿದ್ದಾರೆ. ವಿದುರಾಶ್ವತ್ಥದಲ್ಲಿ ನಡೆದ ಗುಂಡಿನೇಟಿನ ಪ್ರಕರಣದಿಂದ ತಮ್ಮ ಮನಸ್ಸಿಗೆ ಉಂಟಾಗಿರುವ ವ್ಯಥೆಯಿಂದ ತಾವು ಸದರಿ ಸಮಿತಿಯಲ್ಲಿ ಸಹಕರಿಸಲು ಸಾಧ್ಯವಿಲ್ಲವೆಂದು ತಿಳಿಸಿರುವರೆಂದು ಗೊತ್ತಾಗಿದೆ.

ಕಾಂಗ್ರೆಸ್ ವಿಚಾರಣಾ ಸಮಿತಿ.

ವಿದುರಾಶ್ವತ್ಥದಲ್ಲಿ ನಡೆದ ಗುಂಡಿನೇಟಿನ ಘಟನೆಗಳನ್ನು ವಿಚಾರಣೆ ಮಾಡಿ ಗಲಭೆಗಳಿಗೆ ಕಾರಣವನ್ನೂ ಎಷ್ಟು ಮಟ್ಟಿನ ಪ್ರಾಣನಷ್ಟ ಮತ್ತು ಗಾಯಗಳಾಗಿವೆ ಎಂಬುದನ್ನೂ ಗೊತ್ತು ಮಾಡಲು ಒಂದು ಸಮಿತಿಯನ್ನು ಕಾಂಗ್ರೆಸ್ಸಿನವರು ಗೊತ್ತು ಮಾಡಿದ್ದಾರೆ. ಇದಕ್ಕೆ ಶ್ರೀ॥ ಸ್ಟೀವನ್ ಎಲ್. ಎಸ್. ರಾಜು, ಸಂಪಿಗೆ ವೆಂಕಟಪತಯ್ಯ ಮತ್ತು ಮಿ॥ ಕೆ. ವೀರಣ್ಣಗೌಡರನ್ನು ಸದಸ್ಯರಾಗಿ ನೇಮಿಸಿರುವರೆಂದು ತಿಳಿಯಬಂದಿದೆ.

ಭಾವಸಾರ ಕ್ಷತ್ರಿಯ ಮಂಗಲಿ

ರಾಜಧಾನಿಯ ಭಾವಸಾರ ಕ್ಷತ್ರಿಯ ಮಂಡಲಿಯ ಮರಾಠಿ ಪಾಠಶಾಲಾ ವಿದ್ಯಾರ್ಥಿಗಳ ಪರೀಕ್ಷೆಯನ್ನು ಬೆಂಗಳೂರಿನ ಹೆಡ್ ಮಾಸ್ಟರ್ ಮಿ॥ ಕೃಷ್ಣಾಜಿರಾಯರು ನಡೆಸಿದರು. ಕಂಟೋನ್ಮೆಂಟಿನ ಮಿ॥ ಕೆ. ಕೃಷ್ಣೋಜಿರಾಯರ ಅಧ್ಯಕ್ಷತೆಯಲ್ಲಿ ಪಾಂಡುರಂಗ ದೇವಸ್ಥಾನದಲ್ಲಿ ಬಹುಮಾನ ವಿನಿಯೋಗವು ನಡೆಯಿತು. ಬಹುಮಾನ ವಿನಿಯೋಗದ ಖರ್ಚನ್ನು ಮಿ॥ ಬಿಂಗಿ ನರಸಿಂಗರಾಯರು ವಹಿಸಿ ಬಹಳ ವಿಜೃಂಭಣೆಯಿಂದ ನೆರವೇರಿಸಿ ಎಲ್ಲರಿಗೂ ಸಂತೋಷವನ್ನುಂಟುಮಾಡಿದರು. ಅಧ್ಯಕ್ಷರು ಗಂಭೀರವಾದ ಮತ್ತು ಕಾರ್ಯೋತ್ಸಾಹಕವಾದ ಭಾಷಣ ಮಾಡಿ ಸಭೆಯನ್ನು ಮುಕ್ತಾಯ ಮಾಡಿದರು.

ಶ್ರೀ ಶಂಕರ ಕಸ್ತೂರಿ

ಜಿಲ್ಲಾ ಬೋರ್ಡ್ ವಿಭಜನೆ

ಮೊದಲಿನ ನಿರ್ಧಾರದಂತೆ ಮೈಸೂರು ಜಿಲ್ಲಾ ಬೋರ್ಡನ್ನು ಈ ವರ್ಷದ ಸೆಪ್ಟೆಂಬರ್ ತಿಂಗಳಿಂದಲೇ ಎರಡು ಭಾಗವಾಗಿ ವಿಂಗಡಿಸಬೇಕೆಂದು ಸರಕಾರದವರು ಉದ್ದೇಶಿಸಿದ್ದರು. ಆದರೆ ಅದನ್ನು ಇನ್ನು ಒಂದು ವರ್ಷ ಮುಂದಕ್ಕೆ ಹಾಕಿರುತ್ತಾರೆ. 1939 ನೇ ಸೆಪ್ಟೆಂಬರ್ ಒಂದನೇ ತಾ॥ ನಿಂದ ಮೈಸೂರು ಜಿಲ್ಲೆಯು ಎರಡು ಭಾಗವಾಗಿ ವಿಂಗಡಿಸಲ್ಪಡುತ್ತದೆ.

ಲುಕ್ಸೆಂಬರ್ಗ್

ಫ್ರಾನ್ಸ್ ದೇಶದ ಗಡಿಯಲ್ಲಿರುವ ಈ ಸ್ವತಂತ್ರ ರಾಜ್ಯದಲ್ಲಿ ೩,೬೪,೦೦೦ ಪ್ರಜೆಗಳಲ್ಲಿ ಒಬ್ಬನಿಗೆ ಮಾತ್ರ ಉದ್ಯೋಗವಿಲ್ಲ. ಎಂತಹ ಪುಣ್ಯಭೂಮಿ ಇದು !

ಮರದಲ್ಲಿ ಮನೆ

ಫ್ರಾನ್ಸ್ ದೇಶದಲ್ಲಿ ನ್ಯಾಗ್ರೆಸಾರೆ ಎಂಬ ಪ್ರಾಂತ್ಯದಲ್ಲಿ ಉ॥ ಅಡಿ ಸುತ್ತಳತೆಯುಳ್ಳ ಮರದ ಪೊಟ್ಟರೆಯಲ್ಲಿ ಒಬ್ಬ ಮುದುಕಿಯು ತನ್ನ ಮಂಚ, ಹಾಸಿಗೆ, ಮೇಜು, ಕುರ್ಚಿ ಮತ್ತು ಅಡಿಗೆ ಸಾಮಾನುಗಳನ್ನು ಇಂಪಾಗಿಟ್ಟುಕೊಂಡು ಸುಖದಿಂದ ಜೀವನ ನಡೆಸುತ್ತಿರುವಳು.

ಆಕಾಶವಾಣಿ

ಸೋಮವಾರ—೮ ರಿಂದ ೧೦. ಪಿಟೀಲು ಸಂಗೀತ, ಉಪನ್ಯಾಸ, "ಒತ್ತೆ ಮನೆ ಮ್ಯ". ಮಂಗಳವಾರ—೬-೩೦ ರಿಂದ ೯. ಕರ್ನಾಟಕ ವಾದ್ಯಗಾನ, ಉಪನ್ಯಾಸ, "ವೀರಶೈವ ವಚನಕಾರರು" ಮಿ॥ ಹರಿಹರೇಶ್ವರಭಟ್ಟರಿಂದ. ಬುಧವಾರ—೬-೩೦ ರಿಂದ ೯. ಶ್ರೀ ರಾಮಾನುಜಾಚಾರ್ಯರ ಜಯಂತಿ. ಕೀರ್ತನೆಗಳು, ಉಪನ್ಯಾಸ, ಮಿ॥ ಎಸ್. ಆರ್. ಸಂಪತ್ಕುಮಾರಯ್ಯಂಗಾರ್ಯರಿಂದ. ಗುರುವಾರ—೬-೩೦ ರಿಂದ ೯. ಲಘುಸಂಗೀತ, "ಶಿಶು ರಕ್ಷಣೆ" ಉಪನ್ಯಾಸ, ಕನ್ನಡ ನಾಟಕ "ಶ್ರೀ ಕೃಷ್ಣಲೀಲಾ" ಶುಕ್ರವಾರ—೬-೩೦ ರಿಂದ ೧೦. ಹಿಂದೂಸ್ತಾನೀ ಸಂಗೀತ. ಶನಿವಾರ—ರಜಾ.

ಸಮುದ್ರದಿಂದ ಎಣ್ಣೆ

ಇಂಗ್ಲೆಂಡಿನಲ್ಲಿ ಪಶೀನ ಸೀಮೆ ಎಣ್ಣೆ ದೊರಕಾಗಿದೆ. ಟ್ರಿನಿಡಾಡ್ ಎಂಬ ಬ್ರಿಟಿಷ್ ಪ್ರಾಂತಕ್ಕೆ ಸೇರಿದ ಇಲ್ಲಿ ಬಹಳ ರಾಳ (ಟಾರ್) ದೊರೆಯುವುದು. ಈಚೆಗೆ ಬರ್ಮಾದಲ್ಲಿ ದೊರೆಯುವಂತೆ ಮಟ್ಟಿ ತೈಲವೂ ದೊರೆಯುವುದರಲ್ಲಿದೆ. ಎಣ್ಣೆಯು ಭೂಮಿಯೊಳಗಲ್ಲದೆ ಸಮುದ್ರದಡಿಯಲ್ಲೂ ಇದೆಯಂತೆ. ಈ ಎಣ್ಣೆಗಾಗಿ ಕಂಪೆನಿಗಳು ಸಮುದ್ರ ತಳದಿಂದ ಎಣ್ಣೆ ತೆಗೆಯಲು ಆಪ್ಪಣೆ ಕೇಳಿವೆ. ಆದರೆ ಸರ್ಕಾರವು ಒಪ್ಪಿಗೆಯ ಕೊಡುವ ಹಕ್ಕೆ ಬದಲು ಒಂದು ದೊಡ್ಡ ಕಂಪೆನಿಗೆ ಎಲ್ಲ ಹಕ್ಕುಗಳನ್ನೂ ಕೊಡುವುದರಲ್ಲಿದೆ. ಈ ಕಂಪೆನಿಯು ಹೊಸದು ಆಂಗ್ಲೋ ಇರಾನಿಯನ್ ಆಯಿಲ್ ಕಂಪೆನಿ. ಇದರಲ್ಲಿ ಸರಕಾರವೂ ಪಾಲುಗಾರನೆಂದು ಮುಂಚೆಯೇ ಅಪ್ಪಣೆ ಕೇಳಿದ್ದ ಚಿಕ್ಕ ಪುಟ್ಟ ಕಂಪೆನಿಗಳಿಗೂ ಇದರಲ್ಲಿ ಪಾಲುಗಳು ದೊರೆಯುತ್ತವೆ.

ಶಾಂತಿಗಾಗಿ ಖರ್ಚು

ದೇಶ ರಕ್ಷಣಾರ್ಥವಾಗಿ ಇಂಗ್ಲೆಂಡು ೧೯೩೬-೩೭ ರಲ್ಲಿ ೧೮,೩೮,೦೦೦೦೦ ಪೌಂಡುಗಳನ್ನು ಖರ್ಚುಮಾಡಿತು; ೧೯೩೮—೩೯ ಕ್ಕೆ ೩೪,೭೩,೫೦,೦೦೦ ಪೌಂಡುಗಳ ಖರ್ಚು ಅಂದಾಜಾಗಿದೆ. ಶಾಂತಿಗಾಗಿ ಇಷ್ಟು ವ್ಯಯವಾಗಬೇಕೆ? ಶಾಂತಿಯೆ? ಇಷ್ಟು ಕಟ್ಟಿಯಾಗಿದೆಯೆ? ಇದಕ್ಕಿಂತ ಅಗ್ಗವಾಗಿ ದೊರೆಯಲಾರದೆ? ಈ ಖರ್ಚು ಯುದ್ಧದ ಖರ್ಚಿಗೆ ಸಮಾನಾಯಿತಲ್ಲ! ಎಂದು ಅನೇಕರಿಗೆ ಆಶ್ಚರ್ಯವಾಗಿದೆ.

ಬೀಟ್ ಸಕ್ಕರೆ

ಈ ಸಕ್ಕರೆಯು ಯೂರೋಪ್, ಅಮೇರಿಕಗಳಲ್ಲಿ ಮಾತ್ರ ತಯಾರಾಗುತ್ತದೆ. ಯುದ್ಧದಿಂದೀಚೆಗೆ ೧೯೩೬-೩೭ ನೇ ಇಸ್ವಿ ವರೆಗೆ ೧೯೦೯-೧೦ ರಲ್ಲಿ ಆದಷ್ಟು ಬೀಟ್ ಸಕ್ಕರೆಯು ಯಾವಾಗಲೂ ತಯಾರಾಗಲಿಲ್ಲ. ಸೋವಿಯಟ್ ರಷ್ಯಾದಲ್ಲಿ ೧೯೩೩ ರಿಂದ ೩೬ ರ ವರೆಗೆ ಅದೇ ಸಾಲಿಯಾನಾ ಸರಾಸರಿಕ್ಕಿಂತ ೯ ಪಾಲು ಹೆಚ್ಚು ತಯಾರಾಯಿತು. ಒಟ್ಟು ಯೂರೋಪಿನಲ್ಲಿ ಉತ್ಪತ್ತಿಯು ೧೯ ರಷ್ಟು ಹೆಚ್ಚಿತು.

ಕಬ್ಬಿಣ

ಪಶ್ಚಿಮ ಆಸ್ಟ್ರೇಲಿಯಾದ ಯಾಂಪಿ ಸೌಂಡ್ ಎಂಬ ಕಬ್ಬಿಣದ ಗಣಿಯಲ್ಲಿ ಶೇ॥ ೬೦ ಕಬ್ಬಿಣವಿರುವ ಅದುರು ಸಿಕ್ಕಿದೆ. ಜ

ಸಹಾಯ ನಿಧಿ

ಗುಂಡಿನೇಟಿನಿಂದ ಮೃತರಾದ ನಮ್ಮ ಬಾಂಧವರಿಗೆ ಸಹಾಯವನ್ನು ನೀಡಲು ಕಾಂಗ್ರೆಸ್ಸಿನವರು ಒಂದು ಸಹಾಯನಿಧಿಯನ್ನು ಏರ್ಪಡಿಸಿರುವರು. ಮೈಸೂರಿನ ಸಾಹುಕಾರ್ ಚನ್ನಯ್ಯನವರನ್ನು ಹಣ ವಸೂಲು ಮಾಡಲು ನೇಮಿಸಲಾಗಿದೆ. ಅವರು ಈಗಾಗಲೇ ಒಂದು ನೂರು ರೂ. ಚಂದಾ ಕೊಟ್ಟಿರುತ್ತಾರೆ. ಮಹಾ ಜನರ ಪ್ರಾಣ ಬಲಿಯಾಗಿ ಬರುತ್ತಾರೆ. ಇದಕ್ಕಿಂತ ಪವಿತ್ರವಾದ ಕಾರ್ಯವು ಮತ್ತೊಂದಿಲ್ಲ. ಮೃತಪಟ್ಟವರಿಗೂ, ಗಾಯಗೊಂಡವರಿಗೂ ಇದೀ ದೇಶವೆಲ್ಲವೂ ಸಂತಾಪವನ್ನು ಸೂಚಿಸುತ್ತಿದೆ. ಈ ಸಂತಾಪವನ್ನು ಕಾರ್ಯರೂಪದಲ್ಲಿ ತೋರಿಸುವುದು ಅತ್ಯಾವಶ್ಯಕ. ಅನೇಕ ಸಂಸಾರಗಳು ಅನಾಥವಾಗಿವೆ. ಅನೇಕ ಜನ ಸಹೋದರರು ಲಾಠಿ ಏಟಿನಿಂದಲೂ, ಗುಂಡಿನ ಏಟಿನಿಂದಲೂ ಕೈಕಾಲುಗಳನ್ನು ಮುರಿಸಿಕೊಂಡಿದ್ದಾರೆ. ಮತ್ತು ಸಂಪಾದನೆ ಮಾಡಲು ಶಕ್ತಿಯಿಲ್ಲದವರಾಗಿದ್ದಾರೆ. ಅವರುಗಳಿಗೆ ಸಹಾಯ ಮಾಡುವುದು ಅತ್ಯವಶ್ಯಕ. ದೇಶಬಾಂಧವರೆಲ್ಲರೂ ಈ ನಿಧಿಗೆ ಉದಾರವಾಗಿ ಸಹಾಯ ಮಾಡಬೇಕಾಗಿ ಕೋರುತ್ತೇವೆ.

ಸತ್ಕಾರ.

ಆಸ್ಥಾನ ವಿದ್ವಾನ್ ವೇ॥ ನಂಜನಗೂಡು ಶ್ರೀಕಂಠ ಶಾಸ್ತ್ರಿಗಳು ಕಳೆದ ಸೋಮವಾರ ತಮ್ಮ ಕುಮಾರ ಚಿ॥ ಸೂರ್ಯನಾರಾಯಣನಿಗೆ ಉಪನಯನವನ್ನು ನೆರವೇರಿಸಿದರು. ಅನೇಕ ಜನ ಬಂಧು ಮಿತ್ರಾದಿಗಳನ್ನು ಆಹ್ವಾನಿಸಿ ಸತ್ಕರಿಸಿದರು.

ವಾಸನಿಂದ ಜಗ್ಗಿಗೆ ೩ ದಿನಗಳ ಸ್ಪೀಮರಿನ ಪ್ರಯಾಣ.

ಈಗಾಗಿರುವ ಮಾತುಕತೆಗಳಂತೆ ಜಪಾನಿಗೆ ಇಲ್ಲಿಂದ ಸಾಲಿಯಾನಾ ೫೦,೦೦೦ ಟನ್ ಕಬ್ಬಿಣದ ಅದುರು ರಫ್ತಾಗುವುದು. ಮುಂದೆ ಇದರ ಎರಡರಷ್ಟನ್ನು ಕೊಳ್ಳುವರು.

ಔದ್ಯೋಗಿಕ ಶಿಕ್ಷಣ

ರಾಜಲಕ್ಷ್ಮೀ ಟೈಲರಿಂಗ್ ಮತ್ತು ಕಟಿಂಗ್ ಇನ್ಸ್ಟಿಟ್ಯೂಟ್, ಶಿವರಾಂಪೇಟೆ (ರತ್ನಾವಳಿ ಥಿಯೇಟರ್ ಪಕ್ಕದಲ್ಲಿ) ಮೈಸೂರು.

ದೇಶೀ ಮತ್ತು ಇಂಗ್ಲೀಷ್ ಪದ್ಧತಿಯಲ್ಲಿ ಕಟಿಂಗ್, ಟೈಲರಿಂಗ್, 1 ತಿಂಗಳ ಅವಧಿಯಲ್ಲಿ ಪೂರ್ಣ ಹೇಳಿಕೊಡುತ್ತಾರೆ.

ಫೀಜು 60 ರೂಪಾಯಿ.

ಸಮರ್ಥರಾದ ವಿದ್ಯಾರ್ಥಿಗಳಿಗೆ ಕೆಲಸವು ಮತ್ತು ಒಂದು ಡಿಪ್ಲೊಮಾ ಕೊಡುತ್ತಾರೆ. ಹೆಚ್ಚಿನ ವಿವರಕ್ಕೆ ಪ್ರತ್ಯಕ್ಷ ಭೇಟಿಮಾಡಿರಿ ಅಥವಾ ೨ ಆಣೆ ಸ್ಟಾಂಪು ನೊಂದಿಗೆ ಬರೆಯಿರಿ.

ಪ್ರೊಫೆಸರ್ ಕೆ. ಎಂ. ಉತ್ತರಕರ್, ಫಸ್ಟ್ ಕ್ಲಾಸ್ ಲಂಡನ್ ಡಿಪ್ಲೊಮಾ ಹೋಲ್ಡರ್, ಪ್ರಿನ್ಸಿಪಾಲ್.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

— ಬಾ ಲ ಸು ಧಾ —

ಮಕ್ಕಳ ಜ್ವರ, ಗೆಡ್ಡೆ, ಕೆಮ್ಮು ಮುಂತಾದ ರೋಗಗಳನ್ನು ಪರಿಹರಿಸುತ್ತದೆ. ಲಿವರ್ (ಪಿತ್ತಕೋಶ) ದೊಡ್ಡದಾಗಿ ಹೊಟ್ಟೆ ಊದಿಕೊಂಡ ಮಕ್ಕಳಿಗೆ ಇದರ ಸೇವನೆಯಿಂದ ವಿಶೇಷ ಗುಣವಾಗುತ್ತದೆ. 20 ವರ್ಷಗಳಿಂದಲೂ ಅನುಭವ ಸಿದ್ಧವಾಗಿದೆ—ಮಕ್ಕಳ ಭೇದಿಗೆ ನಮ್ಮ ಬಾ ಲ ಸಂ ಜೀ ವಿ ನಿ ಯ ನ್ನೇ ಉಪಯೋಗಿಸಿರಿ.

ಬಾ ಲ ಸು ಧಾ ಬೆಲೆ 1 ರೂ. ಬಾ ಲ ಸಂ ಜೀ ವಿ ನಿ 4 ಆ.

ಮೈಸೂರು, ಬೆಂಗಳೂರು, ಮದ್ರಾಸುಗಳಲ್ಲಿ ನಮ್ಮ ಶಾಖೆಗಳಿವೆ.

ಸದ್ವೈದ್ಯಶಾಲಾ, ನಂಜನಗೂಡು.

ಸಾಧ್ವಿ

೨—೫—೩೮ ನೇ ಸೋಮವಾರ

ನಮ್ಮ ಅನುತಾಪ

ಶ್ರೀ ಕ್ಷೇತ್ರ ವಿದುರಾಶ್ವತ್ಥದಲ್ಲಿ ನಡೆದ ದುರಂತದಲ್ಲಿ ನೊಂದ ನಮ್ಮ ಸೋದರರಿಗೆ.

ಗತಿಪ್ರಾಪ್ತರಾದ ನಮ್ಮ ಧೀರ ದೇಶ ಭಕ್ತರಿಗೆ.

ರಾಷ್ಟ್ರ ಪತ್ತಿಯಿಂದ ಧ್ವಜಾರೋಹಣ ಕಾರ್ಯದಲ್ಲಿ ಉಗ್ರಾಗ್ರಹವನ್ನು ನೀಡಿದ ತ್ಯಾಗಮೂರ್ತಿಗಳಿಗೆ.

ವೀರವಾತೆಗಾಗಿ ದೇಹಿಯಲು ರಕ್ತವನ್ನು ಚೆಲ್ಲಿದ ನಮ್ಮ ಮಾನ್ಯ ಸೋದರಿಯರಿಗೆ.

ಸ್ವಾತಂತ್ರ್ಯ ವಾಸನಕ್ಕೆ ತುತ್ತಾಗಿರುವ ನಮ್ಮ ಸಹೋದ್ಯೋಗಿಗಳಾದ ತಾಯಿನಾಡು, ವಿಶ್ವಕರ್ನಾಟಕ ಮತ್ತು ನವಜೀವನಗಳಿಗೆ; ಮತ್ತು ಸಿರುದ್ಯೋಗಿಗಳಾದ ಅವರ ಪತ್ರಿಕರಿಗೆ.

ಸ್ವಾತಂತ್ರ್ಯಕ್ಕೆ ಗುರಿಯಾಗಿ ಮರುಗುತ್ತಿರುವ ಸೋದರರನ್ನು ಸಂತೈಸಲು ಕಾತರಿಸುತ್ತಿರುವ ವೀರರಿಗೆ.

ನಮ್ಮ ಪ್ರಾರ್ಥನೆ

ಅರಸರಿಗೂ, ಪ್ರಜೆಗಳಿಗೂ, ಮೈಸೂರಿನ ಭಾಗ್ಯದೇವತೆಯು ಆಶ್ರಯ ಹಸ್ತವನ್ನುಂಟುಮಾಡಲಿ. ಪ್ರಜೆಗಳ ಇಷ್ಟಾರ್ಥಗಳು ಈಡೇರಲಿ.

ಮೈಸೂರಿನ ಉದ್ಧಾರಕ್ಕೆ ಒಂದೇ ಮಾರ್ಗ

ಪ್ರಜಾಪ್ರಾತಿನಿಧ್ಯ ಸರ್ಕಾರವನ್ನು ಸ್ಥಾಪಿಸುವುದು

ಮಹಾತ್ಮ ಗಾಂಧಿಯವರ ಸಲಹೆ

ಮೈಸೂರಿನ ಪರಿಸ್ಥಿತಿಯ ಮೇಲೆ ಮಹಾತ್ಮ ಗಾಂಧಿಯವರು ಕೊಟ್ಟಿರುವ ಹೇಳಿಕೆಯಲ್ಲಿ ಕೆಳಗೆ ಕಂಡಂತೆ ತಿಳಿಸಿರುತ್ತಾರೆ:—

ಮೈಸೂರು ಸರ್ಕಾರದ ಪ್ರಕಟನೆಯು ತೃಪ್ತಿಕರವಾಗಿಲ್ಲ. ನಿರ್ದೋಷವಾದ ಪ್ರಜೆಗಳ ಮೇಲೆ ಗುಂಡನ್ನು ಹಾರಿಸಲಾಗಿದೆ. ಅನೇಕರು ಪತ್ತಿಪ್ರಹಾರ ಮಳೆಗೆ ಗಾಯಗೊಂಡಿದ್ದಾರೆ.

ಗುಂಡು ಹಾರಿಸಲು ಸಾಕಾದಷ್ಟು ಕಾರಣವಿತ್ತೇ ಎಂಬುದನ್ನು ನಾವು ಸರಿಯಾಗಿ ತಿಳಿಯುವುದು ಯಾವಾಗಲೂ ಸಾಧ್ಯವಿಲ್ಲ. ಅದ್ದರಿಂದ ಸರ್ಕಾರದವರು ಬಹಿರಂಗ ವಿಚಾರಣಾ ಕ್ರಮವನ್ನು ನಡೆಸಿ ಸುಮ್ಮನೆ ಕುಳಿತರೆ ಸಾಲದು.

ಧ್ವಜ ಪ್ರದರ್ಶನವು ಕಾಲಗತಿಗನುಸಾರವಾಗಿ ನಡೆಯುತ್ತಿದೆ.

ಮೈಸೂರಿನಲ್ಲಿ ಉಂಟಾಗಿರುವ ಬಹೋಪವಾದ ಜನಜಾಗೃತಿಯನ್ನು ನಾನು ಚೆನ್ನಾಗಿ ಅರಿತಿರಲಿಲ್ಲವೆಂದು ಒಪ್ಪಿಕೊಳ್ಳುತ್ತೇನೆ.

ಸರ್ಕಾರದಲ್ಲಿ ನಿರಂಕುಶತ್ವವನ್ನು ತೆಗೆದು ಪ್ರಜೆಗಳ ಪ್ರತಿನಿಧಿಗಳು ಮೈಸೂರಿನ ಆಡಳಿತಕ್ಕೆ ಗೊತ್ತುಗಾರರಾಗಿರುವಂತೆ ಮಾಡಬೇಕೆಂದು ಶ್ರೀಮನ್ಮಹಾರಾಜರಿಗೂ ಸರ್ ಮಿರ್ಜಾರವರಿಗೂ ನಾನು ಸಲಹೆ ಕೊಡುತ್ತೇನೆ.

ಈ ಮರಣಗಳೂ, ಏಟುಗಳೂ ಸ್ವಾತಂತ್ರ್ಯ ಸಾಧನೆಗಾಗಿ ಅರ್ಪಿಸಿದ ಕಾಣಿಕೆಗಳೆಂದು ಮೈಸೂರಿನ ಯುವಕರಿಗೆ ನಾನು ತಿಳಿಸುತ್ತೇನೆ.

ವಿಚಾರಣಾ ಸಮಿತಿಯನ್ನು ಮಾಡಿ ಪೆಟ್ಟು ತಿಂದವರ ಬಂಧುಗಳಿಗೆ ಸಹಾಯವನ್ನು ನೀಡಬಹುದು. ನಾನೇ ಮೈಸೂರಿನವನಾಗಿದ್ದರೆ ಈ ಅಲ್ಪ ಪ್ರತಿಫಲಗಳಿಗೆ ಆಶಿಸುತ್ತಿರಲಿಲ್ಲ. ಸ್ವಾತಂತ್ರ್ಯ ಯುದ್ಧಕ್ಕೆ ಈ ಕಷ್ಟನಷ್ಟಗಳು ಅಹುತಿಯೆಂದು ನಾನು ಭಾವಿಸುತ್ತಿದ್ದೆನು.

ಪ್ರಜೆಗಳು ಸಂಪೂರ್ಣ ಶಾಂತಚಿತ್ತದಿಂದ ಪ್ರವರ್ತಿಸುತ್ತಿರುವರೆಂದೂ, ಗುಂಪಿನವರು ಧೈರ್ಯದಿಂದ ಗುಂಡಿನ ಏಟುಗಳನ್ನು ಅನುಭವಿಸಿದರೆಂದೂ ಕೇಳುತ್ತೇನೆ. ಇದು ಪ್ರಜೆಗಳಾದವರ ಸ್ವಾತಂತ್ರ್ಯಕ್ಕಾಗಿ ಅರ್ಪಿಸಿದ ಈ ಕಾಣಿಕೆಗಾಗಿ ನಾನು ಆನಂದವನ್ನೇ ಹೊಂದುತ್ತೇನೆ.

ಸುಧಾರಣಾ ಸಮಿತಿಯ ಆರಂಭ

ರಾಜಕೀಯ ಸುಧಾರಣಾ ಸಮಿತಿಯ ಪ್ರಥಮ ಸಭೆಯು ಕಳೆದ ಗುರುವಾರ ಮಧ್ಯಾಹ್ನ ಬೆಂಗಳೂರು ಅಠಾರಾ ಕಚೇರಿಯಲ್ಲಿ ಆರಂಭವಾಯಿತು. ಅನೇಕ ಸದಸ್ಯರು ಬಂದಿದ್ದರು. ರಾಜಮಂತ್ರಪ್ರವೀಣ ಶ್ರೀ ಕೆ. ಆರ್. ಶ್ರೀನಿವಾಸಯ್ಯಂಗಾರ್ಯರವರು ಅಗ್ರಾಸನವನ್ನು ವಹಿಸಿದ್ದರು.

ಈ ಸಮಿತಿಯನ್ನು ಬಹಿಷ್ಕರಿಸಬೇಕೆಂದು ಶಿವಪುರ ಕಾಂಗ್ರೆಸ್ಸಿನಲ್ಲಿ ನಿರ್ಣಯಿಸಿದ್ದ ಪ್ರಕಾರ ಸಂಸ್ಥಾನದಲ್ಲೆಲ್ಲಾ ಬಹಿಷ್ಕಾರ ಸಭೆಗಳೂ ಪ್ರದರ್ಶನಗಳೂ ಏರ್ಪಾಟಾಗಿದ್ದವು. ಬೆಂಗಳೂರು ನಗರದಲ್ಲಿ ಆ ದಿನ ಮತ್ತು ಮಾರನೇ ದಿನ ಯಾವ ಸಭೆಗಳೂ, ಪ್ರದರ್ಶನಗಳೂ, ಘೋಷಣೆಗಳೂ ಆಗದಂತೆ ಮ್ಯಾಜಿಸ್ಟ್ರೇಟರು ಆಜ್ಞೆ ಮಾಡಿದ್ದರು. ಆದರೂ ಈ ಆಜ್ಞೆಯನ್ನು ಉಲ್ಲಂಘಿಸಿ, ಒಟ್ಟು ೪೭ ಜನರು ದಸ್ತಗಿರಿಯಾದರು. ಮಾರನೇ ದಿನವೂ ಅನೇಕ ಜನರ ದಸ್ತಗಿರಿಯಾಯಿತೆಂದು ಗೊತ್ತಾಗಿದೆ.

ಸಭೆಯು ಅಠಾರಾ ಕಚೇರಿಯಲ್ಲಿ ಶಾಂತವಾಗಿ ನೆರವೇರಿತು. ಹೊರಗಡೆ ಪೋಲೀಸಿನವರ ಪಡೆಯು ಕಾದಿತ್ತು. ಸಭೆಗೆ ಶ್ರೀ ಮನ್ಮಹಾರಾಜರವರು ಒಂದು ಸಂದೇಶವನ್ನು ಕಳುಹಿಸಿದ್ದರು. ಸಮಿತಿಯ ಕಾರ್ಯಗಳು ಯಶಸ್ವಿಯಾಗಿ ನಡೆಯಬೇಕೆಂದೂ ದೇಶದ ಅಭ್ಯುದಯಕ್ಕೂ ಅನುಗುಣವಾಗಿ ಬರುತ್ತಿರುವ ಪದ್ಧತಿಗಳಿಗನುಗುಣವಾಗಿಯೂ ಈ ಸಮಿತಿಯವರು ಸಲಹೆಗಳನ್ನು ಕೊಡಬೇಕೆಂದು ಸೂಚಿಸಲ್ಪಟ್ಟಿತ್ತು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಎಲ್ಲಾ ಪ್ರಜೆಗಳೂ ಸಮಿತಿಯ ಕಾರ್ಯಕಲಾಪಗಳಲ್ಲಿ ಸಹಕರಿಸಬೇಕೆಂದು ಹೇಳಿದರು. ಜವಾಬ್ದಾರಿ ಸರ್ಕಾರದ ವಿಷಯವನ್ನು ಪರಿಶೀಲಿಸಲು ಸಮಿತಿಗೆ ಅವಕಾಶವಿರುವುದಾಗಿಯೂ ತಿಳಿಸಿದರು.

ಶ್ರೀ ಡಿ. ವಿ. ಗುಂಡಪ್ಪನವರು ಭಾಷಣ ಮಾಡಿ ಕಾಂಗ್ರೆಸ್ಸಿನವರು ಸಮಿತಿಯೊಡನೆ ಸಹಕರಿಸಿದರೆ ಒಳ್ಳೆಯದೆಂದು ಸೂಚಿಸಿದರು. ಕೆಲವು ಅಂಶಗಳನ್ನು ಪರಿಶೀಲಿಸಿದ ನಂತರ ಸಭೆಯು ಮುಂದೆ ತಿಂಗಳಿಗೆ ಮುಂದುವರಿಯಿತು.

ಕಾಂಗ್ರೆಸ್ ಸುಧಾರಣಾ ಸಮಿತಿ

ವಿದುರಾಶ್ವತ್ಥದ ಘಟನೆಗಳನ್ನು ಪರಿಶೀಲಿಸಿ ವರದಿ ಮಾಡಲು ಕಾಂಗ್ರೆಸ್ಸಿನ ಪರವಾಗಿ ಕೆಳಗೆ ಕಂಡ ಮಹನೀಯರುಗಳ ಸಮಿತಿಯನ್ನು ನೇಮಿಸಿರುವುದಾಗಿ ತಿಳಿದು ಬಂದಿದೆ. (೮ ನೇ ಪುಟದಲ್ಲಿರುವುದು ನೋಡಿ):—ಮಾಜಿ ಗಣಾಧ ಎಂ. ಲಕ್ಷ್ಮೀನಾರಾಯಣರಾಯರು (ಅಧ್ಯಕ್ಷರು) ಮತ್ತು ಮಾಜಿ ಗಣಾಧ ಡಾ. ಕೆ. ವೀರಣ್ಣಗೌಡರು, ನಿಜಲಿಂಗಪ್ಪನವರು, ಕೆ. ಟಿ. ಸತ್ಯನಾರಾಯಣಶೆಟ್ಟರು, ಮುಂತಾದವರು.

ಗುಂಡಿನೇಟಿನ ಪ್ರಕರಣ.

(೩ನೇ ಪುಟದಿಂದ ಮುಂದುವರಿದುದು.)

ಧಿಕಾರಿಗಳ ಮೇಲೆ ಮತ್ತಷ್ಟು ಕಲ್ಲುಗಳು ಬೀಳುವುದಕ್ಕೆ ಅವಕಾಶವುಂಟಾಗುತ್ತಿದ್ದಿತು, ಪೋಲೀಸಿನವರ ಕೈಕೆ ಹಸ್ತರದಕ್ಕಿಂತ ಹೆಚ್ಚು ಮುಂದಿಗೆ ಜಮಸಾಗಿದ್ದುದರಿಂದ ಆ ರೀತಿ ಪ್ರಯತ್ನ ಮಾಡುವುದಕ್ಕೆ ಸಾಕಾದಷ್ಟು ಸಿಬ್ಬಂದಿಯೂ ಅಲ್ಲಿರಲಿಲ್ಲ. ಆದುದರಿಂದ ಪರಿಸ್ಥಿತಿಯು ಕೊಂಚ ಸೌಮ್ಯಗೊಳ್ಳುವವರೆಗೂ ಸ್ವಲ್ಪ ಕಾಲ ಕಾದಿರುವುದು ಯುಕ್ತವೆಂದು ಭಾವಿಸಲ್ಪಟ್ಟಿತು.

ಆದರಾಸ್ಸು ಸುಮಾರು 4 ಗಂಟೆಯಿಂದ ಗುಂಪಿನ ಜನರು ಮತ್ತೆ ವಿಶೇಷ ಕ್ರೌರ್ಯದಿಂದ ವರ್ತಿಸತೊಡಗಿ ಕಲ್ಲುಗಳನ್ನೆಸೆಯಲಾರಂಭಿಸಿದರು. ಕೆಲವು ಮಂದಿ ಪೋಲೀಸಿನವರಿಗೆ ಮತ್ತೆ ಕಲ್ಲಿನ ಪೆಟ್ಟುಗಳು ಬಿದ್ದವು. ಸನ್ನಿವೇಶವು ಬಹಳ ಗಂಭೀರವಾಗಿಯೂ ಮತ್ತು ಅಪಾಯಕರವಾಗಿಯೂ ಪರಿಣಮಿಸಿದುದರಿಂದ ಜನರು ಕಲ್ಲುಗಳನ್ನು ಎಸೆಯುತ್ತಿದ್ದುದನ್ನು ನಿಲ್ಲಿಸಿ ಹೊರಟು ಹೋಗಬೇಕೆಂದೂ, ತಪ್ಪಿದರೆ ಮತ್ತೆ ಗುಂಡು ಹಾರಿಸುವ ಅಪ್ಪಣೆಯಾಗುವುದೆಂದೂ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರು ಎಚ್ಚರಿಕೆ ಹೇಳಿದರು. ಪೋಲೀಸ್ ಇನ್ಸ್‌ಪೆಕ್ಟರವರೂ ಅದೇ ಎಚ್ಚರಿಕೆಯನ್ನೇ ತಾವೂ ಜನರಿಗೆ ತಿಳಿಸಿದರು. ಆ ಎಚ್ಚರಿಕೆಯಿಂದ ಪ್ರಯೋಜನವಾಗಲಿಲ್ಲ. ಅಲ್ಲದೆ ಜನರು ಕಲ್ಲೆಸೆಯುವುದು ಮೊದಲಿಗಿಂತ ಹೆಚ್ಚಾದ ರಭಸದಿಂದ ಪ್ರಾರಂಭವಾಯಿತು. ಪೋಲೀಸಿನವರಿಗೂ ಮತ್ತು ಅಧಿಕಾರಿಗಳಿಗೂ ಪ್ರಾಣಾಪಾಯವುಂಟಾಗುವ ಸ್ಥಿತಿಯು ಒದಗಿತು. ಅದಕಾರಣ, ಸಾಯಂಕಾಲ ೫-೫೦ ಗಂಟೆಯ ಹೊತ್ತಿನಲ್ಲಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರು ಮತ್ತೆ ಗುಂಡುಹಾರಿಸುವಂತೆ ಅಪ್ಪಣೆಮಾಡಿದರು. ಗುಂಪಿನವರು ಹಿಮ್ಮೆಟ್ಟಲು ಪ್ರಾರಂಭಿಸಿದರು. ಒಡನೆಯೇ ಗುಂಡು ಹಾರಿಸುವುದನ್ನು ನಿಲ್ಲಿಸುವಂತೆ ಅಪ್ಪಣೆಮಾಡಲಾಯಿತು.

ಗುಂಡುಹಾರಿಸಬೇಕಾಗಿ ಬಂದುದು ಬಹಳ ವಿಷಾದಕರವಾದ ಸಂಗತಿ. ಆದರೆ ಕೇವಲ ಆತ್ಮರಕ್ಷಣೆಗಾಗಿ ಮಾತ್ರವೇ ಗುಂಡು ಹಾರಿಸಬೇಕಾಯಿತೆಂದೂ, ಆಗ್ಗೆ ಒದಗಿದ್ದ ಸನ್ನಿವೇಶದಲ್ಲಿ ಗುಂಪನ್ನು ಹಿಮ್ಮೆಟ್ಟಿಸಲು ತರುವುದಕ್ಕಾಗಿ ಎಷ್ಟು ಅವಶ್ಯಕವಾಗಿದ್ದಿತೋ ಅಷ್ಟುಮಟ್ಟಿಗೆ ಮಾತ್ರ ಗುಂಡುಗಳನ್ನು ಹಾರಿಸಲಾಯಿತೆಂದೂ ತಿಳಿದುಬಂದಿದೆ.

ಸಿ. ಎಸ್. ಆರ್. ರಾವ್,
ಮೈಸೂರು ಸರ್ಕಾರದ ಪಬ್ಲಿಸಿಟಿ ಆಫೀಸರು.

ಶಿವಪುರ

ಮೊನ್ನೆ ದಿನ ಶ್ರೀಮತಿ ಕಮಲಮ್ಮ (ಬೈಂದಪಟ್ಟಣ) ಶ್ರೀಮತಿ ಸಾವಿತ್ರಮ್ಮ (ಕಾಮನಹಳ್ಳಿ) ಎಂಬ ಮಹಿಳಾಮಣಿಯರು ಧ್ವಜಾರೋಹಣ ಮಾಡಿ ಪೋಲೀಸರ ವಶವಾದರು. ಶ್ರೀಮತಿಗಳಿಬ್ಬರಿಗೂ ಮಂಡ್ಯದ ಮ್ಯಾಜಿಸ್ಟ್ರೇಟರವರು ಎರಡು ವಾರ ಸಜಾ ವಿಧಿಸಿರುತ್ತಾರೆ.

ಗುಂಡಿನೇಟಿನ ಪ್ರಕರಣ

ವಿದುರಾಶ್ವತ್ಥದ ವಿಷಾದಕರ ಘಟನೆ.

ಸರ್ಕಾರಿ ಪ್ರಕಟನೆ.

೧೦ ಮಂದಿ ಸತ್ತರು, : ೮ ಮಂದಿಗೆ ಗಾಯ, : ೧೯ ಜನ ಪೋಲೀಸರಿಗೆ ಗಾಯ.

[ವಿದುರಾಶ್ವತ್ಥದ ಗುಂಡಿನೇಟಿನ ಪ್ರಕರಣದ ವಿಚಾರವಾಗಿ ಪತ್ರಿಕೆಗಳಲ್ಲಿ ವಿಧವಿಧವಾದ ಸುದ್ದಿಗಳು ಪ್ರಕಟವಾಗಿದ್ದುವು. ೩೨ ಜನ ಸತ್ತರೆಂದೂ ೪೮ ಜನರಿಗೆ ಗಾಯಗಳಾದವೆಂದೂ ಒಬ್ಬ ಗರ್ಭಿಣಿ ಸ್ತ್ರೀಯು ಸತ್ತಳೆಂದೂ ವದಂತಿ ಪ್ರಕಟವಾಗಿತ್ತು. ಆದರೆ ಇದು ಸರಿಯಲ್ಲವೆಂದು ಸೂಚಿಸಿ ಪ್ರಕಟನ ಶಾಖಾಧಿಕಾರಿಗಳು ಕೆಳಗೆ ಕಂಡ ವರದಿಯನ್ನು ಪ್ರಕಟನೆಗೆ ಕಳುಹಿಸಿದ್ದಾರೆ. ಅದರ ಮುಖ್ಯಭಾಗಗಳನ್ನೆಲ್ಲಾ ಇಲ್ಲಿ ಕೊಟ್ಟಿದ್ದೇವೆ.]

೧೯೩೮ನೆಯ ಇಸವಿ ಏಪ್ರಿಲ್ ೨೫ನೆಯ ತಾರೀಖಿನ ದಿನ ಗೌರಿಬಿದನೂರು ತಾಲ್ಲೂಕು ವಿದುರಾಶ್ವತ್ಥದಲ್ಲಿ ದೊಂಬಿಯು ನಡೆದು ಗುಂಡು ಹಾರಿಸಬೇಕಾಗಿ ಬಂದ ಸನ್ನಿವೇಶವನ್ನು ಕುರಿತ ತಪಸೀಲು ವಿವರವನ್ನು ಮಹಾಜನರ ತಿಳಿವಳಿಕೆಗಾಗಿ ಈ ಕೆಳಗೆ ಪ್ರಕಟಿಸಲಾಗಿದೆ:—

ಒಟ್ಟು ೧೦ ಮಂದಿ ಮೃತಪಟ್ಟರೆಂದೂ ಮತ್ತು ೮ ಮಂದಿಗಳಿಗೆ ಜಖಂ ಆಗಿದೆಯೆಂದೂ ತಿಳಿದುಬಂದಿದೆ. ಡಿಸ್ಟ್ರಿಕ್ಟ್ ಪೋಲೀಸು ಸೂಪರಿಂಟೆಂಡೆಂಟರವರೂ ಸೇರಿ ದೊಂಬಿಯ ಕಾಲದಲ್ಲಿ ಒಟ್ಟು ೧೯ ಮಂದಿ ಪೋಲೀಸು ಅಧಿಕಾರಿಗಳಿಗೂ ಮತ್ತು ಪೋಲೀಸಿನವರಿಗೂ ಜಖಂ ಆಗಿದೆ. ಗರ್ಭಿಣಿಯಾದ ಅಥವಾ ಇತರ ಯಾವ ಹೆಂಗಸಿಗೂ ಮರಣವಾಗಲಿ ಜಖಂ ಆಗಲಿ ಸಂಭವಿಸಿಲ್ಲ. ಗುಂಡು ಹಾರಿಸಿದ ಕಾಲದಲ್ಲಿ ಮೃತಪಟ್ಟವರ ಕುಟುಂಬಗಳಿಗೆ ಸರ್ಕಾರದವರು ತಮ್ಮ ಗಾಢವಾದ ಸಹಾನುಭೂತಿಯನ್ನು ಸೂಚಿಸುತ್ತಾರೆ.

ವಿದುರಾಶ್ವತ್ಥದ ಜಾತ್ರೆಯು ಏಪ್ರಿಲ್ ೧೪ನೆಯ ತಾರೀಖಿನ ದಿನ ಪ್ರಾರಂಭವಾಗಿ ಏಪ್ರಿಲ್ ೨೯ನೆಯ ತಾರೀಖಿನ ದಿನ ಮುಗಿಯಿತು. ದೊಂಬಿಯು ಏಪ್ರಿಲ್ ೨೫ನೆಯ ತಾರೀಖಿನ ದಿನ ನಡೆಯಿತು. ಜಾತ್ರೆಗೆ ಬಂದಿದ್ದ ಜನರು ಏಪ್ರಿಲ್ ೧೮ನೆಯ ತಾರೀಖಿನ ತರುವಾಯ ಹೊರಟು ಹೋಗಲುಪಕ್ರಮಿಸಿದರು. ಏಪ್ರಿಲ್ ೨೫ನೆಯ ತಾರೀಖಿನ ಹೊತ್ತಿಗೆ ಸುಮಾರು ೧೫ ಅಂಗಡಿಗಳವರು ಮಾತ್ರ ಅವರು ವ್ಯಾಪಾರಕ್ಕಾಗಿ ಹಾಕಿಕೊಂಡಿದ್ದ ತಾತ್ಕಾಲಿಕ ಅಂಗಡಿಗಳಲ್ಲಿ ಅಲ್ಲಿಯೇ ಉಳಿದಿದ್ದರು. ಸಾಮಾನ್ಯ ದಿನಗಳಲ್ಲಿ ವಿದುರಾಶ್ವತ್ಥಕ್ಕೆ ಬಂದು ಹೋಗುವವರ ಸಂಖ್ಯೆಯು ೫೦ರಿಂದ ೬೦ರ ವರೆಗೂ ಇರುತ್ತದೆ. ವಾಸ್ತವವಾಗಿ ಯಾತ್ರೆಯ ಉದ್ದೇಶದಿಂದ ಬಂದಿದ್ದವರು ದೊಂಬಿಯಲ್ಲಿ ಭಾಗವಹಿಸಲಿಲ್ಲ. ಆದಕಾರಣ, ಜಾತ್ರೆಗೆ ಬಂದಿದ್ದ ನಿರಪರಾಧಿಗಳಾದ ಯಾತ್ರಿಕರ ಮೇಲೆ ಪೋಲೀಸಿನವರು ವಿವೇಚನೆಯಿಲ್ಲದೆ ಗುಂಡು ಹಾರಿಸಿದರೆಂಬುದು ನಿಜವಲ್ಲ.

ವಿದುರಾಶ್ವತ್ಥದಲ್ಲಿ ಸಾರ್ವಜನಿಕ ಸಭೆಯು ನಡೆಯಕೂಡದೆಂದು ನಿಷೇಧಿಸಿ ಗೌರಿಬಿದನೂರು ತಾಲ್ಲೂಕಿನ ಅಮಲ್ದಾರ್ ಮ್ಯಾಜಿಸ್ಟ್ರೇಟರು ಹುಕುಂ ಮಾಡಿದ್ದ ಹುಕುಮನ್ನು ಅಲಕ್ಷ್ಯಮಾಡಿ ಗೌರಿಬಿದನೂರು ತಾಲ್ಲೂಕಿನ ಕೆಲವು ಕಾಂಗ್ರೆಸ್ ಸದಸ್ಯರು ಅದಕ್ಕೆ ವಿರೋಧವಾಗಿ ವರ್ತಿಸುವ ನಿರ್ಧಾರಕ್ಕೆ ಬಂದಿದ್ದುದಾಗಿ ಏಪ್ರಿಲ್ ೨೫ನೆಯ ತಾರೀಖು ಬೆಳಿಗ್ಗೆ ಸ್ಥಳದ ಅಧಿಕಾರಿಗಳಿಗೆ ವರ್ತಮಾನವು ಬಂದಿತು. ೩೩ ಮಂದಿ ರಿಜರ್ವ್ ಪೋಲೀಸಿನವರನ್ನು ವಿದುರಾಶ್ವತ್ಥಕ್ಕೆ ಕಳುಹಿಸಲಾಯಿತು. ಚಿಕ್ಕಬಳ್ಳಾಪುರದ "ಎಕ್ಸ್ ಅಫಿಷಿಯೋ" ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರು, ಡಿಸ್ಟ್ರಿಕ್ಟ್ ಪೋಲೀಸು ಸೂಪರಿಂಟೆಂಡೆಂಟರು ಮತ್ತು ಗೌರಿಬಿದನೂರು ತಾಲ್ಲೂಕು ಅಮಲ್ದಾರರು—ಇವರುಗಳೊಡನೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರೂ ಅಲ್ಲಿಗೆ ಹೋದರು. ಬೆಳಿಗ್ಗೆ ಸುಮಾರು ೧೧-೩೦ ಘಂಟೆಯ ಹೊತ್ತಿಗೆ ಕಾಂಗ್ರೆಸ್ ಗುಂಪು ವಿದುರಾಶ್ವತ್ಥಕ್ಕೆ ಸೇರಿತು...." "ಎಕ್ಸ್ ಅಫಿಷಿಯೋ" ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರು ಅಲ್ಲಿಗೆ ಹೋಗಿ ಕಾನೂನಿಗನುಸಾರವಾಗಿ ಕ್ರಮ ಜರುಗಿಸಬೇಕೆಂದು ಅವರಿಗೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಅಪ್ಪಣೆ ಮಾಡಿದರು.

ನಿಷೇಧದ ಹುಕುಮನ್ನು ಅಲಕ್ಷ್ಯಮಾಡಿ ಭಾಷಣಮಾಡಲು ಪ್ರಯತ್ನಿಸಿದ ನಾಲ್ಕು ಮಂದಿಗಳು ದಸ್ತಗಿರಿ ಮಾಡಲ್ಪಟ್ಟರೆಂದೂ, ಗುಂಪು ಚದರಬೇಕೆಂದು ತಿಳಿಸಲ್ಪಟ್ಟಿತೆಂದೂ ವರದಿಯಾಗಿದೆ. ಜನರು ಹಾಗೆ ಮಾಡುವ ಮನೋಧರ್ಮವನ್ನೇ ತೋರಿಸಲಿಲ್ಲ. ಹಾಗೆ ಮಾಡುವುದಕ್ಕೆ ಬದಲಾಗಿ ಅವರು ಹುಕುಮನ್ನು ಅಲಕ್ಷ್ಯಮಾಡಿ ಸಕಾರಣ ಕಾನೂನು ಸೇರಿದ ಅಧಿಕಾರ ಚಲಾಯಿಸುವವರನ್ನು ತುಚ್ಛೀಕಾರ ಮಾಡಿ ವರ್ತಿಸುವ ಮನೋವೃತ್ತಿಯನ್ನೇ ಪ್ರದರ್ಶಿಸಿದರು. ಅವರುಗಳು ಅಧಿಕಾರಿಗಳಲ್ಲಿ ತಿರಸ್ಕಾರಸೂಚಕವಾದ ಧ್ವನಿಗಳನ್ನು ಮಾಡುತ್ತ ಅಣಕಿಸಲು ಪ್ರಾರಂಭಿಸಿದರು; ಮತ್ತು ಸರ್ಕಾರವನ್ನು ತುಚ್ಛೀಕರಿಸಿ ಮಾತನಾಡತೊಡಗಿದರು. ಹಾಗೆ ಮಾಡಕೂಡದೆಂದು ಎಷ್ಟು ಬಗೆಯಾಗಿ ಬುದ್ಧಿಹೇಳಿ ಮನಸ್ಸನ್ನು ತಿರುಗಿಸುವ ಪ್ರಯತ್ನ ಮಾಡಿದರೂ ಫಲಕಾರಿಯಾಗಲಿಲ್ಲ. ಗುಂಪಿನವರು ಹೋರಾಡಲೆಂದೇ ನಿರ್ಧರಿಸಿಕೊಂಡು ಬಂದಿದ್ದರೆಂಬುದೂ, ನ್ಯಾಯವಾದ ಸಲಹೆಯನ್ನು ಕೇಳುವಂತಿರಲಿಲ್ಲವೆಂಬುದೂ ಅವರಿಂದ ಸ್ಪಷ್ಟವಾಯಿತು. ಅಧಿಕಾರಿಗಳು ಸೂಚಿಸುವ ಉಪಾಯವನ್ನೆಲ್ಲ ಅಲಕ್ಷ್ಯಮಾಡಿ ಪ್ರತಿಭಟಿಸಬೇಕೆಂದು ಅವರು ನಿಶ್ಚಯ ಮಾಡಿಕೊಂಡಿದ್ದರು.

ಗುಂಪಿನ ಜನರು ಹೋಹಾ ಎಂದು ಕೂಗಿದರು; ಮತ್ತು ಪೋಲೀಸಿನವರ ಮತ್ತು ಇತರ ಅಧಿಕಾರಿಗಳ ಸುತ್ತಲೂ ನೆರೆಯಿಸಿ ಅವರನ್ನು ಮುತ್ತಿದರು. "ಎಕ್ಸ್ ಅಫಿಷಿಯೋ" ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರ ಮತ್ತು ಅವರ ಜೊತೆಯಲ್ಲಿದ್ದವರ ಸುತ್ತಲೂ ಜನರು ಮುತ್ತಿ ನಿಂತರು; ಆಗ ಗುಂಪಿನ ಜನರ ಉದ್ರೇಕವು ಕ್ಷಣ ಕ್ಷಣಕ್ಕೂ ಹೆಚ್ಚಿತು. ಮ್ಯಾಜಿಸ್ಟ್ರೇಟರು ಗುಂಪು ಚದರಬೇಕೆಂದು ತಿರುಗಿ ತಿಳಿಸಿದರು; ಮತ್ತು ಗುಂಪು ಚದರದೆ ಹೋದರೆ ಬಲಾತ್ಕಾರ ಉಪಯೋಗಿಸಬೇಕಾಗುವುದೆಂದು ಎಚ್ಚರಿಕೆ ಕೊಟ್ಟರು. ಗುಂಪಿನವರು ಎಚ್ಚರಿಕೆಯನ್ನು ಲಕ್ಷ್ಯ ಮಾಡದೆ ಅವರು ಚದರಿ ಹೋಗಲು ಮ್ಯಾಜಿಸ್ಟ್ರೇಟರು ಮತ್ತೆ ಮತ್ತೆ ಆಜ್ಞಾಪಿಸಿದರೂ ಚದರದೆ, ಉದ್ರೇಕದ ಮನೋಭಾವವನ್ನೇ ಪ್ರದರ್ಶಿಸಿದರು. ಆದಕಾರಣ, ಮ್ಯಾಜಿಸ್ಟ್ರೇಟರು ತಮಗೂ ತಮ್ಮ ಜೊತೆಯವರಿಗೂ ಅಪಾಯವಾಗದಂತೆ ಪಾರಾಗುವುದಕ್ಕಾಗಿ ಜನರಿಗೆ ಲಾಠಿ ಪ್ರಹಾರವಾಗಬೇಕೆಂದು ಅಪ್ಪಣೆ ಮಾಡಿದರು. ಮುಂದಿನ ಜನರನ್ನು ಪೋಲೀಸಿನವರು ಹಿಂದಕ್ಕೆ ತಳ್ಳಿದರು.

ಗುಂಪಿನ ಜನರು ಪೋಲೀಸಿನವರ ಮೇಲೂ ಅಧಿಕಾರಿಗಳ (ಆಫೀಸರುಗಳ) ಮೇಲೂ ಕಲ್ಲುಗಳನ್ನೂ, ಸೌದೆಗಳನ್ನೂ, ಮಣ್ಣುಹೆಂಟೆಗಳನ್ನೂ ಎಳನೀರು ಬುರುಡೆಗಳ ಹೋಳುಗಳನ್ನೂ ಎಸೆಯತೊಡಗಿದರು. "ಎಕ್ಸ್ ಅಫಿಷಿಯೋ" ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟರಿಗೆ ಬಲ ಹುಬ್ಬಿನ ಮೇಲಕ್ಕೆ ಒಂದು ಕಲ್ಲಿನ ಪೆಟ್ಟು ತಗಲಿ ಅವರು ನೆಲದ ಮೇಲೆ ಬೀಳುವುದರಲ್ಲಿದ್ದರು. ಡಿಸ್ಟ್ರಿಕ್ಟ್ ಪೋಲೀಸು ಸೂಪರಿಂಟೆಂಡೆಂಟರಿಗೂ, ಪೋಲೀಸು ಸಿಬ್ಬಂದಿಯಲ್ಲಿ ಕೆಲವರಿಗೂ ಕಲ್ಲುಗಳ ಪೆಟ್ಟು ಬಿದ್ದು ಜಖಂ ಆಯಿತು. ಜನರು ಅಧಿಕಾರಿಗಳನ್ನೂ, ಪೋಲೀಸಿನವರನ್ನೂ ಸುತ್ತಿಕೊಂಡು ಹೋಗುತ್ತಾ, ಅವರ ಜೀವಕ್ಕೆ ಅಪಾಯ ಉಂಟಾಗುವಂತೆ ಮಾಡುವುದಾಗಿ ಹೆದರಿಸುತ್ತ ಹಿಂಬಾಲಿಸಿದರು. "ಎಕ್ಸ್ ಅಫಿಷಿಯೋ" ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರು, ಜನರಿಗೆ ಕ್ರಮವಾಗಿ ಎಚ್ಚರಿಕೆ ಕೊಟ್ಟ ಮೇಲೆ, ಕೇವಲ ಆತ್ಮರಕ್ಷಣೆಗಾಗಿ ಗುಂಡು ಹಾರಿಸುವಂತೆ ಅಪ್ಪಣೆ ಮಾಡಿದರು. ಪೋಲೀಸಿನವರು ಗುಂಡು ಹಾರಿಸಲು ಪ್ರಾರಂಭಿಸಿ, ಗುಂಡು ಹೊಡೆಯುವಂತೆ ತೋರಿಸುತ್ತ ದೇವಸ್ಥಾನದ ಮುಂದಿನ ಬಯಲಿನಲ್ಲಿ ಬೇವಿನ ಮರದ ಕಟ್ಟೆಯಿರುವ ಬಳಿಗೆ ಹೋದರು. ಗುಂಡುಗಳು ಹಾರಿದ ಶಬ್ದವು ಕೇಳಿಸಿದೊಡನೆಯೇ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಆ ಸ್ಥಳಕ್ಕೆ ಬಂದರು. ಅಷ್ಟು ಹೊತ್ತಿಗೆ ಪೋಲೀಸಿನವರು ಕಟ್ಟೆಯಿರುವ ಬಳಿಗೆ ಬಂದಿದ್ದರು. ಕೆಲವು ನಿಮಿಷಗಳವರೆಗೆ ಎಲ್ಲವೂ ಸಮಾಧಾನ ಸ್ಥಿತಿಯಲ್ಲಿದ್ದಿತು. ಪುನಃ ಜನರ ಗುಂಪಿನವರು ಬಹಳ ಗೊಂದಲದ ಸ್ಥಿತಿಯಲ್ಲಿ ಎಲ್ಲ ಕಡೆಗಳಿಂದಲೂ ಪೋಲೀಸಿನವರನ್ನೂ ಮತ್ತು ಅಧಿಕಾರಿಗಳನ್ನೂ ಕಲ್ಲುಗಳಿಂದ ಹೊಡೆಯಲು ಪ್ರಾರಂಭಿಸಿದರು.

ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರಿಗೆ ಎರಡು ಕಲ್ಲುಗಳಿಂದ ಏಟು ಬೀಳುತ್ತಿದ್ದವು. ಸ್ವಲ್ಪದರಲ್ಲಿ ತಪ್ಪಿತು. ಕೆಲವು ಮಂದಿ ಪೋಲೀಸಿನವರಿಗೆ ಕಲ್ಲುಗಳು ತಗಲಿ ಜಖಂ ಆಯಿತು. ದೊಂಬಿಯವರ ಕೃತ್ಯಗಳನ್ನು ಅಡಗಿಸದಿದ್ದಲ್ಲಿ ಪೋಲೀಸು ಸಿಬ್ಬಂದಿಯವರಿಗೂ ಅಧಿಕಾರಿಗಳಿಗೂ ಕಠಿಣ ಏಟುಗಳು ಬಿದ್ದು ಮರಣವುಂಟಾಗುವ ಅಪಾಯವಿದ್ದಿತು. ಜನರ ಗುಂಪು, ಅಧಿಕಾರಿಗಳೂ (ಆಫೀಸರುಗಳು) ಪೋಲೀಸಿನವರು ನಿಂತಿದ್ದ ಸ್ಥಳದ ಕಡೆಗೆ ಮುಂದುವರಿಯಲು ಪ್ರಾರಂಭಿಸಿತು. ತಮಗೆಲ್ಲ ಅಪಾಯ ಉಂಟಾಗುವ ಸ್ಥಿತಿಯೊದಗಿರುವುದನ್ನು ನೋಡಿ, ಸರ್ಕಾರಿಯಾದ ಕ್ರಮವನ್ನು ಕೈಕೊಳ್ಳುವುದರಲ್ಲಿ ತಡವೇನಾದರೂ ತಡಮಾಡಿದಲ್ಲಿ ಅದರಿಂದ ಘೋರವಾದ ಪರಿಣಾಮಗಳುಂಟಾಗುವುದೆಂಬುದನ್ನು ಮನಗಂಡವರಾಗಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಜನಗಳು ಒಂದಕ್ಕೆ ಹೊರಟು ಹೋಗಬೇಕೆಂದೂ ಮತ್ತು ಕಲ್ಲುಗಳನ್ನು ಎಸೆಯುವುದನ್ನು ನಿಲ್ಲಿಸಬೇಕೆಂದೂ ತಿಳಿಸಿ, ಹಾಗೆ ಮಾಡದೆ ಹೋದ ಪಕ್ಷದಲ್ಲಿ ಗುಂಡುಹಾರಿಸುವಂತೆ ಅಪ್ಪಣೆ ಮಾಡಬೇಕಾಗುವುದೆಂದೂ ಜನರ ಗುಂಪಿಗೆ ಎಚ್ಚರಿಕೆ ಕೊಟ್ಟರು. ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರ ಅಪ್ಪಣೆಯನ್ನು ನಡಸಿ ಪೋಲೀಸ್ ಇನ್ಸ್‌ಪೆಕ್ಟರೂ ಸಹ ಜನರಿಗೆ ಅದೇ ರೀತಿ ಎಚ್ಚರಿಕೆ ಕೊಟ್ಟರು. ಜನರು ಹಿಂದಕ್ಕೆ ಹೋಗುವ ಮನಸ್ಸನ್ನು ಅವರೇನೂ ತೋರಿಸಲಿಲ್ಲ. ಅಲ್ಲದೆ ಕಲ್ಲೆಸೆಯುವುದನ್ನು ನಿಲ್ಲಿಸಲಿಲ್ಲ; ಮತ್ತು ಕಲ್ಲೆಸೆಯುವುದನ್ನು ಹೆಚ್ಚುಮಾಡಿ ಪೋಲೀಸಿನವರಲ್ಲಿ ಒಬ್ಬೊಬ್ಬರಿಗಾಗಿ ಪೆಟ್ಟು ತಗಲಿ ಅವರ ಕ್ರಮ ನಡೆಯದಂತೆ ಮಾಡುತ್ತ ಇನ್ನೂ ಮುಂದು ಮುಂದಕ್ಕೆ ಬರಲು ಆರಂಭಿಸಿದರು. ಪೋಲೀಸಿನವರಿಗೂ ಮತ್ತು ಅಧಿಕಾರಿಗಳಿಗೂ ಪ್ರಾಣಾಪಾಯದ ಸ್ಥಿತಿಯು ಒದಗಿತು. ಆದಕಾರಣ, ಪುನಃ ಗುಂಡು ಹಾರಿಸುವಂತೆ ಪೋಲೀಸಿನವರಿಗೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರು ಅಪ್ಪಣೆ ಮಾಡಿದರು. ಸುಮಾರು ಒಂದೆರಡು ನಿಮಿಷಗಳ ಕಾಲ ಗುಂಡು ಹಾರಿಸಿದನಂತರ ಜನರ ಗುಂಪು ಹಿಂತೆಗೆಯಲು ಪ್ರಾರಂಭಿಸಿತು. ಆಗ ಗುಂಡು ಹಾರಿಸುವುದನ್ನು ನಿಲ್ಲಿಸುವಂತೆ ಹುಕುಂ ಮಾಡಲಾಯಿತು. ಗುಂಪಿನಲ್ಲಿ ಸುಮಾರು ಮೂರು ಸಾವಿರ ಜನರಿದ್ದರು. ಆ ಜನರು ಸ್ವಲ್ಪ ದೂರದಲ್ಲಿ ನಿಂತು, ಅಧಿಕಾರಿಗಳನ್ನು ಅಲಕ್ಷ್ಯ ಮಾಡುವ ಮತ್ತು ಧಿಕ್ಕರಿಸುವ ಮಾತುಗಳನ್ನಾಡುತ್ತ ಪ್ರತೀಕಾರದ ಮನೋಭಾವವನ್ನು ತೋರಿಸುತ್ತಿದ್ದರು. ಎಷ್ಟು ಜನ ಸತ್ತರು ಮತ್ತು ಎಷ್ಟು ಜನರು ಜಖಂ ಹೊಂದಿದರು ಎಂಬುದನ್ನು ಕಂಡುಹಿಡಿಯುವುದಕ್ಕಾಗಿ ಅಲ್ಲಿ ನಿಂತಿದ್ದ ಅಧಿಕಾರಿಗಳೂ ಮತ್ತು ಪೋಲೀಸಿನವರೂ ತಾವಿದ್ದ ಸ್ಥಳವನ್ನು ಬಿಟ್ಟು ಹೋಗುವುದಕ್ಕೆ ಸಾಧ್ಯವಾಗಲಿಲ್ಲ. ಹಾಗೆ ಹೋಗುವುದಕ್ಕೇನಾದರೂ ಪ್ರಯತ್ನ ಮಾಡಿದ್ದ ಪಕ್ಷದಲ್ಲಿ ಜನರ ಗುಂಪಿನವರ

(ಆರನೇ ಪುಟದ ನಾಲ್ಕನೇ ಕಾಲಂ ನೋಡಿ)

ಚಿತ್ರಶಾಲಾ ಸ್ಪರ್ಧೆ ನಂ. ೪೭

ಬಹುಮಾನ ಪಡೆದವರು

ಸರಿಯಾದ ಉತ್ತರಗಳನ್ನು ಕಳುಹಿಸಿದ್ದ ನಾಲ್ಕು ಜನರಿಗೆ ಮೊದಲನೇ ಬಹುಮಾನದಲ್ಲಿ ತಲಾ 37—8—0 ಯಂತೆ ಕೊಟ್ಟಿರುತ್ತೆ. ಮ|| ರಾ|| ನರಸಿಂಹಮೂರ್ತಿ ಕೇರ್ ಆಫ್ ಕೆ. ಎಸ್. ಮೂರ್ತಿ ಲಕ್ಷ್ಮೀಪುರಂ ಮೈಸೂರು. ಬಿ. ವೆಂಕಟರಾಮಯ್ಯ ಶ್ರೀರಾಮಪೇಟೆ ಮೈಸೂರು. ಜಯರಾಮಾಚಾರ್ಯ ಮೊಸೂರು. ಶ್ರೀ ಸರಸ್ವತಿಬಾಯಿ ಕೊಡಿಯಾಲ ಬೈಲು ಮಂಗಳೂರು.

ಒಂದು ತಪ್ಪಿನ ಉತ್ತರಗಳನ್ನು ಕಳುಹಿಸಿದ್ದ ೯ ಜನರಿಗೆ ಎರಡನೆ ಬಹುಮಾನದಲ್ಲಿ ತಲಾ 3—8—0 ಯಂತೆ ಕೊಟ್ಟಿರುತ್ತೆ. ಎಸ್. ಟಿ ಎಸ್. ಶಾಸ್ತ್ರಿ ಮೈಸೂರು. ಎ. ಸದಾಶಿವ ಎಸ್. ರಾಘು ಶ್ರೀ ಮಾಯಾದೇವಿ ಎಸ್. ಸುಬ್ರಮಣ್ಣ ಬೆಂಗಳೂರು.

ಎರಡು ತಪ್ಪಿನ ಉತ್ತರಗಳನ್ನು ಕಳುಹಿಸಿದ್ದ 93 ಜನರಿಗೆ ತಲಾ 2—0—0 ರೂ. ನಂತೆ ಕೊಟ್ಟಿರುತ್ತೆ. ಶ್ರೀ|| ಪದ್ಮಾವತಿ ಶ್ರೀ|| ಎಸ್. ಟಿ. ತಿರುಮಲಮ್ಮ ಎಸ್. ಟಿ. ಸಿ. ಐಯ್ಯಂಗಾರ್ ಎಂ. ಕೆ. ಸರೋಜಬಾಯಿ ಕಮಲ. ಶ್ರೀ|| ಲಕ್ಷ್ಮೀದೇವಮ್ಮ ಶ್ರೀ|| ಸೀತಮ್ಮ ಎಸ್. ಡಿ. ದೇವಯ್ಯ (ಶ್ರೀರಂಗಪಟ್ಟಣ) ಮೈಸೂರು. ಎಂ. ಗಂಗಯ್ಯ ಎಸ್. ಮುತ್ತಮ್ಮ ಎಸ್. ವಿ. ಸುಬ್ಬಯ್ಯ ವಿಜಯಕುಮಾರಿ ಸಿ. ವಿ. ನಾಥ್ ಮಿಸ್, ವಸಂತಪ್ರಭಾ ಎ ಎಸ್ ಗೋವಿಂದಯ್ಯ ಶೆಟ್ಟಿ ಎಸ್. ಕೆ. ಎಸ್. ರಾವ್ ಎಂ. ಸೀತಾಮಾಧವಾಚಾರ್ ವಿ. ಶ್ರೀನಿವಾಸರಾವ್ ಎಸ್. ಪ್ರಭಾವತೀಬಾಯಿ ಸಿಂಧ್ಯ ಅನ್ನಪೂರ್ಣಾದೇವಿ ಇಂದಿರಾದೇವಿ ವಿ. ಎಸ್. ರಾಮು ಬೆಂಗಳೂರು. ಕೆ. ಲಕ್ಷ್ಮಮ್ಮ ಗೋರೀಬಿದನೂರು. ಎಸ್. ಎಸ್. ಮೂರ್ತಿ ಮುಂಡ್ಕೂ. ಕೆ. ಎಸ್. ಚಂದ್ರಶೇಖರಯ್ಯ ಎಸ್. ರಾಮರಾವ್ ತೀರ್ಥಹಳ್ಳಿ. ಎಂ. ಕೆ. ನಾಗರಾಜು ಮಂಡಗೆರೆ. ಎಂ. ಲಿಂಗರೆಡ್ಡಿ ಚಿತ್ರದುರ್ಗ. ಬಿ. ವಿ. ಪಾರ್ಶ್ವನಾಥ (ಜೆಳ್ಳೂರು.) ತಿಪಟೂರು.

ಮೂರು ತಪ್ಪಿನ ಉತ್ತರಗಳನ್ನು ಕಳುಹಿಸಿದ್ದ 76 ಜನರಿಗೆ ತಲಾ 1—0—0 ರೂ. ನಂತೆ ಕೊಟ್ಟಿರುತ್ತೆ. ಎಂ. ಇಂದಿರಮ್ಮ ಎಸ್. ಸುಂದರಮ್ಮ ವಿ. ಆರ್. ನಾಗದೇವಯ್ಯ ಎಂ. ಎಚ್. ಪಾರ್ವತಮ್ಮ ಪಿ. ಎಚ್. ಕೃಷ್ಣ ಜಿ. ವಿ. ಕೃಷ್ಣಮೂರ್ತಿ ಶ್ರೀ|| ಎಸ್. ಟಿ. ನಾರಾಯಣ ಕೆ. ವಿ. ಕೆ. ಮೈಥಿಲಿ ಶ್ರೀ ಶಾರದಮ್ಮ ಪೇಟೆ ನಾಗಮಣಿ ಜಿ. ಪಿ. ಪದ್ಮ ಎ. ಶ್ರೀನಿವಾಸರಾವ್ ಜಿ. ವಿ. ಕೇಶವ ಜಿ. ವಿ. ನಾರಾಯಣ ಶೈ. ಎಸ್. ಕೃಷ್ಣಮೂರ್ತಿ ೬ ಗೋಪಾಲಾಚಾರ್ ವಿ. ಎಸ್. ಸರಸ್ವತಿ ಡಿ. ಸುಬ್ಬರಾವ್ ಎಂ. ಸಿ. ಸುಂದರರಾಜ್ ಮೈಸೂರು. ಎಸ್. ರಾಮರಾವ್ ಎಸ್. ವೆಂಕಟಸುಬ್ಬಯ್ಯ ಎಸ್. ನಾರಾಯಣ ಎಸ್. ಲಕ್ಷ್ಮೀನರಸಮ್ಮ ಸಿ. ಎಸ್. ವೆಂಕಟಸುಬ್ಬಯ್ಯ ಸತಿ ವೆಂಕಟಸುಬ್ಬಯ್ಯ ಎಸ್. ವಿ. ಎಸ್. ರಾವ್ ವಿ. ಶಾರದಾಂಬ ಮಿಸ್. ಚಂಪಾ ವಿ. ರಾಜಮ್ಮ ಸತಿ ಚಿಕ್ಕಣ್ಣ ಎಸ್. ಚಿಕ್ಕಣ್ಣ ಸೀತಾಲಕ್ಷ್ಮಮ್ಮ ಎಸ್. ಜಿ. ಕೃಷ್ಣಮೂರ್ತಿ ಶ್ರೀ ಜಯಲಕ್ಷ್ಮಿ ಟಿ. ಶೈ. ಆರ್. ಸತ್ಯನಾರಾಯಣ ರಾವ್ ಸ್. ಪದ್ಮ ಬಿ. ಎಸ್. ಕೃಷ್ಣಮೂರ್ತಿ ಟಿ. ಎಸ್. ಕೃಷ್ಣಮೂರ್ತಿ ಸಿದ್ಧಾನಂದ ಸ್ವಾಮಿ ಸಿ. ಮಾಧವರಾವ್ ಎಸ್. ವೆಂಕಟಕೃಷ್ಣಮಾಚಾರ್ ಬಿ. ಸಿ. ನಂದೀಶ್ವರ ಜಿ. ಹೆಚ್. ಎಸ್. ರೇವಣ್ಣ ಶಿವಯ್ಯ ಜಿ. ಹೆಚ್. ಎಸ್. ರುದ್ರಾಂಬ ಶ್ರೀ ಲಲಿತಮ್ಮ ಈರಪ್ಪ ಎಸ್. ಚಂಪಕವಲ್ಲಿಯಮ್ಮಾಳ್ ಎಂ. ಶಂಕರಪ್ಪ ವಿ ರಾಜಶೇಖರ ಗುಪ್ತ ಎ. ತಿಮ್ಮಣ್ಣ ಎ. ಹನುಮಂತರಾವ್ ಶ್ರೀ ಹನುಮಾನ್ ರಾಘು ಬೆಂಗಳೂರು. ಜೆ. ವಿ. ಕಮಲಮ್ಮ ಕೆ. ನರಸಿಂಹಯ್ಯ (ಪೂರಡಿಗೆರೆ.) ತುಮಕೂರು. ಶಿ. ತಿಮ್ಮ ಬಿ. ಎಸ್. ಶಿವಪ್ಪ ಸಾಮುಕ್ತ ದಾವಣಗೆರೆ. ಹೆಚ್. ಸುಬ್ಬರಾವ್ ತಿಪಟೂರು. ಸಿ. ಭೀಮಪ್ಪ ಚಿತ್ರದುರ್ಗ. ಶ್ರೀ|| ಇಂದಿರಾಬಾಯಿ ಲಿಖ್ಯಾ ಹೆಚ್. ಜಿ. ಸುಬ್ಬರಾವ್ ಕೊಪ್ಪ. ಕೆ ವೆಂಕಟರಾಮಯ್ಯ ಎಸ್. ಗುಂಡಪ್ಪ ಟಿ. ನರಸೀಪುರ. ಎಸ್. ಸುಬ್ಬರಾಯ ಭಟ್ಟ ಹುಣಸೂರು. ಕೆ. ಹೆಚ್. ಗೋವಿಂದ ಶೆಟ್ಟಿ ಕಡೂರು. ವೈ. ಎ. ವೆಂಕಟಸುಬ್ಬಯ್ಯ ಬೀರೂರು. ಶ್ರೀ|| ಎಚ್. ಇಂದಿರಾಬಾಯಿ ತಿರುಪುರ. ಪಿ. ಶಾರದಾಬಾಯಿ ಬಂಟವಾಳ. ಸಿ. ವಿ. ಶೀಲವಂತ ಧಾರವಾಡ. ಪಿ. ರಾಮಯ್ಯ ದಕ್ಷಿಣ ಹೆಚ್. ಕೆ. ಅಪ್ಪಣ್ಣಯ್ಯ ಎಲಿಯೂರು. ಎಸ್. ಸಿ. ಪಿ. ರುದ್ರಾರಾಧ್ಯ ಸೊರಬ. ಎಸ್. ಎಸ್. ರಾವ್ ಹೊಸನಗರ ಎ. ನಾರಾಯಣ ಪೈ ಚಿಕ್ಕಮಗಳೂರು. ಸಿ. ಹರಿದಾಸ ಭಟ್ಟ ಮದ್ರಾಸು. ಯು. ವಾಸುದೇವ ಪೈ ಉಪ್ಪಿನಂಗಡಿ.

ಮೇಲ್ಕಂಡ ಬಹುಮಾನಗಳನ್ನು 10—5—38 ರ ನಂತರ ಕಳುಹಿಸಲಾಗುತ್ತೆ.

ಮ್ಯಾ. ಚಿ.

ಶ್ರೀ ಶಂಕರ ಸಪ್ತಾಹ

ಹೊಳೇನರಸೀಪುರದಲ್ಲಿರುವ ಶ್ರೀ ಚತುರ್ಭುಜ ಪಟ್ಟಾಭಿರಾಮಸ್ವಾಮಿ ದೇವಾಲಯದಲ್ಲಿ ಶ್ರೀ ಶಂಕರ ಸಪ್ತಾಹವನ್ನು ಇದೇ ತಿಂಗಳು 1 ನೇ ತಾ|| ನಿಂದ 11 ನೇ ತಾ|| ವರೆಗೆ ನಡೆಸಲು ಭಕ್ತರುಗಳು ಏರ್ಪಡಿಸಿರುತ್ತಾರೆ. ಬೆಂಗಳೂರು ಮೈಸೂರುಗಳಿಂದ ಅನೇಕ ವಿದ್ವಾಂಸರು ದಯಮಾಡಿ ಉಪನ್ಯಾಸಗಳನ್ನು ಮಾಡುವವರಾಗಿದ್ದಾರೆ. ಆಸ್ತಿಕ ಮಹನೀಯರುಗಳೆಲ್ಲರೂ ಸಹಕರಿಸಬೇಕೆಂದು ವ್ಯವಸ್ಥಾಪಕರು ಕೋರಿರುತ್ತಾರೆ.

ಅನಾಥರಿಗೆ ಅನ್ನದಾನ

ಶ್ರೀ ವಾಣೀವಿಲಾಸ ಸನ್ನಿಧಾನದವರ ಜನ್ಮವರ್ಧಂತಿಯಾಗಿ ಸಂತೇಪೇಟೆ ಕುಂಚಿಟಿಗರ ಶ್ರೀರಾಮ ಮಂದಿರದವರು 4-5-38 ನೇ ಬುಧವಾರ ಬೆಳಗ್ಗೆ 11 ಗಂಟೆಗೆ ಮಂದಿರದ ಬಳಿ ಅನಾಥರಿಗೆ ಅನ್ನದಾನ ಮಾಡುತ್ತಾರೆಂದು ತಿಳಿಯಬರುತ್ತದೆ.

ಸಹಕಾರ ಸಂಘಕ್ಕೆ ಸಂಬಂಧಪಟ್ಟ ಮೊಕದ್ದಮೆಗಳು

ಮೈಸೂರು ಸಿಟಿ ಕೋ-ಆಪರೇಟಿವ್ ಸೊಸೈಟಿಯ ಅಧ್ಯಕ್ಷರಾಗಿದ್ದ ಮ|| ಸಿ. ನರಸಿಂಹಯ್ಯನವರನ್ನು ಡೈರೆಕ್ಟರುಗಳು ಅವಿಶ್ವಾಸ ಠರಾವಿನ ಮೂಲಕ ಅಧ್ಯಕ್ಷತನದಿಂದ ತೆಗೆದುಹಾಕಿ ಮ|| ವಿ ಲಿಂಗಪ್ಪಯ್ಯನವರನ್ನು ಆ ಸ್ಥಾನಕ್ಕೆ ಚುನಾಯಿಸಿದರಷ್ಟೆ. ಸದರಿ ಚುನಾವಣೆಯೂ ಅದಕ್ಕೆ ಸಂಬಂಧಪಟ್ಟ ಎಲ್ಲಾ ಕಾರ್ಯಕಲಾಪಗಳೂ ಅಕ್ರಮವಾದುವೆಂದೂ ಅವನ್ನು ರದ್ದುಪಡಿಸಬೇಕೆಂದೂ ಪಗ್ಗೆರೆ ಸೂಚಿಸಿ ಮ|| ನರಸಿಂಹಯ್ಯನವರು ಮೈಸೂರು ಅ|| ರಿಜಿಸ್ಟ್ರಾರವರ ಕೋರ್ಟಿನಲ್ಲಿ ಮೊಕದ್ದಮೆ ಹೂಡಿರುತ್ತಾರೆ. ಇದೇ ಸಂದರ್ಭದಲ್ಲಿ ಕವಿಟಿಯ ಮೂರು ಮೀಟಿಂಗುಗಳಿಗೆ ಅವಿಚ್ಛಿನ್ನವಾಗಿ ಗೈರುಹಾಜರಾದರೆಂಬ ಕಾರಣದ ಮೇಲೆ ಮ|| ಗಳಾದ ಸಿ. ನರಸಿಂಹಯ್ಯ ಎ. ಕೃಷ್ಣರಾವ್ ಪಿ. ಸೀತಾರಾಮಯ್ಯ ಮತ್ತು ರಾವ್ ಸಾಹೇಬ್ ಎಂ. ರಾಮಸ್ವಾಮಿ-ಇವರುಗಳನ್ನು ಕಾನೂನು ಪ್ರಕಾರ ಡೈರೆಕ್ಟರು ತನದಿಂದ ತೆಗೆದು ಬೇರೆ ನಾಲ್ಕು ಜನರನ್ನು ನೇಮಿಸಿದರು. ಈ ವಿಷಯವೂ ಸಹ ಅಕ್ರಮವಾದುದೆಂದು ಮೇಲೆ ಹೇಳಿದವರ ಪೈಕಿ ಮೊದಲಿನ ಮೂರು ಜನರು ಅ|| ರಿಜಿಸ್ಟ್ರಾರ್ ಕೋರ್ಟಿನಲ್ಲಿ ಮತ್ತೊಂದು ಮೊಕದ್ದಮೆ ಹೂಡಿರುವರು. ಈ ಮೊಕದ್ದಮೆಗಳು ಸಹಕಾರ ಸಂಘಗಳ ವರ್ಗಗಳಲ್ಲಿ ವಿಶೇಷ ಕುತೂಹಲವನ್ನುಂಟುಮಾಡಿವೆ. ಈ ಮಧ್ಯೆ ಕಮಿಟಿಯವರು ಸೊಸೈಟಿಯ ಅಸಿಸ್ಟೆಂಟು ಸೆಕ್ರೆಟರಿಯವರಾದ ಮ|| ಬಿ. ಎಸ್. ಮೂರ್ತಿಯವರನ್ನು ಸಸ್ಪೆಂಡು ಮಾಡಿರುವರು. ಮೊಕದ್ದಮೆಯನ್ನು ಬೇರೆ ಕೋರ್ಟಿಗೆ ವರ್ಗಾಯಿಸಲು ಅರ್ಜಿ ಕೊಡಲ್ಪಟ್ಟಿದೆ.



ಟಿ. ಸಿ. ನಟರಾಜ್ ಔಷಧಾಲಯ

ಸಯ್ಯಾಜಿರಾವ್ ರೋಡು, ಮೈಸೂರು

ಇವರಲ್ಲಿ ನೇತ್ರಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅತ್ಯಗತ್ಯವಾಗಿ ಬೇಕಾದ ಎಲ್ಲಾ ಇಂಜಕ್ಷನ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರಕುವುದಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಛಾರ್ಜಿನಿಂದ ಮಾಡಲ್ಪಡುತ್ತದೆ

ಝಂಡೂರವರ ಆಯುರ್ವೇದೀಯ ಸಿದ್ಧೌಷಧಗಳೆಲ್ಲವೂ ಸದಾ ದೊರಕುತ್ತವೆ.

ಗ್ರಹಕೃತ್ಯದ ನೋಟೀಸು

ಗುಂಡ್ಲುಪೇಟೆ ಟೌನಿನಲ್ಲಿರುವ ಪರಿವಾರದ ಜಾತಿ ಚನ್ನಬಸವ ನಾಯ್ಕನ ಮಗ ಬಿಳಿಗಿರಿ ನಾಯ್ಕನು ಸಮಸ್ತ ಜನಗಳಿಗೆ ತಿಳಿಯಪಡಿಸುವುದೇನೆಂದರೆ:—

ನನ್ನ ಚಿಕ್ಕಪ್ಪ ಬಸವರಾಜ ನಾಯ್ಕನು ನನ್ನ ತಂದೆ ಬಿಳಿಗಿರಿ ನಾಯ್ಕನೂ ಬಿನಾ ಕೂಡ ಹುಟ್ಟಿದವರು. ನನ್ನ ತಂದೆಗೆ ನಾವು ಮೂರು ಜನ ಗಂಡುಮಕ್ಕಳಿರುತ್ತೇವೆ. ನನ್ನ ಚಿಕ್ಕಪ್ಪನ ಹೆಂಡತಿ ಗೋಪಮ್ಮನಿಗೆ ಗಂಡು ಮತ್ತು ಹೆಣ್ಣು ಸಂತಾನವೇ ಇಲ್ಲ. ಬಂಜೆ. ಇವಳಿಗೆ ಸುಮಾರು 20 ವರ್ಷ ವಯಸ್ಸಾಗಿರಬಹುದು. ನನ್ನ ಚಿಕ್ಕಮ್ಮ ಗಂಗಮ್ಮನೂ ಸಹ ಇರುತ್ತಾಳೆ. ನನ್ನ ಚಿಕ್ಕಮ್ಮ ಗೋಪಮ್ಮ ಎಂಬುವಳು ಜನಗಳ ದುರ್ಬೋಧನೆಗಳಿಗೆ ಒಳಪಟ್ಟು ನನಗೆ ಹಿಸ್ಸೆ ಕೊಡಿ ಎಂದು ಕೇಳುತ್ತಾಳೆ. ನನ್ನ ಚಿಕ್ಕಪ್ಪ ಬಸವರಾಜ ನಾಯ್ಕನು 6-7 ತಿಂಗಳ ಹಿಂದೆ ಸ್ವರ್ಗಸ್ಥರಾದರು. ನಾವು 3 ಜನ ಗಂಡುಮಕ್ಕಳು. ವಾರಸ್‌ದಾರರು ನಾವು ಇದ್ದಾಗ್ಯೂ ನನ್ನ ಚಿಕ್ಕಮ್ಮನು ಬೇರೆ ಕಡೆಯಿಂದ ಹೊರಗಿನ ಮಕ್ಕಳನ್ನು ತಂದು ದತ್ತುಮಾಡಿಕೊಳ್ಳಬೇಕೆಂದು ಜನಗಳ ಮಾತಿಗೆ ಒಳಪಟ್ಟಿರುತ್ತಾಳೆ. ನಾವು ಹಕ್ಕುದಾರರಿರುವಾಗ್ಯೆ ಬೇರೆಯವರನ್ನು ದತ್ತುಮಾಡಿಕೊಳ್ಳುವುದಕ್ಕೆ ಕಾರಣವಿಲ್ಲ. ನಾವೇನೇ ನಮ್ಮಗಳ ಚರಸ್ಥಿರ ಸ್ವತ್ತುಗಳಿಗೆ ಬಾಧ್ಯರು. ನಮ್ಮ ಚಿಕ್ಕಮ್ಮ ಗೋಪಮ್ಮನಿಂದ ಈ ಕೆಳಗೆ ವಿವರಿಸಿರುವ ಸ್ವತ್ತುಗಳನ್ನು ಕ್ರಯ ಮತ್ತು ಭೋಗ್ಯ ಆಧಾರ ಸಗೈರೇ ಮಾಡಿಕೊಂಡದ್ದೆ ಆದರೆ ಊರ್ಜಿತವಾಗಲಾರದು. ಖಂಡಿತ ತಿಳಿಯುವುದು.

ಸ್ವತ್ತುಗಳ ತಪ್ಸೀಲ್

೧ ಗುಂಡ್ಲುಪೇಟೆ ವಿಜಯಾಪುರಕ್ಕೆ ಸೇರಿದ ಕೆರೆ ಕೆಳಗಣ ಸರ್ವೆ ನಂಬರು ೪೫ ನೇ ಖಾತೆಗೆ ಸೇರಿದ ಬಾಗಾಯ್ತು ಎಲೆ ತೋಟದ ೧೫ ಗುಂಟೆ ಜಮೀನು.

೨. ಗುಂಡ್ಲುಪೇಟೆ ಟವನ್‌ನಲ್ಲಿ ಇರುವ ಖಾನೇಷುಮಾರಿ ೧೫೨ ನೇ ನಂಬರು ೩ ಅಂಕಣದ ಹೆಂಚಿನ ಮನೆ ಒಂದೂ, ಇದಕ್ಕೆ ಸೇರಿದ ಹಿಂಭಾಗದ ಖಾಲಿ ನಿವೇಶನ ಸಹಾ.

27-4-938. ಬಿಳಿಗಿರಿ ನಾಯ್ಕನ ರುಜು.

ಬೇಕಾಗಿದೆ

ನಮ್ಮ ಫ್ಯಾಕ್ಟರಿಯಲ್ಲಿ ತಯಾರಾಗುವ ಬೆಂಕಿ ಪೆಟ್ಟಿಗೆಗೆ ಗಿರಾಕಿಗಳನ್ನೊದಗಿಸಲು ಅಖಿಲ ಕರ್ನಾಟಕದಲ್ಲಿಯೂ ಡಿಸ್ಟ್ರಿಬ್ಯೂಟರರೂ, ಏಜಂಟರೂ ಬೇಕಾಗಿದೆ. ಇಷ್ಟವುಳ್ಳವರು 2 ಆಣೆ ಪೋಸ್ಟೇಜ್ ಸ್ಟಾಂಪಿನೊಡನೆ ಕೂಡಲೆ ಬರೆದುಕೊಳ್ಳಿರಿ.

ಶ್ರೀ ಸಂಜೀವಿನಿ ವರ್ಕ್ಸ್,
ಸೋಲ್ ಏಜಂಟ್ಸ್.

ಕನಕಾಂಬಿಕ ಅಂಡ್ ಬಸವಲಿಂಗ,
ಮ್ಯಾಚ್ ವರ್ಕ್ಸ್,
2830 ಹಳ್ಳದಕೇರಿ, ಮೈಸೂರು.

ರಾಜಕೀಯ ಸುಧಾರಣಾ ಸಮಿತಿಯ ಸದಸ್ಯರಲ್ಲಿ

ವಿಜ್ಞಾಪನೆ

ಲೇಖಕರು:—ಎಸ್. ಸುಬ್ರಹ್ಮಣ್ಯಯ್ಯನವರು, ನಂಜನಗೂಡು.

ಮಾನ್ಯ ಮಹಾಶಯರುಗಳಿರಾ!

ದೇಶದ ದೃಷ್ಟಿಯಿಂದ ಒಂದೆರಡು ಪ್ರಸಕ್ತಿಗಳನ್ನು ತಮ್ಮ ಮುಂದಿಡ ಬೇಕಾಗಿದೆ.

ಇಂದಿನ ಪರಿಸ್ಥಿತಿ—ದೇಶದಲ್ಲಿ ಅಸಂತುಷ್ಟಿಯು ಸಂಪೂರ್ಣವಾಗಿ ಹಬ್ಬಿ ಪರಿಣಮಿಸುತ್ತಿದೆ; ಉಗ್ರ ರೂಪವನ್ನೂ ಧಾರಣ ಮಾಡುತ್ತಿದೆ. ಘೋರಣೆಯ ಪಾತಕಗಳೂ ಸಾವಿರಗಟ್ಟಲೆಯ ಸಂಬಳಗಳೂ, ಯೋಗ್ಯತೆಗೆ ಪ್ರತಿಯಾಗಿ ಶಿಫಾರಸ್ಸಿನ ಅನುಕೂಲಗಳೂ, ಹೊರ ದೇಶದವರ ಸಾವಿರಗಟ್ಟಲೆಯ ಹೊಗಳಿಕೆಯ ಪತ್ರಗಳೂ ಧನಿಕರೂ, ಸ್ವಾರ್ಥಿಗಳೂ ಸಾವಿರಗಟ್ಟಲೆಯ ವೆಚ್ಚದಿಂದ ನಡೆಸುವ ಸತ್ಕಾರ ಕೂಟಗಳೂ ಹಾಗಿರಲಿ. ಇವು ಒಂದೂ ದೇಶದಲ್ಲಿ ನೆಮ್ಮದಿಯನ್ನುಂಟುಮಾಡಲಾರವು.

ಕಾರಣ–ವಿದ್ಯಾವಂತರ ನಿರುದ್ಯೋಗ ಗ್ರಾಮಗಳ ಪತನ ಇವೆರಡೇ ಮುಖ್ಯ ಕಾರಣಗಳು. ಇದರಲ್ಲಿ ಮೊದಲನೆಯದನ್ನು ನಿವಾರಿಸಲು ನಮ್ಮ ಸರ್ಕಾರವಾಗಲೀ, ವೃದ್ಧಿಯು ಇಂದಿನ ಮಟ್ಟಿಗೆ ಸರ್ಕಾರವಾಗಲೀ ಸಮರ್ಥವಾಗಿಲ್ಲ. ಇನ್ನು ಎರಡನೆಯದನ್ನು ಪರಿಹರಿಸಲು ನಮ್ಮ ಸರ್ಕಾರವು ಮಾಡುತ್ತಿರುವ ಎಲ್ಲ ಏರ್ಪಾಟುಗಳೂ ನಿರರ್ಥಕವೇ ಸರಿ. [illegible] ಬಹು ದಾನಶೂರರು. ಆ ದಾನವನ್ನು ಇಂದು ದೇಶವು ರೋಗಿಯ ಕಣ್ಣು ಒಸ್ತು ಹಾಕಿದ ಗೂಟವನ್ನು ದಾನವಾಡಿದಂತೆಂದು ಭಾವಿಸುತ್ತದೆ. ಸರ್ಕಾರದ ಭಾರಿಯ ಏಸ್ತ್ರೆಂಟಿವೇ ತೆತ್ತವರು ಅತ್ಯಲ್ಪರಂತೂ ಅತಿ ನಿಯಮಿತ ವೃತ್ತಿಯ ಬಂಧವಾಳಿಗಳವರು. ಅವರ ಲೇಖನಿಯಿಂದ ಬರುತ್ತಿರುವುದು [illegible] ದೇಶಕ್ಕೆ ಗೊತ್ತಿದೆ.

ಕಾಂಗ್ರೆಸ್ಸಿನವರ ನೀತಿ— ಈ ಸಂಗದ ಧ್ಯೇಯವು ಅದ್ಭುತ ತ್ಯಾಗದಿಂದ ಮುಂದುವರಿಯುತ್ತಿದ್ದಾರೆ. ಇವರಲ್ಲಿ ಹಲವರಿಗೆ ಇಷ್ಟೂ ಬಾಳಿಯುಕಮ ಸೋಲಿತಿರಬಹುದು, ಅವರ ಬಹಾಜ್ಞಾವಿಯ ಸರ್ಕಾರದ ಕಾನೂನು ಭಂಜಕರು(ಹಿಡಿಗಬಾರದೆಂದು ಆಗಲಿ) ಸರ ಮಿಚಾರಣೆಗೆ ಪ್ರತಿಯಾಗಿ ಪತ್ರ, ಒಕ್ಕಲಿಗ, ವೀರಶೈವ ಹಲವು ಪಂಗಡಗಳಲ್ಲಿ ಪರಿವರ್ತನ ಕ್ರಮದಿಂದ ಏನು ನೋಡಬೇಕು. ರಾಯಿಸ ಮಹಿ ಮಂತ್ರಿಗಳೂ ಬರಬಹುದು ಪ್ರಧಾನಿಗಳ ದೊಡ್ಡ ಮನುಷ್ಯರುಗಳಿಗೆ ಪ್ರತಿಯಾಗಿ ತ್ಯಾಗವೀರರು ಅಧಿಕಾರ ಪೀಠಗಳನ್ನು ಅಲಂಕರಿಸಬಹುದು. ತಮ್ಮ ತ್ಯಾಗದಿಂದ ಈಸಂಗವು ದೇಶದ ಸಮಾನ ಭೂತಿಯನ್ನು ಗಳಿಸಿದೆ. ಈ ಸರ್ಕಾರದಂತೆ ಕಾಂಗ್ರೆಸ್ ಸರ್ಕಾರವಾದರೂ ಜನತೆಯ ಸಹಾನುಭೂತಿಗಾಗಿ ಬೇಡ ಬೇಕಾಗಿಲ್ಲ. ಹಲವು ಲಕ್ಷ ರೂಪಾಯಿಗಳನ್ನು ಹಿಡಿದು ಬಹುದು ಅವೆಸ್ಸಾಗಿದರೂ ಗ್ರಾಮಗಳಾ ನಷ್ಟ ಆಗದು; ನಿರುದ್ಯೋಗ ನಿವಾರಣೆಯೂ ಆಗದು.

ನಮಗೆ ಆಗಬೇಕಾದುದು—ನಮ್ಮ ಜವಾಬ್ದಾರಿ. ಸರ್ಕಾರಕ್ಕೆ ಸ್ವಾತಂತ್ರ್ಯವಾಗಿ ಒಪ್ಪಿಸಬೇಕು. ಅನ್ನಕ್ಕೆ ಪರಾವಲಂಬನೆಯಾಗಲಿ ಮತ್ತು [illegible], ಪ್ರತಿ ಗ್ರಾಮವೂ ತನ್ನ ಆಡಳಿತದಲ್ಲಿ ಸ್ವತಂತ್ರವಾಗಿರಬೇಕು. ಈಗಿನಹಾಗೆ ಅವರ ಉತ್ಪತ್ತಿಯು ಪ್ರತಿ ಫಲದಲ್ಲಿಯ ತೆರಿಗೆಯ ರೂಪದಲ್ಲಿ ಸರ್ಕಾರವು ಸುಲಿಯುವಂತಿರಬಾರದು. ೧. ಸರ್ಕಾರದ ಆಡಳಿತದ ಕೇಂದ್ರವು ಜಿಲ್ಲೆಗಳಾಗಿರುವುದನ್ನು ತಪ್ಪಿಸಿ, ತಾಲ್ಲೋಕುಗಳಾಗಿ ಮಾಡಬೇಕೆಂದು ಜಿಲ್ಲೆಗಳನ್ನು ತೆಗೆದುಹಾಕಬೇಕು. ತಾಲ್ಲೋಕುಗಳು ಆ ತಾಲ್ಲೋಕುಗಳು ಕೇಂದ್ರ ಸರ್ಕಾರಕ್ಕೆ ಜಬಾಬ್ದಾರರು. ಮುಖ್ಯ ಆಡಳಿತದ ಅಧಿಕಾರ ಸ್ಥಾನಗಳೆಲ್ಲವೂ ರೈತನ ಸುತ್ತಿಗೆ ದಾರಿ. ೨. ರೈತನ ಜಮೀನಿಗೆ ಸರ್ಕಾರದಿಂದಲೂ ಸಾಹುಕಾರರಿಂದಲೂ ರಕ್ಷಣೆಗಾಗಿ ಬರಬೇಕು. ಸರ್ಕಾರದ ಕಂದಾಯವು ಜಮೀನಿನ ಬೆಳೆಯಮೇಲೆ ವಸೂಲಾಗತಕ್ಕದ್ದಲ್ಲದೆ ಜಮೀನಿನ ವಿಸ್ತೀರ್ಣದಿಂದಲ್ಲ ಈಗಿನ ಹಾಗೆ ವಸೂಲಾಗತಕ್ಕದ್ದಲ್ಲ. ೪. ಗ್ರಾಮ ಕೈಗಾರಿಕೆಗಳಿಗೆ ರಕ್ಷಣೆಯನ್ನು ಕೊಡಬೇಕು. ೫. ಆರ್ಥಿಕ ದೃಷ್ಟಿಯಿಂದ ಪರಿಶೀಲನೆ ನಡೆಯುವುದಾಗಲಿ, ಆಡಳಿತದ ದೃಷ್ಟಿಯಿಂದ ಪರಿಶೀಲಿಸುವುದು ಬೇಡ. ನಮ್ಮ ಸೌಭಾಗ್ಯಕ್ಕೆ ಆರ್ಥಿಕ ರೀತಿ ನೀತಿಗಳಲ್ಲಿ ಸುಶಿಕ್ಷಿತರಾದವರೂ ತಮ್ಮ ದಯೆಯ ದೃಷ್ಟಿಯಿಂದ ಇಂದಿನ ಸರ್ಕಾರದಲ್ಲಿ ಬಹು ಸಾಮರ್ಥ್ಯರಾದ ಆಡಳಿತ ನಿಪುಣರೂ ಇದ್ದಾರೆ. ಆರ್ಥಿಕೋನ್ನತಿಯ ದೃಷ್ಟಿಯಿಂದಲೇ ಆಡಳಿತವನ್ನು ನಡೆಸುವುದೂ ಅಲ್ಲದೆ ಭಾರತ ಸರ್ಕಾರಕ್ಕೆ ಹೊಸತು ಮೇಲ್ಪಂಕ್ತಿಯಾಗಿ ಭಗವಂತನು ಆ ಸಾಮರ್ಥ್ಯವನ್ನು ಕರುಣಿಸಲೆಂದು ಬೇಡುತ್ತೇನೆ.

"ಶ್ರೀ ಸದ್ಗುರು ಮಹಿಮೆ"

ಮೈಸೂರು ಹಾರ್ಡ್ವಿಕ್ ಹೈಸ್ಕೂಲು ಪಂಡಿತರಾದ ಸರಸ ಕವಿ ವೇ॥ ಗೋಪೀಪತಿ ಸ್ವಾಮಿ ವೇ॥ ರಾ॥ ವೆಂಕಟಸುಬ್ಬಶಾಸ್ತ್ರಿಗಳು ಷಟ್ಪದಿಯ ಮಾರ್ಗದಲ್ಲಿ ಕನ್ನಡ ಒಂದು ಗ್ರಂಥವನ್ನು ರಚಿಸಿರುತ್ತಾರೆ. ಇದರಲ್ಲಿ ಶ್ರೀಮತ್ ಶಂಕರಾಚಾರ್ಯರ ಚರಿತ್ರೆಯು ಬಹಳ ಚನ್ನಾಗಿ ನಿರೂಪಿಸಲ್ಪಟ್ಟಿದೆ. ಶ್ರೀ ಮನ್ಮಹಾರಾಜರವರ ಗಾನಾಗ ನ ಶಂಕರಾ ದ ಸವಿಸ್ತ ಸಾಲಿಕೆಯನ್ನೂ ಇದು ಇದರಲ್ಲಿ ಸೇರಿಸಿರುವರು. ಕ್ರಯ ಆರ್ಥಾಣೆ.

ಸಿವಿಲ್ ಸರ್ವಿಸ್ ಪರೀಕ್ಷೆ

ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಯು ಬರುವ ನವೆಂಬರ್ ಒಂದನೇ ತಾರೀಖಿನಿಂದ ಆರಂಭವಾಗುವುದಾಗಿ ತಿಳಿದು ಬಂದಿದೆ.

ಪರ್ಶಿಯಾ ದೇಶದ ಪ್ರಗತಿ

ಸಕಲ ಸೌಭಾಗ್ಯಗಳ ಸಮೃದ್ಧಿ.

ಪರ್ಶಿಯಾದ ಏಕಚಕ್ರಾಧಿಪತ್ಯ ಕೇವಲ ಪಹ್ಲವೀ ವಂಶದ ನಾಯಕ ಮತ್ತು ಚಕ್ರವರ್ತಿ. ಈತನಿಂದ ಆ ಜನರಲ್ಲಿ ಮುಂದಾಳುಗಳು ಬಹುಕಾಲದಿಂದ ನಿರೀಕ್ಷಿಸುತ್ತಿದ್ದ ಅನೇಕ ಕಾರ್ಯಗಳಲ್ಲಿ ನಡೆದ [illegible] ಪರ್ಶಿಯಾದಲ್ಲಿ ನಡೆಯುವ ಶಿಕ್ಷಣವು ಶೀಘ್ರವಾಗಿ ನಡೆಯುತ್ತಿದೆ. ಒಂದು ವಿದ್ಯಾವಿಸ್ತರಣದಲ್ಲಿ ಕೆಲವು ಕಾಲೇಜುಗಳೂ, ಪ್ರೈಮರಿ ಸ್ಕೂಲುಗಳೂ ಹೆಚ್ಚು ಪ್ರಚಾರ ಮಾಡುತ್ತಿವೆ. ಸ್ತ್ರೀಯರು ಹೆಚ್ಚು ಶಿಕ್ಷಣ ಗಳ ಸಮುದಾಯದಲ್ಲಿ ನಡೆಯುತ್ತಿವೆ ಸೇನೆಯನ್ನು ಆಧುನಿಕ ರೀತಿಯಲ್ಲಿ ಸಿದ್ಧಪಡಿಸಿದ್ದಾರೆ. ಅಲ್ಲಿಯ ಸೇನೆಯು ಯಾವ ಪಾಶ್ಚಾತ್ಯ ಸೇನೆಗೂ ಕಡಿಮೆಯಾಗಿರುವುದಿಲ್ಲ.

ತುಂಬಾ ಹಿಂದೆ ಅಲ್ಲಿ ತುಂಬಾ ಅರಾಜಕತೆಯು ಹೆಚ್ಚಿದ್ದವು. ಹೆಚ್ಚು ಜನರು ಹೋರಾಡುತ್ತಾ ಏನೂ ಪ್ರಯೋಜನವಿಲ್ಲದೆ ಆಧುನಿಕ ಕ್ರಮಗಳಾಗಿರುವುವು

ಹೊಸದಾಗಿ ಆರಂಭಿಸಿದ ರಸ್ತೆ, ರೈಲು, ಮೋಟಾರು ಮೊದಲಾದ ವಾಹನಗಳ ಮೇಲೆ ಸುಂಕವಿಲ್ಲದೆ ಒಂದೇ ದೇಶದಿಂದ ಜನರಿಗೆ ಆಧುನಿಕ ವಾಹನ ಸೌಲಭ್ಯಗಳನ್ನು ಮಾಡಿಸಿರುವರು. ಬೇಕಾದಷ್ಟು ರೈಲು ಮಾರ್ಗಗಳಿವೆ.

ರಾಷ್ಟ್ರೀಯ ಬ್ಯಾಂಕಿನಲ್ಲಿರುವ ರಾಜ್ಯದ ಹಣ ಸ್ವದೇಶದಲ್ಲಿ ಪರ್ಶಿಯಾದಲ್ಲಿ ಉಂಟು. ಆಮದಾಗುತ್ತಿರುವ ಸರಕುಗಳಿಗೆ ಸಮನಾದ ಬೆಲೆಯುಳ್ಳ ಚಿನ್ನ, ಬೆಳ್ಳಿಯು ಸರ್ಕಾರದಲ್ಲಿ ಸೇರಬೇಕು ಇದ್ದೀತು.

ಕೃಷಿ, ವಾಣಿಜ್ಯ, ಕೈಗಾರಿಕೆಗಳು ಅಭಿವೃದ್ಧಿಯಾಗುತ್ತಿವೆ. ಹತ್ತಿ, ರೇಷ್ಮೆ, ಟೀ, ಅಕ್ಕಿ ಮೊದಲಾದವುಗಳನ್ನು, ತೈಲ ಮೊದಲಾದವುಗಳನ್ನು ವಿದೇಶಗಳಿಗೆ ಬಹಳವಾಗಿ ರಫ್ತು ಮಾಡುತ್ತಿವೆ.

ಕಳೆದ ಐದಾರು ವರ್ಷಗಳಲ್ಲಿ ದೇಶದ ಸ್ಥಿತಿ ಬಹಳ ಮಟ್ಟಿಗೆ ಉತ್ತಮವಾಗಿದೆ. ಸ್ತ್ರೀಯರಿಗೂ ಪುರುಷರಿಗೂ ವಿದ್ಯಾಭ್ಯಾಸಕ್ಕೆ ವಿಶೇಷ ಅವಕಾಶವಿದೆ.

ಅಲ್ಲಿ ಪರ್ದಾ ಪದ್ಧತಿಯು ಇಲ್ಲ. ಸ್ತ್ರೀ ಸ್ವಾತಂತ್ರ್ಯವು ಹೆಚ್ಚಿದೆ. ಹೆಚ್ಚು ವಿದ್ಯಾವಂತರಾದ ಯುವತಿಯರು ಆಫೀಸು ಮತ್ತು ಅನೇಕ ಸಂಸ್ಥೆಗಳಲ್ಲಿ ಬಹಳ ಕೃಷಿ ಮಾಡುತ್ತಿರುವರು.

ಸ್ತ್ರೀ ಪುರುಷರೆಲ್ಲರೂ ವಿದ್ಯಾಭ್ಯಾಸವನ್ನು ಹೊಂದಿ, ಯಾವುದೇ ಜನಾಂಗವು, ಸ್ವದೇಶ ಪ್ರೇಮ ಮಾಡಿಕೊಳ್ಳುವ ಹಾಗೆ ಆ ದೃಷ್ಟಿಯನ್ನು ಹೊಂದಿರುವರು.

ಪರ್ಶಿಯಾ ದೇಶವು ವಿದೇಶಗಳಿಂದ ಗೌರವವನ್ನು ಪಡೆದಿದೆ. ಎಲ್ಲ ದೇಶೀಯರನ್ನು ಸಮ ದೃಷ್ಟಿಯಿಂದ ಕಾಣುತ್ತದೆ.

ಇದಕ್ಕೆಲ್ಲಾ ಪರ್ಶಿಯಾದ ರಾಜಕೀಯ ಸ್ವಾತಂತ್ರ್ಯವೇ ಕಾರಣ. ಭಾರತದ ಭವಿಷ್ಯವೂ ಅದರ ರಾಜಕೀಯ ಸ್ವಾತಂತ್ರ್ಯದ ಸ್ಥಿತಿಯನ್ನವಲಂಬಿಸಿದೆ.

ಬೇಕಾಗಿದೆ

ನಮ್ಮ ಫ್ಯಾಕ್ಟರಿಯಲ್ಲಿ ತಯಾರಾಗುವ ಬೆಂಕಿ ಪೆಟ್ಟಿಗೆಗೆ ಏಜೆಂಟರುಗಳು ಬೇಕಾಗಿದ್ದಾರೆ. ಅಖಿಲ ಕರ್ನಾಟಕದಲ್ಲಿಯೂ ಡಿಸ್ಟ್ರಿಬ್ಯೂಟರು, ಏಜೆಂಟರು ಬೇಕಾಗಿದೆ. ಇಷ್ಟವುಳ್ಳವರು ೨ ಆಣೆ ಪೋಸ್ಟೇಜ್ ಸ್ಟಾಂಪಿನೊಡನೆ ಕೂಡಲೆ ಬರೆದುಕೊಳ್ಳಿರಿ.

ಶ್ರೀ ಸಂಜೀವಿನಿ ವರ್ಕ್ಸ್,
ಸೋಲ್ ಏಜೆಂಟ್ಸ್.

ಕರ್ನಾಟಕ ಆಂಡ್ ಬಸವಲಿಂಗಂ,
ಮ್ಯಾಚ್ ವರ್ಕ್ಸ್,
೨೬೩೦ ಹಳ್ಳದಕೇರಿ, ಮೈಸೂರು

ANANDA SODA FACTORY

Best Aerated Water Suppliers.
Complete Requisites For Aerated Water Manufacturers Available.

ಆನಂದಾ ಸೋಡಾ ಫ್ಯಾಕ್ಟರಿ
ದೊಡ್ಡಪೇಟೆ, ಮೈಸೂರು.

ಭಕ್ತ ತುಳಸೀದಾಸ್

ಅನೇಕ ಚಿತ್ರಮಂದಿರಗಳಲ್ಲಿ ತೋರಿಸಲ್ಪಡುವ ತಮಿಳು ಟಾಕಿ ಚಿತ್ರ

ಮೈಸೂರಿಗೆ ಮಹಾತ್ಮರ ಸಂದೇಶ

ಕೆಳಗಿನ ಪತ್ರವನ್ನು ಶ್ರೀಮಾನ್ ಭೂಪಾಳಂ ಚಂದ್ರಶೇಖರಯ್ಯನವರು ನನಗೆ ಒದಗಿಸಿದ್ದಾರೆ. ಇದನ್ನು ಮಹಾಜನರ ಅವಗಾಹನೆಗೆ ತರಲು ಬಯಸುತ್ತೇನೆ. ಮಹಾಜನಗಳು ಎಷ್ಟೇ ಉದ್ರೇಕದ ಪ್ರಸಂಗಗಳು ಬಂದರೂ ಶಾಂತರೀತಿಯಾಗಿ ಅಹಿಂಸಾ ತತ್ವವನ್ನು ಅನುಸರಿಸಬೇಕಾಗಿ ವಿನಂತಿ.

ಹೆಚ್. ಬಿ. ಗುಂಡಪ್ಪಗೌಡ,
ಅಧ್ಯಕ್ಷರು, ಮೈಸೂರು, ಕಾಂಗ್ರೆಸ್.

ನೊಂದ ಮೈಸೂರಿಗೆ ಮಹಾತ್ಮರ ಸಂದೇಶ

ನನ್ನ ದೇಶಬಾಂಧವರಲ್ಲಿ ವಿಜ್ಞಾಪನೆಗಳು

ಮೈಸೂರು ಸರ್ಕಾರದವರಿಗೂ, ಮೈಸೂರಿನ ಪ್ರಜೆಗಳಿಗೂ ಉಂಟಾಗಿರತಕ್ಕ ಭಿನ್ನಾಭಿಪ್ರಾಯಗಳು ಮಾಯವಾಗಿ ಉಭಯ ಪಕ್ಷ ಗೌರವಯುಕ್ತವಾದ ರಾಜಿಯುಂಟಾಗಿ ಶಾಂತಿ ಸ್ಥಾಪನೆಯಾಗುವುದು ಅವಶ್ಯಕವಾದುದೆಂದು ತಿಳಿದು ನಾನು ೨೮—೪—೩೮ ರಲ್ಲಿ ಮಹಾತ್ಮಾ ಗಾಂಧಿಯವರ ದರ್ಶನಾರ್ಥವಾಗಿ ವಾರ್ಧಾಗೆ ಪಯಣ ಬೆಳೆಸಿದೆನು. ನಾನು ಅಲ್ಲಿಗೆ ಪಯಣ ಬೆಳೆಸುವ ಸಂಗತಿಯನ್ನು ಸರ್ಕಾರದ ಅಧಿಕಾರಿಗಳಿಗೂ ಸಹ ತಿಳಿಸಿದ್ದೆನು.

ಶ್ರೀಮಾನ್ ಹೆಚ್. ಚಂದ್ರಶೇಖರಯ್ಯನವರೂ ಶ್ರೀಮಾನ್ ರಾಮಚಂದ್ರರವರೂ ನನ್ನ ಕೋರಿಕೆಯಂತೆಯೇ ನನ್ನ ಜೊತೆಯಲ್ಲಿ ಪಯಣ ಬೆಳೆಸಿದರು.

ಮಹಾತ್ಮಾ ಗಾಂಧಿಯವರನ್ನು ೩೦—೪—೩೮ ರಲ್ಲಿ ಸಂದರ್ಶಿಸಿ ಎಲ್ಲ ಸಂಗತಿಗಳನ್ನೂ ಅರುಹಿ ಶ್ರೀ ಜಯಚಾಮರಾಜೇಂದ್ರ ಒಡೆಯರ ವಿವಾಹ ಕಾಲವು ಅತ್ಯಂತ ಸಮೀಪವಾಗಿರುವುದರಿಂದ ಮೈಸೂರು ಸಂಸ್ಥಾನದಲ್ಲಿ ಕೂಡಲೆ ಶಾಂತಿಸ್ಥಾಪನೆಯಾಗುವುದು ಅವಶ್ಯಕವೆಂದು ತಿಳಿಸಿದೆವು. ಮಹಾತ್ಮಾಜಿಯವರು ಮೈಸೂರು ಕಾಂಗ್ರೆಸ್ ಅಧ್ಯಕ್ಷರಿಗೆ ಒಂದು ಪತ್ರವನ್ನು ಬರೆದು, ಕೂಡಲೆ ಅವರು ಅನುಸರಿಸಬೇಕಾದ ಮಾರ್ಗವನ್ನು ತಿಳಿಸಿ, ಸರ್ಕಾರದವರೊಂದಿಗೆ ಸಮಾಧಾನದಿಂದ ವರ್ತಿಸಿ ಗೌರವಯುತವಾದ ಒಪ್ಪಂದಕ್ಕೆ ಬಂದು ಜೈಲಿನಲ್ಲಿರುವವರ ಬಿಡುಗಡೆಗೂ ಸಹ ಸೂಚನೆಯನ್ನು ಕೊಟ್ಟಿದ್ದರು. ಈ ಪತ್ರವನ್ನು ಸಧ್ಯದಲ್ಲಿಯೇ ನಾನು ಪ್ರಕಟಪಡಿಸಲು ಗಾಂಧೀಜಿಯವರಿಂದ ಅಧಿಕಾರ ಹೊಂದಿದ್ದೇನೆ.

ಈ ಪತ್ರವನ್ನು ತೆಗೆದುಕೊಂಡು ಬೊಂಬಾಯಿಗೆ ಬಂದ ಒಡನೆ ಅಲ್ಲಿ ಸರ್ದಾರ್ ವಲ್ಲಭಾಯಿ ಪಟೇಲರಿಗೂ ಆಚಾರ್ಯ ಕೃಪಾಲಿನಿಯವರಿಗೂ ಗಾಂಧೀಜಿಯವರ ಪತ್ರವನ್ನು ಓದಲಾಯಿತು. ಇವರೀರ್ವ ಮಹನೀಯರೂ ಅದನ್ನು ಓದಿ ಮಹಾತ್ಮರು ಸೂಚಿಸಿರುವ ರೀತಿಯಲ್ಲಿಯೇ ಮೈಸೂರು ಕಾಂಗ್ರೆಸ್ಸಿನವರು ವರ್ತಿಸಿ ದೇಶದಲ್ಲಿ ಶಾಂತಿಯನ್ನು ನೆಲೆಗೊಳಿಸಿ ಸರ್ಕಾರದವರು ಸ್ಥಾಪಿಸಿರುವ ಸುಧಾರಣಾ ಸಮಿತಿಯಲ್ಲಿ ಜನಗಳು ಸಹಕರಿಸುವುದು ಒಳ್ಳೆಯದೆಂದು ಸಹ ಅಭಿಪ್ರಾಯಪಟ್ಟರು. ಆದರೆ ಮಧ್ಯಾಹ್ನದ ಹೊತ್ತಿಗೆ ಮೈಸೂರಿನ ಸಮಾಚಾರಗಳು ತಿಳಿದುಬಂದುದರಿಂದ ಮಹಾತ್ಮರ ಪತ್ರದೊಡನೆ ಮತ್ತೆ ವಾರ್ಧಾಗೆ ಹೋಗಬೇಕಾಗಿ ಸರ್ದಾರರು ತಿಳಿಸಿದರು. ಅದರಂತೆ ೨೭—೪—೩೮ ರಲ್ಲಿ ಮತ್ತೆ ಹೋಗಿ ಮಹಾತ್ಮರಿಗೆ ಸಂಗತಿಗಳನ್ನು ಅರುಹಿದೆನು. ಅಷ್ಟರಲ್ಲಿ ಬೊಂಬಾಯಿನ ಪತ್ರಿಕೆಗಳಲ್ಲಿ ಸಮಾಚಾರಗಳು ಮುದ್ರಿತವಾಗಿದ್ದವು. ಗಾಂಧೀಜಿಯವರು ತಾವು ಆ ದಿನ ಮಧ್ಯಾಹ್ನ ಸಹಿ ಮಾಡಿ ಕೊಟ್ಟಿದ್ದ ಪತ್ರವನ್ನು ೩೦—೪—೩೮ ರಲ್ಲಿ ರದ್ದುಪಡಿಸಿಬಿಟ್ಟರು.

ಪುಣ್ಯಕ್ಷೇತ್ರವಾದ ವಿದುರಾಶ್ವತ್ಥದಲ್ಲಿ ನಡೆದ ದುರ್ಘಟನೆಗಳನ್ನು ತಿಳಿದು ಮಹಾತ್ಮ ಗಾಂಧಿಯವರು ಅತ್ಯಂತ ವಿಷಾದಪಟ್ಟರು. ಬಹಳ ಮಂದಿ ಯಾತ್ರಿಕರು ಪೋಲೀಸಿನವರ ಗುಂಡಿನೇಟುಗಳಿಗೆ ಸಿಕ್ಕಿ ಮರಣ ಹೊಂದಿರುವುದನ್ನೂ ಗಾಯಗೊಂಡುದನ್ನೂ ತಿಳಿದು ಇಷ್ಟೊಂದು ಜನರ ಆಹುತಿಯಿಂದ ಮೈಸೂರಿನವರಿಗೆ ಅತ್ಯಂತ ಶೀಘ್ರದಲ್ಲಿಯೇ ಸ್ವಾತಂತ್ರ್ಯವನ್ನು ಪಡೆಯಲು ಸಾಧ್ಯವಾಯಿತೆಂದು ತಮ್ಮ ಅಭಿಪ್ರಾಯವನ್ನು ತಿಳಿಸಿದರು.

ಜನಗಳೆಲ್ಲರೂ ಮನಸ್ಸಿನಲ್ಲಿಯೂ, ಮಾತಿನಲ್ಲಿಯೂ, ನಡತೆಯಲ್ಲಿಯೂ, ಶಾಂತಿಯಿಂದ ನಡೆದುಕೊಂಡು ಪೋಲೀಸಿನವರನ್ನಾಗಲಿ ಸರ್ಕಾರದ ಅಧಿಕಾರಿಗಳನ್ನಾಗಲಿ ಯಾವದೇ ರೀತಿಯಿಂದಲೂ ಸ್ವಲ್ಪವಾದರೂ ಹಿಂಸೆಪಡಿಸದೆ ಎಷ್ಟೇ ಗುಂಡಿನೇಟುಗಳು, ಲಾಠಿ ಏಟುಗಳು ಬಿದ್ದರೂ ಸಂತೋಷದಿಂದ ಪರಿತ್ಯಾಗಿ ಪ್ರಾಣತ್ಯಾಗ ಮಾಡಲು ಸಿದ್ಧರಾಗಿರಬೇಕೆಂದೂ, ಮಹಾತ್ಮ ಗಾಂಧಿಯವರು ಭರತಖಂಡದ ಯಾವುದೇ ಪ್ರಾಂತ್ಯದಲ್ಲಿದ್ದರೂ ತಾವೇ ಮುಂದಾಗಿ ಮೈಸೂರಿನ ಜವಾಬ್ದಾರಿ ಸರ್ಕಾರದ ಚಳವಳಿಗೆ ದಾರಿತೋರುವುದಾಗಿಯೂ (TO GUIDE THE MOVEMENT) ಮಹಾ ಸಂದೇಶವನ್ನೂ ಅಭಯವನ್ನೂ ಆಶೀರ್ವಾದವನ್ನೂ ಕರುಣಿಸಿದ್ದಾರೆ. ಈ ಸಂದೇಶವನ್ನು ನನ್ನ ದೇಶಬಾಂಧವರಿಗೆ ತಿಳಿಸುವುದು ನನ್ನ ಕರ್ತವ್ಯವಾಗಿರುತ್ತೆ.

ಮೈಸೂರು ದೇಶದ ಸಮಸ್ತ ಜನರೂ ಮಹಾತ್ಮ ಗಾಂಧಿಯವರ ಆಜ್ಞೆಯಂತೆ ಅತ್ಯಂತ ಶಾಂತಿಯಿಂದಲೂ, ಧೈರ್ಯದಿಂದಲೂ, ಶಿಸ್ತಿನಿಂದಲೂ ವರ್ತಿಸಿ, ಮಹಾತ್ಮರ ಮನಸ್ಸಿಗೆ ಸಂತೋಷವಾಗುವಂತೆ ವರ್ತಿಸಿ, ಯಾರಿಗೂ ಅಗಲಿ ಕಾಯಾ, ವಾಚಾ, ಮನಸಾ, ಯಾವ ವಿಧವಾದ ನೋವನ್ನೂ ಹಿಂಸೆಯನ್ನೂ ನಡೆಸದೇ ಮುಂದೆಯೇ ಮೈಸೂರು ಕಾಂಗ್ರೆಸಿನ ಧ್ಯೇಯವಾದ ಜವಾಬ್ದಾರಿ ಸರ್ಕಾರವನ್ನು ಪಡೆದು ದೇಶಸೇವೆಯನ್ನು ಸಲ್ಲಿಸಬೇಕಾಗಿ ವಿನಂತಿ. ದೇಶಸೇವೆಯೇ ಈಶಸೇವೆ.

ಭೂಪಾಳಂ ಚಂದ್ರಶೇಖರಯ್ಯ.

ರಮಣ ವಿಲಾಸಿನೀ ವಟಿಕಾ

ಒಂದೇ ಘಂಟೆಯಲ್ಲಿ

ನವಯೌವನವನ್ನು ಕೊಡತಕ್ಕ ಈ ಔಷಧದ ಸ್ವಂತ ಅನುಭವದಿಂದ ನೋಡಿದರೆ ಸಂತೋಷವನ್ನು ಕೊಡುವುದರಲ್ಲಿ ಇದಕ್ಕೆ ಸಮ ಯಾವದೂ ಇಲ್ಲ.
16 ಮಾತ್ರೆಗಳ ಡಬ್ಬಿ ಕ್ರಯರೂ. 1
1-94 ಜೈನಾಬಜಾರ್, ಮದರಾಸ್
ಏಜೆಂಟರು —
ದಿ ಆರ್ಯ ಮೆಡಿಕಲ್ ಸ್ಟೋರ್ಸ್,
291 ಚಿಕ್ಕಪೇಟೆ, ಬೆಂಗಳೂರು ಸಿಟಿ

ಕಣೆಯರ ಬ್ಯಾಂಕ್,
(ಲಿಮಿಟೆಡ್)

ಹೆಡ್ ಆಫೀಸ್ :— ದೊಡ್ಡ ಪೇಟೆ, ಬೆಂಗಳೂರು ಸಿಟಿ.

ಲೋಕಲ್ ಆಫೀಸ್ —ಮಲ್ಲೇಶ್ವರಂ ಬೆಂಗಳೂರು

ಬ್ರಾಂಚುಗಳು:

ಚನ್ನಪಟ್ಟಣ, ಮಂಡ್ಯ, ಮೈಸೂರು, ತುಮಕೂರು, ಕೊಳ್ಳೇಗಾಲ, ಮದರಾಸು.

ಡಿಪಾಜಿಟ್ಟುಗಳ ಮೇಲೆ ಬಡ್ಡಿ ದರ

ಕರೆಂಟ್ ಅಕೌಂಟ್ ಸಾಲಿಯಾನ			ಶೇ ೧॥
ಸೇವಿಂಗ್ಸ್ ಬ್ಯಾಂಕ್	,,		೩॥

ಫಿಕ್ಸೆಡ್ ಡಿಪಾಜಿಟ್

೬ ತಿಂಗಳಿಗೆ ಸಾಲಿಯಾನ ಶೇ			೩॥ ರೂ.
೧೨ ,,	,,	,,	೪ ,,
೨೪ ,,	,,	,,	೫ ,,
೩೬ ,,	,,	,,	೫½ ,,

ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾ ವಿಧವಾದ ಆಡಳಿತಗಳನ್ನೂ ನಡೆಸಲಾಗುತ್ತೆ. ಹೆಚ್ಚಿನ ವಿಷಯಗಳಿಗೆ ಬರೆಯಿರಿ,

ಬಿ. ಕೆ. ರಂಗಪ್ಪ,
ಮ್ಯಾನೇಜಿಂಗ್ ಡೈರೆಕ್ಟರ್.

ಅಮೃತಾಂಜನ

ಶೀಘ್ರವಾಗಿ ಗುಣಪಡಿಸುತ್ತದೆ.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿತ್ತ, ಉಬ್ಬಸ, ತಲೆ ಹೊಟ್ಟು, ಪ್ರಾಣಿ ಹೊಡೆವಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ್ ಲಿಮಿಟೆಡ್
ಬೊಂಬಾಯಿ — ಮದರಾಸು.

AMRUTANJAN LTD. BOMBAY MADRAS



ಸೂಚನೆ:— [illegible]

ವಿಳಾಸ— ಮ್ಯಾನೇಜರ್, ಚಿತ್ರಶಾಲಾ ಸ್ಪರ್ಧೆ, ಒಂಟಿಕೊಪ್ಪಲು, ಮೈಸೂರು.

[illegible]

ಎಡದಿಂದ ಬಲಕ್ಕೆ

[illegible]

ಮೇಲಿನಿಂದ ಕೆಳಕ್ಕೆ

[illegible]





ಚಿತ್ರಶಾಲಾ ಸ್ಪರ್ಧೆ ನಂ. [illegible] ಕೂಪನ್ ನಂ. .... ಪೋಸ್ಟಲ್ ಆರ್ಡರ್ ನಂಬರ್ ....

ಹೆಸರು .... ವಿಳಾಸ ....

[illegible]

ನಂ. ೩

ಪ್ರಥಮ ಬಹುಮಾನ ರೂ 75 : : ಒಟ್ಟು ಬಹುಮಾನ ರೂ 150 : : ಇತರ ಬಹುಮಾನ ರೂ. 75

೭-೫-೩೮ ರ ಒಳಗಾಗಿ ಬರತಕ್ಕ ಸರಿಯಾದ ಉತ್ತರಕ್ಕೆ ಸ್ಪೆಷಲ್ ಬಹುಮಾನ ೧೦ ರೂಪಾಯಿ

ಉತ್ತರಗಳು ತಲುಪಬೇಕಾದ ಕಡೆಯ ತಾರೀಖು 11—5—1938 ಮ್ಯಾನೇಜರ್, ಪದಪತಿಲಾ ಸಮಸ್ಯೆ, ೫ ಸ್ಟ್ರೀಟ್ ನಂ.

ನಿಯಮಗಳು — 1. ಮೊಹರು ಮಾಡಿದ ಉತ್ತರದ ಪ್ರತಿ ಸಾಧ್ವಿ ಕಛೇರಿಯ ಕಬ್ಬಿಣದ ಪೆಟ್ಟಿಗೆಯಲ್ಲಿ ಇಡಲ್ಪಟ್ಟಿರುವುದು. ಅದಕ್ಕೆ ಎಲ್ಲಾ ಪದಗಳೂ ಸರಿಹೋಲುವ ಉತ್ತರಕ್ಕೆ ಪ್ರಥಮ ಬಹುಮಾನ. 1 ಮತ್ತು 2 ತಪ್ಪಿನ ಉತ್ತರಗಳಿಗೆ ದ್ವಿತೀಯ ಮತ್ತು ತೃತೀಯ ಬಹುಮಾನಗಳು. 2. ಬಹುಮಾನಕ್ಕೆ ಯೋಗ್ಯವಾದ ಉತ್ತರಗಳು ಒಂದ ಕ್ಕಿಂತ ಹೆಚ್ಚಾಗಿದ್ದರೆ ಬಹುಮಾನದ ಹಣವು ಹಂಚಲ್ಪಡುವುದು. 3. ಪ್ರವೇಶದ ಶುಲ್ಕ 1 ಕ್ಕೆ ನಾಲ್ಕಾಣೆ, 3 ಕ್ಕೆ ಎಂಟಾಣೆ, 6 ಕ್ಕೆ ಒಂದು ರೂಪಾಯಿ. 4. ಉತ್ತರಗಳನ್ನು ಬರೆಯುವ ಕಾಗದದಲ್ಲಾಗಲಿ, ಮುದ್ರಿತವಾದ ಕೂಪನ್ನುಗಳಲ್ಲಾಗಲಿ, ಇಂಕ್ಕಿನಿಂದ ಬರೆಯಬೇಕು. ಚಿತ್ರಾಗದ ಕೂಪನ್ನುಗಳಿಗೆ ಬೆಲೆ ಇಲ್ಲ. 5. ಪ್ರವೇಶಧನವನ್ನು ಇಂಡಿಯನ್ ಪೋಸ್ಟಲ್ ಆರ್ಡರ್ ಅಥವಾ ಮನಿಯಾರ್ಡರ್ ಮೂಲಕ ಕಳುಹಿಸಬೇಕು. ಮನಿಯಾರ್ಡರು ರಶೀತಿ ಅಥವಾ ಪೋಸ್ಟಲ್ ಆರ್ಡರ್, ಕೂಪನ್ನಿಗೆ ಲಗತ್ತಿಸಬೇಕು. 6. ಸಮಸ್ಯೆಯ ಎಲ್ಲಾ ವಿಚಾರದಲ್ಲಿಯೂ ಮ್ಯಾನೇಜರ ತೀರ್ಮಾನವೇ ಕಡೆಯದೆಂದೂ, ಆ ಬಗ್ಗೆ ಯಾವ ವಿಧವಾದ ಪತ್ರವ್ಯವಹಾರಕ್ಕೂ ಅವಕಾಶವಿಲ್ಲವೆಂದೂ, ಉತ್ತರಗಳನ್ನು ಕಳುಹಿಸುವವರೆಲ್ಲರೂ ಈ ನಿಯಮಗಳಿಗೆ ಒಪ್ಪಿರುವರೆಂದೂ ಭಾವಿಸಲ್ಪಡುವುದು. 7. ಒಂದು ಸಮಸ್ಯೆಗಾಗಿ ಕಳುಹಿಸಿದ ಪ್ರವೇಶಧನವನ್ನು ಯಾವ ಕಾರಣದಿಂದಲೂ ಮತ್ತೊಂದು ಸಮಸ್ಯೆಗಾಗಿ ತೆಗೆದುಕೊಳ್ಳಲಾಗುವುದಿಲ್ಲ. ಅಥವಾ ವಾಪಸ್ ಕೊಡಲಾಗುವುದಿಲ್ಲ 8. ಮೊಹರಾದ ಉತ್ತರವು ತಾರೀಖು 23—5—38 ರ ಸಾಧ್ವಿ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವುದು.

ಪದಪತಿಲಾ ಸಮಸ್ಯೆ ನಂ ೩. ಕೂಪರ್ ನಂ



ಮ್ಯಾನೇಜರ ತೀರ್ಮಾನಕ್ಕೆ ಒಪ್ಪಿ ಕಳುಹಿಸಿದೆ

ಹೆಸರು ....

ವಿಳಾಸ ....

.... ಪೋಸ್ಟ್ ಆಫೀಸ್ ....

ಕೆಳಗಿನಿಂದ ಎಡದಿಂದ ಬಲಕ್ಕೆ :—೧. ಒಂದು ದೇಶದ ಮುಖ್ಯ ನದಿಗಳಲ್ಲೊಂದು ೪. ಪುಷ್ಕರದ ನಡೆನುಡಿಗಳ ಬಗ್ಗೆ ... ನವರಾತ್ರಿ ೬. ಮೇಲಿನದರಲ್ಲಿ ಇವರ ಆಸಕ್ತಿಯು ಸಾಮಾನ್ಯ ... ೭. ನಾಸಿಕ, ಬಿಸಿಲು, ... ಉಪಯೋಗಿಸು ... ಮಾಡು ೮. ... ೯. ಅತ್ಯಾಸಕ್ತಿಯು...... ... ೧೦. ... ೧೧. ಗೌರೀಕುಮಾರ ೧೨. ಅಗಸ್ತ್ಯ ಮುನಿಯನ್ನು ... ೧೩. ... ಸೂರ್ಯೋದಯವಾದರೆ ... ಗುವುದರಲ್ಲಿ ಸಂದೇಹವಿಲ್ಲ ೧೪. ಮಧ್ಯಾಹ್ನದ ಮೊದಲು... ಧಾನ್ಯವನ್ನು ... ಸ್ಥಳ ೧೫. ಇದು ... ೧೬. ಈ ಪದವು ನಿರಾಸವಾಗಿ ... ಕೊಟ್ಟಿರುವ ... "......" ಆಗಿರಬೇಕು.

ಕೆಳಗಿನಿಂದ ಮೇಲಕ್ಕೆ :—೧ ಶ್ರೀ ಕೃಷ್ಣನನ್ನು ಹೀಗೆ ಕರೆಯುವುದುಂಟು ೨. ... ಅನೇಕ ವಸ್ತುಗಳನ್ನು...... ಮಾಡುವುದು ... ೩. ... (...) ೫. ... ೧೦. ... ೧೧. ... ಕಲ್ಲು (ಅಕ್ಷರ ...) ೧೨. ... ಮೂಲಿಕೆಗಳನ್ನು ಅರಿತಿರುವುದು ಒಳ್ಳೆಯದು ೧೩. ... ೧೪. ಅಪ್ಪಟ ... ೧೫. ಎರಡನೆಯ ಅಕ್ಷರವನ್ನು ಬಿಟ್ಟುಬಿಡಿ, ... ೧೬. ... ಸ್ವಪ್ನಗಳನ್ನು ... ಇದು ... ೧೭. ... ಇದರ ... ಅನುಭವಿಸಬಲ್ಲೆವು ೨೦. ... ೨೧. ... ಇವನ್ನು ... ೨೨. ... ನ್ನು ಹೇಗೆ ...

ನಮ್ಮ ಏಜೆಂಟರು:—ಎಂ. ವಿ. ಎನ್. ... ಕಂಪೆನಿ, ... ಬಜಾರ್, ಮೈಸೂರು. ... ಬೆಂಗಳೂರು ... ನಂ 49 ... ಬೆಂಗಳೂರು ಸಿಟಿ.

ಎಲ್ಲಾ ದಾರಿಗಳೂ ಎಲ್ಲಿ ಸೇರುತ್ತವೆ?

ಮಾರ್ಕೆಟ್, ಸಿನಿಮಾ, ನಾಟಕಗಳು, ಎರಡನೆ, ಟೌನ್ ಹಾಲ್, ಆಸ್ಪತ್ರೆ ಇವಕ್ಕೆಲ್ಲಾ ಕೇಂದ್ರಸ್ಥಾನವಾವುದು?

... ಮಾರ್ಗಗಳು ... ಸ್ಥಾನವೂ ... ವುದಲ್ಲಿ?

ಇಲ್ಲಿಯೇ ಅಲ್ಲವೇ?

ಶ್ರೀ ಕೃಷ್ಣ ಭವನ

ಮಾರ್ಕೆಟ್ ಚೌಕ, : : ಮೈಸೂರು.

"ಸುವಾಸಿನಿ"

ಎಂಬ ... ಸುವಾಸನೆ ಹೊಗೆ ಕೊಡುವ

ಶ್ರೀಗಂಧದ ಬತ್ತಿಗಳು

... (... 3 ತೊಲ) ... ಡಬ್ಬಿಗಳಲ್ಲಿ ... ರೂ. 0—2—0

... ಏಜೆಂಟರು ಬೇಕಾಗಿದ್ದಾರೆ. ...

ಕೂಡಲೆ ಬರೆಯಿರಿ:—

ಪದಕಿ ಕೃಷ್ಣಮೂರ್ತಿ,

ಚಾಮುಂಡಿ ಎಕ್ಸ್‌ಟೆನ್ಷನ್, ಮೈಸೂರು.



॥ ಸತ್ಯಮೇವೋದ್ಧರಾಮ್ಯಹಮ್ ॥

ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.

ವೃದ್ಧ ಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.

ಸಂಪಾದಕರು. ಆಗರಂ ರಂಗಯ್ಯ, ಬಿ.ಎ.

ಸಂಪುಟ ೪] MYSORE : MONDAY 9—5—38 — ಮೈಸೂರು : ಸೋಮವಾರ ೯—೫—೩೮ [ಸಂಚಿಕೆ ೧೦

ಮೈಸೂರು ಪೌರ ಸಭೆಗೆ ಸಂಥೆ

ಶ್ರೀ ಜಯಚಾಮರಾಜ ಒಡೆಯರವರ ವಿವಾಹ ಕಾಲದಲ್ಲಿ ರಾಷ್ಟ್ರಧ್ವಜವನ್ನೂ ಶೃಂಗರಿಸಿ ಒಂದು ಕಡೆ ಇಡಬಹುದೆಂದು ದಿವಾನರೇ ಸಲಹೆ ಕೊಟ್ಟಿರುವರು. ನಮ್ಮ ಪೌರಸಭಾಧಿಕಾರಿಗಳು ಇದನ್ನು ಗಮನಿಸಿರಲೇಬೇಕು. ದಿವಾನರು ಈ ನಗರದ ಶೃಂಗಾರಕ್ಕೆ ಕರ್ತರೆಂಬುದನ್ನು ಹೇಳಬೇಕಾಗಿಯೇ ಇಲ್ಲ. ಪ್ರತಿಯೊಂದು ಪಟ್ಟಣ ವ್ಯವಸ್ಥೆಗಳೂ ಅವರ ಸಲಹೆಯಂತೆಯೇ ನಡೆಯುತ್ತಿವೆ. ಪ್ರಸ್ತುತದಲ್ಲಿ ರಾಷ್ಟ್ರೀಯ ಧ್ವಜದ ಸಮಸ್ಯೆಯು ಅನೇಕರಿಗೆ ಆತಂಕವನ್ನು ಹುಟ್ಟಿಸಿದೆ. ಆದರೆ ಅದರ ವಿಷಯದಲ್ಲಿ ಸರ್ಕಾರದವರಿಗೆ ಎಷ್ಟು ಗಾಢವಾದ ವಿಶ್ವಾಸವಿದೆಯೆಂಬುದನ್ನು ದಿವಾನರು ತಿಳಿಯಪಡಿಸಿದ್ದಾರೆ. ಅವರ ಸಲಹೆಯನ್ನು ನಮ್ಮ ಪೌರಸಭಾಧಿಕಾರಿಗಳು ತೆಗೆದುಕೊಂಡು ಮಹಾರಾಜರಿಗೂ ದಿವಾನರಿಗೂ ಯಾವ ರೀತಿಯಲ್ಲಿ ತೃಪ್ತಿಯನ್ನುಂಟುಮಾಡುವ ರೀತಿಯನ್ನು ನಾವು ಕುತೂಹಲದಿಂದ ಇದಿರುನೋಡುವೆವು.

ಪೋಲೀಸಿನವರೂ ದೇಶಭಕ್ತರು

ಬಿಹಾರದ ಪೋಲೀಸರ ಸಮ್ಮೇಳನದಲ್ಲಿ ಅಲ್ಲಿನ ಪ್ರಧಾನ ಮಂತ್ರಿಗಳಾದ ಶ್ರೀ ಕೃಷ್ಣ ಸಿಂಹರು ಭಾಷಣ ಮಾಡಿ ಪೋಲೀಸಿನವರೂ ದೇಶಾಭಿಮಾನಿಗಳಾಗಿರಬೇಕೆಂದು ಹೇಳಿದರು. ಇದು ಕೆಲವು ಜನ ಪೋಲೀಸರಿಗೆ ಆಶ್ಚರ್ಯವುಂಟು ಮಾಡಿತು. ಪೋಲೀಸರು ಭಾರತೀಯರು, ಇತರ ಭಾರತೀಯರಂತೆ ಅವರೂ ದೇಶಭಕ್ತಿಯುಳ್ಳವರಾಗಿ [illegible] ಮಂತ್ರಿಗಳು ಹೇಳಲು ಕಾರಣವೇನೆಂದು ಕೇಳಿದರು. ಕಳೆದ ಪಟ್ಟಿರು. ಈ ಪ್ರಶ್ನೆಗೆ ಇದ ಉತ್ತರವಿದೆ [illegible] ಕೇವಲ ಕೆಲವು ತಿಂಗಳ ಹಿಂದೆ ಪೋಲೀಸರು ಅಲ್ಲಿ ಅನುಭವಿಸುತ್ತಿದ್ದ ಅವಮಾನದ ಕೃತ್ಯಗಳನ್ನು ಯಾರಾದರೂ ಮರೆತಿರುವರು? ಪೋಲೀಸಿನವರಲ್ಲಿ ದೇಶಾಭಿಮಾನವನ್ನು ಹುಟ್ಟಿಸುವ ದೇಶಕ್ಕೆ [illegible]!

ಲಂಡನ್ನಿನಲ್ಲಿ ಕಾಂಗ್ರೆಸ್ ಧ್ವಜ

ಕಾಂಗ್ರೆಸ್ ಧ್ವಜಕ್ಕೆ ಲಂಡನ್ನಿನಲ್ಲಿಯೂ ಗೌರವವಿದೆ. ಅಲ್ಲಿನ ಅಧಿಕಾರಿಗಳೂ ಅದಕ್ಕೆ ರಕ್ಷಣೆ ಕೊಡುತ್ತಾರೆ. ಹೀಗಿರುವಲ್ಲಿ ನಮ್ಮ ಸಂಸ್ಥಾನದಲ್ಲಿ ಅದರ ಮೇಲೆ ನಡೆಯುತ್ತಿರುವ ಧಾಳಿಯು ಆಶ್ಚರ್ಯಕರವಾಗಿದೆ. ಈ ತಿಂಗಳ ಮೊದಲನೇ ವಾರ ಲಂಡನ್ನಿನ ಭಾರತೀಯರೆಲ್ಲರೂ ಮೇ ದಿನಾಚರಣೆಯ ಉತ್ಸವವನ್ನು ನಡೆಸಿದರು. ಅದರಲ್ಲಿ ಕಾಂಗ್ರೆಸ್ ಧ್ವಜವನ್ನು ಹಿಡಿದು [illegible] ಹೋದರು. ಒಬ್ಬ ಫ್ಯಾಸಿಸ್ಟ್ [illegible] ಈ ಧ್ವಜವನ್ನು ಕಿತ್ತುಕೊಳ್ಳಲು ಮುಂದೆ ಬರಲು ನೋಡಿದನು. ಅವನನ್ನು ತಡೆದರು. ಅನಂತರ ಪೋಲೀಸರು ಅವನನ್ನು ದಸ್ತಗಿರಿ ಮಾಡಿದರು. ನಮ್ಮ ದೇಶೀಯ ಸರ್ಕಾರಗಳೂ ಹೀಗೆ ವರ್ತಿಸಬಾರದೆ?

ರಾಜರುಗಳ ಪರಸ್ಪರ ಸಹಾಯ

[illegible] ಸಂಸ್ಥಾನದ [illegible] ರಾಜಕೀಯ ಚಳವಳಿಯು ಹುಟ್ಟಿದೆಯಷ್ಟೆ. ಇದರ ಅಂಗವಾಗಿ ಸೈನಿಕರುಗಳು ಜನಗಳನ್ನೆಲ್ಲಾ [illegible] ಇದ್ದಾರೆ. ಅದರಿಂದ ಸಂಸ್ಥಾನದ [illegible]. ನಮ್ಮ ಸಂಬಂಧಿಕರಾದ [illegible] ಸಂಸ್ಥಾನದ ರಾಜನನ್ನು [illegible] ಅಲ್ಲಿಂದ ಕೆಲವು ಜನ ಸೈನಿಕರನ್ನು ನಮ್ಮ ಸಂಸ್ಥಾನಕ್ಕೆ ಕಳುಹಿಸಿಕೊಡಬೇಕೆಂದು ಕೇಳಿದ್ದಾರೆ. ಅವರು ಕಳುಹಿಸಿಕೊಡುವುದಾಗಿಯೂ ಒಪ್ಪಿದ್ದಾರೆ. ಅಂತೂ ರಾಜರುಗಳು ತಮ್ಮ ಪ್ರಜೆಗಳ [illegible] ಪ್ರತಿಭಟನೆಯನ್ನು [illegible] ಸಂಸ್ಥಾನದ [illegible] ಗತಿ?

ಬೋರೇಗೌಡನ ಗಾಢಾಂಧಕಾರ

ಪತ್ರಿಕಾ ಜೀವನದ ಪರಿಣಾಮ

ಪಾದ್ರಿಗಳು ಕಾಂಗ್ರೆಸ್ಸಿಗೆ

ಕ್ರೈಸ್ತ ಪಾದ್ರಿಗಳೂ ಕಾಂಗ್ರೆಸ್ಸಿಗೆ ಸೇರುತ್ತಿದ್ದಾರೆ. [illegible] ಕ್ರೈಸ್ತರು ಕಾಂಗ್ರೆಸ್ಸಿಗೆ ಸೇರಿದರೆ [illegible] ಅನೇಕ ಜನ [illegible] ಕಾಂಗ್ರೆಸ್ಸಿಗೆ ಸೇರಿ [illegible] ಪಾದ್ರಿಗಳು [illegible] ಅನುಕೂಲವಾಗುವುದೆಂದು ನಂಬಬಹುದು. ಕಾಂಗ್ರೆಸ್ಸು ಯಾವ [illegible] ಇಡೀ ಭರತಖಂಡದ ಸಮಸ್ತ [illegible] ಅದರಲ್ಲಿ ಸೇರಬಹುದು.

ಗಾಂಧಿ ದಿನಾ[illegible] ವರ್ತನೆ

ಏಪ್ರಿಲ್ 25 ನೇ [illegible] ಹರಿಜನ [illegible] "ಸಂಯುಕ್ತ ಕರ್ನಾಟಕ" ಪತ್ರಿಕೆಯು [illegible] ಶ್ರೀ [illegible] ಅಭಿಪ್ರಾಯಗಳನ್ನು [illegible] ಹೇಳಲಾಗಿದೆ.

ರಾಜಕುಮಾರರ ವಿವಾಹಕ್ಕೆ ರಜಾ

ಶ್ರೀ ಜಯಚಾಮರಾಜೇಂದ್ರ ಒಡೆಯರವರ ವಿವಾಹ [illegible] ಮೇ ತಿಂಗಳು 14 ನೇ ತಾ. [illegible] 31 ನೇ ತಾ. [illegible] ಸರ್ಕಾರಿ [illegible] ರಜಾ [illegible].

ವಿದುರಾಶ್ವತ್ಥದ ಪ್ರಕರಣ

ಕಾಂಗ್ರೆಸ್ ಅಧ್ಯಕ್ಷರ ಹೇಳಿಕೆ

ಮೈಸೂರು ಸಂಸ್ಥಾನದ ಕಾಂಗ್ರೆಸ್ ಪ [illegible] ಎಚ್. ಸಿ. [illegible] ಗೌಡ, [illegible] ಕಾರ್ಯದರ್ಶಿ [illegible] ವಿದುರಾಶ್ವತ್ಥಕ್ಕೆ [illegible] ನೋಡಿ ಬಂದ ನಂತರ ಪ್ರಕಟಿಸಿರುವ ಹೇಳಿಕೆಯು [illegible]

'ನಾವು [illegible] ದುರ್ಘಟನೆಗೆ [illegible] ಅಧ್ಯಕ್ಷರು [illegible] ಗುಂಡಿನೇಟಿ [illegible] ಕಾಂಗ್ರೆಸ್ ಧ್ವಜ [illegible] ವಿದುರಾಶ್ವತ್ಥಕ್ಕೆ [illegible] ಅಧಿಕಾರಿಗಳು [illegible]

ಅಡಿ ಮತ್ತು 15 ಅಡಿ ಎತ್ತರದಲ್ಲಿ ಗುಂಡಿನ ಏಟುಗಳು ಬಿದ್ದಿದ್ದ ಗುರುತುಗಳಿದ್ದವು. ಗಾಯಗೊಂಡಿರುವವರ ಮತ್ತು ಸತ್ತವರ ಸ್ಥಳಕ್ಕೆ ಬರುವವರಿಗೆ ಗುಂಡಿನೇಟು ಹೊಟ್ಟೆ ಮತ್ತು ಕೆಳಗಿನಿಂದ ಮೇಲಕ್ಕೆ ಬಿದ್ದಿದ್ದಿತು. ಆ ಪವಿತ್ರ ಸ್ಥಳದಲ್ಲಿ ಚೆಲ್ಲಿದ್ದ ರಕ್ತದ ಗುರುತು [illegible] ಸದಿಯ ಆಚೆಯ ದಡದಲ್ಲಿ ಅಂದರೆ ಸುಮಾರು ಒಂದು ಫರ್ಲಾಂಗ್ ದೂರದಲ್ಲಿ ನಿಂತಿದ್ದ ಗುಂಡಿನೇಟು ತಿಂದವನೊಬ್ಬನನ್ನು ನಾವು ಕಂಡೆವು. ಒಬ್ಬ ಶಾಲಾ ಉಪಾಧ್ಯಾಯನಿಗೆ ತಲೆಬುರುಡೆಯ ಹಿಂಭಾಗದಲ್ಲಿ ಗುಂಡಿನ ಏಟು ಬಿದ್ದಿದ್ದಿತು. ಅವನು ಬಿದ್ದಲ್ಲಿ ಕುಳಿತಿದ್ದಾಗ ಈ ಏಟು ಬಿದ್ದಿತೆಂದು ಹೇಳಿದನು. ಪೋಲೀಸಿನವರ ಕಡೆಗೆ ಜನರು ಎಸೆದ ಕಲ್ಲುಗಳೆಂದು ರಾಶಿ ಹಾಕಿದ್ದನ್ನು ನೋಡಿದೆವು.

"ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ವಿದುರಾಶ್ವತ್ಥದ ದುರಂತವನ್ನು ವಿಚಾರಣೆ ಮಾಡಲು ಒಂದು ಸಮಿತಿಯನ್ನೇರ್ಪಡಿಸುವಂತೆ ನಿಶ್ಚಯಿಸಿದೆ. ಅಧಿಕಾರಿಗಳು ಜನರ ಮೇಲೆ [illegible] ಕೊಟ್ಟಿದ್ದಲ್ಲಿ ಇಂಥಾ ದುರ್ಘಟನೆಯು ಸಂಭವಿಸುತ್ತಿರಲಿಲ್ಲವೆಂದು ನಮಗೆ ಅಲ್ಲಿನ ಜನರ ಹೇಳಿಕೆಯಿಂದ ತಿಳಿದು ಬಂದಿತು. ಗೌರಿಬಿದನೂರಿನ ಸಣ್ಣ ಆಸ್ಪತ್ರೆಯ ಜಗುಲಿಯಮೇಲೆ ಗುಂಡಿನೇಟಿನಿಂದ [illegible] ಗಾಯಗೊಂಡವರು [illegible] ಬಿದ್ದಿದ್ದಾರೆ. ಅವರ ಪೈಕಿ ಒಬ್ಬನು 'ನನ್ನನ್ನು ಯಾವುದಾದರೊಂದು ಕಾಂಗ್ರೆಸ್ ಆಸ್ಪತ್ರೆಗೆ ನೀವೇ ಕಳುಹಿಸಬಾರದೆ' ಎಂದು ಕೇಳಿದನು. ಕೆಲವು ಜನರು ಗಾಯಗೊಂಡಿದ್ದರೂ ಯಾರಿಗೆ ಹೇಳಿದರೆ ಏನು ತೊಂದರೆ ಬರುತ್ತದೋ ಎಂದು ಹೆದರಿ ಸುಮ್ಮನಿದ್ದಾರೆ.

